ಬಿ. ಕಾಂ. ೧ನೇ ಸೆಮಿಸ್ಟರ್

ಸಾಹಿತ್ಯ ಸೌಖ್ಯ-೧

ಘಟಕ–೧

ಕನ್ನಡ ನಾಡು ನುಡಿ ಪ್ರಜ್ಞೆ

ಕನ್ನಡ ನಾಡು ನುಡಿ ಚಿಂತನೆ ಕುರಿತು ಅನೇಕ ಜನ ಹಿರಿಯ ಕವಿಗಳು, ಲೇಖಕರು ಶ್ರಮಿಸಿರುವುದು ಮರೆಯುವಂತಿಲ್ಲ. ಕರ್ನಾಟಕ ಸಂಸ್ಕೃತಿಗೆ ಭವ್ಯ ಪರಂಪರೆಯಿದೆ, ಉಜ್ವಲ ಇತಿಹಾಸವಿದೆ. ಕನ್ನಡ ಸಂಸ್ಕೃತಿಯ ಅಂತಃಶಕ್ತಿ, ಆತ್ಮ ಸ್ಫೂರ್ತಿ 'ಅ'ಮಿತವಾದದು. ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ಇತಿಹಾಸವಿದೆ, ಭವ್ಯತೆಯಿದೆ. ವಿವಿಧ ಕಾಲಗಳಲ್ಲಿ ವಿವಿಧ ಧರ್ಮಗಳ, ಸಂಸ್ಕೃತಿಗಳಿಂದ ಪ್ರೇರಿತವಾದ ಕನ್ನಡ ಸಾಹಿತ್ಯದ ಹಲವು ಮಜಲುಗಳಲ್ಲಿ ಬೆಳೆದು ಬಂದು ಸಮೃದ್ಧವಾಗಿದೆ; ಶ್ರೀಮಂತಗೊಂಡಿದೆ. ಕನ್ನಡ ಸಾಹಿತ್ಯದಲ್ಲಿ ಕವಿರಾಜಮಾರ್ಗದಿಂದ ಹಿಡಿದು ಆಧುನಿಕಯುಗದವರೆಗೆ ಅನೇಕ ಕವಿಗಳು ನೂರಾರು ವೈವಿಧ್ಯಪೂರ್ಣವಾದ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ನಮ್ಮ ಸಂಸ್ಕೃತಿಯ ಇಂಪು, ಸೋಂಪು, ಕಂಪುಗಳು ಹುದುಗಿವೆ. ಶತಮಾನಗಳುರುಳಿದರೂ ಅವುಗಳಲ್ಲಿನ ಸಾಂಸ್ಕೃತಿಕ ಮೌಲ್ಯಗಳು ಮಾಯವಾಗಿಲ್ಲ; ಅವು 'ನಿಚ್ಚಂ ಪೊಸತು' ಎನ್ನುವ ಹಾಗೆ ಮುಳುಗು ಹಾಕಿದಷ್ಟು ಮುತ್ತುಗಳನ್ನು ನೀಡಬಲ್ಲ ಜ್ಞಾನ ಸಾಗರ.

ಈ ನಿಟ್ಟಿನಲ್ಲಿ ಕನ್ನಡ ನಾಡುನುಡಿ ಪ್ರಜ್ಞೆಯನ್ನು ಮಕ್ಕಳಲ್ಲಿ ಅಭಿವೃದ್ಧಿಗೊಳಿಸಲು ಮೂರು ಪಾಠಗಳನ್ನು ಅಭ್ಯಾಸಕ್ಕೆ ಅಳವಡಿಸಲಾಗಿದೆ. ಆದಿ ಕವಿ ಪಂಪನ 'ವಿಕ್ರಮಾರ್ಜುನ ವಿಜಯಂ' ಮಹಾಕಾವ್ಯದಲ್ಲಿ ಬರುವ ೪ನೇ ಆಶ್ವಾಸದ ಬನವಾಸಿಯ ವರ್ಣನೆಯನ್ನು ನಾಲ್ಕು ಪದ್ಯಗಳಲ್ಲಿ ನೀಡಲಾಗಿದೆ. ಪಂಪನು ಬನವಾಸಿಯ ಕುರಿತು ತಾನು ತಾಳಿದ ನಿಲವುಗಳನ್ನು ಮನಮುಟ್ಟುವಂತೆ ವಿವರಿಸಿದ್ದನ್ನು ಇಲ್ಲಿ ಗಮನಿಸಬೇಕು. ನಂತರದಲ್ಲಿ ಬರುವ ಗೋಪಾಲಕೃಷ್ಣ ಅಡಿಗರ 'ಕನ್ನಡಕ್ಕೊಂದು ಹೊಸ ಚಳುವಳಿ' ಎಂಬ ಲೇಖನದಲ್ಲಿ ಕನ್ನಡಾಭಿಮಾನ, ಕನ್ನಡ ಸಂಸ್ಕೃತಿಯ ಕುರಿತು ಅವರ ತುಡಿತವನ್ನು; ಇಂಗಿತವನ್ನು ನವಪೀಳಿಗೆಗೆ ಹೇಗೆ ಅದು ಮಾದರಿಯಾಗಬಲ್ಲುದು ಎಂಬುದನ್ನು ತಿಳಿಸಲು ಪ್ರಯತ್ನಿಸಲಾಗಿದೆ. ಈ ಘಟಕ ಕೊನೆಯಲ್ಲಿ ಬರುವ ಕುವೆಂಪು ವಿರಚಿತ 'ಕುಮಾರವ್ಯಾಸ' ಎಂಬ ಪದ್ಯ ಕುಮಾರವ್ಯಾಸನ ವ್ಯಕ್ತಿತ್ವವನ್ನು ತಿಳಿಸುತ್ತದೆ.

ಹೀಗೆ ಜಗತ್ತಿನ ಜ್ಞಾನವನ್ನು ಧಾರಣ ಮಾಡಿಕೊಳ್ಳಬಲ್ಲ ಶಕ್ತಿಯಿರುವ ಕನ್ನಡ ಭಾಷೆಯ ಬಗ್ಗೆ ಕನ್ನಡಿಗರಿಗೆ ಅಭಿಮಾನವಿರಬೇಕು. ಅಭಿಮಾನ ಆವೇಶದ ಅಂದಾಭಿಮಾನವಲ್ಲ; ಅರಿವಿನ ಅಭಿಮಾನ; ಆರೋಗ್ಯಕರವಾಗಿ ಕನ್ನಡ ನಾಡು ನುಡಿ ಕಟ್ಟುವ ಕ್ರಿಯಾಶೀಲ ಶಕ್ತಿ ಇರಬೇಕೆಂಬುದೇ ನಮ್ಮ ಮುಖ್ಯ ಉದ್ದೇಶವಾಗಿದೆ.

೧. ಬನವಾಸಿ ವರ್ಣನೆ

❖

ಪಂಪ

ಚಂ॥ ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತ ಜಾತಿ ಸಂ ।
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ ॥
ನಗೆಮೊಗದೊಳ್ ಪಳಂಚಲೆಯ ಕೂಡುವ ನಲ್ಲರೆ ನೋಟಿಪ್ಪೊಡಾವ ಬೆ ।
ಟ್ಟುಗಳೊಳಮಾವ ನಂದನ ವನಂಗಳೊಳಂ ಬನವಾಸಿ ದೇಶದೊಳ್ ॥ ೧ ॥

ಉ॥ ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ ।
ಳ್ಗಾಗರವಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ ॥
ನಾಗಿಯುಮೇನೋ ತೀರ್ದಪು[ದೆ] ತೀರದೊಡಂ ಮಱಿದುಂಬಿಯಾಗಿ ಮೇಣ್।
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್ ॥೨ ॥

ತೆಂಕಣ ಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ ।
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ ॥
ಪಂ ಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ ।
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ ॥ ೩ ॥

ಮ॥ ಅಮರ್ದಂ ಮುಕ್ಕುಳಿಪಂತುಟಪ್ಪ ಸುಸಿಲೊಂದಿಂಪುಂ ತಗುಳ್ದೊಂದು ಗೇ।
ಯಮುಮಾದಕ್ಕರಗೊಟ್ಟಿಯುಂ ಚದುರರೊಳ್ವಾತುಂ ಕುಳಿರ್ ಕೋಟ್ಟಿ ಜೊಂ॥
ಪಮುಮೇವೇಟ್ಟುದನುಳ್ಳ ಮೆಯ್ಸುಕಮುಮಿಂತೆನ್ನಂ ಕರಂ ನೋಡಿ ನಾ ।
ಡೆ ಮನಂಗೊಂಡಿರೆ ತೆಂಕನಾಡ ಮಱಿಯಲ್ಕಿನ್ನೇಂ ಮನಂ ಬರ್ಕುಮೇ॥೪ ॥

ವ॥ ಎಂದರಿಕೇಸರಿ ತೆಂಕನಾಡಂ ನಾಡಾಡಿಯಲ್ಲದೆ ಮೆಚ್ಚುತ್ತುಮಾನಾಡನೊಂದೆ ಬಿಲ್ಲೊಳುಂಡಿಗೆ ಸಾಧ್ಯಂ ಮಾಡಿ ಪಶ್ಚಿಮ ದಿಗ್ವಿಭಾಗಾಭಿಮುಖನಾಗಿ ಬಂದು–

ಕವಿ ಪರಿಚಯ :

'ಆನೆ ನಡೆದುದ್ದೆ ಮಾರ್ಗ'ವೆಂಬಂತೆ ಕನ್ನಡದ ಆದಿಕವಿ ಪಂಪ ಹಾಕಿಕೊಟ್ಟ ಹಾದಿಯಲ್ಲಿಯೇ ಮುಂದೆ ಬಂದ ಕನ್ನಡ ಕವಿಗಳು ಸಾಗಿದ್ದಾರೆ. ಪಂಪನ ತಂದೆ ಭೀಮಪ್ಪಯ್ಯ, ತಾಯಿ ಅಬ್ಬಣಬ್ಬೆ. ಪಂಪ ತನ್ನ ತಾಯಿಯ ತವರುಮನೆ ಗದಗ ಜಿಲ್ಲೆಯ ಅಣ್ಣಿಗೇರಿ ಎಂಬ ಗ್ರಾಮದಲ್ಲಿ ಕ್ರಿ.ಶ. ೯೦೨ರಲ್ಲಿ ಜನಿಸಿದನು. ಆಂಧ್ರಪ್ರದೇಶದ ವೆಂಗಿಮಂಡಲ ಪ್ರಾಂತದ 'ವೆಂಗಿಪಟು' ಎಂಬ ಅಗ್ರಹಾರ ಭೀಮಪಯ್ಯನ ಊರು. ಪಂಪನ ಗುರು ದೇವೇಂದ್ರಮುನಿ. ಈತನಿಗೆ ಜಿನವಲ್ಲಭನೆಂಬ ತಮ್ಮನಿದ್ದನು. ಪಂಪನು ವೇಮುಲವಾಡ ಚಾಲುಕ್ಯವಂಶದ ಎರಡನೆಯ ಅರಿಕೇಸರಿ ರಾಜನ ಆಸ್ಥಾನದಲ್ಲಿ ಕವಿ ಆಗಿದ್ದನು. ಕವಿತಾಗುಣಾರ್ಣವವೆಂಬ ಬಿರುದು ಪಂಪನಿಗಿತ್ತು.

'ಆದಿಪುರಾಣ' ವೃಷಭ ತೀರ್ಥಂಕರನ ಭವಾವಳಿ ಕಥೆಯನ್ನು ಸಾರುವ ಆಗಮಿಕ ಕಾವ್ಯವಾದರೆ, 'ವಿಕ್ರಮಾರ್ಜುನ ವಿಜಯಂ' ತನಗೆ ಆಶ್ರಯ ನೀಡಿದ ಎರಡನೆಯ ಅರಿಕೇಸರಿಯನ್ನು ಮಹಾಭಾರತದ ಅರ್ಜುನನೊಂದಿಗೆ ಸಮೀಕರಿಸಿ ಬರೆದ ಲೌಕಿಕ ಕಾವ್ಯವಾಗಿದೆ. ಇವೆರಡು ಪಂಪನ ಶ್ರೇಷ್ಠ ಮಹಾಕಾವ್ಯಗಳು. 'ಪಂಪ ಭಾರತ'ದ ಪ್ರಾರಂಭದಲ್ಲಿಯೇ 'ಬಗೆ ಹೊಸದಾಗೆ ಮೃದು ಬಂಧ ಹೊಂದುವುದು. ಹೊಂದಿ ದೇಸಿಯನು ಹೋಗುವುದು. ಹೊಕ್ಕು ಮಾರ್ಗದಲ್ಲಿ ತಳ್ವುದು. ತಳ್ತಾಗ ಕಾವ್ಯಬಂಧವು ಒಪ್ಪುವುದು–ಮಾಮರವು, ಕೆಂದಳಿರಿನ, ಹೂವಿನ ಭಾರದಿಂದ ಬಳಲಿ, ದುಂಬಿಯಿಂದ ತುಂಬಿ, ಕೋಗಿಲೆಗಳು ಬಗ್ಗಿಸಲು, ಸುಗ್ಗಿಯಲ್ಲೊಪ್ಪುವ ಹಾಗೆ' ಈ ಕಾವ್ಯವೆಂದು ತನ್ನ ಕಾವ್ಯದ ಕುರಿತು ಪಂಪ ಮನದುಂಬಿ ಹೊಗಳಿದ್ದಾನೆ.

ಕಾವ್ಯದ ಆಶಯ :

ಪಂಪನಿಗೆ ಬನವಾಸಿಯ ಬಗ್ಗೆ ಅಪರಿಮಿತ ಮಮತೆಯಿದೆ. ಅಲ್ಲಿಯ ಸೌಂದರ್ಯ, ಜನರ ಹೃದಯವಂತಿಕೆ ತೀವ್ರವಾಗಿ ಆಕರ್ಷಿಸಿದ್ದವು. 'ತನ್ನ ಮನಸ್ಸಿಗೆ ಯಾರು ಅಂಕುಶ (ಕಡಿವಾಣ) ಹಾಕಿದರೂ ನನ್ನ ಮನ ಮಾತ್ರ ಬನವಾಸಿಯ ಕಡೆ ಓಡುತ್ತದೆ; ಅದನ್ನು ನೆನೆಯುತ್ತದೆ; ಎಂದಿದ್ದಾನೆ. 'ಸಂಸ್ಕೃತಿ ಸಂಪನ್ನ ಮನುಷ್ಯನಾಗಿ ಹುಟ್ಟಿದರೆ ಬನವಾಸಿ ದೇಶದಲ್ಲೇ ಹುಟ್ಟಬೇಕು. ಒಂದು ವೇಳೆ ಆಗದಿದ್ದರೆ ಅಲ್ಲಿ ಕೊನೆಯ ಪಕ್ಷ ಕೋಗಿಲೆಯಾಗಿಯಾದರೂ ಮರಿದುಂಬಿಯಾಗಿದರೂ ಹುಟ್ಟಬೇಕು' ಎಂದಿದ್ದಾನೆ. ಈ ಉದ್ಗಾರಗಳನ್ನು ಗಮನಿಸಿದರೆ ಪಂಪನ ತುಡಿತ ಅರ್ಥವಾಗುತ್ತದೆ. ಅಲ್ಲಿ ಸೊಗಯಿಸುವ ಮಾಮರ, ಚಿಗುರಿದೆಲೆ ಬಳ್ಳಿ, ಹೂಬಿಟ್ಟ ಸಂಪಿಗೆ, ಹಾಡುವ

ಕೋಗಿಲೆಗಳು, ನಲ್ಲರೊಂದಿಗೆ ನಲ್ಲೆಯರು, ಬನವಾಸಿ ನಾಡಿನೊಳಗೆ ಇವೆಲ್ಲವೂ ಇರುವವು. ತ್ಯಾಗದ, ಭೋಗದ, ಅಕ್ಷರದ ಗಾನ ಗೋಷ್ಠಿಗಳ ಸಂತಸದಿಂಪಿಗೆ ಆಗರವಾದ ಮಾನವರೇ ಮಾನವರು ಇದ್ದಾರೆ. ಯಾರೂ ಅಮೃತವನ್ನು ಹೀಯಾಳಿಸಲು ಸಾಧ್ಯವಿಲ್ಲ! ರತಿಕ್ರೀಡೆಯಲ್ಲಿ ತೊಡಗಿದಾಗ ಎಲ್ಲವನ್ನು ಮರೆಯುವಂತೆ ಇಂಪಾಗಿ ಕೇಳುವದೊಂದು ಸಂಗೀತ. ಆ ನಾಡಿನ ವಿದ್ವಾಂಸರ ಗೋಷ್ಠಿಗಳು, ಚತುರರು, ಇವೆಲ್ಲವನ್ನು ನೋಡಿ ನನ್ನ ಮನವು ತೆಂಕಣನಾಡವನ್ನು ಮರೆಯಲಿಕ್ಕೆ ಹೇಗೆ ಸಾಧ್ಯ? ಎಂದು ಅರಿಕೇಸರಿ ತೆಂಕಣನಾಡು ನಾಡಲ್ಲ, ನಾನು ಮೆಚ್ಚುವ ಒಂದೆ ನಾಡವದು ಎಂದು ಹೇಳಿ, ಪಶ್ಚಿಮ ದಿಗ್ವಿಭಾಗಾಭಿಮುಖನಾಗಿ ಬರುವನು. ಇಲ್ಲಿಗೆ ಬನವಾಸಿ ವರ್ಣನೆ ಮುಗಿಯುತ್ತದೆ.

ಈ ಬನವಾಸಿ ವರ್ಣನೆಯ ಭಾಗವನ್ನು ಡಾ. ಕೆ. ವಿ. ಪುಟ್ಟಪ್ಪನವರು ಸಂಪಾದಿಸಿದ 'ಪಂಪ ಭಾರತಂ' ಎಂಬ 'ವಿಕ್ರಮಾರ್ಜುನ ವಿಜಯಂ' ಎಂಬ ಕೃತಿಯ ೪ನೇ ಆಶ್ವಾಸದಿಂದ ಆಯ್ದುಕೊಳ್ಳಲಾಗಿದೆ.

ಶಬ್ದಾರ್ಥಗಳು:

೧. ತಳ್ತೆಲೆವಳ್ಳಿ–ದಟ್ಟವಾಗಿ ಸೇರಿಕೊಂಡಿರುವ ವೀಳ್ಯದ ಬಳ್ಳಿಗಳು; ಪೂತ ಜಾತಿ ಸಂಪಿಗೆ–ಹೂ ಬಿಟ್ಟ ಉತ್ಕೃಷ್ಟ ಜಾತಿಯ ಸಂಪಿಗೆ; ಕುಕ್ವಿಲ–ಧ್ವನಿಮಾಡುವ; ತುಂಬಿ–ದುಂಬಿ; ನಲ್ಲರ–ಒಲಿದವರ; ಒಳ್ಮೊಗಂ–ಒಳಮುಖವು; ಪಳಂಚಿ–ತಾಗಿ.

೨. ಚಾಗ–ದಾನ; ಭೋಗ–ಸುಖ; ಅಕ್ಕರ–ವಿದ್ಯೆ; ಗೇಯ–ಸಂಗೀತ; ಗೊಟ್ಟಿ=ಗೋಷ್ಠಿ, ಅಲಂಪಿ–ಸಂತೋಷ; ಮಾನಸ–ಮನುಷ್ಯ; ಮಱಿದುಂಬಿ–ದುಂಬಿಯಮರಿ.

೩. ತೆಂಕಣ–ದಕ್ಷಿಣ; ಸೋಂಕು–ಮೈಮುಟ್ಟು; ಗೇಯ–ಸಂಗೀತ; ಕಿವಿವೊಕ್ಕೊಡಂ–ಕಿವಿಗೆ ಕೇಳಿಸಿದರೂ; ಗೆಡೆಗೊಂಡೊಡಂ–ಜೊತೆಗೂಡಿದರೂ; ಆರಂಕುಸವಿಟ್ಟೊಡಂ=ಯಾರು ಅಂಕುಶ ಹಾಕಿದರು, ತಡೆದರು.

೪. ಅಮರ್ದ–ಅಮೃತ; ಮುಕ್ಕುಳಿಪಂತುಟಪ್ಪ–ಉಗುಳುವಂತಿರುವ, ಹೀಯಾಳಿಸುವ; ಸುಸಿಲ–ರತಿಕ್ರೀಡೆಯ, ನಿದ್ದೆ; ತಗುಳ್ದ–ಬೆನ್ನ ಹಿಂದೆಯೇ ಬರುವ; ಕುಳಿರ್ಕೋಳ್ಪ–ಶೀತದಿಂದ ತಣ್ಣಗಿರುವ; ಜೊಂಪು–ಹೂಗೊಂಚಲು; ಏವೇಳ್ಪುದ–ಏನು ಬಯಸುವುದು; ಮೆಯ್ಸುಕ=ದೇಹದ ಸುಖ; ಕರಂ–ವಿಶೇಷವಾಗಿ; ಮನಂಬರ್ಕುಮೇ–ಮನಸ್ಸು ಬರುತ್ತದೆಯೇ?;

■■

೨. ಕನ್ನಡಕ್ಕೊಂದು ಹೊಸ ಚಳುವಳಿ

❖

ಗೋಪಾಲಕೃಷ್ಣ ಅಡಿಗ

ಕರ್ನಾಟಕದಲ್ಲಿ ಕನ್ನಡಕ್ಕೆ ಪ್ರಥಮಸ್ಥಾನ ದೊರೆಯಬೇಕು ಎಂಬ ಉದ್ದೇಶದಿಂದ ಒಂದು ದೊಡ್ಡ ಚಳುವಳಿ ನಡೆದು ಅದು ಸಫಲವಾಯಿತು. ತಮ್ಮ ಭಾಷೆಯ ಬಗ್ಗೆ ಇನ್ನೂ ತಕ್ಕಷ್ಟು ಅಭಿಮಾನ ಕುದುರದೆ ಇರುವ ಕನ್ನಡ ಜನಕ್ಕೆ ಇಂಥದೊಂದು ಚಳುವಳಿ ಅತ್ಯಗತ್ಯವಾಗಿತ್ತು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಕ್ಕೆ ಎಡೆ ಇಲ್ಲ. ಈ ಚಳುವಳಿ, ಉಪವಾಸ ಸತ್ಯಾಗ್ರಹ, ಮೆರವಣಿಗೆ, ಧರಣಿ, ಜೈಲು ತುಂಬುವುದು, ಅದಕ್ಕಿಂತ ಹೆಚ್ಚಾಗಿ ಚಲನಚಿತ್ರ ನಟರ ಸಹಕಾರ ಇವುಗಳ ಮೂಲಕ ಎಲ್ಲರ ಕಣ್ಣಿಗೂ ಹೊಡೆಯುವಂಥ ಉತ್ತಮ ಪ್ರಚಾರ ಸಾಧನವೂ ಆಯಿತು. ಆದರೆ ಯಾವ ಚಳವಳಿಯೇ ಆಗಲಿ ಕೇವಲ ಪ್ರಚಾರ ಸಾಧನಗಳಿಂದ ಸ್ಥಾಯಿಯಾದ ಪರಿಣಾಮಗಳನ್ನು ಉಂಟು ಮಾಡುವುದಿಲ್ಲ. ಆ ಚಳವಳಿಯ ಹಿಂದೆ ಅದಕ್ಕೆ ಸ್ಫೂರ್ತಿಯ ನೆಲೆಯಾಗಿ ಒಂದು ಬೌದ್ಧಿಕ ಚಳವಳಿಯೂ ಅತ್ಯಗತ್ಯ. ಕೇವಲ ಭಾವನಾತ್ಮಕತೆ ಕ್ಷಣಿಕವಾದದ್ದು. ಅದರ ಜೊತೆಗೆ ವಿವೇಕವೂ ಬೆರೆತರೆ ಮಾಡುವ ಕೆಲಸ ಸಮರ್ಪಕವೂ ಸಾರ್ಥಕವೂ ಆಗುವುದಲ್ಲದೆ ಕಾಲಕ್ರಮದಲ್ಲಿ ಕನ್ನಡ ಜನ ಜಗತ್ತಿನಲ್ಲಿ ಅತ್ಯುನ್ನತ ಸ್ಥಾನ ಪಡೆಯುವುದೂ ಸಾಧ್ಯವಾಗುತ್ತದೆ. ಆ ದಿಕ್ಕಿನಲ್ಲಿ ನಾವು ಯೋಚನೆ ಮಾಡಬೇಕಾದ ಕಾಲ ಬಂದಿದೆ. ಅದನ್ನು ಕನ್ನಡದ ಅಭಿಮಾನಿಗಳೆಲ್ಲರೂ ಅರಿಯಬೇಕು.

ತಮಿಳರಲ್ಲಿ, ಮರಾಠಿಗರಲ್ಲಿ ಅಥವಾ ಇನ್ನೂ ಯಾವುದೇ ರಾಜ್ಯದ ಜನರಲ್ಲಿ ಹೇಗೆ ತಮ್ಮ ಭಾಷೆಯ ಬಗ್ಗೆ ಅಭಿಮಾನ ಅಂಧವಾಗಿದೆಯೋ, ಮಾನವ ಸತ್ಯಗಳನ್ನು ಅರಿಯಲಾರದಷ್ಟು, ಮೂರ್ಖತೆಯ ಮಟ್ಟವನ್ನು ಮುಟ್ಟಿದೆಯೋ ಹಾಗೆಯೇ ನಮ್ಮ ಕನ್ನಡದ ಅಭಿಮಾನವೂ ಅಂಧವೂ, ಮೂರ್ಖವೂ ಆಗಬೇಕೆ? ಈ

ಯುಗಧರ್ಮ ಸಾರಿ ಸಾರಿ ಹೇಳುವ ಮಾತು ಇದು : ನಮ್ಮ ಸುತ್ತಲೂ ಇರುವ ಬಡವರೂ, ದೀನರೂ, ದಲಿತರೂ, ಅಶಿಕ್ಷಿತರೂ ಹೇಗೆ ನಮ್ಮ ಬಂಧು ಬಾಂಧವರೋ ಹಾಗೆಯೇ ಈ ಮಾನವಲೋಕದಲ್ಲಿರುವ ಪ್ರತಿಯೊಂದು ಜನಾಂಗವೂ ನಮ್ಮ ಬಂಧುಬಳಗದವರೇ, ಪರಕೀಯರಲ್ಲ; ನಾವು ಕೈಗೊಳ್ಳುವ ಪ್ರತಿಯೊಂದು ಕೆಲಸವೂ ಇಡೀ ಮಾನವ ಕುಲದ ಮೇಲೆ ಪರಿಣಾಮ ಬೀರುವಂಥದ್ದು; ಮಾತ್ರವಲ್ಲ, ನಮ್ಮ ಪರಿಸರದಲ್ಲಿರುವ ಗಿಡಮರ, ಮೃಗಪಕ್ಷಿ, ಹೊಳೆಹಳ್ಳಗಳೂ ಕೂಡ ನಮ್ಮ ಬಂಧುಗಳೇ ಹೊರತು ನಾವು ವಿನಾಶಪಡಿಸಲು ತಕ್ಕ ಬಾಹ್ಯ ಶತ್ರುಗಳಲ್ಲ. ಈ ಮಾತನ್ನು ನಮ್ಮ ಯುಗಧರ್ಮ ಸಾರಿ ಹೇಳುತ್ತಿದೆ. ಈ ಮಾತು ನಮ್ಮ ಕನ್ನಡ ಜನರ ಮನಸ್ಸಿನಲ್ಲೂ ಮೊಳಗುವುದು ಬೇಡವೇ? ನಮ್ಮ ಭಾಷೆಯೇ ಹಿರಿದು, ಉಳಿದುದೆಲ್ಲ ಗಣ್ಯವಲ್ಲ ಎಂಬ ಭಾವನೆ ಬೆಳೆಯಲು ಅವಕಾಶ ಮಾಡಿಕೊಡಬಹುದೇ? ಒಂದು ಸಲ ದುರಭಿಮಾನದ ಮುಳ್ಳು ಪೊದೆ ನಮ್ಮ ಜನದ ಮನಸ್ಸಿನಲ್ಲಿ ಬೆಳೆದು ಬಿಟ್ಟರೆ ಮತ್ತೆ ಅದನ್ನು ಸುಲಭವಾಗಿ ನಿವಾರಿಸುವುದು ಸಾಧ್ಯವಾದೀತೇ? ಈ ಪ್ರಶ್ನೆಗಳು ಕನ್ನಡದ ಅಭಿಮಾನಿಗಳಲ್ಲಿ ವಿವೇಕಿಗಳಾದವರನ್ನು ಕಾಡಬೇಕು. ಈ ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಪಡೆದೇ ನಾವು ಕನ್ನಡದ ಬಗ್ಗೆ ನಮ್ಮ ಜನರಲ್ಲಿ "ಸದಭಿಮಾನ", ವಿನಯಪೂರ್ವಕವಾದ ಅಭಿಮಾನ ಹುಟ್ಟುವ ಕೆಲಸವನ್ನು ಕೈಗೊಳ್ಳಬೇಕು. ಅಭಿಮಾನ ಅಗತ್ಯ. ಆದಕಾರಣ ಅದನ್ನು ಯಾವ ರೀತಿಯಿಂದಲಾದರೂ ನಮ್ಮ ಜನರಲ್ಲಿ ಹುಟ್ಟಿಸಿದರೆ ಸಾಕು ಎಂದುಕೊಂಡು ಕೇವಲ ಜನಸಮುದಾಯದ ಇಂದಿನ ಅಗತ್ಯವನ್ನು ಮಾತ್ರ ಗಣನೆಗೆ ತಂದುಕೊಂಡರೆ ಮುಂದೆ ಹಾನಿ ಆಗುವುದಿಲ್ಲವೇ? ಯೋಚಿಸಬೇಕು.

ಕನ್ನಡ ರಾಜ್ಯವೊಂದೇ ಹಿಂದೂಸ್ಥಾನದಲ್ಲಿ ಇರುವ ರಾಜ್ಯವಲ್ಲ; ಹಿಂದೂಸ್ಥಾನವೂ ಕೂಡ ಈ ಜಗತ್ತಿನಲ್ಲಿರುವ ಒಂದೇ ಒಂದು ರಾಷ್ಟ್ರವಲ್ಲ. "ಮಾನವರೆಲ್ಲ ಒಂದು, ಮಾನವಕುಲ ಒಂದೇ" ಎಂಬ ಕೇವಲ ಆದರ್ಶಸೂತ್ರ ರೂಪವಾಗಿದ್ದ ಮಾತು ಕಾರ್ಯತಃ ಆಚರಣೆಗೆ ಬರಲು ಅಗತ್ಯವಾದ ಅವಕಾಶವನ್ನು ಆಧುನಿಕ ವೈಜ್ಞಾನಿಕ ವ್ಯವಸ್ಥೆ ನಮಗೆ ತಂದುಕೊಟ್ಟಿದೆ. ಆದ ಕಾರಣ ಈ ಮಾತನ್ನು ಮರೆಯದೆ, ಆದರೆ ನಮ್ಮ ದೇಶ, ನಮ್ಮ ಭಾಷೆ, ನಮ್ಮ ಆತ್ಮಗೌರವ ಇವುಗಳನ್ನು ಕಡೆಗಣಿಸದೆ ಬದುಕಬಲ್ಲವನೇ ಆಧುನಿಕ ಮಾನವ. ಅಂಥ ಮಾನವರ ಸಂಖ್ಯೆ ಹೆಚ್ಚುವುದಕ್ಕೆ ಆತಂಕವಾಗದಂತೆ ನಮ್ಮ ಕನ್ನಡದ ಅಭಿಮಾನವೂ ರೂಪುಗೊಳ್ಳಬೇಕೆನ್ನುವುದನ್ನು ನಾವು ಮರೆಯಬಾರದು.

ಒಂದು ದೃಷ್ಟಿಯಿಂದ ಕನ್ನಡ ಸಂಸ್ಕೃತಿ ಎಂದರೆ ಭಾರತೀಯ ಹಿಂದೂ

ಸಂಸ್ಕೃತಿಯ ಅತ್ಯಂತ ಪರಿಷ್ಕೃತವಾದ, ಉಳಿದ ರಾಜ್ಯಗಳಿಗೆ ಉದಾಹರಣೆ ಆಗುವ ಹಾಗೆ ಬೆಳೆದು ಬಂದ ಸಂಸ್ಕೃತಿ. ಈ ಸಂಸ್ಕೃತಿಯ ಮುಖ್ಯ ಲಕ್ಷಣ ಪರಮತ ಸಹಿಷ್ಣುತೆ. ತಾನೂ ಬದುಕಬೇಕು, ಇನ್ನೊಬ್ಬರೂ ಬದುಕಬೇಕು ಎಂಬ ತತ್ವದ ಅತ್ಯಂತ ಸಮರ್ಪಕವಾದ ಜೀವನ ವಿಧಾನವನ್ನು ನಾವು ನಮ್ಮ ಕರ್ನಾಟಕದ ಇತಿಹಾಸದಲ್ಲಿ ಕಾಣುತ್ತೇವೆ. ಈ ನಾಡಿನೊಳಕ್ಕೆ ಬಂದು ಬದುಕಿ ನಮ್ಮವರೇ ಆಗಿ ಅರಗಿ ಹೋದ "ಪರಕೀಯ" ಪಂಗಡಗಳ ಸಂಖ್ಯೆ ಅನೇಕ. ಮಾಧ್ವ, ಬಸವ ತತ್ವಗಳ ಹುಟ್ಟುನಾಡಾದ ಕನ್ನಡ ನಾಡು ಜೈನ, ಅದ್ವೈತ, ವಿಶಿಷ್ಟಾದ್ವೈತಗಳ ಆಶ್ರಯ ಸ್ಥಾನವೂ ಆಯಿತು. ಈಗಲೂ ತಮಿಳರು, ತೆಲುಗರು, ಮಹಾರಾಷ್ಟ್ರೀಯರು, ಮಲೆಯಾಳಿಗಳು ಕನ್ನಡ ನಾಡಿನುದ್ದಕ್ಕೂ ನಮ್ಮವರಾಗಿಯೇ ಇದ್ದಾರೆ. ಇದು ನಮ್ಮ ಪರಂಪರೆ; ಈ ಪರಂಪರೆ ಈಗಿನ ಕಾಲಕ್ಕೆ ಸಲ್ಲುವ ಪ್ರಜಾತಂತ್ರ ವಿಧಾನಕ್ಕೂ ಒಗ್ಗುವಂಥದ್ದೇ ಎಂಬುದನ್ನೂ ಮರೆಯಬಾರದು. ಇಂಥ ಉತ್ತಮ ಸಹನಶೀಲ ಮಾನವೀಯ ಪರಂಪರೆ ನಮ್ಮದು. ಈ ಬಗ್ಗೆಯೂ ನಮಗೆ ಅಭಿಮಾನ ಅಗತ್ಯ. ಇಂಥ "ಸದಭಿಮಾನ"ಕ್ಕೆ ಚ್ಯುತಿ ಬಾರದಂತೆ ನಾವು ಇಂದು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಅಭಿಮಾನದ ಹೆಸರಿನಲ್ಲಿ ಅಭಿಮಾನ ಪಟ್ಟುಕೊಳ್ಳಲು ಯೋಗ್ಯವಾದ ಗುಣಗಳೇ ನಿರ್ನಾಮವಾಗದಂತೆ ನೋಡಿಕೊಳ್ಳುವುದು ಅತ್ಯಗತ್ಯ.

ಹಾಗಂತ ನಾವು ಇಂದಿನ ನಿರಭಿಮಾನದ, ಆತ್ಮವಿಶ್ವಾಸದ ಆಭಾವದ ದುರಂತವನ್ನೂ ಮರೆಯಬಾರದು. ಹಾಗೆ ಮಾಡಿದರೆ ಕನ್ನಡ ಜನ ಆತ್ಮವಿಶ್ವಾಸದಿಂದ, ಆತ್ಮಗೌರವಪೂರ್ವಕವಾಗಿ ಉಳಿದವರ ಜೊತೆಗೆ ತಲೆಯೆತ್ತಿ ನಿಲ್ಲಲು ಸಾಧ್ಯವಾಗುವುದಿಲ್ಲ. ನಾವು ನಮ್ಮ ವ್ಯವಹಾರಗಳಲ್ಲೆಲ್ಲ, ಮಾತುಕತೆ, ಆಡಳಿತ, ಶಿಕ್ಷಣ ವಿಧಾನ ಎಲ್ಲದರಲ್ಲೂ ನಮ್ಮ ಭಾಷೆಯನ್ನು ಬಳಸುವ ತಾಖತ್ತನ್ನೂ ಆತ್ಮಗೌರವವನ್ನೂ ಬೆಳೆಸಿಕೊಳ್ಳುವುದರ ಜೊತೆಗೆ ನಮ್ಮ ಭಾಷೆಯೂ ಇನ್ನಷ್ಟು ಶ್ರೀಮಂತವಾಗುವ ಹಾಗೆ ಬುದ್ಧಿ ವಿಚಾರಪರತೆಗಳನ್ನೂ ಬೆಳೆಸಿಕೊಳ್ಳಲು ತಕ್ಕ ವ್ಯವಸ್ಥೆ ಮಾಡಿಕೊಳ್ಳಬೇಕು. ಅಂಥ ವ್ಯವಸ್ಥೆ ಏನು ಎಂಬುದನ್ನು ಕುರಿತು ನಮ್ಮಲ್ಲಿ ಕನ್ನಡದ ಬಗ್ಗೆ ತಮ್ಮ ಬಗ್ಗೆ ಅಭಿಮಾನವುಳ್ಳವರೆಲ್ಲರೂ ಯೋಚಿಸಬೇಕು. ನನ್ನ ಯೋಚನೆಗಳನ್ನು ಈ ಮುಂದೆ ಒಂದೊಂದಾಗಿ ನಾನು ಈ ಲೇಖನ ಮಾಲೆಯಲ್ಲಿ ಮಂಡಿಸಲು ಬಯಸುತ್ತೇನೆ.

೨

ನಿಜವಾಗಿಯೂ ಇರುವ ಪರಿಸ್ಥಿತಿಯನ್ನು, ವಸ್ತುಸ್ಥಿತಿಯನ್ನು ಕಡೆಗಣಿಸಿ ಮರೆತು

ಯಾವುದು ನಾಟಕೀಯವಾಗಿರುತ್ತದೋ, ಅತಿರಂಜಿತವೂ ಉತ್ಪ್ರೇಕ್ಷಿತವೂ ಆಗಿರುತ್ತದೋ ಅದಕ್ಕೆ ಮಾರುಹೋಗಿ ಮೈಮರೆತು ಅದಕ್ಕಾಗಿಯೇ ಹಾತೊರೆಯುತ್ತಿರುವುದು ನಮ್ಮ ಕನ್ನಡ ಜನರ ವಿಶೇಷಗುಣವಾಗಿ ಕಾಣುತ್ತಿರುವುದಕ್ಕೆ ಕಾರಣವೇನು ಎಂದು ನಾನು ಮತ್ತೆ ಮತ್ತೆ ಯೋಚಿಸುತ್ತ ಬಂದಿದ್ದೇನೆ. ವಸ್ತುಸ್ಥಿತಿಯನ್ನು ವಿರೂಪಗೊಳಿಸುವ ನಾಟಕಕ್ಕೆ ಸಹಜವಲ್ಲದ ವಾಸ್ತವಿಕತೆಯನ್ನು ಮೀರಿದ ನಟನೆಗೆ ಅದಕ್ಕಿಂತ ಹೆಚ್ಚಾಗಿ ವಸ್ತುಸ್ಥಿತಿಯನ್ನು ವಿಕೃತಗೊಳಿಸುವ ಸಿನೆಮಾಕ್ಕೆ ನಾವು ನಮ್ಮ ಬುದ್ಧಿ, ವಿವೇಕಗಳನ್ನೆಲ್ಲ ಮಾರಿಕೊಂಡು ಕೇವಲ ಹಗಲುಗನಸಿನ ಪ್ರಪಂಚದಲ್ಲೇ ಬದುಕುತ್ತ ಬರುತ್ತಿದ್ದೇವೆ. ಸಿನೆಮಾದಲ್ಲಿ ಅತಿರಂಜಿತವಾಗಿ ಒಳ್ಳೆಯತನವನ್ನು, ಧೀರೋದಾತ್ತತೆಯನ್ನು, ಸಾಹಸ ಪ್ರವೃತ್ತಿಯನ್ನು ನಟಿಸುವಂಥವರೇ ನಮಗೆ ಧೀರೋದಾತ್ತ ನಾಯಕರಾಗಿ, ದೇವರುಗಳಾಗಿಯೂ ಕಾಣಿಸುತ್ತಾರೆ. ಈ ಪ್ರಪಂಚದಲ್ಲಿನ ನಮ್ಮ ಈ ನಿಜವಾದ ಬದುಕು ಕ್ಷಣಭಂಗುರ ಎಂದು ನಮಗೆ ಸಾಧು ಸಂತರೂ ಭಕ್ತಾದಿಗಳೂ ಯುಗಯುಗಗಳಿಂದ ಬೋಧಿಸುತ್ತ ಬಂದಿದ್ದರ ಪರಿಣಾಮವೇ ಇದು? ಮಾನವನ ಬದುಕು ನಶ್ವರ, ದುಃಖಪೂರ್ಣ, ಯಾವುದೂ ಇಲ್ಲಿ ಶಾಶ್ವತವಲ್ಲ ಎಂಬ ತಾತ್ವಿಕವಾದ ಮಾತಿನ ಹಿಂದೆ ಇಲ್ಲಿ ಬದುಕುವಾಗ ನ್ಯಾಯದಿಂದ, ಧರ್ಮದಿಂದ ಬದುಕಬೇಕು ಎಂಬ ಅರ್ಥ ಇದ್ದಿರಬೇಕು. ಆದರೆ ಆ ತತ್ವವೇ ವಿಕಾರಗೊಂಡು ಈಗ ಈ ಜಗತ್ತಿನ ಯಾವುದರಲ್ಲೂ, ನಿಜವಾದ ಯಾವ ಸತ್ಯ ಸಂಗತಿಯಲ್ಲೂ ಆಸಕ್ತಿ ವಹಿಸುವುದು ನಮಗೆ ಅಸಾಧ್ಯವಾಗಿ ಹೋಗಿದೆಯೋ ಎನ್ನಿಸುತ್ತದೆ. ಯಕ್ಷಗಾನ ಬಯಲಾಟಗಳಲ್ಲಿ ಬರುವ ಯಾವುದೋ ಕಾಲದ ಅಥವಾ ಯಾವ ಕಾಲದ್ದೂ ಅಲ್ಲದೆ ಕೇವಲ ಕಲ್ಪನೆಯ ಕೂಸುಗಳಾದ ಪಾತ್ರಗಳೂ ಅವುಗಳ ವೇಷ ಭೂಷಣಗಳ ವೈಚಿತ್ರ್ಯವೂ ನಮ್ಮ ಮನಸ್ಸನ್ನು ಸೆಳೆದು ಸೆರೆಹಿಡಿಯುವ ಹಾಗೆ ಈ ಸುಂದರವಾದ ಪ್ರಕೃತಿಯ ಯಾವ ದೃಶ್ಯಗಳೂ ನಮ್ಮ ಮನಸ್ಸನ್ನು ಸೆರೆಹಿಡಿಯುವುದಿಲ್ಲ ಏಕೆ? ಸೂರ್ಯೋದಯ, ಚಂದ್ರೋದಯ, ರುದ್ರ ಗಂಭೀರ ಸಮುದ್ರದ ಅಲ್ಲೋಲ ಕಲ್ಲೋಲ, ಹರಿಯುವ ನದಿಯ ಲಯಬದ್ಧ ನಡಿಗೆ, ಮರಗಿಡಗಳ ಹಸುರು, ಜೀವನದ ಸ್ವರತರಂಗಗಳಂತೆ ಹಾಡುವ ಹಕ್ಕಿಗಳು, ನಮ್ಮ ಸುತ್ತುಮುತ್ತಲೂ ಇರುವ ನಾನಾ ವಿಧದ ವರ್ಣದ ವೈಶಿಷ್ಟ್ಯದ ಪಶುಪಕ್ಷಿಗಳು ನಮ್ಮ ಮನಸ್ಸನ್ನು ತಟ್ಟಿ ತಲ್ಲೀನಗೊಳಿಸಿ ಆನಂದ ಪರವಶರನ್ನಾಗಿ ಮಾಡುವುದಿಲ್ಲವೇಕೇ? ಪ್ರತಿಯೊಬ್ಬರೂ ಸ್ವತಂತ್ರರೂ, ವಿಶೇಷ ರೂಪಗುಣ ಆಕರ್ಷಣೆಗಳುಳ್ಳವರೂ ಆದ ನಾನಾವಿಧದ ಮಾನವಕೋಟಿಯಲ್ಲಿ ಕಾಣದ ಸೊಬಗು ಇನ್ನು ಯಾವುದರಲ್ಲಿ ತಾನೆ ಇದೆ? ಕಣ್ಣೆತ್ತಿ ನೋಡಿದರೆ ಸಾಕು, ಹೊಸ ಹೊಸ

ಲೋಕಗಳನ್ನು, ಅತ್ಯದ್ಭುತ ವರ್ಣಚಿತ್ರಗಳನ್ನು, ಅತ್ಯುಜ್ವಲ ಬೆಳಕಿನ ಮಣಿಗಳನ್ನು ತೆರೆದು ತೋರುವ ಆಕಾಶದ ಕಡೆ ನೋಡುವುದೂ ಇಲ್ಲ ಏಕೆ? ಅವೆಲ್ಲ ನಿಜವಾದಂಥವು, ಅವುಗಳಿಂದ ಸ್ಫೂರ್ತಿ ಪಡೆಯುವ ಈ ಶಕ್ತಿ ಹೋಗಿರುವಾಗ ಹೊಸ ಸೃಷ್ಟಿಕಾರ್ಯ ವಿಪುಲವಾಗಿ, ಸ್ವತಂತ್ರವಾಗಿ ಇಲ್ಲಿ ನಡೆಯುವುದಾದರೂ ಹೇಗೆ? ಈ ಜೀವನ್ಮ್ರತಾವಸ್ಥೆಗೆ ಸಂಜೀವಿನಿ ಯಾವುದು? ಅದನ್ನು ಸಂಪಾದಿಸುವುದು ಹೇಗೆ?

ಹೀಗೆ ಜಡ್ಡುಗಟ್ಟಿ ಸಂವೇದನೆಯ ಪ್ರೇತಕಳೆ ಕಾಣುವುದು ಕೇವಲ ನಮ್ಮ ಅವಿದ್ಯಾವಂತ ಜನರಲ್ಲಿ, ಮನಸ್ಸಿನ ಕೆಲಸವನ್ನೇ ಮಾಡದಂಥವರಲ್ಲಿ ಮಾತ್ರ ಅಲ್ಲ, ಕೊಳಗೇರಿಯಿಂದ ಹಿಡಿದು "ಮಮ್ಮಿ ಡ್ಯಾಡಿ ಸಂಸ್ಕ್ರತಿಯ" ಅತಿ ಸಂಸ್ಕ್ರತರ ಸ್ವಚ್ಛವೂ ಸುಂದರವೂ ಆಗಿರುವ, ಆಮದಾಗಿ ಬಂದ ಕಳ್ಳಪೇಟೆಗಳಲ್ಲಿ ಕೊಂಡ ವಿದೇಶೀ ವಸ್ತು ವಿಶೇಷಗಳ ಅಚ್ಚುಕಟ್ಟಾದ ಜೋಡಣೆಗಳ ನಡುವೆಯೂ ಕೂಡ. ಇಡೀ ಸಮಾಜವೇ ತನ್ನ ಸತ್ವವನ್ನು ಮರೆತು, ಹಳೆಯ ಆಚಾರಗಳನ್ನು ಅಂಧವಾಗಿ, ಯಾಂತ್ರಿಕವಾಗಿ ನಡೆಸುತ್ತ ಅನುಕರಣೆಯ ಮಂಗಾಟದಲ್ಲಿ ಮೈಮರೆತಿದೆ. ಇಂಥ ಕಡೆ ಸ್ವತಂತ್ರ ಕೃತಿಗಳಾಗಲೀ, ಸಾಮಾಜಿಕ ಬದಲಾವಣೆಗಳಾಗಲೀ ಅತ್ಯದ್ಭುತ ಮಾನವ ಸಾಹಸಗಳಾಗಲೀ, ನಿರಂತರ ಪರಿಶ್ರಮದಿಂದ, ಅಂತಃಸ್ಫುರಣೆಯಿಂದ ರಚಿತವಾಗುವ ಮಹಾಶಿಖರಗಳಾಗಲೀ ಹುಟ್ಟುವುದಾದರೂ ಹೇಗೆ? ಆದಕಾರಣ ಕೃತಕವಾದದ್ದೇ 'ನಿಜವಾದುದಾಗಿ, ನಿಜವಾದದ್ದೇ ಕೃತಕವಾಗಿ ನಮಗೆ ಕಾಣಿಸುತ್ತಿದೆ. ದೇವತೆಗಳ ಪಾತ್ರಗಳನ್ನೇ ಸಿನೆಮಾದಲ್ಲಿ ಅಭಿನಯಿಸುತ್ತಾ ರಾಮನೋ, ಕೃಷ್ಣನೋ ಆಗಿ ಕಂಗೊಳಿಸುತ್ತ ಬಂದ ನಟನೇ ನಮಗೆ ದೇವರಾಗಿ ಕಾಣುತ್ತಾನೆ. ಸಿನೆಮಾದಲ್ಲಿ ಬಡವರ ಉದ್ಧಾರಕನ, ಉದಾರಿಯ, ಪರೋಪಕಾರಿಯ ಪಾತ್ರ ವಹಿಸುತ್ತ ಬಂದವನೇ ನಮಗೆ ಮಹಾತ್ಮನಾಗಿ ಕಾಣುತ್ತಾನೆ. ನಿಜವಾದ ದೇವರೇ ಬಂದರೂ ನಾವು ಈಗ ಗುರುತಿಸುವ ಶಕ್ತಿಯನ್ನು ಖಂಡಿತ ಕಳೆದುಕೊಂಡಿದ್ದೇವೆ. ಮಹಾತ್ಮಾಗಾಂಧಿಯೇ ಈಗ ನಮಗೆ ಮರೆತು ಹೋಗಿರುವುದು ಮಾತ್ರವಲ್ಲ, ಅಂಥ ಮಹಾತ್ಮನೊಬ್ಬ ನಮ್ಮ ಕಣ್ಣ ಮುಂದೆ ಸಾದಾ ಪಂಚೆಯುಟ್ಟು ಬರಿ ಮೈಯಲ್ಲಿ ಬಂದು ನಿಂತರೆ ಯಾರೋ ಭಿಕ್ಷುಕನೆಂದು ಬಗೆದು ಹತ್ತು ಪೈಸಾ ತೆಗೆದುಕೊಂಡು ಗಾಡಿ ಬಿಡಯ್ಯ ಎಂದೇವು. ಸಹಜವಾದದ್ದನ್ನೇ ಗುರುತಿಸಲಾಗದ, ಕೃತಕವೂ, ಮೋಸದ್ದೂ, ನಟನೆಯೂ ಯಾವುದೋ ಅದಕ್ಕಾಗಿ ತಹತಹಪಡುವ ಈ ಮನಃಸಾಕ್ಷಿ ಒಂದು ದಾರುಣವಾದ ಜನರೋಗ, ಈ ರೋಗಕ್ಕೆ ಮದ್ದು ಹುಡುಕುವುದು ಕನ್ನಡದ ಕೆಲಸ ಹೇಗೊ ಹಾಗೆಯೇ ಭಾರತದ ಕೆಲಸವೂ ಹೌದು; ಇದು ಆತ್ಮೋದ್ಧಾರದ

ಕೆಲಸ ಹೇಗೋ ಹಾಗೆ ಇಡೀ ಜನತೆಯನ್ನೇ ಮೇಲಕ್ಕೆತ್ತುವ ಕೆಲಸವೂ ಹೌದು.

ಇದು ಎಂಥ ಕೆಲಸ? ಇದು ಮನುಷ್ಯನ ಅಂತರಂಗಕ್ಕೆ, ಸತ್ಯದ ಸೂಜಿ ಮದ್ದನ್ನು ಚುಚ್ಚುತ್ತ ಹೋಗುವ ಕೆಲಸ. ಎಚ್ಚರದ ಬದುಕನ್ನೇ ಕನಸಿನ ಬದುಕಾಗಿ ಮಾಡಿಕೊಂಡು ಹಗಲುಗನಸಿಗಾಗಿ ಹಾತೊರೆಯುವ ಈ ಅಸ್ವಸ್ಥತೆಯ ನಿವಾರಣೆಗೆ ತಕ್ಕ ವೈದ್ಯರ ತಂಡ ನಿರ್ಮಾಣವಾಗಬೇಕು. ಕನ್ನಡದ ಬಗ್ಗೆ ನಿಜವಾದ ಅಭಿಮಾನವಿದೆಯೇ? ಈ ಕೆಲಸ ಕೈಕೊಳ್ಳಿ. ಇನ್ನು ಯಾವ ಚಳವಳಿ ನಡೆಸಿದರೂ ಅದರಿಂದ ಕೆಲವು ಸ್ಕೂಟರು, ಕಾರುಗಳು ಸುಟ್ಟು ಹೋಗುವುದು ಮಾತ್ರವಲ್ಲ, ಅತ್ಯಂತ ಅಮೂಲ್ಯವಾದ ಮಾನವ ಪ್ರಾಣಗಳೂ ನಷ್ಟವಾಗುತ್ತವೆ. ಕೆಲವರಿಗೆ 'ಪ್ರದರ್ಶನ ರತಿ'ಯ ಸುಖ ಸಿಕ್ಕಬಹುದು. ಅಂಥ ಮನೋರೋಗಿಗಳ ಕೈಗೆ ಕನ್ನಡ ಹೋಗಬಾರದು. ನಮ್ಮಲ್ಲಿ ವಿಚಾರವಂತರೂ, ನೈತಿಕ ಧೈರ್ಯವುಳ್ಳವರೂ, ಸತ್ಯವನ್ನು ಎತ್ತಿ ಹಿಡಿಯಬಲ್ಲವರೂ ಇದ್ದರೆ ಅವರು ನಮ್ಮ ಜನ ಸಮೂಹದಲ್ಲೂ ಅಂಥ ಗುಣಗಳು ಎಚ್ಚರಗೊಳ್ಳಬಹುದಾದಂಥ ಕಾರ್ಯಕ್ರಮ ಯೋಜನೆಗಳನ್ನು ರೂಪಿಸಿಕೊಳ್ಳಬೇಕು; ಒಂದಾಗಬೇಕು, ಮುಂದಾಗಬೇಕು. ಒಂದು ಹೇಗೆ ಎನ್ನುವುದನ್ನು ನಾವೂ ನೀವೂ ಕೂಡಿಯೇ ಚಿಂತಿಸೋಣ.

೩

ಕನ್ನಡ ಜನಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕನ್ನಡ ಕಾವ್ಯ ಸಾಹಿತ್ಯಕ್ಕಂತೂ ಕೊನೆಯ ಪಕ್ಷ ಹತ್ತು ಶತಮಾನಗಳಷ್ಟು ಕಾಲದ ನಿರಂತರವಾದ ಪರಂಪರೆ ಇದೆ, ಈ ಮಾತು ನಮ್ಮ ಕನ್ನಡ ಚಳವಳಿಗಾರರೆಲ್ಲರಿಗೂ ತಿಳಿದಿದೆ. ಹಾಗೆಯೇ ಈ ಪರಂಪರೆಯ ಪಂಪ, ಪೊನ್ನ, ಜನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ ಮುಂತಾದವರ ಹೆಸರುಗಳು ನಮ್ಮ ಸುಶಿಕ್ಷಿತರ ಭಾಷಣಗಳಲ್ಲೂ ಮೊಳಗುತ್ತವೆ. ಆದರೆ ಈ ಕವಿಗಳ ಗ್ರಂಥಗಳ ಒಂದು ಸಾಲನ್ನೂ ಓದಲಾರದ ಮಹಾಪಾಂಡಿತ್ಯ ಕೂಡ ನಮ್ಮದಾಗಿದೆ ಎಂಬುದನ್ನು ನಾವು ಮರೆಯಬಾರದು. ಎಲ್ಲೋ ಅಲ್ಲಿ ಇಲ್ಲಿ ಗಮಕ ನಡೆದಾಗ ಕಿವಿಗೆ ಬಿದ್ದ ಕೆಲವು ಸಾಲುಗಳನ್ನು ಬಿಟ್ಟರೆ ಈ ಕವಿಗಳ ಬಗ್ಗೆ, ಮುಖ್ಯವಾಗಿ ಅವರ ಕಾವ್ಯಗಳ ಬಗ್ಗೆ 'ಸ್ವತಃ' ನಮಗೆ ತಿಳಿಯುವುದು ಬಹಳ ಕಡಿಮೆ. ಪಂಪನ ಘನತೆ ಗಾಂಭೀರ್ಯಗಳಾಗಲೀ, ಕುಮಾರವ್ಯಾಸನ ಆಗಾಧ ರೂಪಕ ಪ್ರಪಂಚಗಳಾಗಲೀ ನಮಗೆ ಇನ್ನೂ ಪರಕೀಯವೇ. ಆದರೂ ಅವರ ಬಗ್ಗೆ ಭಾಷಣ ಮಾಡಲು ನಾವು ಎಂದೂ ಹಿಂದೆಗೆಯುವುದಿಲ್ಲ. ತನಗೆ ಗೊತ್ತಿಲ್ಲದ್ದರ ಬಗ್ಗೆಯೇ ಮಾತಾಡುವುದು

ನಮ್ಮ ಆಧುನಿಕ ಸಂಪ್ರದಾಯವೇ ಆಗಿಬಿಟ್ಟಿದೆ. ಆದರೆ ಕನ್ನಡದ ಬಗ್ಗೆ ನಿಜವಾದ ಅಭಿಮಾನ ಕುದುರಬೇಕಾದರೆ ಈ ಸ್ವತಂತ್ರ ಭಾರತದ ಸ್ವತಂತ್ರ ಕನ್ನಡ ಜನ 'ಸ್ವತಂತ್ರ'ರಾಗಿಯೇ ನಮ್ಮೆಲ್ಲ ಸಾಹಿತ್ಯದ ಪರಿಚಯ ಪಡೆಯುವ ಸಾಮರ್ಥ್ಯವನ್ನು ಗಳಿಸದೆ ಹೋದರೆ ಈ 'ಅಭಿಮಾನ' ಕಾಲೂರಿ ನಿಂತು ಬೆಳೆಯುವ ಗಿಡವಾಗುವುದಿಲ್ಲ. ಗಾಳಿಯಲ್ಲಿ ತೂರಿ ಹೋಗುವ ಜಳ್ಳಾಗುತ್ತದೆ. ಮೊದಲನೆದಾಗಿ, ನಡೆಯಬೇಕಾದ ಚಳವಳಿ ಎಂದರೆ ನಮ್ಮ ಕನ್ನಡದ ಮಕ್ಕಳೆಲ್ಲ ಅವರು ಎಲ್ಲೇ ಇರಲಿ, ಯಾವ ಶಾಲೆಗೆ ಸೇರಿರಲಿ, ಅವರು ಕನ್ನಡದಲ್ಲಿ ಓದಲೂ, ಬರೆಯಲೂ, ಉತ್ತಮ ಮನುಷ್ಯರಾಗಿ ಬೆಳೆಯಲೂ ತಕ್ಕ ಪಾಠಶಾಲೆಗಳನ್ನು ಎಲ್ಲ ಕಡೆಗಳಲ್ಲಿ ತೆರೆಯುವುದು. ನಮ್ಮ ಘನ ಸರಕಾರವೇನೋ ಶಾಲೆಗಳನ್ನು ಎಲ್ಲ ಕಡೆ ತೆರೆಯಲು, ತೆರೆದವುಗಳನ್ನು ನಡೆಸಲೂ ಹಣ ಖರ್ಚುಮಾಡುತ್ತದೆ. ಆದರೆ ಸರಿಯಾದ ಅಧ್ಯಾಪಕರುಗಳಿಲ್ಲದೆ ಅವ್ಯವಸ್ಥೆಯ ಪರಾಕಾಷ್ಠೆಯನ್ನು ಮುಟ್ಟಿರುವ ನಮ್ಮ ಶಿಕ್ಷಣ ವ್ಯವಸ್ಥೆ ನಮ್ಮ ಸಂಸ್ಕೃತಿಗೂ ನಮ್ಮ ಜನಜೀವನದ ಅಭಿವೃದ್ಧಿಗೂ ಮಾರಕವಾಗಿದೆ. ನಮ್ಮ ಶತ್ರುಗಳೇ ನಮ್ಮನ್ನು ನಾಶಮಾಡಲು ಹೊರಟಿದ್ದರೆ ಎಂಥ ವ್ಯವಸ್ಥೆ ಆಗುತ್ತಿತ್ತೋ ಅಂಥ ದುಷ್ಟ ಪದ್ಧತಿಯಾಗಿ ಬಿಟ್ಟಿದೆ. ನಿಜವಾದ ಸಂಸ್ಕಾರವನ್ನು ಬಿಟ್ಟು ಇನ್ನು ಎಲ್ಲ ಅಧಮ ಗುಣಗಳನ್ನೂ ನಮ್ಮ ಮಕ್ಕಳು ಕಲಿತುಕೊಳ್ಳಬಹುದಾದ ಶಾಲೆಗಳ ಶೂಲಕ್ಕೆ ನಮ್ಮ ಮಕ್ಕಳನ್ನು ನಾವು ಏರಿಸುತ್ತ ಬಂದಿದ್ದೇವೆ. ಈ ದುಷ್ಟ ವ್ಯವಸ್ಥೆ ಕೊನೆಗೊಳ್ಳಲೇಬೇಕೆಂದು ಕನ್ನಡದ ಅಭಿಮಾನಿಗಳಾದ ನಾವು ಪಣ ತೊಡಬೇಕು. ಆಂಗ್ಲಭಾಷೆಯನ್ನು ಕಲಿಸುವ ಪ್ರಾಥಮಿಕ ಶಾಲೆಗಳು ಅಷ್ಟು ಜನಪ್ರಿಯವಾಗಲೂ ಏನು ಕಾರಣ ಎಂಬುದನ್ನು ನಾವು ತಿಳಿಯಬೇಕು. ಅಂಥ ಇಂಗ್ಲಿಷ್ ಶಾಲೆಗಳನ್ನು ಧಿಕ್ಕರಿಸುವ, ಬಹಿಷ್ಕರಿಸುವ ಅವುಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇವೆಂದು ಬೆದರಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಅಂಥ ಶಾಲೆಗಳಿಗಿಂತ ಉತ್ತಮವಾದ ಶಾಲೆಗಳನ್ನು ನಾವು, ಕನ್ನಡದ ಅಭಿಮಾನಿಗಳು, ಪ್ರಾಣತ್ಯಾಗಕ್ಕೂ ಸಿದ್ಧವಾಗಿರುವ ತ್ಯಾಗಶೀಲ ನಟವರೇಣ್ಯರೂ ಜಗತ್ತಿನ ಹೊಸ ಸಂದೇಶಗಳನ್ನು ತಮ್ಮ ಬದುಕಿನ ಮೂಲಕ, ನಿರಂತರವಾದ ಹೋರಾಟಗಳ ಮೂಲಕ ಸಾರುತ್ತಿರುವ ಕನ್ನಡ ಧುರೀಣರೂ ಕೈಕೊಂಡರೆ ನಮ್ಮ ಮಧ್ಯಮ ವರ್ಗದ ಪರಾನುಕರಣ ಪ್ರವೀಣರೂ ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳಿಸುವುದೇ ದೊಡ್ಡಸ್ತಿಕೆಯ ಸಂಕೇತ ಎಂದು ತಿಳಿಯಬಹುದು. ಒಂದು ವೇಳೆ ಆ ಜನ ಅಮೇರಿಕಕ್ಕೆ ಸಕುಟುಂಬ ಯಾನ ಮಾಡುವ ಸಿದ್ಧತೆಯಲ್ಲಿರುವಂಥವರಾದರೆ ಹಾಗೇ ಮಾಡಿ ಕನ್ನಡವನ್ನು ನಮಗೆ ಉಳಿಸಲಿ. ಆದರೆ ನಮ್ಮಲ್ಲಿ ಇರುವ ನಿರಕ್ಷರರಾದ ದೀನ ದಲಿತರ ಕೋಟ್ಯಂತರ ಮಕ್ಕಳಿಗೆ ಸದ್ವಿದ್ಯೆ ದೊರೆತು ಅವರು ಕನ್ನಡ ಸಂಸ್ಕಾರ ಪಡೆದು ಉತ್ತಮ ಪ್ರಜೆಗಳಿಗೂ

ಸ್ವಾತಂತ್ರ್ಯ, ಸಮಾನತೆ, ನ್ಯಾಯಗಳನ್ನು ಎತ್ತಿ ಹಿಡಿಯುವ ವೀರಯುವಕರಾಗಿ ಪರಿಪಾಕಗೊಂಡು ನಮ್ಮ ದೇಶ ತಲೆ ಎತ್ತಿ ನಿಲ್ಲುವಂತಾದರೂ ಆಗುತ್ತದೆ. ನಮ್ಮ ಕನ್ನಡದ ಸದಭಿಮಾನಿಗಳು ಈ ಇಂಥ ಕೆಲಸವನ್ನು ಅಖಂಡ ಕರ್ನಾಟಕದ ಮಟ್ಟದಲ್ಲಿ ಕೈಕೊಳ್ಳುವುದು ಮೊದಲನೆಯ ಕೆಲಸ.

ಎರಡನೆಯದಾಗಿ ಮಾಡಬೇಕಾದ ಕೆಲಸ ಈಗಲೇ ಫಲ ಕೊಡಬಹುದಾದ ಜರೂರಿನ ಕೆಲಸ: ಅಕ್ಷರವಿದ್ಯೆಯಿಲ್ಲದೆ ಬೆಳೆದವರಿಗೆ ಶಿಕ್ಷಣ ವ್ಯವಸ್ಥೆ ಮಾಡುವುದು. ಸರಕಾರವೇನೋ ವಯಸ್ಕರ ಶಿಕ್ಷಣಕ್ಕಾಗಿ ಇಲಾಖೆಗಳನ್ನು ನಿರ್ಮಿಸಿ ಹಣ ವ್ಯಯ ಮಾಡುತ್ತಿದೆ. ಆದರೆ ಅಜ್ಞರೂ ಅನಕ್ಷರರೂ ಆದವರ ಸಂಖ್ಯೆ ಹೆಚ್ಚುತ್ತಲೇ ಇದೆ. ಪ್ರಜಾತಂತ್ರ ಇಲ್ಲಿ ಯಶಸ್ವಿಯಾಗಬೇಕೆಂದು ನಮಗೆ ನಿಜವಾದ ಉದ್ದೇಶವಿದ್ದರೆ ನಮ್ಮ ಕೋಟ್ಯಂತರ ಬಡ ಜನರ ಅಜ್ಞಾನ ನಿವಾರಣೆಗೆ, ಅವರಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಯೆಂಬ ಮೌಲ್ಯಗಳ ಅರಿವು ಮೂಡಿ ಅವರು ವಿವೇಕದಿಂದ ರಾಜಕೀಯದಲ್ಲಿ ಪಾಲುಗೊಳ್ಳಬೇಕಾದರೆ ಅತ್ಯಂತ ವ್ಯಾಪಕವಾದ, ಖಾಸಗಿ ಪ್ರಯತ್ನ ಅತ್ಯಗತ್ಯ. ಕನ್ನಡದ ಅಭಿಮಾನಿಗಳಾದ ನಾವು ಈ ಕೆಲಸ ಏಕೆ ಕೈಗೊಳ್ಳಬಾರದು? ರಾಜಕೀಯ ಪುಢಾರಿಗಳ ಮೋಸದ ಮಾತುಗಳಿಗೆ, ಜಾತಿ ಭಾವನೆಯ ವಿಷವಾಹಿನಿಗೆ ಅವರು ತುತ್ತಾಗದ ಹಾಗೆ ಅವರ ಬುದ್ಧಿಯನ್ನು ಎಚ್ಚರಗೊಳಿಸುವುದಕ್ಕಿಂತ ಹೆಚ್ಚಿನ ಕನ್ನಡದ ಅಭಿಮಾನದ ಕೆಲಸ ಇನ್ನು ಯಾವುದಿದೆ?

ಇಡೀ ಕನ್ನಡ ನಾಡಿನಲ್ಲೇ ಈ 'ಮಾನವೀಯ' ಶಿಕ್ಷಣದ ಬೌದ್ಧಿಕ ಪ್ರವಾಹ ಹರಿಯುವಂತೆ ಮಾಡಿದರೆ ಆಗ ಪ್ರತಿಯೊಬ್ಬ ಕನ್ನಡಿಗನಿಗೂ ಆತ್ಮಗೌರವ ಹುಟ್ಟುವುದು ಸಾಧ್ಯವಾಗುತ್ತದೆ. ತಾನು ದೀನ ಹೀನ ಎಂಬ ಭಾವನೆ ತೊಲಗಿ ಕನ್ನಡಿಗ ತಲೆಯೆತ್ತಿ ನಿಲ್ಲುವುದು ಸಾಧ್ಯವಾಗುತ್ತದೆ. ಇಂಥ ಕೆಲಸದ ಕಲ್ಪನೆ ಕೂಡ ಕನ್ನಡದ ಮುಂದಾಳುಗಳಲ್ಲಿ ಕಂಡು ಬರುವುದಿಲ್ಲ. ನಮ್ಮ ಮಕ್ಕಳಿಗೆ ನಮ್ಮ ಭಾಷೆಯಲ್ಲೇ ತಕ್ಕ ಶಿಕ್ಷಣ ಒದಗಿಸಿ ಅವರು ಸಂಸ್ಕಾರವಂತರಾಗದೆ ಹೋದರೆ ಅವರಿಗೂ ಭವಿಷ್ಯವಿಲ್ಲ, ದೇಶಕ್ಕೂ ಭವಿಷ್ಯವಿಲ್ಲ ಎಂದು ನಮ್ಮ ಧೀಮಂತ ಧುರೀಣರಿಗೆ ಯಾಕೆ ಹೊಳೆಯುವುದಿಲ್ಲ? ಈ ದಿಕ್ಕಿನಲ್ಲಿ ನಾವೆಲ್ಲರೂ ಯೋಚಿಸಿ ಆದಷ್ಟು ಬೇಗ ಸರಿಯಾದ ಶಿಕ್ಷಣ ವಿಧಾನವನ್ನು ಕಲ್ಪಿಸತಕ್ಕ ಯೋಜನೆ ಹಾಕಿಕೊಂಡು ಅದು ಅವ್ಯಾಹತವಾಗಿ ನಡೆಯುವಂತೆ ಮಾಡುವುದು ಅಸಾಧ್ಯವಾದರೆ ಕನ್ನಡದ ಕೂಗು ಅರಣ್ಯರೋದನವೇ ಆಗುತ್ತದೆ. ಇದಕ್ಕೆ ತಕ್ಕ ಸೇವೆ ಸಲ್ಲಿಸಲು ಕನ್ನಡದ ಧೀಮಂತರು ಸಿದ್ಧರಾಗಬೇಕು. ಹಳ್ಳಿ ಹಳ್ಳಿಗೂ ಹೊಸವಿಚಾರಗಳ ಹೊಸ ಮೌಲ್ಯಗಳ ಹೊಸ ಸಾಹಿತ್ಯ ಕೃತಿಗಳ, ಹೊಸ ನಾಟಕಗಳ ಪ್ರಭಾವ ಮುಟ್ಟಬೇಕು. ಅದರ ಜೊತೆಗೆ

ಕನ್ನಡ ಕಾವ್ಯ ಸಂಸ್ಕೃತಿಯ ಪರಂಪರೆಯ ಅರಿವು ನಮ್ಮ ಅಜ್ಞರಲ್ಲೂ ಮೂಡುವ ರೀತಿ, ಅವರೇ 'ಸ್ವತಃ' ಓದಿ ಅರಗಿಸಿಕೊಳ್ಳುವ ರೀತಿಯಲ್ಲಿಯೇ ಈ ಕೆಲಸ ನಡೆಯಬೇಕು. ಯಾರ ಭಾಷಣವನ್ನೂ ಕೇಳಿ ಮರೆತು ಬಿಡುವ, ಅಜ್ಞ ಪುಢಾರಿಗಳ ಆಜ್ಞೆಗೆ ತಲೆಬಾಗಿ ಕುರಿಗಳಂತೆ ವರ್ತಿಸುವ ಕಾಲ ಮುಗಿದಿದೆ. ಹೊಸಕಾಲಕ್ಕೆ ತಕ್ಕ ಆತ್ಮಗೌರವ, ಸ್ವತಂತ್ರ ವ್ಯಕ್ತಿತ್ವ ವಿಕಾಸಗೊಳ್ಳುವ ಈ ಕಾರ್ಯಕ್ರಮಕ್ಕೆ ಕೇವಲ ಸ್ವಾರ್ಥಿಗಳಲ್ಲದೆ, ಸ್ವಪ್ರಚಾರವನ್ನು ಬಯಸದ, ಸ್ವತಂತ್ರರೂ ಚೆನ್ನಾಗಿ ತಯ್ಯಾರಿ ಪಡೆದವರೂ ಆದ ಶಿಕ್ಷಕರ ಅಗತ್ಯ ಇದೆ. ಸಾಹಿತ್ಯ ಪರಿಷತ್ತಿನಂಥ ಸಂಸ್ಥೆಗಳು ಇಂಥ ಕೆಲಸವನ್ನು ಯಾವಾಗಲೋ ಕೈಕೊಳ್ಳಬಹುದಾಗಿತ್ತು. ನಾವೇ ಎಲ್ಲ ಕಡೆಗಳಲ್ಲೂ ಇಂಥ ಸಣ್ಣ ಸಣ್ಣ ಸಂಸ್ಥೆಗಳನ್ನು ಏರ್ಪಡಿಸಿಕೊಂಡು ಪ್ರಚಾರವನ್ನು ಬಯಸದೇ ಮೌನವಾಗಿ ಮಾಡಬೇಕಾದ ಕೆಲಸ ಇದು. ಸಮಾಜ ಪ್ರಜ್ಞೆಯ ಬಗ್ಗೆ ಮಾತಾಡುವ, ಬಡವರ ಬಗ್ಗೆ ಎಲ್ಲಿಲ್ಲದ ಕಾಳಜಿ ತೋರುವ ನಮ್ಮ ಧೀಮಂತರು ಇಂಥ ಕೆಲಸಕ್ಕೆ ಸಿದ್ಧರಾಗಿ ತಮ್ಮ ಈ ಕನ್ನಡದ ಅಭಿಮಾನ ಸಾಚಾ ಮಾತ್ರವಲ್ಲ ಕರ್ನಾಟಕದ ಭವಿಷ್ಯವನ್ನು ರೂಪಿಸುವ ಶಕ್ತಿಯುಳ್ಳದ್ದೂ ಎಂದು ಸಾಬೀತು ಮಾಡಬಹುದೋ? ನೋಡೋಣ.

೪

ಆಧುನಿಕ ವೈಜ್ಞಾನಿಕ ನಾಗರಿಕತೆ ತರ್ಕದ ಮೇಲೆ, ನಿರಂತರವಾದ ಪರಿಶೋಧನೆ ಪ್ರಯೋಗಗಳ ಮೂಲಕ ಆಗುವ ಬದಲಾವಣೆಗಳ ಮೇಲೆ ಅವಲಂಬಿಸಿದೆ. ಈ ಕಾಲದಲ್ಲಿ ಬದುಕುವ ಮನುಷ್ಯನ ಮನಸ್ಸು ಎಷ್ಟು ಸೂಕ್ಷ್ಮವಾಗಿದ್ದರೂ ಎಷ್ಟು ಸ್ವತಂತ್ರವಾಗಿದ್ದರೂ, ಪರಿವರ್ತನಶೀಲವಾಗಿದ್ದರೂ ಸಾಲದು. ಸಂಪ್ರದಾಯದ ಕೊಳೆತ ನೀರಿನಲ್ಲೇ ಬಿದ್ದಿರುವ ಭಾರತೀಯರಾದ ನಾವೂ ಕೂಡ ಈ ಆಧುನಿಕ ಜಗತ್ತಿಗೇ ಸೇರಿದವರು. ಈ ಜಗತ್ತಿನಲ್ಲಿಯೇ ಬದುಕಿ ಬಾಳಿ ಅಭ್ಯುದಯ ಹೊಂದಿ ಸಾರ್ಥಕವಾದ ಜೀವನವನ್ನು ನಡೆಸಬೇಕಾದವರು. ನಮ್ಮ ಭರತಖಂಡವೊಂದೇ ಈಗ ಬೇರೆ 'ಖಂಡ'ವಾಗಿ ಉಳಿಯಲು ಸಾಧ್ಯವಿಲ್ಲ. ನಾವು ಕೂಡ ಸ್ವಾತಂತ್ರ್ಯದ ಅನಂತರದ ಕಾಲದಲ್ಲಿ ಆಧುನಿಕತೆಯನ್ನು ಸಂಪೂರ್ಣವಾಗಿ ಸ್ವೀಕರಿಸಿ ಅದಕ್ಕೆ ತಕ್ಕ ಪ್ರಜಾತಂತ್ರ ರಾಜ್ಯ ಪದ್ಧತಿಯನ್ನೂ ಇಲ್ಲಿ ಸ್ಥಾಪಿಸಿಕೊಂಡಿದ್ದೇವೆ. ಪ್ರಜಾತಂತ್ರದ ಜೀವಾಳ ಇರುವುದು ಸ್ವತಂತ್ರ ಬುದ್ಧಿಯ ಪ್ರಜೆಗಳಲ್ಲಿ ಅಲ್ಲದೆ ಇನ್ನು ಯಾವುದರಲ್ಲೂ ಅಲ್ಲ. ಇಲ್ಲಿರುವ ಜನರಲ್ಲಿ ಪ್ರತಿಯೊಬ್ಬರೂ ಸ್ವತಂತ್ರವಾಗಿ ಯೋಚಿಸಿ, ಸ್ವತಂತ್ರವಾಗಿ ಬದುಕಲೂ, ಬದುಕನ್ನೂ ತಿದ್ದತಕ್ಕ ಬದಲಾವಣೆ ಮಾಡಿಕೊಳ್ಳಲೂ ಸಾಧ್ಯವಾಗುವ ಎಲ್ಲ ಅನುಕೂಲಗಳನ್ನೂ ವಾತಾವರಣವನ್ನೂ ಸೃಷ್ಟಿಸುವುದು ಸಮಾಜದ, ಸರಕಾರದ,

ಧೀಮಂತ ವರ್ಗದ ಮೊದಲನೆಯ ಕರ್ತವ್ಯ. ಈ ಕರ್ತವ್ಯವನ್ನು ನೆರವೇರಿಸಲು ತಕ್ಕ ಪ್ರಯತ್ನ ನಡೆಯದೆ ಇರುವುದೇ ಇಂದಿನ ನಮ್ಮೆಲ್ಲ ತೊಂದರೆಗಳಿಗೂ ಕಾರಣ. ನಮ್ಮಲ್ಲಿ ಪ್ರಜಾತಂತ್ರದ ಚೌಕಟ್ಟು ಇದೆ, ಅದರೊಳಗಡೆ ಮಾತ್ರ ಬಂದು ಕುಣಿಯುವ ಪಾತ್ರಗಳು ಗತಕಾಲದವು, ಈಗ ಸಲ್ಲುವವುಗಳಲ್ಲ : ಪಾಳೆಗಾರರು ದರೋಡೆಕೋರರರು, ಅರಸೊತ್ತಿಗೆಯ ಲಕ್ಷಣಗಳನ್ನು ಹೊಂದಿರುವ, ಧನ ಪಿಶಾಚಿಗರು– ಇವರೇ ಈಗ ಈ ಚೌಕಟ್ಟಿನಲ್ಲಿ ತೆರೆ ಸರಿಸಿ ಮುನ್ನುಗ್ಗಿ 'ತದಿಗಿಣ' ಹಾಕುವ ರಾಕ್ಷಸ ವೇಷಗಳು, ಪಿಶಾಚಿ ರೂಪಗಳು. ಈ ಮಾತನ್ನು ಮರೆಯದೆ, ಈ ಚೌಕಟ್ಟಿನೊಳಗೆ ನಿಜವಾದ ಮನುಷ್ಯರು, ಆಧುನಿಕ ಮಾನವರು, ಸ್ವಾತಂತ್ರ್ಯ ಸಮಾನತೆಯ ಮೌಲ್ಯಗಳನ್ನು ಬದುಕುವಂಥವರು ಮಾತ್ರ ಸಹಜವಾಗಿ ವಿವೇಕಪೂರ್ಣವಾಗಿ, ಸಭ್ಯರಾಗಿ, ಗಂಭೀರವಾಗಿ ನಡೆಯಲು ತಕ್ಕ ವಾತಾವರಣವನ್ನು ಸೃಷ್ಟಿಸುವುದೇ ಈಗ ಅತ್ಯಂತ ಮಾನವೀಯವೂ ಅತ್ಯಂತ ದೇಶಪ್ರೇಮದ್ದೂ ಆದ ಕೆಲಸ. ಈ ಕೆಲಸವೇ ಮೂಲಭೂತವಾದದ್ದು; ಅದಕ್ಕೆ ಪೂರಕವೂ, ಪೋಷಕವೂ ಆದಾಗ ಮಾತ್ರ ಅಂಥದಕ್ಕೆ ಬೆಲೆ ಬರುತ್ತದೆ.

ಈ ದೃಷ್ಟಿಯಿಂದಲೇ ಕನ್ನಡಕ್ಕಾಗಿ ಕೆಲಸ ನಡೆಯುವುದು ಅತ್ಯಗತ್ಯ. ಕಾಲ ಬದಲಾಗಿದೆ. ಒಂದು ಕಾಲದಲ್ಲಿ ಓದು ಬರಹ ಬಲ್ಲವರ ಸಂಖ್ಯೆ ಅತ್ಯಲ್ಪವಾಗಿತ್ತು. ಆಗ ಜನ ಸಮೂಹ ಕಿವಿಯ ಮೂಲಕವಲ್ಲದೆ ಕಾವ್ಯವನ್ನು ಅನುಭವಿಸುವುದು ಅಸಾಧ್ಯವಾಗಿತ್ತು. ಆದಕಾರಣವೇ ಆ ಕಾಲಕ್ಕನುಗುಣವಾಗಿ ಸಂಗೀತಕ್ಕೂ ಕಾವ್ಯಕ್ಕೂ ನಂಟು ಬೆಳೆಯಿತು. ಆದರೆ ಈ ಎರಡೂ ಬೇರೆ ಬೇರೆ ಕಲೆಗಳು ಎಂಬ ಸತ್ಯ ಮರೆತು, ಏನೇ ಆಗಲಿ, ಅದು ಕಿವಿಗಿಂಪಾಗಿ ಹಾಡಿದರೆ ಸಾಕು, ಕೇಳಿ ಸಂತೋಷಿಸಬಹುದು ಎಂಬ ಭಾವನೆ ಬೆಳೆದು ರೂಢವಾಯಿತು. ಸಂಗೀತ ಕೇವಲ ನಾದದ ಮೂಲಕ ನಮ್ಮ ಹೃದಯವನ್ನು ಮುಟ್ಟಿ ಕಲಕಬಲ್ಲ ಕಲೆ; ಅದರಿಂದ ಆಗುವ ಮನಃ ಸಂಸ್ಕಾರದ ಪರಿಯೇ ಬೇರೆ. ತನ್ನ ಸಹಜವಾದ ಅರ್ಥಾನುಸಾರಿಯಾದ ಏರಿಳಿತಗಳಿಂದ ಛಂದಸ್ಸಿನಿಂದ ಲಯದಿಂದ ಧ್ವನಿಪೂರ್ಣವಾದ ಅರ್ಥಗಳನ್ನು ಬಿತ್ತರಿಸುವುದು ಕಾವ್ಯದ ರೀತಿ, ಅದನ್ನು ಸ್ವತಃ ಸರಿಯಾಗಿ ಓದಿದಾಗಲೇ ಒಬ್ಬ ಮನುಷ್ಯ ನಿಜವಾಗಿ ಅದರಿಂದಾಗುವ ಮನಃ ಸಂಸ್ಕಾರವನ್ನೂ ಹೃದಯ ಸ್ಫುರಣೆಯನ್ನೂ ಪಡೆಯಬಲ್ಲ, ಈ ಸತ್ಯ ಮರೆತದ್ದರಿಂದ ತಾಳಬದ್ಧವಾಗಿ ಬರೆದ ಅಬದ್ಧವೆಲ್ಲ ಕಾವ್ಯವೆಂದು ಮೆರೆಯತೊಡಗಿತು; ಜನ ನಿಜವಾದ. ಈ ಕಾವ್ಯಾನುಭವ ಪಡೆಯದೆ ಅದರಿಂದ ದೊರೆಯುವ ಸಂಸ್ಕಾರಕ್ಕೆ ಬಾಹಿರರಾದರು ಸ್ಥಿತಿ ಹೀಗೆ ಮುಂದುವರಿಯಬೇಕಾದ ಅಗತ್ಯವಿಲ್ಲ. ಹಾಗೆ

ಮುಂದುವರಿದರೆ ಅದು ದೇಶಕ್ಕೂ ನಮ್ಮ ಸಂಸ್ಕೃತಿಗೂ ಮಾರಕವಾಗುತ್ತದೆ. ಲಯಬದ್ಧವಾದ ಮಾತುಗಳನ್ನು ಓದಿ, ಆ ಮಾತುಗಳಲ್ಲಿ ತಲ್ಲೀನನಾದಾಗ ಆಗುವ ಹೃದಯ ಸಂಸ್ಕಾರ ಸ್ವತಂತ್ರ ಸಮಾಜಕ್ಕೆ ಅತ್ಯವಶ್ಯವಾದುದು. ಹೀಗೆ 'ಸ್ವತಃ' ಓದಿ ಕಾವ್ಯವನ್ನು ಆನಂದಿಸಿ ಪ್ರಚೋದನೆ ಪಡೆಯಬಲ್ಲವರ ಸಂಖ್ಯೆ ನಮ್ಮಲ್ಲಿ ಹೆಚ್ಚುತ್ತಿದೆ. ಅಂಥವರಿಗೆ ತಕ್ಕ ಶಿಕ್ಷಣ, ಕಾವ್ಯವನ್ನು ಸರಿಯಾಗಿ ಓದುವ ಶಿಕ್ಷಣ ಈಗ ಅತ್ಯವಶ್ಯ ಎನ್ನುವ ಸತ್ಯವನ್ನು ನಿಜವಾದ ಕನ್ನಡದ ಅಭಿಮಾನಿಗಳು ಅರಿಯಬೇಕು. ಕಾವ್ಯವನ್ನು ಹೇಗೆ 'ಓದಬೇಕು' ಹಾಡುವುದಲ್ಲ ಎಂಬುದನ್ನು ನಮ್ಮ ವಿದ್ಯಾವಂತರಿಗೆಲ್ಲ ಕಲಿಸಬೇಕಾಗಿದೆ. ಇದು ಪ್ರಾಥಮಿಕ ಶಾಲೆಗಳಿಂದ ಆರಂಭವಾಗಿ ಪದವಿ ತರಗತಿಗಳವರೆಗೂ ಅವ್ಯಾಹತವಾಗಿ ನಡೆಯಬೇಕು. ಆ ಬಗ್ಗೆ ನಮ್ಮ ಯಾವ ಕನ್ನಡ ಸಂಸ್ಥೆಗಳ ಯಾವ ಕೆಲಸವನ್ನೂ ಇಷ್ಟು ದಿನಗಳ ಕಾಲ ಕೈಗೊಳ್ಳದೆ ಇರುವುದು ನಮ್ಮ ಕನ್ನಡದ ಅಭಿಮಾನಕ್ಕೆ ಭಾರೀ ದೊಡ್ಡ ಸವಾಲು.

ನಮ್ಮ ಸಾಮಾನ್ಯ ವಿದ್ಯಾವಂತನಿಗೆ ಯಾವ ಕನ್ನಡ ಕಾವ್ಯವನ್ನೂ ಅದರ ಲಯ ಹಿಡಿದು ಓದಲು ಬರುವುದಿಲ್ಲ. ನಮ್ಮ ಪ್ರಾಥಮಿಕ ಪ್ರೌಢಶಾಲೆಗಳಲ್ಲಿ ಮಾತ್ರವಲ್ಲ ವಿಶ್ವವಿದ್ಯಾನಿಲಯದಲ್ಲಿರುವ ಕನ್ನಡ ಅಧ್ಯಾಪಕರುಗಳಲ್ಲಿ ಈ ತರಬೇತಿ ಇರುವವರ ಸಂಖ್ಯೆ ಬಹಳ ಕಡಿಮೆ. ಇಂಥ ಪರಿಸ್ಥಿತಿಯಲ್ಲಿ 'ಗಮಕಗೋಷ್ಠಿ'ಗಳನ್ನು ಏರ್ಪಡಿಸಿ ನಮ್ಮ ಜನ ಕೇವಲ ಕಿವಿಮಾತ್ರ ಇರುವ ಕುರಿಗಳು 'ಸ್ವತಃ' ಓದಬಲ್ಲವರಲ್ಲ ಎಂದು ಇಂದೂ ನಾವು ಕನ್ನಡದ ಉದ್ಧಾರ ಮಾಡಬೇಕೆ? ಕನ್ನಡದ ಕವನಗಳನ್ನು ಓದಿ ಸಂತೋಷಪಡುವುದು ಹೇಗೆ ಎನ್ನುವುದನ್ನು ತಕ್ಕ ಶಿಬಿರಗಳನ್ನು ಏರ್ಪಡಿಸಿ ಕವನ ಓದುವವರನ್ನು ಸಿದ್ಧಪಡಿಸಿ ಅವರ ಮೂಲಕ ಜನಸಾಮಾನ್ಯರಲ್ಲಿ ತಾವೂ ಕಾವ್ಯ ಓದಬಹುದು ಎಂಬ ಆತ್ಮ ವಿಶ್ವಾಸವನ್ನು ಹುಟ್ಟಿಸುವುದು ಈಗ ಕನ್ನಡ ಶಿಕ್ಷಣದಲ್ಲಿ ಅದು–ಶಾಲೆ ಕಾಲೇಜುಗಳಲ್ಲಾಗಲೀ, ವಯಸ್ಕರ ಶಿಕ್ಷಣ ಸಂಸ್ಥೆಗಳಲ್ಲಾಗಲೀ ಪ್ರಥಮ ಸ್ಥಾನ ಪಡೆಯಬೇಕಾದ ಕೆಲಸ. ಇದನ್ನು ಯಾರು ಕೈಕೊಳ್ಳುತ್ತಾರೆ?

ಪಂಪ, ರನ್ನ, ಕುಮಾರವ್ಯಾಸರ ಕಾವ್ಯಗಳನ್ನು, ಕನ್ನಡದ ಮನೆಮನೆಯಲ್ಲೂ ಓದಿ ಸಂತೋಷಪಡಲು ತಕ್ಕ ವಾತಾವರಣ ಸೃಷ್ಟಿಯಾಗಬೇಕಾಗಿದೆ. ಆಗಲೇ ಕನ್ನಡ ಸಂಸ್ಕೃತಿಯ, ಕಾವ್ಯ ಪರಂಪರೆಯ ವೈಭವ ನಮ್ಮ ಜನಕ್ಕೆ ತಿಳಿಯುತ್ತದೆ. ಹಾಗಾದರೆ ಆ ಕವಿಗಳ ನಾಮಜಪ ಮಾಡಿ ಪುಣ್ಯ ಗಳಿಸುವ ಕನ್ನಡದ ಅಭಿಮಾನ ಸೂಸುವ ಮುಂದಾಳುಗಳೂ, ವಿದ್ವಾಂಸರೂ ಚಳುವಳಿಗಾರರೂ ಹಿಂದಕ್ಕೆ ಸರಿದು ಪಂಪ, ರನ್ನ, ಕುಮಾರವ್ಯಾಸ, ರಾಘವಾಂಕ, ಹರಿಹರರು ಮುಂದೆ ಬಂದು ನಮ್ಮ ಹೃದಯಗಳಲ್ಲಿ ಆಸೀನರಾಗುತ್ತಾರೆ. ಕನ್ನಡದ ಅಭಿಮಾನ ವ್ಯಕ್ತವಾಗಬೇಕಾದ ರೀತಿ ಇದು.

ಈ ಕೆಲಸಕ್ಕೆ ಎಂದರೆ ನಮ್ಮ ಜನರಲ್ಲಿ ಪ್ರತಿಯೊಬ್ಬ ಓದುಬರಹ ಬಲ್ಲವರೂ ಕನ್ನಡ ಸಾಹಿತ್ಯವನ್ನು 'ಸ್ವತಃ' ಓದಿ ಮನನ ಮಾಡಿ, ಹಾಗೆ ತನ್ನ ಮನಸ್ಸಿನ ಪರಿಧಿಯನ್ನು ವಿಸ್ತರಿಸಿಕೊಂಡು ತನ್ನ ಸ್ವಾಭಿಮಾನವನ್ನು ಎಚ್ಚರಿಸಿಕೊಂಡು ನಿಜವಾದ ಕನ್ನಡಿಗನಾಗಲು ತಕ್ಕ ವ್ಯವಸ್ಥೆಯನ್ನು ವಿಶಾಲವಾಗಿ ಅಖಂಡ ಕರ್ನಾಟಕ ವ್ಯಾಪ್ತಿಯಲ್ಲಿ ಮಾಡುವುದಕ್ಕೆ ಈಗ ತಕ್ಕ ಏರ್ಪಾಟು ಆಗಬೇಕು. ಇದು ಖಾಸಗಿ ಸಂಸ್ಥೆಯೊಂದು ದೇಶಾಭಿಮಾನದಿಂದ ಮಾತೃಭಾಷೆ ಪ್ರೇಮದಿಂದ ಕೈಗೊಂಡು ನಡೆಸಬೇಕಾದ ಕೆಲಸ, ಸಾಹಿತ್ಯಕ್ಕಾಗಿ, ಕನ್ನಡಕ್ಕಾಗಿ ಮಾಡುವ ಈ ಕೆಲಸದಿಂದ ಅಖಂಡ ಕರ್ನಾಟಕದಲ್ಲೇ ಹೊಸದೊಂದು ವಾತಾವರಣ ಸೃಷ್ಟಿಯಾಗುತ್ತದೆ. ಜನ ಸ್ವತಂತ್ರವಾಗಿ ಯೋಚಿಸಲು ಕಲಿಯುತ್ತಾರೆ. ಜನವಿರೋಧಿ ಕಾರ್ಯಕ್ರಮಗಳ ವಿರುದ್ಧ ಪ್ರತಿಭಟಿಸುತ್ತಾರೆ. ರಾಜಕೀಯ ದೌರ್ಜನ್ಯ, ಭ್ರಷ್ಟಾಚಾರಗಳ ವಿರುದ್ಧವಾಗಿ ಸಾರ್ವಜನಿಕ ಅಭಿಪ್ರಾಯ ಆಗ ರೂಪುಗೊಳ್ಳಲು ಸಾಧ್ಯವಾಗುತ್ತದೆ. ಕಾಗೆ ಗುಬ್ಬಕ್ಕನ ಕಥೆಗಳನ್ನು ಕೇಳಿ ಜನ ಆಗ ಮೋಸಹೋಗುವುದಿಲ್ಲ. ಸಮರ್ಥರಾದವರನ್ನು, ನಿಷ್ಠರಾದವರನ್ನು ಬುದ್ಧಿವಂತರಾದವರೂ ಜನಪ್ರಿಯರೂ, ಜನಸೇವಾ ನಿರತರೂ ಆದ ಮುಂದಾಳುಗಳನ್ನು ಅವರು ಯಾರೆಂದು ಗುರುತಿಸಿ ಚುನಾವಣೆಗಳಲ್ಲಿ ಅಂಥವರೇ ನಮ್ಮ ಪ್ರತಿನಿಧಿಗಳಾಗಿ ಆರಿಸಿ ಬರುವಂತೆ ನೋಡಿಕೊಳ್ಳುತ್ತಾರೆ. ಹೀಗೆ ಕನ್ನಡವನ್ನು 'ಸ್ವತಃ' ಓದಿ ಆನಂದಿಸಿ ಜನ ಸ್ವಾವಲಂಬಿಗಳಾದರೆ ರಾಜಕೀಯವೂ ಆರ್ಥಿಕವೂ ಆಗಿ ನಮ್ಮ ಅಭಿವೃದ್ಧಿ ಸಾಧ್ಯವಾಗುತ್ತದೆ. ಯಾವುದು ಆಗ ಕೇವಲ ಕಾನೂನೂ, ಬೀದಿಕೂಗೂ ಆಗಿ ಮಾಸಿ ಹೋಗುತ್ತಿದೆಯೋ ಅದು ಆಗ ವಸ್ತು ಸತ್ಯವಾಗುತ್ತದೆ. ಆ ದಿಕ್ಕಿನಲ್ಲಿ ಕೆಲಸ ಮಾಡುವುದೇ ನಿಜವಾದ ಕನ್ನಡದ ಅಭಿಮಾನಿ ಮಾಡಬೇಕಾದ ಕೆಲಸ, ಉಳಿದದ್ದೆಲ್ಲ ಕೇವಲ ಗುಲ್ಲು; ಭಾವೋದ್ರೇಕದ ಕ್ಷಣಿಕ ಅಭಾಸ.

* * *

ಲೇಖಕರ ಪರಿಚಯ :

ನವ್ಯ ಕಾವ್ಯ ಪಂಥದ ಶ್ರೇಷ್ಠ ಸಾಹಿತಿ ಮೊಗೇರಿ ಗೋಪಾಲಕೃಷ್ಣ ಅಡಿಗ ಅವರು ೧೮–೨–೧೯೧೮ರಲ್ಲಿ ಜನಿಸಿದರು. ತಂದೆ ರಾಮಪ್ಪ, ತಾಯಿ ಗೌರಮ್ಮ. ಬೈಂದೂರಿನಲ್ಲಿ ಪ್ರಾಥಮಿಕ ಶಿಕ್ಷಣ, ಮೈಸೂರಿನಲ್ಲಿ ೧೯೪೨ ರಲ್ಲಿ ಬಿ.ಎ. ಆನರ್ಸ್ ಪದವಿಯನ್ನು ಪೂರೈಸಿದರು. ಚಿತ್ರದುರ್ಗ, ದಾವಣಗೆರೆ, ಬೆಂಗಳೂರು ಪ್ರೌಢಶಾಲೆಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ, ೧೯೪೭ರಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಓದಿ ಎಂ.ಎ. ಪದವಿ ಪಡೆದರು. ೧೯೪೮ ರಿಂದ ೧೯೫೨ ರವರೆಗೆ

ಮೈಸೂರಿನ ಶಾರದಾವಿಲಾಸ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ೧೯೫೨ರಿಂದ ೫೪ರವರೆಗೆ ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿ ೧೯೬೪–೬೮ರವರೆಗೆ ಸಾಗರದ ಎಲ್.ಬಿ. ಕಾಲೇಜಿನಲ್ಲಿ ಮತ್ತು ಉಡುಪಿಯ ಪೂರ್ಣಪ್ರಜ್ಞಾ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸಿದರು. ಅನಂತರ ೧೯೭೧ರಲ್ಲಿ ನ್ಯಾಷನಲ್ ಬುಕ್ ಟ್ರಸ್ಟಿನ ನಿರ್ದೇಶಕರಾದರು. 'ಸಾಕ್ಷಿ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಕೆಲಕಾಲ ನಡೆಸಿದರು. ಇವರು ಕನ್ನಡದಲ್ಲಿ ಶ್ರೇಷ್ಠ ಕವನಗಳನ್ನೂ ವಿಮರ್ಶಾಕೃತಿಗಳನ್ನೂ ಬರೆದಿದ್ದಾರೆ. ಇವರ ಸಾಹಿತ್ಯ ಸೇವೆಗಾಗಿ ಹಲವಾರು ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ. ೧೯೭೩ರಲ್ಲಿ 'ವರ್ಧಮಾನ' ಕವನ ಸಂಕಲನಕ್ಕೆ ರಾಜ್ಯ ಸರಕಾರದ ಪ್ರಶಸ್ತಿ, ೧೯೭೪ರಲ್ಲಿ ಕೇಂದ್ರ ಸರಕಾರದ ಪ್ರಶಸ್ತಿ, ೧೯೬೩ರಲ್ಲಿ ಕರ್ನಾಟಕ ಸರಕಾರ ಪಂಪ ಪ್ರಶಸ್ತಿ, ಮಧ್ಯಪ್ರದೇಶ ಸರಕಾರದ ಕಬೀರ್ ಸನ್ಮಾನ ಪ್ರಶಸ್ತಿ ಲಭಿಸಿವೆ.

೧೯೭೯ರಲ್ಲಿ ಧರ್ಮಸ್ಥಳದಲ್ಲಿ ನಡೆದ ೫೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದ ಗೌರವವನ್ನು ಪಡೆದಿದ್ದಾರೆ. ಅಡಿಗರು ರಚಿಸಿದ ಕೆಲವು ಮುಖ್ಯ ಕೃತಿಗಳು ಇವು : ಭಾವತರಂಗ, ಕಟ್ಟುವೆವು ನಾವು, ನಡೆದು ಬಂದ ದಾರಿ, ಭೂಮಿಗೀತ, ಚಂಡ ಮದ್ದಳೆ, ವರ್ಧಮಾನ ಇತ್ಯಾದಿ ಕವನಸಂಕಲಗಳು. ಅನಾಥೆ, ಆಕಾಶದೀಪ –ಕಾದಂಬರಿಗಳು. ಮಣ್ಣಿನ ವಾಸನೆ, ವಿಚಾರಪಥ, ಕನ್ನಡದ ಅಭಿಮಾನ –ಗದ್ಯ ಲೇಖನಗಳು. ಹುಲ್ಲಿನ ದಳಗಳು, ಭೂಗರ್ಭಯಾತ್ರೆ, ಇತಿಹಾಸ ಚಿತ್ರ– ಅನುವಾದಗಳು. ೧೪–೧೧–೧೯೯೨ರಲ್ಲಿ ಗೋಪಾಲಕೃಷ್ಣ ಅಡಿಗರು ಬೆಂಗಳೂರಿನಲ್ಲಿ ನಿಧನರಾದರು.

ಲೇಖನದ ಆಶಯ :

ಈ ನಾಡಿನ ಇತಿಹಾಸದಲ್ಲಿ ಹಲವು ಚಳುವಳಿಗಳು ನಡೆದಿವೆ. ಕನ್ನಡ ನಾಡು–ನುಡಿ–ನೆಲ–ಜಲ ಸಂರಕ್ಷಣೆಗೆ ಕನ್ನಡ–ಕನ್ನಡಿಗರ ಅಸ್ಮಿತೆಗಾಗಿ ಚಳುವಳಿ, ಉಪವಾಸ ಸತ್ಯಾಗ್ರಹ, ಮೆರವಣಿಗೆ, ಧರಣಿ, ಜೈಲು ತುಂಬುವುದು ಇಂತಹ ಚಳುವಳಿಗಳು ನಡೆದಿವೆ; ನಡೆಯುತ್ತಲೂ ಇವೆ. ಇಂದು ಇವೆಲ್ಲಕ್ಕೂ ಮುಖ್ಯವಾಗಿ ಭಾವನಾತ್ಮಕ ಹೋರಾಟದ ಜೊತೆಗೆ ಬೌದ್ಧಿಕ ಚಳುವಳಿಗಳ ಅಗತ್ಯತೆ ಇದೆ. ನಮ್ಮ ಸಂಸ್ಕೃತಿಯ ಮುಖ್ಯ ಲಕ್ಷಣ ಪರಮತ ಸಹಿಷ್ಣತೆ. ಈ ನಾಡಿಗೆ ಬಂದು ಬದುಕಿ ಅರಗಿಹೋದ 'ಪರಕೀಯರ' ಸಂಖ್ಯೆ ಹೆಚ್ಚಾಗಿದ್ದು ಇವರೆಲ್ಲರನ್ನು ಕನ್ನಡಿಗರೆಂದು ಒಪ್ಪಿಕೊಳ್ಳುವ ಸಹನಶೀಲತೆ ನಮ್ಮದಾಗಬೇಕು. ಅವರೆಲ್ಲರಿಗೂ ಕನ್ನಡದ ಕುರಿತು 'ಸದಭಿಮಾನ'

ಮೂಡಿಸುವ ಯೋಜನೆಗಳನ್ನು ರೂಪಿಸಬೇಕಾಗಿದೆ. ಇಂತಹ ವಿವೇಕಪೂರ್ಣ ಅಭಿಮಾನವನ್ನು ಬೆಳೆಸಿಕೊಳ್ಳುವುದು ಅಗತ್ಯವಾಗಿದೆ.

ಕನ್ನಡಿಗರೇ ಕನ್ನಡವನ್ನು ಕಡೆಗಣಿಸುತ್ತಿರುವ ವಾಸ್ತವಸ್ಥಿತಿಯನ್ನು ಅರ್ಥೈಸಿಕೊಳ್ಳಬೇಕು. ಇಡಿ ಸಮಾಜವೇ ತನ್ನ ಸಂಸ್ಕೃತಿಯ ಸತ್ವವನ್ನು ಮರೆತು 'ಮಮ್ಮಿ ಡ್ಯಾಡಿ ಸಂಸ್ಕೃತಿಯ' ಹಿಂದೆ ಬಿದ್ದಿದೆ. ಅದರಲ್ಲೂ ಅವಿದ್ಯಾವಂತರಗಿಂತ ವಿದ್ಯಾವಂತರೇ ಇಂತಹ ಸಂಸ್ಕೃತಿಯನ್ನು ರೂಢಿಸಿಕೊಂಡಿರುವದು ಅಘಾತಕಾರಿ ಸಂಗತಿಯಾಗಿದೆ. ಕನ್ನಡಿಗರಿಗೆ ಕನ್ನಡದ ಕುರಿತು ನಿಜವಾದ ಅಭಿಮಾನ ಬೆಳೆಯಬೇಕಾದರೆ ಕನ್ನಡಿಗರು ಸ್ವತಂತ್ರ ವಾಗಿ ಕನ್ನಡ ಸಾಹಿತ್ಯದ ಪರಿಚಯ ಪಡೆಯುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ನಮ್ಮ ಜನರ ಅಜ್ಞಾನ ನಿವಾರಣೆಯಾಗಿ ಅವರು ಸ್ವಾತಂತ್ರ್ಯ ಮತ್ತು ಸಮಾನತೆಯ ಮೌಲ್ಯಗಳನ್ನು ಅರಿತು ರಾಜಕೀಯದಲ್ಲಿ ಪಾಲ್ಗೊಂಡು ತಮ್ಮ ಹಕ್ಕು ಬಾಧ್ಯತೆಗೆ ಹೋರಾಡುವ ಆತ್ಮವಿಶ್ವಾಸ ಬೆಳೆಯಬೇಕಾಗಿದೆ.

ಕನ್ನಡ ಕಾವ್ಯ ಸಂಸ್ಕೃತಿಯ ಅರಿವು ಕನ್ನಡಿಗರಲ್ಲಿ ಬರಬೇಕಾದರೆ ಶಾಲಾ ಹಂತದಲ್ಲೇ ಕನ್ನಡ ಕಾವ್ಯಗಳ ರಸದೌತಣವನ್ನು ಪಡೆದು ಪಂಪ, ರನ್ನ, ಕುಮಾರವ್ಯಾಸರ ಕಾವ್ಯಗಳನ್ನು ಕನ್ನಡಿಗರು ಮನೆ–ಮನೆಯಲ್ಲೂ ಓದಿ ಸಂತೋಷ ಪಡುವ ವಾತಾವರಣ ಸೃಷ್ಟಿಯಾಗಬೇಕಾಗಿದೆ. ಹೀಗೆ ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮನಾಗಿ ಬಾಳಿ ಬದುಕುತ್ತ ಕನ್ನಡ ನಾಡುನುಡಿಯ ಕುರಿತಾದ ಭಾವನಾತ್ಮಕ ಪ್ರೀತಿಗಿಂತ ವಿವೇಕಪೂರ್ಣ ಅಭಿಮಾನ ಬೆಳೆಸಿಕೊಳ್ಳುವ ಸೂಕ್ಷ್ಮ ಸಂವೇದನಾತ್ಮಕ ಹೊಸ ಚಳುವಳಿಯ ಅಗತ್ಯತೆಯನ್ನು ತಿಳಿಸುವ ಆಶಯವನ್ನು ಈ ಲೇಖನ ಹೊಂದಿದೆ.

ಈ ಲೇಖನವನ್ನು ಎಂ. ಗೋಪಾಲಕೃಷ್ಣ ಅಡಿಗರ 'ಸಮಗ್ರ ಸಾಹಿತ್ಯ ಸಂಪುಟ–೨'ರಲ್ಲಿ ಬರುವ 'ವಿಮರ್ಶೆ ಮತ್ತು ವೈಚಾರಿಕ ಪ್ರಬಂಧಗಳು' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

■■

೩. ಕುಮಾರವ್ಯಾಸ

❖

ಕುವೆಂಪು

ಕುಮಾರವ್ಯಾಸನು ಹಾಡಿದನೆಂದರೆ,
ಕಲಿಯುಗ ದ್ವಾಪರವಾಗುವುದು!
ಭಾರತ ಕಣ್ಣಲಿ ಕುಣಿವುದು; ಮೆಯ್ಯಲಿ
ಮಿಂಚಿನ ಹೊಳೆ ತುಳುಕಾಡುವುದು?

ಆ ಕುರುಭೂಮಿಯು ತೋರುವುದು;
ಆ ರಣರಂಗದಲಿ,
ಆ ಸಂಗ್ರಾಮದಲಿ,
ಪಟುಭಟರಾರ್ಭಟ ಕೇಳುವುದು !
ಮೈ ನವಿರೇಳುವುದು !
ಹೊಳೆಯುವ ಕೈದುಗಳಾಟದಲಿ,
ಕಲಿಗಳ ಕದನದ ಕೂಟದಲಿ,
ತಾಗುವ ಗದೆಗಳ ಸಂಘಟ್ಟಣೆಯಲಿ,
ರಥಚಕ್ರಧ್ವನಿ ಚೀತ್ಕಾರದಲಿ,
ಸಾಯ್ವರ ಶಾಪದಲಿ,
ಬೀಳ್ವರ ತಾಪದಲಿ
ನಸುಸೋತಿರುವರ ಕೋಪದಲಿ,
ನೆರೆ ಗೆದ್ದಿ ಹರಾಟೋಪದಲಿ,
ಕೆನೆಯುವ ಹಯಗಳ ಹೇಷಾರವದಲಿ,

ಕಿವಿ ಬಿರಿಯುವುದು!
ಎದೆ ಮುರಿಯುವುದು!
ಬಸಿಯುವ ಮಜ್ಜೆಯ ಪಂಕದೊಳೂಡಿ
ಚಿಮ್ಮುವ ರಕ್ತದ ಬುಗ್ಗೆಯ ನೋಡಿ
ಕಣ್ಣೊಡೆಯುವುದು!
ಮೈ ನಡುಗುವುದು!

ಕೇಳಿರಿ! ಪಾರ್ಥನ ಸಾರಥಿಯು
ರಣ ಗೀತೆಯನು,
ರಣ ನೀತಿಯನು,
ಬೋಧಿಸುವನು ನಿರ್ಭೀತಿಯನು!
ಕುರುರಂಗದ ಶರಶಯ್ಯೆಯಲಿ
ಭೀಷ್ಮನು ಮಲಗಿಹನು!
ಹೆಣಗಳ ಬಣಬೆಯ ಮಂಚದಲಿ
ದ್ರೋಣನು ಬಿದ್ದಿಹನು!
ನೆತ್ತರವೀಂಟುತಲಿರುವನು ಕರ್ಣನು,
ಅಯ್ಯೋ, ನೋಡಲ್ಲಿ!
ರಥದಿಂದುರುಳುತಲಿರುವನು ಕರ್ಣನು,
ಹಾ ! ಹಾ ! ನೋಡಿಲ್ಲಿ!
ರಣಚಂಡಿಯು ಆ ಬೆಂಕಿಯ ಮಗಳು
ಹೆಣ್ಣಿನ ರೂಪದ ಬರಸಿಡಿಲವಳು!
ಮುಗುಳ್ನಗೆ ಬೀರುತ ನೋಡಿಲ್ಲಿ
ನಿಂತಿರುವಳು ರಣರಂಗದಲಿ
ದ್ರೌಪದಿ ಮುಡಿಗೆದರಿ!

ವೈಶಂಪಾಯನ ಸರಸಿಯ ತೀರದಿ
ತೋರುವರಾರಲ್ಲಿ!
ಕೌರವದೇವನು ಸಿಡಿಲಾಗಿರುವನು
ಭೀಮನ ಸರಿಸದಲಿ !

ವೈರಿಯ ಎದೆಯನು
ಒಡೆಯುವ ಗದೆಯನು
ಮೇಲೆತ್ತಿರುವವನು ನೋಡಲ್ಲಿ!
ಭೀಮನು ಬಿದ್ದನೆ!
ಕೌರವ ಗೆದ್ದನೆ!
ಮುಂದಾಗುವುದನು ಕಾಣಲ್ಲಿ?
ಇದಾವ ನ್ಯಾಯ!
ಏನನ್ಯಾಯ!
ಕೃಷ್ಣನ ಕುಹಕವ ನೋಡಲ್ಲಿ!
ಏನನು ನೋಡುವೆ? ತಡೆಯುವೆ ಏಕೆ?
ಕೌರವರಾಯನು ಮಡಿಯಲೆ ಬೇಕೆ?
ಯುವಕನೆ ತುಡುಕು ಕಠಾರಿಯನು!
ಹೊಡೆ ರಣಭೇರಿಯನು!
ನಡೆ, ನಡೆ, ಊದು ತುತ್ತೂರಿಯನು!
ಕರೆ ರಣಮಾರಿಯನು!

ಕುಮಾರವ್ಯಾಸನು ಹಾಡಿದನೆಂದರೆ,
ಕಲಿಯುಗ ದ್ವಾಪರವಾಗುವುದು!
ಭಾರತ ಕಣ್ಣಲಿ ಕುಣಿವುದು ; ಮೆಯ್ಯಲಿ
ಮಿಂಚಿನ ಹೊಳೆ ತುಳುಕಾಡುವುದು!
ಕಲಿ ಕೆಚ್ಚಾಗುವನು!
ಕವಿ ಹುಚ್ಚಾಗುವನು.

* * *

ಕವಿ ಪರಿಚಯ :

ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಇದು ಕುವೆಂಪು ಅವರ ಪೂರ್ಣ ಹೆಸರು. ೨೯–೧೨–೧೯೦೪ರಲ್ಲಿ ತೀರ್ಥಹಳ್ಳಿ ತಾಲೂಕಿನ ಹಿರೇಕೂಡಗಿಯಲ್ಲಿ ಜನಿಸಿ, ಕುಪ್ಪಳ್ಳಿಯಲ್ಲಿ ಬೆಳೆದರು. ಕುವೆಂಪು ಅವರು ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ, ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ, ದಕ್ಷ ಆಡಳಿತಗಾರರಾಗಿ ಕಾರ್ಯ ನಿರ್ವಹಿಸಿದ್ದು ಅವಿಸ್ಮರಣೀಯ.

ಕೊಳಲು, ನವಿಲು, ಪಾಂಚಜನ್ಯ, ಕೃತ್ತಿಕೆ, ಚಂದ್ರಮಂಚಕೆ ಬಾ ಚಕೋರಿ, ಪಕ್ಷಿಕಾಶಿ, ಪ್ರೇಮಕಾಶ್ಮೀರ, ಗೀತಾಂಜಲಿ, ಕೋಗಿಲೆ ಮತ್ತು ಸೋವಿಯತ್ ರಷ್ಯಾ ಮುಂತಾದವು ಇವರ ಪ್ರಮುಖ ಕವನ ಸಂಕಲನಗಳು. ಜಲಗಾರ, ಶೂದ್ರ ತಪಸ್ವಿ, ರಕ್ತಾಕ್ಷಿ, ಬೆರಳ್‌ಗೆ ಕೊರಳ್, ಸ್ಮಶಾನ ಕುರುಕ್ಷೇತ್ರ ಮೊದಲಾದವು ಪ್ರಸಿದ್ಧ ನಾಟಕಗಳು. ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು ಇವು ಅವರು ಬರೆದ ಮಹತ್ವದ ಕಾದಂಬರಿಗಳು. ಮನುಜಮತ ವಿಶ್ವಪಥ, ವಿಚಾರಕ್ರಾಂತಿಗೆ ಆಹ್ವಾನ, ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ–ಇವು ಇವರ ವೈಚಾರಿಕ ಬರಹಗಳು. ಕಾವ್ಯ ವಿಹಾರ, ವಿಭೂತಿ ಪೂಜೆ, ರಸೋವೈಸಃ, ದ್ರೌಪದಿಯ ಶ್ರೀಮುಡಿ–ಇವು ವಿಮರ್ಶಾ ಕೃತಿಗಳು. ನೆನಪಿನ ದೋಣಿಯಲ್ಲಿ ಇವರ ಆತ್ಮಕಥೆ. ಸ್ವಾಮಿ ವಿವೇಕಾನಂದ, ಶ್ರೀ ರಾಮಕೃಷ್ಣ ಪರಮಹಂಸ ಇವು ಜೀವನ ಚರಿತ್ರೆಗಳು. 'ಚಿತ್ರಾಂಗದಾ' ಎಂಬ ಹೆಸರಿನ ಖಂಡಕಾವ್ಯವನ್ನು, ಶ್ರೀರಾಮಾಯಣ ದರ್ಶನಂ ಎನ್ನುವ ಮಹಾಕಾವ್ಯವನ್ನು, ರಚಿಸಿದ್ದಾರೆ. ಮಕ್ಕಳಿಗಾಗಿ ಬೊಮ್ಮನಹಳ್ಳಿಯ ಕಿಂದರಜೋಗಿ ಮೊದಲಾದ ಪ್ರಮುಖ ಶಿಶು ಸಾಹಿತ್ಯವನ್ನು ನೀಡಿದ್ದಾರೆ.

ಇವರ ಸಾಹಿತ್ಯ ಸೇವೆಗಾಗಿ ೧೯೫೮ರಲ್ಲಿ 'ಪದ್ಮಭೂಷಣ ಪ್ರಶಸ್ತಿ', ೧೯೬೪ರಲ್ಲಿ ರಾಷ್ಟ್ರಕವಿ ಪ್ರಶಸ್ತಿ, ೧೯೫೫ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ, ೧೯೬೮ರಲ್ಲಿ ಜ್ಞಾನಪೀಠ ಪ್ರಶಸ್ತಿ, ಕರ್ನಾಟಕ ಸರ್ಕಾರದ ಮೊದಲ ಪಂಪ ಪ್ರಶಸ್ತಿ, ಮೊದಲ 'ಕರ್ನಾಟಕ ರತ್ನ' ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ೧೯೫೭ರಲ್ಲಿ ನಡೆದ ೩೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಕಾವ್ಯದ ಆಶಯ :

ಕುಮಾರವ್ಯಾಸನು ವ್ಯಾಸ ಮಹರ್ಷಿಯಿಂದ ರಚಿತವಾದ ಮೂಲ ಮಹಾ ಭಾರತವನ್ನು ಆಕರವಾಗಿಟ್ಟುಕೊಂಡು ಪಂಪ, ರನ್ನರಂತೆ 'ಕರ್ನಾಟ ಭಾರತ

ಕಥಾಮಂಜರಿ'ವೆಂಬ ಶ್ರೇಷ್ಠ ಗ್ರಂಥವನ್ನು ಕನ್ನಡದಲ್ಲಿ ರಚಿಸಿದ್ದಾನೆ. ವ್ಯಾಸರಿಗೆ ಋಣಮುಕ್ತವಾಗಲು ತನ್ನನ್ನು ತಾನು 'ಕುಮಾರವ್ಯಾಸ'ವೆಂದು ಕರೆದುಕೊಂಡಿದ್ದಾನೆ.

ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ನೀಡಿರುವ ಕಥಾವಸ್ತು, ಪಾತ್ರಗಳ ಚಿತ್ರಣ, ರೂಪಕಗಳು, ನಿರೂಪಣೆ ಶೈಲಿ ಎಲ್ಲವೂ ಕಾವ್ಯ ಸೌಂದರ್ಯವನ್ನು ಹೆಚ್ಚಿಸಿವೆ. ಇದರಿಂದಾಗಿ ಕುಮಾರವ್ಯಾಸ ಎಲ್ಲರಿಗೂ ಬೇಕಾದವನು. ಆದ್ದರಿಂದಲೇ ಕುವೆಂಪು ಅವರು ಅವನ ವ್ಯಕ್ತಿತ್ವಕ್ಕೆ ಮಾರುಹೋಗಿ 'ಕುಮಾರವ್ಯಾಸನು ಹಾಡಿದನೆಂದರೆ, ಕಲಿಯುಗ ದ್ವಾಪರವಾಗುವುದು, ಭಾರತ ಕಣ್ಣಲಿ ಕುಣಿವುದು; ಮೆಯ್ಯಲಿ ಮಿಂಚಿನ ಹೊಳೆ ತುಳುಕಾಡುವುದು ಎಂದಿದ್ದಾರೆ.

ಮಹಾಭಾರದಲ್ಲಿ ಕುರುಕ್ಷೇತ್ರ ಯುದ್ಧದ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವ ರೀತಿಯಲ್ಲಿ ವರ್ಣಿಸಿದ್ದನ್ನು ನೋಡಬಹುದಾಗಿದೆ. ಭೀಮ–ದುರ್ಯೋಧನರ ಕಾಳಗದ ಚಿತ್ರ, ಗದೆಯಿಂದ ಗದೆಗೆ ಹೊಡೆದಾಗ ಹೊರಹೊಮ್ಮುವ ಆ ಶಬ್ದ ಎಲ್ಲವೂ ಕಣ್ಮುಂದೆ ಬಂದು ನಿಲ್ಲುವ ರೀತಿಯಲ್ಲಿ ಕುಮಾರವ್ಯಾಸ ಚಿತ್ರಿಸಿದ್ದಾನೆಂದು ಕುವೆಂಪು ಹೇಳುತ್ತಾನೆ. ಯುದ್ಧದ ಭೀಕರ ದೃಶ್ಯವನ್ನು ಚಿತ್ರಿಸುವಲ್ಲಿ ಕುಮಾರವ್ಯಾಸ ತೋರಿದ ಜಾಣ್ಮೆಯನ್ನು ಕವಿ ಕುವೆಂಪು ಸುಂದರವಾಗಿ ತನ್ನ ಕಾವ್ಯದಲ್ಲಿ ವಿವರಿಸಿದ್ದಾನೆ. ಕುಮಾರವ್ಯಾಸನು ಬಳಸುವ ಪದಗಳಿಗೆ ಕಿವಿ ಬಿರಿಯುವುದು, ಎದೆ ಮುರಿಯುವುದು, ಕಾಳಗದ ರಕ್ತದ ಮಡುವು ನೋಡಿ ಕಣ್ಣೊಡೆದು ಹೋಗುವವು ಎಂದಿದ್ದಾನೆ.

ಅರ್ಜುನನ ಸಾರಥಿಯಾದ ಕೃಷ್ಣನ ಗೀತೆಯನು, ರಣನೀತಿಯನು ಆತ ಅರ್ಜುನನಿಗೆ ಬೋಧಿಸುವ ನಿರ್ಭೀತಿಯ ಬೋಧನೆ ಎಲ್ಲವೂ ಮನಮುಟ್ಟುವಂತೆ ಸೆರೆ ಹಿಡಿಯಲಾಗಿದೆ. ರಣರಂಗದಲ್ಲಿ ಶರಶೆಯ್ಯೆಯಲ್ಲಿ ಮಲಗಿರುವ ಭೀಷ್ಮರು, ಹೆಣಗಳ ರಾಶಿಯಲ್ಲಿ ಬಣಬೆಯಲ್ಲಿ ಬಿದ್ದಿರುವ ಗುರು ದ್ರೋಣರು, ನೆತ್ತರನ್ನು ಮುಕ್ಕುತ್ತಿರುವ ಕರ್ಣನು ಈ ಎಲ್ಲ ದೃಶ್ಯವನ್ನು ನೋಡುತ್ತ ದ್ರೌಪದಿ ಮುಡಿಗೆದರಿ ನಿಂತಿದ್ದಾಳೆ.

ವೈಶಂಪಾಯನ ಸರೋವರದಲ್ಲಿ ಅಡಗಿರುವ ದುರ್ಯೋಧನನ ಎಬ್ಬಿಸುವ ಭೀಮನ ಪೌರುಷದ ಸಿಂಹ ಘರ್ಜನೆಯ ಮಾತುಗಳು ಮನಸ್ಸಿಗೆ ತಟ್ಟುವಂತೆ ಕುಮಾರವ್ಯಾಸ ಚಿತ್ರಿಸಿದ್ದಾನೆಂದು ಕವಿ ಹೇಳುತ್ತಾನೆ. ಅನ್ಯಾಯದ ಪ್ರತಿಕವಾಗಿ ಕೌರವರು ನಿಂತರೆ, ನ್ಯಾಯ ಪ್ರತಿಪಾದಕರಾಗಿ ಪಾಂಡುಪುತ್ರರು ನಿಲ್ಲುತ್ತಾರೆ. ಹೀಗಾಗಿ ಇಲ್ಲಿ ಅರ್ಜುನನ ಸಾರಥ್ಯವನ್ನು ಒಹಿಸಿಕೊಂಡ ಕೃಷ್ಣ ನ್ಯಾಯಕ್ಕಾಗಿ ಕುಹಕವ

ತೋರಿದ್ದಾನೆ. ಇಂಥ ಶ್ರೇಷ್ಠಕವಿಗೆ ಮಾರು ಹೋದ ಕುವೆಂಪು ಅವರು ಕುಮಾರವ್ಯಾಸನನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಮಹಾಭಾರತದ ಕಥನಚಿತ್ರ ಕಣ್ಣಲಿ ಕುಣಿವುದು; ಮೆಯ್ಯಲಿ ಮಿಂಚಿನ ರೋಮಾಂಚನ ಸಂಚಲಿಸುವುದು ಕಲಿ ಕೆಚ್ಚಾಗುವನು, ಕವಿ ಹುಚ್ಚಾಗುವನು ಎಂದು ಕುವೆಂಪು ನುಡಿದಿದ್ದಾನೆ.

ಈ ಕವನವನ್ನು ಬಿ.ಎಂ. ಶ್ರೀಕಂಠಯ್ಯ ಅವರು ಸಂಪಾದಿಸಿದ 'ಕನ್ನಡದ ಬಾವುಟ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

■■

ಘಟಕ–೨

ಹಣ

ಘಟಕ–೨ : ಹಣ

'ಹಣ' ಎಂಬುದು ಮನುಷ್ಯನ ಅಗತ್ಯಗಳನ್ನು ಪೂರೈಸಿಕೊಳ್ಳುವ ವಸ್ತುಗಳನ್ನು ಖರೀದಿಸಲು ಬೇಕಾಗುವ ಸಾಧನ. ಪ್ರಾಚೀನ ಕಾಲದಲ್ಲಿ ವಸ್ತುಗಳನ್ನು ವಿನಿಮಯ ಮಾಡಿಕೊಂಡು ಜೀವನ ಸಾಗಿಸುವದರಿಂದ ಹಣದ ಅಗತ್ಯವಿರಲಿಲ್ಲ. ಹಾಗಂತ ದುಡಿಮೆ ಇರಲಿಲ್ಲ ಎಂದು ಅಲ್ಲ. ದುಡಿತಕ್ಕೆ ಪ್ರತಿಫಲವಾಗಿ ಹಣವಿರಲಿಲ್ಲ ಅಷ್ಟೇ. ಆದರೆ ಇಂದು ಪ್ರತಿಯೊಂದು ಕ್ಷೇತ್ರದಲ್ಲಿ ಯಾವುದೇ ವಸ್ತುವನ್ನು ಖರೀದಿಸಬೇಕಾದರೆ ಹಣ ಮುಖ್ಯವಾಗಿ ಬೇಕಾಗುತ್ತದೆ. ಮತ್ತೊಂದು ವಿಚಾರ 'ಹಣ' ಯಾವ ಮೂಲದಿಂದ ಗಳಿಸುತ್ತೇವೆ ಎಂಬುದು ಬಹಳ ಪ್ರಮುಖವಾದ ಸಂಗತಿ. ಶರಣರು ನುಡಿದಂತೆ 'ಪಾಪಿಯ ಧನ ಪ್ರಾಯಾಶ್ಚಿತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ' ಎಂಬ ಅರಿವು ಮನುಷ್ಯನಿಗೆ ಇರಬೇಕು. 'ಹಣ' ಎಂಬ ಮಾಯದ ಬೆನ್ನುಹತ್ತಿ ಮನುಷ್ಯ ಎಲ್ಲ ಸಂಬಂಧಗಳನ್ನು ಕಳೆದುಕೊಳ್ಳಬಾರದು. ಹಣಯೊಂದೇ ಎಲ್ಲದಕ್ಕೂ ಮಾರ್ಗವಲ್ಲ; ಮಾನವೀಯ ಸಂಬಂಧಗಳು ಬಹಳ ಪ್ರಮುಖವಾದ ಪಾತ್ರಗಳನ್ನು ವಹಿಸುತ್ತವೆ.

ಈ ನಿಟ್ಟಿನಲ್ಲಿ ವರಕವಿ ಬೇಂದ್ರೆಯವರ 'ಕುರುಡು ಕಾಂಚಾಣ' ಶ್ರೀಮಂತರು ಹಣದ ದರ್ಪದಿಂದ ಮೆರೆಯುತ್ತ ಬಡ ಜನಗಳನ್ನು ದುಡಿಯುವರನ್ನು, ಅಬಲೆಯರಾದ ಮಹಿಳೆ, ಮಕ್ಕಳನ್ನು ಶೋಷಿಸುತ್ತಿದ್ದುದರ ದಾರುಣ ಚಿತ್ರವನ್ನು ಕವಿತೆ ಚಿತ್ರಿಸುತ್ತದೆ. ಮನುಷ್ಯನ ಉದ್ದೇಶ ಕೇವಲ ಹಣ ಗಳಿಕೆ ಮಾತ್ರವಾಗಬಾರದು; ಅದು ಸಮಾಜ ಮುಖಿಯಾಗಿ ದಾನ, ಧರ್ಮದ ಹೆಸರಲ್ಲಿ ಸದ್ಬಳಕೆಯಾಗಬೇಕೆಂದು ಸರ್ವಜ್ಞನ ತ್ರಿಪದಿಗಳನ್ನು ಅಭ್ಯಾಸಕ್ಕೆ ಅಳವಡಿಸಲಾಗಿದೆ. ಸರ್ವಜ್ಞ ಕವಿ ಹೇಳಿದಂತೆ 'ಕೊಟ್ಟದ್ದು ಯಾವಾಗಲೂ ಒಂದಿಲ್ಲ ಒಂದು ದಿನ ಮರಳಿ ಬರುತ್ತದೆ' ಎಂಬ ನೀತಿಪಾಠ ಈ ವಚನಗಳಲ್ಲಿದೆ.

ಆಶೀಶ್ ನಂದಿಯವರು ಬಾಹ್ಯ ಜೀವನದ ಆಡಂಬರವೇ ಉಪಭೋಗ ಎಂದಿದ್ದಾರೆ. ಉಪಭೋಗವಾದ ಕೇವಲ ಧನಿಕರಿಗೆ ಮಾತ್ರ ಸಂಬಂಧಿಸಿದ್ದು ಸೀಮಿತಗೊಂಡಿದ್ದು ಎನ್ನುವ ಕಾಲ ಈಗಿಲ್ಲ; ಅದು ಇಂದು ಬಡವನನ್ನು ಆಕ್ರಮಿಸಿಕೊಂಡಿದೆ. ನಮ್ಮ ಜೀವನಕ್ಕೆ ಅವಶ್ಯವಲ್ಲದ ವಸ್ತುಗಳ ಸಂಗ್ರಹದೆಡೆಗೆ ನಾವು ಬೆನ್ನುಹತ್ತಿದ್ದೇವೆ. ಐಷಾರಾಮಿ ಬದುಕು ನಮ್ಮದಾಗಲೆಂಬ ಹುಂಬು ಬಯಕೆ–ಆಸೆಗಳು ವ್ಯಕ್ತಿಗೆ ನೆಮ್ಮದಿ ಜೀವನ ನಡೆಸಲು ಬಿಡುತ್ತಿಲ್ಲ. ಉಪಭೋಗ ಜೀವನ ದರ್ಶನವನ್ನು ನೀಡಲು ಸಾಧ್ಯವೇ? ಎನ್ನುವ ಮೌಲಿಕ ಪ್ರಶ್ನೆಗಳನ್ನು ಕೇಳುವ ಮೂಲಕ, ಪ್ರಸ್ತುತ ಲೇಖನದಲ್ಲಿ ಗಂಭೀರ ಚರ್ಚೆ ಮಾಡಲಾಗಿದೆ.

೪. ಕುರುಡು ಕಾಂಚಾಣ

❖

ದ.ರಾ. ಬೇಂದ್ರೆ

ಕುರುಡು ಕಾಂಚಾಣಾ ಕುಣಿಯುತಲಿತ್ತು
ಕಾಲಿಗೆ ಬಿದ್ದವರ ತುಳಿಯುತಲಿತ್ತೋ
ಕುರುಡು ಕಾಂಚಾಣಾ

ಬಾಣಂತಿಯೆಲುಬ ಸಾ–
ಬಾಣದ ಬಿಳುಪಿನಾ
ಕಾಣದ ಕಿರುಗೆಜ್ಜಿ ಕಾಲಾಗ ಇತ್ತೋ;

ಸಣ್ಣ ಕಂದಮ್ಮಗಳ
ಕಣ್ಣೀನ ಕವಡೀಯ
ತಣ್ಣನ್ನ ಜೋಮಾಲಿ ಕೊರಳೊಳಗಿತ್ತೋ;
ಬಡವರ ಒಡಲಿನ
ಬಡಬಾನೆಲದಲ್ಲಿ
ಸುಡು ಸುಡು ಪಂಜು ಕೈಯೊಳಗಿತ್ತೋ;
ಕಂಬನಿ ಕುಡಿಯುವ
ಹುಂಬ ಬಾಯಿಲೆ ಮೈ–
ದುಂಬಿದಂತುಧೊ ಉಧೊ ಎನ್ನುತಲಿತ್ತೋ;
ಕೂಲಿ ಕುಂಬಳಿಯವರ
ಪಾಲಿನ ಮೈದೊಗಲ
ಧೂಳಿಯ ಭಂಡಾರ ಹಣೆಯೊಳಗಿತ್ತೋ;

ಗುಡಿಯೊಳಗೆ ಗಣಣ, ಮ–
ಹಡಿಯೊಳಗ ತನನ, ಅಂ–
ಗಡಿಯೊಳಗೆ ಝಣಣಣ ನುಡಿಗೊಡುತ್ತಿತ್ತೋ;

ಹ್ಯಾಂಗಾರೆ ಕುಣಿಕುಣಿದು
ಮಂಗಾಟ ನಡೆದಾಗ
ಅಂಗಾತ ಬಿತ್ತೋ, ಹೆಗಲಲಿ ಎತ್ತೋ.

* * *

ಕವಿ ಪರಿಚಯ :

ನವೋದಯ ಸಾಹಿತ್ಯ ಕಾವ್ಯಪರಂಪರೆಯಲ್ಲಿ ವರಕವಿ ಡಾ. ದ.ರಾ. ಬೇಂದ್ರೆಯವರದು ಬಹುದೊಡ್ಡ ಹೆಸರು. ಶಬ್ದಗಳ ಗಾರುಡಿಗ ಕವಿಯೆಂದೇ ಪ್ರಸಿದ್ಧಿಯನ್ನು ಪಡೆದವರು. ಜನಪದದ ಸತ್ವವನ್ನು ಮತ್ತು ಜನಪದ ಭಾಷೆಯ ಸೊಗಡನ್ನು ತಮ್ಮ ಕವಿತೆಗಳಲ್ಲಿ ಎರಕಹೊಯ್ಯದಿದ್ದಾರೆ. ಇವರ ಕಾವ್ಯನಾಮ 'ಅಂಬಿಕಾತನಯದತ್ತ'. ಕನ್ನಡ ಸಾಹಿತ್ಯ ಸಾರಸ್ವತ ಲೋಕದಲ್ಲಿ ತನ್ನ ತಾಯಿಯನ್ನು ಕಾವ್ಯನಾಮದ ಮೂಲಕ ಚಿರಸ್ಥಾಯಿಗೊಳಿಸಿರುವ ಕವಿ ಬೇಂದ್ರೆಯವರ ಪೂರ್ಣ ಹೆಸರು ದತ್ತಾತ್ರೇಯ ರಾಮಚಂದ್ರ ಬೇಂದ್ರೆ. ತಂದೆ ರಾಮಚಂದ್ರ, ತಾಯಿ ಅಂಬವ್ವ. ಬೇಂದ್ರೆಯವರು ಕ್ರಿ.ಶ. ೧೮೯೬ ಜನೇವರಿ ೩೧ರಂದು ಧಾರವಾಡದಲ್ಲಿ ಜನಿಸಿದರು. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡು ಕಷ್ಟದ ದಿನಗಳಲ್ಲಿ ತಮ್ಮ ಜೀವನವನ್ನು ಸಾಗಿಸಿದವರು. ಧಾರವಾಡದಲ್ಲಿ ೧೯೧೩ರಲ್ಲಿ ಮೆಟ್ರಿಕ್ ಮುಗಿಸಿದ ನಂತರ ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ೧೯೧೮ರಲ್ಲಿ ಬಿ.ಎ ಪದವಿಯನ್ನು ಪಡೆದುಕೊಂಡರು. ಕೆಲವು ಕಾಲ ಅಧ್ಯಾಪಕ ವೃತ್ತಿಯನ್ನು ಮಾಡಿದ ಬೇಂದ್ರೆಯವರು ೧೯೩೫ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಕನ್ನಡ ವಿಷಯದಲ್ಲಿ ಎಂ.ಎ ಪದವಿಯನ್ನು ಪೂರೈಸಿದರು.

ಗದುಗಿನ ವಿದ್ಯಾದಾನ ಸಮಿತಿ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ, ಹುಬ್ಬಳ್ಳಿಯ ನ್ಯೂ ಇಂಗ್ಲೀಷ್ ಶಾಲೆಯಲ್ಲಿ ಶಿಕ್ಷಕರಾಗಿ, ೧೯೪೪ರಲ್ಲಿ ಸೊಲ್ಲಾಪುರದ ಡಿ.ಎ.ವಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ೧೯೫೬ರಲ್ಲಿ ನಿವೃತ್ತರಾದರು. ನಿವೃತ್ತಿಯಾದ ಮೇಲೆ ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ

ಕೆಲವು ಕಾಲಗಳವರೆಗೆ ಸಲಹೆಗಾರರಾಗಿ ಸೇವೆ ಸಲ್ಲಿಸಿದರು. ೨೬–೧೦–೧೯೮೧ರಲ್ಲಿ ಮುಂಬಯಿಯಲ್ಲಿ ಬೇಂದ್ರೆಯವರ ಶರೀರ ಪಂಚಭೂತಗಳಲ್ಲಿ ಲೀನವಾಯಿತು.

ಬೇಂದ್ರೆಯವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಕಾವ್ಯಕೃಷಿ ಮಾಡಿದ್ದಾರೆ. ಕೃಷ್ಣಕುಮಾರಿ, ಸಖಿಗೀತ, ಉಯ್ಯಾಲೆ, ನಾದಲೀಲೆ, ಅರಳು ಮರಳು, ನಾಕುತಂತಿ ಮೊದಲಾದ ೨೫ಕ್ಕೂ ಹೆಚ್ಚು ಕವನಸಂಕಲನಗಳನ್ನು ರಚಿಸಿದ್ದಾರೆ. ಸಾಹಿತ್ಯ ವಿಮರ್ಶೆ, ಕಾವ್ಯೋದ್ಯೋಗ, ಸಾಹಿತ್ಯದ ವಿರಾಟ್ ಸ್ವರೂಪ, ಸಾಹಿತ್ಯ ಸಂಶೋಧನೆ, ವಿಚಾರ ಮಂಜರಿ ಮೊದಲಾದ ವಿಮರ್ಶಾ ಕೃತಿಗಳನ್ನು ಇವುಗಳಲ್ಲದೆ ಸಣ್ಣ ಕಥೆ, ನಾಟಕ, ಅನುವಾದ ಕೃತಿಗಳನ್ನು ಸಹ ಪ್ರಕಟಿಸಿದ್ದಾರೆ.

ಇವರ ಸಾಹಿತ್ಯ ಸೇವೆಯನ್ನು ಗಮನಿಸಿದ ಸರ್ಕಾರ, ಸಂಘ–ಸಂಸ್ಥೆಗಳು ಅನೇಕ ಪ್ರಶಸ್ತಿ, ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಳ್ಕರ್ ಪ್ರಶಸ್ತಿ, ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ೧೯೭೩ರಲ್ಲಿ 'ನಾಕುತಂತಿ' ಕೃತಿಗೆ ಜ್ಞಾನಪೀಠ ಪುರಸ್ಕಾರ ಸಂದಿದೆ. ಇವುಗಳಲ್ಲದೆ ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾಲಯ, ೧೯೬೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಮತ್ತು ೧೯೭೬ರಲ್ಲಿ ವಾರಣಾಸಿಯ ಕಾಶೀ ವಿದ್ಯಾಪೀಠವು ಬೇಂದ್ರೆಯವರಿಗೆ ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಿ ಗೌರವಿಸಿವೆ. ೧೯೪೩ರಲ್ಲಿ ಶಿವಮೊಗ್ಗದಲ್ಲಿ ಜರುಗಿದ ೨೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು.

ಕಾವ್ಯದ ಆಶಯ :

ಬ್ರಿಟಿಷ್ ಸರ್ಕಾರದ ಅಮಾನವೀಯ ಕೃತ್ಯಗಳಿಂದಾಗಿ ಮತ್ತು ಅವರ ಶೋಷಣೆಯ ನೀತಿಗಳಿಂದಾಗಿ ಸಾಮಾನ್ಯ ಜನಗಳು, ಬಡವರು ಕಡುಕಷ್ಟವನ್ನು ಅನುಭವಿಸುತ್ತಿದ್ದ ಕಾಲದಲ್ಲಿ ಈ ಕವಿತೆ ರಚಿತಗೊಂಡಂತಿದೆ. ಬ್ರಿಟಿಷ್ ಸರ್ಕಾರದ. ಚೇಲಾಗಳು, ಲಾಭಕೋರರು, ಹಣವಂತರು ಹಣದ ದರ್ಪದಿಂದ ಮೆರೆಯುತ್ತ ಬಡ ಜನಗಳನ್ನು ದುಡಿಯುವರನ್ನು, ಅಬಲೆಯರಾದ ಮಹಿಳೆ, ಮಕ್ಕಳನ್ನು ಶೋಷಿಸುತ್ತಿದ್ದುದರ ದಾರುಣ ಚಿತ್ರವನ್ನು ಕವಿತೆ ಚಿತ್ರಿಸುತ್ತದೆ.

'ಕುರುಡು ಕಾಂಚಾಣ' ಎಂಬ ಕವಿತೆಯನ್ನು ಬೇಂದ್ರೆಯವರ 'ನಾದಲೀಲೆ' ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

■■

೫. ದಾನ ಪದ್ಧತಿ

❖

ಸರ್ವಜ್ಞ

ಅನ್ನವನಿಕ್ಕುವುದು । ನನ್ನಿಯ ನುಡಿವುದು
ತನ್ನಂತೆ ಪರರ ಬಗೆವುದು – ಸ್ವರ್ಗ ತಾ
ಬಿನ್ನಾಣವಲ್ಲ ಸರ್ವಜ್ಞ

ಜ್ಞಾನವಿದ್ಯವು ಲೇಸು । ಮಾನಿ ಪತಿ ಹಿತ ಲೇಸು
ಸ್ವಾನುಭವಿಗಳ ಕೆಳೆ ಲೇಸಿವೆಲ್ಲಕ್ಕು
ದಾನವೇ ಲೇಸು ಸರ್ವಜ್ಞ

ಬೆಂದುದನು ಬಿತ್ತಿ ಬೆಳೆ । ವಂದಿರನು ಕಾಣೆನು
ಬೆಂದುದ ಬಿತ್ತಿ ಬೆಳೆದುಂಬ – ದಾಸೋಹಿ
ಇಂದುಧರ ತಾನೆ ಸರ್ವಜ್ಞ

ಹುಟ್ಟುವಾಗಲೆ ಧನವ । ಮೊಟ್ಟೆಗಟ್ಟಿಳಿದನೇ?
ಕಟ್ಟೊಯ್ಯಲಜೆಯ ಕಡೆಯಲ್ಲಿ – ಅದನಜೆದು
ಕೊಟ್ಟುಂಬ ದಾನಿ ಸರ್ವಜ್ಞ

ಕೊಟ್ಟುದು ತನಗೆ ಬಯಿ । ಚಿಟ್ಟುದು ಪರರಿಗೆ
ಕೊಟ್ಟುದು ಕೆಟ್ಟಿತೆನಬೇಡ – ವದು ಮುಂದೆ
ಕಟ್ಟಿದ ಬುತ್ತಿ ಸರ್ವಜ್ಞ

ಉತ್ತಮ ದೇವಾಂಗ । ವಸ್ತ್ರವನುಡುವೊಡೆ
ಮುತ್ತು–ಮಾಣಿಕವ ತೊಡುವೊಡೆ– ಮಾಡು ನೀ
ನಿತ್ಯದಾನವನು ಸರ್ವಜ್ಞ

ಅಡುವುದವರಕ್ಕಿಯನು । ಕೊಡುವುದು ಬಿಡಾರವನು
ಕುಡಿವೊಡೆ ನೀರನೆಜೆವುದು – ಇವು ಮೂಜು
ಬಡವನ ದಾನ ಸರ್ವಜ್ಞ

ಬಟ್ಟಡೊಂಬರಗಿತ್ತು । ಕೆಟ್ಟು ಹೋಗಲು ಬೇಡ
ಸೃಷ್ಟಿಗೀಶ್ವರನ ಶರಣರಿಗೆ – ಕೊಟ್ಟರೆ
ಶ್ರೇಷ್ಠ ಪದವಕ್ಕು ಸರ್ವಜ್ಞ

ಕೊಡುವಾತನೆ ಮೃಡನು । ಪಡೆವಾತನೇ ನರನು
ಒಡಲು–ಒಡವೆಗಳು ಕೆಡೆದು ಹೋಗದ ಮುನ್ನ
ಕೊಡು ಪಾತ್ರವಜೆದು ಸರ್ವಜ್ಞ

* * *

ಕವಿ ಪರಿಚಯ :

ಕನ್ನಡ ಸಾಹಿತ್ಯದಲ್ಲಿ ವಚನ ಮತ್ತು ಕೀರ್ತನ ಸಾಹಿತ್ಯದ ನಂತರ ಜನಪರವೂ ಜನಪ್ರಿಯವೂ ಆದ ಸಾಹಿತ್ಯ ಪ್ರಕಾರವೆಂದರೆ ಸರ್ವಜ್ಞ ಕವಿಯ ತ್ರಿಪದಿ ಸಾಹಿತ್ಯ. ೧೨ನೇ ಶತಮಾನದಲ್ಲಿ ಅಕ್ಕಮಹಾದೇವಿಯ 'ಯೋಗಾಂಗ ತ್ರಿವಿಧಿ' ಕಾವ್ಯವನ್ನು ಬಿಟ್ಟರೆ, ಸರ್ವಜ್ಞ ಕವಿಯೇ ತ್ರಿಪದಿಯ ಉತ್ಕೃಷ್ಟ ಕರ್ತೃ. ಸರ್ವಜ್ಞ ಕವಿಯ ಕುರಿತಾದ ನಿಖರವಾದ ಚರಿತ್ರೆ ನಮಗೆ ದೊರಕುವುದಿಲ್ಲ. ಆದರೂ ಅನೇಕ ಸಾಹಿತ್ಯ ಚರಿತ್ರೆಕಾರರ ಅಭಿಮತದಂತೆ ಈತನ ಕಾಲ ೧೬ನೇ ಶತಮಾನ. ಊರು–ಧಾರವಾಡ ಜಿಲ್ಲೆಯ ಅಬಲೂರು ಅಥವಾ ಅಂಬಲೂರು. ತಂದೆ ಬಸವರಸ, ತಾಯಿ ಕುಂಬಾರ ಮಾಳವ್ವ. ಸರ್ವಜ್ಞ ಎನ್ನುವುದು ಕವಿಯ ಅಂಕಿತನಾಮ. ಈತನ ಹೆಸರು ಪುಷ್ಪದತ್ತ.

'ಆಡುಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ಹೇಳದ ವಿಷಯವಿಲ್ಲ' ಎಂದು ಹುಟ್ಟಿಕೊಂಡಿರುವ ಗಾದೆಯಂತೆ ಸರ್ವಜ್ಞ ಕವಿಯು ಮನುಷ್ಯ ಬದುಕಿನ ಎಲ್ಲ

ಮೂಲಗಳ ಕುರಿತು ಅರ್ಥಪೂರ್ಣ ತ್ರಿಪದಿಗಳನ್ನು ರಚಿಸಿದ್ದಾನೆ. ಅವು ಅಪೂರ್ವ ಜನಮನ್ನಣೆ ಪಡೆದಿವೆ. ೧೨ನೇ ಶತಮಾನದ ಬಸವಾದಿ ಶರಣರ ಪ್ರಭಾವ ಕವಿಯ ಮೇಲಾಗಿರುವುದು ಕಂಡು ಬರುತ್ತದೆ. ಸರ್ವಜ್ಞ ಬರೆದಿರುವ ೧೩೦೦ಕ್ಕಿಂತ ಹೆಚ್ಚಿನ ತ್ರಿಪದಿಗಳು ಈಗ ಲಭ್ಯ ಇವೆ.

ತ್ರಿಪದಿಗಳ ಆಶಯ :

'ದಾನ'ದಲ್ಲಿ ಅನೇಕ ದಾನಗಳಿವೆ. ಆದರೆ ಪಶು–ಪಕ್ಷಿ–ಮಾನವರಾದಿಯಾಗಿ ಎಲ್ಲರಿಗೂ ಅಗತ್ಯವಾಗಿರುವ 'ದಾನ'ವೆಂದರೆ ಹಸಿವು ನೀಗಿಸುವ 'ದಾನ', ಅದುವೇ ಅನ್ನದಾನ. ಅದರಂಥ ಪುಣ್ಯ ಮತ್ತೊಂದಿಲ್ಲ. ನಾವೆಲ್ಲ ಅನೇಕ ವೃತ್ತಿಗಳ ಮೂಲಕ ಸಂಪಾದಿಸುವುದೂ ಕೂಡ ಹೊಟ್ಟೆಗಾಗಿ. ನಾವು ಹಸಿದು ಕುಂತಾಗ ಅನ್ನ ಸಿಗಲಿಲ್ಲವೆಂದರೆ ಜಗತ್ತೇ ಪ್ರಳಯವಾಗುತ್ತದೇನೋ ಎಂಬಂತೆ ಸಂಕಟ ಪಡುತ್ತೇವೆ. ಆದರೆ ಆ ಹಸಿವು ತೀರಿದ ನಂತರ ಮತ್ತೊಬ್ಬರಿಗೂ ಹೀಗೆ ಆಗುತ್ತದಲ್ಲಾ ಎನ್ನುವುದನ್ನು ಮರೆತು ನಮಗಾಗಿ ಕೂಡಿಡಲು ಮುಂದಾಗುತ್ತೇವೆ. ಸತ್ತಾಗ ನಮ್ಮ ಜೊತೆ ಬರದ ಕೂಡಿಡುವ ಈ ಸಂಪತ್ತನ್ನು ಇರುವತನಕ ಹಂಚಿಕೊಂಡು ತಿಂದು ಬದುಕಬೇಕೆಂಬ ವಿವೇಕ ಬರಬೇಕು. ಆ ವಿವೇಕದ ಬೆಳಕೇ ಜ್ಞಾನ.

ಪ್ರಸ್ತುತ ಇಲ್ಲಿನ 'ದಾನ–ಜ್ಞಾನ' ಭಾಗದ ತ್ರಿಪದಿಗಳನ್ನು ಡಾ. ರಾಗೌ ಅವರು ಸಂಪಾದಿಸಿರುವ 'ಸರ್ವಜ್ಞನ ಸಮಗ್ರ ತ್ರಿಪದಿಗಳು' ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಶಬ್ದಾರ್ಥಗಳು:

ಮೊಟ್ಟೆ–ಮೂಟೆ, ನನ್ನಿ–ಸತ್ಯ, ಬಿನ್ನಾಣ–ಕೌಶಲ, ಅಪರೋಕ್ಷ ಜ್ಞಾನ, ಅಡುವುದು–ಅಟ್ಟುವುದು, ಬೇಯಿಸುವುದು, ಅಡುಗೆ ಮಾಡುವುದು. ಬಿಡಾರ–ವಸತಿ, ಮೃಡ–ಶಿವ, ಒಡಲು–ಶರೀರ, ಪಾತ್ರ–ಯೋಗ್ಯ, ನಲ್ಲಳು–ಹೆಂಡತಿ, ಕಾಂಬು–ಕಾಣುವುದು, ಪಾತಕ–ಪಾಪ, ಅಪರಾಧ.

■■

೬. ಉಪಭೋಗವಾದ

❖

ಮೂಲ: ಆಶೀಶ ನಂದಿ
ಅನುವಾದ : ಕೆ.ವಿ. ಅಕ್ಷರ

ಉಪಭೋಗವಾದ–ಕನ್ಸ್ಯೂಮರಿಸಮ್–ಎಂಬುದು ಮನುಷ್ಯಜೀವಿಗಳ ಪ್ರಥಮ ಆಯ್ಕೆಯೇನೂ ಅಲ್ಲ. ಅಥವಾ ಅದೊಂದು ಪ್ರಾಥಮಿಕ ಅವಶ್ಯಕತೆಯೂ ಅಲ್ಲ, ಉಪಭೋಗ ಸಂಸ್ಕೃತಿಯು ಮನುಷ್ಯ ಸ್ವಭಾವದ ಒಂದು ಅಂಗ ಎಂಬುದಕ್ಕಾಗಲಿ, ಅಥವಾ ಮಿತಿಯಿಲ್ಲದ ನಾವು ಬದುಕಲಾರೆವೆಂಬುದಕ್ಕಾಗಲಿ ಸಮಕಾಲೀನ ಮನಃಶಾಸ್ತ್ರದಲ್ಲಿ ಅಥವಾ ಮಾನವಶಾಸ್ತ್ರದಲ್ಲಿ ಯಾವ ಸಮಾಜಶಾಸ್ತ್ರದಲ್ಲಿ ಎಲ್ಲಿಯೂ ಒಂದಿನಿತು ಸಾಕ್ಷ್ಯವೂ ಸಿಗುವುದಿಲ್ಲ. ನಾವು, ಅಭಿವೃದ್ಧಿಯೆಂಬ ಹೆಸರಿನಲ್ಲಿ ಅನುಕೂಲವಂತರು ರೂಢಿಸಿಕೊಳ್ಳಬೇಕೆಂದು ಉಪಭೋಗದ ಕ್ರಮವು ಆತ್ಯಂತಿಕವಾಗಿ ಮನುಷ್ಯಸುಖಕ್ಕೆ ಅನಿವಾರ್ಯ ಎಂಬ ಮಾತನ್ನು ಮುಕ್ತ ಮಾರುಕಟ್ಟೆಯ ಮಹಾ ನೇತಾರರು ಕೂಡ ಆಡುವ ಧೈರ್ಯ. ಪಶ್ಚಿಮದ ಜಗತ್ತಿನ ಬಹುಭಾಗಗಳಲ್ಲಿಯೂ ಕೂಡಾ–ಅದೀಗ ಅಮಿತ ಆವಾಸವೆಂಬ ಜಾಗತಿಕ ಭಾವನೆ ಉಂಟಾಗಿದ್ದಾಗ್ಯೂ–ಅಲ್ಲಿಯೂ ಭಾರೀ ಪ್ರೋತ್ಸಾಹಿಸುವ ಗಟ್ಟಿಯಾದ ಸಂಪ್ರದಾಯವೇನೂ ಇರಲಿಲ್ಲ. ಅಲ್ಲಿ ಪ್ರಬಲಗೊಂಡಿದ್ದು ೨೦ನೆಯ ಶತಮಾನದಲ್ಲಿ ಮಾತ್ರ; ಅದೂ ೧೯೪೦ರಿಂದ ಈಚಿನ ವರ್ಷಗಳಲ್ಲಿ ಮಾತ್ರವೇ.

ಕೇವಲ ಐದು ದಶಕಗಳ ಹಿಂದೆಯಷ್ಟೇ ಉಪಭೋಗ ಮಾರ್ಗವನ್ನು ಒಂದು ಮೌಲ್ಯವೆಂಬಂತೆ, ಒಂದು ಜೀವನಶೈಲಿಯೆಂಬಂತೆ ಆವಿಷ್ಕರಿಸಲಾಯಿತು. ಅದಕ್ಕೆ ಮೊದಲು ಕೇವಲ ದುಂದುಗಾರ ದೊರೆಗಳಿಗೆ ಮತ್ತು ಕೆಲವೇ ಅತಿ ಶ್ರೀಮಂತರ ಮಕ್ಕಳಿಗೆ ಮಿತವಾಗಿದ್ದ ವ್ಯಕ್ತಿ ಲಕ್ಷಣವಾಗಿತ್ತು. ಐದು ದಶಕಗಳ ಹಿಂದೆ ಇದನ್ನು ಸಾಮಾಜಿಕ ಸಾಧನೆಯ ಲಾಂಛನವಾಗಿ ಗುರುತಿಸಲಾಯಿತು; ಆದ್ದರಿಂದ ಅದು ನಿತ್ಯಬದುಕಿನ ಒಂದು ಅಂಗವಾಗಿ ಸೇರಿಹೋಯಿತು. ಈ ಬಳಿಕ ಜನರು ಪತ್ರಿಕೆಗಳ

ಮೂಲಕ, ದೂರದರ್ಶನದ ಮೂಲಕ ಅತಿ–ಉಪಭೋಗದ ಕಥನಗಳನ್ನು ಸ್ವತಃ ಉಪಭೋಗಿಸತೊಡಗಿದರು–ಹಿಂದೊಮ್ಮೆ ಪೌರ್ವಾತ್ಯ ಮಹಾರಾಜರ ಅಂತಃಪುರದ ವರ್ಣನೆಗಳನ್ನು ಓದುತ್ತ ಅದರ ಬಗ್ಗೆ ತಮ್ಮದೇ ಅತಿರಂಜಿತ ವಿಕೃತ ಕಲ್ಪನೆಗಳನ್ನು ಕಟ್ಟಿಕೊಳ್ಳುತ್ತಿದ್ದರಲ್ಲ, ಅದಕ್ಕೆ ಪ್ರಕ್ರಿಯೆ ಸಮಾನತೆಯೆನ್ನಬಹುದಾದ ಇದು ಹಿಂದಿನ ಕಾಲಗಳಲ್ಲಿ ಮೇಲುವರ್ಗವು, ಹುಚ್ಚಾಪಟ್ಟೆ ಉಪಭೋಗವನ್ನು ನಡೆಸಿದಾಗ ಕೂಡ, ಅದನ್ನು ಪ್ರದರ್ಶಿಸುವ ಧೈರ್ಯ ತೋರಿಸುತ್ತಿರಲಿಲ್ಲ; ಕಾರಣ, ಅದು ಆ ವರ್ಗದ ಘನತೆಗೆ ತಕ್ಕ ಕೆಲಸವಲ್ಲವೆಂದು ತಿಳಿಯಲಾಗಿತ್ತು. ಹೊಸದಾಗಿ ಸಿರಿವಂತರಾದವರು ಮಾತ್ರವೇ ತಮ್ಮ ಶ್ರೀಮಂತಿಕೆಯನ್ನು ಪ್ರದರ್ಶಿಸುತ್ತಾರೆಂಬುದು ಆಗಿನ ನಂಬಿಕೆಯಾಗಿತ್ತು. ಅದಕ್ಕೆ ವಿರುದ್ಧವಾಗಿ ೫೦ ವರ್ಷಗಳ ಹಿಂದೆ, ಅತಿ ಉಪಭೋಗವೇ ಸಾಮಾಜಿಕ ಅಂತಸ್ತು ಮತ್ತು ಯಶಸ್ಸಿಗೆ ದ್ಯೋತಕವಾಯಿತು; ಜೊತೆಗೆ ಅದು, ಸಾಮಾಜಿಕ ಅಭದ್ರತೆಯ ಸ್ಥಿತಿಗೂ ವೈಯಕ್ತಿಕ ಕೀಳರಿಮೆಗೂ ಒಂದು ಔಷಧವೆಂದು ಗೋಚರಿಸತೊಡಗಿತು.

ನಮ್ಮ ಕಾಲದಲ್ಲಿ ಉಪಭೋಗ ಸಂಸ್ಕೃತಿಯೊಂದಿಗೆ ಗಟ್ಟಿಯಾಗಿ ಗುರುತಿಸಲ್ಪಟ್ಟಿರುವ ನಾಡು–ಇನ್ನಾವ ದೇಶಕ್ಕಿಂತಲೂ ಹೆಚ್ಚಾಗಿ ಯುನೈಟೆಡ್ ಸ್ಟೇಟ್ಸ್. ಆದರೆ, ಉಪಭೋಗವಾದದ ವಿರುದ್ಧ ಅತ್ಯಂತ ಗಟ್ಟಿಯಾದ ಟೀಕೆಗಳು ಕೂಡಾ ಆ ದೇಶದಿಂದಲೇ ಬಂದಿವೆ. ಈ ಎರಡಕ್ಕೂ ಪ್ರಾಯಶಃ ಮೂಲವಾದ ಒಂದು ಕಾರಣವೆಂದರೆ, ಜಗತ್ತಿನ ಇನ್ನಾವ ದೇಶದಲ್ಲೂ ಅಮೇರಿಕಾದಂತೆ ಬಳಕೆ ಸಂಸ್ಕೃತಿಯನ್ನು ಸಾಂಸ್ಥಿಕಗೊಳಿಸಿ ವ್ಯವಸ್ಥೆಗೊಳಪಡಿಸಿಲ್ಲ: ಉಪಭೋಗವು ಸ್ವಯಂಪೂರ್ಣವಾದ ಒಂದು ಅಗತ್ಯವೆಂಬ ನಂಬಿಕೆಯನ್ನು ಅಲ್ಲಿ ರೂಢಿಸಲಾಗಿದೆ. ಹಾಂಗ್‌ಕಾಂಗ್ ಮತ್ತು ಸಿಂಗಾಪುರಗಳಂಥ ಕೆಲವು ನಗರ ರಾಜ್ಯಗಳು ಮತ್ತು ದುಬಾಯಿಯಂಥ ಕೆಲವು ಪುಟ್ಟ ದೇಶಗಳು ಮಾತ್ರ ಪೂರ್ಣ ಪ್ರಮಾಣದಲಿ ಇಂಥ ಪ್ರಕ್ರಿಯೆಯನ್ನು ಅನುಸರಿಸಲು ಆರಂಭಿಸಿವೆ; ಅಲ್ಲಿ ಉಪಭೋಗವೇ ಕಾರ್ಯಕಾರಣಗಳೆರಡೂ ಆಗಿದೆ ಮಾತ್ರವಲ್ಲ ಹೊರಗಿನಿಂದ ನೋಡುವ ಒಬ್ಬ ಸಾಧಾರಣ ವೀಕ್ಷಕನಿಗೆ ಆ ಇಡೀ ದೇಶವೇ ಒಂದು ಬೃಹತ್ ಸೂಪರ್ ಮಾರ್ಕೆಟ್ಟಿನಂತೆ ಗೋಚರಿಸುತ್ತದೆ. ಅಂಥ ದೇಶಗಳ ಇಡಿಯ ರಾಜಕೀಯ ಅರ್ಥವ್ಯವಸ್ಥೆಯೇ–ಮತ್ತು ಬದುಕು ಕೂಡಾ–ಉಪಭೋಗಕೇಂದ್ರಿತವಾಗಿ ರೂಪಿತವಾಗಿದೆ. ಹಾಗಿದ್ದರೂ ಇಡಿಯ ಜಗತ್ತಿನ ವ್ಯಾಪ್ತಿಯಲ್ಲಿ ಅಮೇರಿಕಾದ ಪ್ರಭಾವದ ಮುಂದೆ, ಈ ಕಿರುರಾಜ್ಯಗಳ ಪಾಲು ಅಗಣ್ಯವೆನಿಸುವಂಥದು.

ಬಳಕೆ ಸಂಸ್ಕೃತಿಯ ಯಶಸ್ವಿ ವ್ಯವಸ್ಥೆಯೊಂದು ಅಮೇರಿಕಾದಲ್ಲಿ ರೂಢಿಗೊಳ್ಳುವುದಕ್ಕೆ ಕಾರಣ, ಬಹುಶಃ, ಅದು ಪ್ರಧಾನವಾಗಿ ವಲಸಿಗರಿಂದ ನಿರ್ಮಿತವಾದ ಸಮಾಜವಾಗಿರುವುದು ಮತ್ತು ಅಲ್ಲಿನ ಸಾರ್ವಜನಿಕ ಸಂಸ್ಕೃತಿಯು ಹೀಗೆ ದೇಶಭ್ರಷ್ಟರೂ ಸಂಸ್ಕೃತಿಯ ಬೇರು ಕಿತ್ತವರೂ ಆಗಿರುವಂಥ ಜನವರ್ಗಗಳ ಸಾಮಾಜಿಕ–ಮಾನಸಿಕ ತುಡಿತಗಳಿಗೆ ಸ್ಪಂದಿಸಿ ರೂಪಿತವಾದದ್ದು ಎಂಬುದು. ಉಪಭೋಗವಾದಿ ವ್ಯವಸ್ಥೆಯ ಸಂಸ್ಥಿಕರಣವೆಂಬ ಈ ಪ್ರಕ್ರಿಯೆಯು ಇನ್ನೂ ಈ ವಿಶಾಲವಾದ ಇನ್ನೊಂದು ಬೆಳವಣಿಗೆಯ ಕಾಕತಾಳೀಯ ಪರಿಣಾಮಗಳಲ್ಲೊಂದು. ಕಳೆದ ೨೦೦ ವರ್ಷಗಳಿಂದ ಜಗತ್ತಿನಾದ್ಯಂತ ನಡೆಯತೊಡಗಿರುವ ಈ ವಿಶಾಲ ಸಾಂಸ್ಕೃತಿಕ ಬೆಳವಣಿಗೆ ಯಾವುದೆಂದರೆ–ಸಮುದಾಯಗಳ ವಿನಾಶ ಮತ್ತು ಜಗತ್ತಿನ ಹಲವು ಭಾಗಗಳಲ್ಲಿ 'ಒಬ್ಬಂಟಿತನದ ಗುಂಪು'ಗಳ ('ಲೋನ್‌ಲೀ ಕ್ರೌಡ್'ಗಳ) ಉದ್ಭವ; ಈ ಪ್ರಕ್ರಿಯೆಗೆ, ಈ ಅವಧಿಯಲ್ಲಿ ಬದಲಾಗುತ್ತ ಹೋದ ಕೈಗಾರಿಕಾ ಬಂಡವಾಳದ ಸ್ವರೂಪವೂ ಸಹಕಾರಿಯಾಗಿಯೇ ಕೆಲಸ ಮಾಡಿದೆ. ಆದ್ದರಿಂದ, ಹಿಂದೆಯೇ ನಾನು ಹೇಳಿರುವಂತೆ ಉಪಭೋಗವಾದವು ಇಂಥ ಆತಂಕಪೂರಿತ ಸ್ಥಿತಿಯೊಂದಕ್ಕೆ ಪ್ರತಿಸ್ಪಂದಿಯಾಗಿ ರೂಪುಗೊಂಡಿದೆ ಅದು ಬೇರುಕಿತ್ತವರ, ಒಬ್ಬಂಟಿಗರ ಮತ್ತು ಗುಂಪಿನಲ್ಲಿ ಗೋವಿಂದರಾದವರ ಬದುಕಿಗೆ ಒದಗಿರುವ ಒಂದು ರೋಗ.

ಇಂಥ ದೇಶಾಂತರಿ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವುದರಿಂದಲೇ ಅಮೇರಿಕಾಕ್ಕೆ ಇರುವ ಇನ್ನೊಂದು ವಿಶೇಷ ಲಕ್ಷಣಕ್ಕೆ ಕಾರಣ ಏನೆಂಬುದು ನಮಗೆ ಗೋಚರವಾಗುತ್ತದೆ. ಆ ದೇಶವು ಈ ಜಗತ್ತಿನ ಪ್ರತಿಯೊಬ್ಬರಿಗೂ ತಮ್ಮ 'ಮತ್ತೊಂದು ದೇಶ' (ಸೆಕೆಂಡ್ ಕಂಟ್ರಿ) ಆಗಿಬಿಟ್ಟಿದೆ. ಯುದ್ಧಪೂರ್ವದ ಯುರೋಪಿನಲ್ಲಿ ಪ್ಯಾರಿಸ್ ನಗರವು ಹೀಗೆಯೇ, ಪ್ರತಿಯೊಬ್ಬರ ಎರಡನೆಯ ಆಯ್ಕೆಯ ನಗರವೆಂಬ ಹೆಗ್ಗಳಿಕೆ ಪಡೆದಿತ್ತು. ಅದೇ ರೀತಿ, ಬ್ರಿಟಿಷ್ ಮತ್ತು ಫ್ರೆಂಚ್ ವಸಾಹತುಗಳ ಹಲವು ಪ್ರಜೆಗಳಿಗೆ ಕ್ರಮವಾಗಿ ಪ್ಯಾರಿಸ್ ಮತ್ತು ಲಂಡನ್‌ಗಳು ಇಂಥ ಹೆಗ್ಗಳಿಕೆ ಸಾಧ್ಯವಾಗಿದೆ–ಕಾರಣ, ಅಮೇರಿಕಾದ ಮಾರುಕಟ್ಟೆಯ ಬೃಹತ್ ಗಾತ್ರ (ಇದು ಎಂಥ ಮಾರುಕಟ್ಟೆಯೆಂದರೆ, ಇಲ್ಲಿ ಸಮ್ಮತಿ ಮತ್ತು ವಿರೋಧಕ್ಕೆರಡಕ್ಕೂ ಬೇಡಿಕೆಯಿದೆ; ಹೊಸ ಧರ್ಮಗಳಿಗೂ ನಂಬಿಕೆಗಳಿಗೂ ಸಿದ್ಧಾಂತಗಳಿಗೂ ಕೂಡ ಇಲ್ಲಿ ವಿಶೇಷ ಮಾರುಕಟ್ಟೆಯಿದೆ). ಅಮೇರಿಕಾ ದೇಶವೆಂದರೆ ಅದು ಎಲ್ಲ ರೀತಿಯ ಬಳಕೆದಾರರ ಸ್ವರ್ಗ, ಭಿನ್ನಮತವೂ ಕೂಡ, ಬೇರೆಲ್ಲಿಗಿಂತ ಹೆಚ್ಚು ಚೆನ್ನಾಗಿ ಇಲ್ಲಿ ಮಾರಾಟವಾಗುತ್ತದೆ; ಬೇರೆಲ್ಲಿಗಿಂತ ಹೆಚ್ಚು ಗಹನಗಾಂಭೀರ್ಯಗಳಿಂದ ಇಲ್ಲಿ

ಭಿನ್ನಮತೀಯ ಚಿಂತನೆಗಳನ್ನು ಕೊಂಡು ಬಳಸಲಾಗುತ್ತದೆ. ಉಪಭೋಗವಾದದ ಟೀಕೆಯನ್ನು ಕೂಡಾ ಈ ನಾಡಿನಲ್ಲಿ ಉಪಭೋಗಿಸಿ ಬಳಸಲಾಗುತ್ತದೆ.

೧೯೪೦ರ ದಶಕದಲ್ಲಿ, ಮನಃಶಾಸ್ತ್ರಜ್ಞ ಎರಿಕ್ ಫ್ರಾಮ್, 'ಮಾರುಕಟ್ಟೆಯ ಮನೋಧರ್ಮ' ಎಂಬೊಂದು ಪರಿಭಾಷೆಯನ್ನು ಹುಟ್ಟುಹಾಕಿದ್ದ–ಆಧುನಿಕ ಮಾರುಕಟ್ಟೆಗಳಲ್ಲಿ ವಸ್ತುಗಳನ್ನು ಮಾರುವ ಬದಲು ತಮ್ಮ ಸ್ವಂತಿಕೆಯನ್ನೇ ಮಾರಿಕೊಳ್ಳಲು ಬಯಸುವ ವ್ಯಕ್ತಿತ್ವ ಮಾದರಿಗಳಿಗೆ ಅನ್ವಯವಾಗುವ ಹೆಸರು ಇದು. ಆದರೆ ಮುಂದೊಂದು ದಿನ, ಉಪಭೋಗಕ್ಕಾಗಿಯೇ ಉಪಭೋಗವನ್ನು ಮಾಡುವ, ಬಳಕೆಗಾಗಿಯೇ ಬಳಕೆ ಮಾಡುವ ಇನ್ನೊಂದು ಮನೋಧರ್ಮದ ವ್ಯಕ್ತಿಮಾದರಿಗಳು ನಿರ್ಮಾಣಗೊಳ್ಳಬಹುದು–ಎಂಬ ಮುನ್ನೋಟ ಎರಿಕ್ ಫ್ರಾಮನಿಗಿರಲಿಲ್ಲ. ಇಂಥ ಉಪಭೋಗಕೇಂದ್ರಿತ ವ್ಯಕ್ತಿತ್ವವೆಂಬುದು ಇವತ್ತು ತುಂಬ ಚಾಲ್ತಿಯಲ್ಲಿ ೩/೭ ಆಕರ್ಷಣೆಯಲ್ಲಿಯೂ ಇರುವ ಮಾದರಿಯಾಗಿ ಬಿಟ್ಟಿದೆ. ಜಗತ್ತಿನಾದ್ಯಂತ ಇರುವ ಮನೋಧರ್ಮದ ಜನರು ಮತ್ತು ಸಮೂಹಗಳು ತಮ್ಮ ಬಳಕೆಯ ವೈಭವ ಪ್ರದರ್ಶನಕ್ಕಾಗಿಯೇ ಪ್ರಸಿದ್ಧರೂ ಆಗಿದ್ದಾರೆ. ಎರಡನೆಯ ಮಹಾಯುದ್ಧಕ್ಕಿಂತ ಹಿಂದಿನ ಕಾಲಗಳ ಅತಿಯಾಶೆಯ ಶ್ರೀಮಂತರೂ ಕೂಡ ಇವರೆದುರು ನಾಚಬೇಕು, ಹಾಗಿದೆ ಈ ಹೊಸ ಉಪಭೋಗಿ ವರ್ಗ.

ಬಳಕೆ ಸಂಸ್ಕೃತಿಯನ್ನು ಸಮರ್ಥಿಸಿಕೊಳ್ಳುವಾಗ, ಈ ಮಾರುಕಟ್ಟೆಯ ವಕ್ತಾರರು ಸಾಧಾರಣವಾಗಿ ಒಂದು ವಾದವನ್ನು ಮುಂದಿಡುತ್ತಾರೆ–ಬಳಕೆಯ ಪ್ರಮಾಣವು ಒಟ್ಟೂ ಸಮಾಜದಲ್ಲಿ ಏರುತ್ತ ಹೋದಂತೆ, ಆಯಾ ಸಮಾಜದ ಬಡವರೂ ತಮ್ಮ ಬದುಕಿನ ಭೌತಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಸಾಧ್ಯತೆ ಏರುತ್ತ ಹೋಗುತ್ತದೆ. ಜತೆಗೆ ಇದೇ ವಾದವು ಮುಂದುವರೆದು ಹೇಳುತ್ತದೆ–ಇಂಥ ಬಳಕೆಯಲ್ಲಿ ಆಸ್ಫೋಟಕ ಏರಿಕೆಯಾದಾಗ, ಅದರ ಜೊತೆಗೇ, ತಂತ್ರಜ್ಞಾನದಲ್ಲಿಯೂ ಹೊಸ ಆವಿಷ್ಕಾರಗಳಾಗುತ್ತವೆ; ಆರ್ಥಿಕ ಆಧುನೀಕರಣವೂ ಸಂಭವಿಸುತ್ತ ಹೋಗುತ್ತದೆ; ಮತ್ತು ಇವೆಲ್ಲವೂ ಅಭಿವೃದ್ಧಿಯ ಒಂದು ಚಾಲಕಯಂತ್ರವಾಗಿ ಕೆಲಸ ಮಾಡುತ್ತವೆ ಎಂಬುದು ಆ ವಾದದ ತಿರುಳು. ಆದರೆ ಇಂಥ ಮಹಾನ್ ಸಾಮಾಜಿಕ ದರ್ಶನವು ವಾಸ್ತವದಲ್ಲಿ ಸಂಭವಿಸುವುದಿಲ್ಲವೆಂಬುದನ್ನು ನಾವು ಈಗಾಗಲೇ ಕಂಡಿದ್ದೇವೆ. ಈ ವರ್ಗಗಳು ಮನಸ್ಸಿನಲ್ಲಿಟ್ಟುಕೊಂಡಿರುವ ಮತ್ತು ಇಷ್ಟಪಡುವ ಉಪಭೋಗಕ್ರಮದಿಂದ ಸಾಮಾಜಿಕ ಲಾಭಗಳೇನೂ ಇಲ್ಲ. ಕಾರಣ, ಈ ಬಳಕೆ ಸಂಸ್ಕೃತಿಯು ಒಮ್ಮೆ ಸ್ಥಾಪಿತವಾದ ಮೇಲೆ, ಅದು ಕೇವಲ ಸ್ವಯಂಪೋಷಣೆಯ ಕೆಲಸವನ್ನಷ್ಟೇ ಮಾಡುತ್ತದೆ. ಅತಿ ಬಳಕೆಯ ಶ್ರೀಮಂತರ ಹಾಗೆಯೇ ಈ ಅತಿ ಉಪಭೋಗದ ಸಂಸ್ಕೃತಿಗೂ

ಸಹ ಉಪಭೋಗವೇ ಕಾರ್ಯಕಾರಣಗಳೆರಡೂ ಆಗಿಬಿಡುತ್ತದೆ. ಅಭಿವೃದ್ಧಿಯನ್ನು ಪ್ರತಿಪಾದಿಸುವ ಪಂಡಿತರಿಗೆ ಈ ವಿಚಾರವು ಗೊತ್ತಿಲ್ಲದ್ದೇನಲ್ಲ. ಆದರೆ, ಉಪಭೋಗವು ಅಂತಿಮವಾಗಿ ಉಪಭೋಗ–ಕೇಂದ್ರಿತ ಅಭಿವೃದ್ಧಿಗೆ ಮತ್ತು ತಂತ್ರಜ್ಞಾನಕ್ಕೆ ದಾರಿಮಾಡಿಕೊಡುತ್ತದೆ ಎಂದವರು ನಂಬುತ್ತಾರೆ. ಅವರ ಈ ಆರ್ಥಿಕ ತರ್ಕವು ತಪ್ಪು ಎಂದು ನಾನಿಲ್ಲಿ ಹೇಳುತ್ತಿಲ್ಲ. ಬದಲು, ಉಪಭೋಗಕ್ಕೆ ಅವರು ಕೊಡುವ ಸಮರ್ಥನೆಯು ಈ ಉಪಭೋಗ ಸಂಸ್ಕೃತಿಯ ಸೀಮಿತ ಚಿತ್ರವನ್ನು ಮಾತ್ರ ಕೊಡುತ್ತದೆ; ಅದಕ್ಕೆ ಜೀವಾಳವಾಗಿರುವ ಒಂದು ಲಕ್ಷಣವನ್ನು ಅವರು ಗುರುತಿಸುವುದಿಲ್ಲ ಎಂಬುದು ನನ್ನ ವಾದ.

ಈ ಜೀವಾಳ ಲಕ್ಷಣ ಯಾವುದೆಂಬುದು ಅರ್ಥವಾಗಲಿಕ್ಕೆ ನಾವು ಇನ್ನೊಂದು ಸಂಗತಿಯನ್ನು ಗುರುತಿಸಿಕೊಳ್ಳಬೇಕು–ಉಪಭೋಗವೆಂಬುದನ್ನು ಒಂದು ಸ್ವತಂತ್ರ ಮೌಲ್ಯವಾಗಿ ಸ್ಥಾಪಿಸಬೇಕೆಂದಿದ್ದರೆ ನಾವು ಮನುಷ್ಯ ಜೀವಿಗಳನ್ನೇ ಪುನರ್‌ಯೋಜಿಸಿ ರೂಪಿಸಬೇಕು. ಹಾಗೆ ಮಾಡುವ ಮೊದಲ ಹೆಜ್ಜೆ ಆಯಾ ವ್ಯಕ್ತಿಗಳನ್ನು ಅವರವರ ಸಮುದಾಯ, ಸಂಪ್ರದಾಯ ಮತ್ತು ಕುಟುಂಬಗಳಿಂದ ಬೇರುಕಿತ್ತು ಪಲ್ಲಟಗೊಳಿಸುವುದು; ಮತ್ತು ಅವುಗಳ ಸ್ಥಳದಲ್ಲಿ ರಾಷ್ಟ್ರವೆಂಬ ಹೆಸರಿನ ವಿಶಾಲವೂ ಅನಾಮಧೇಯವೂ ಆದ ಹುಸಿ–ಸಮುದಾಯವೊಂದನ್ನು ಸ್ಥಾಪಿಸುವುದು. ಈ ರಾಷ್ಟ್ರದ ಜೊತೆಗೇ, ಸುಲಭ ನಿರ್ವಹಣೆಗೆ ಒದಗಿಬರುವ ಹಲವು ಸಾಂಸ್ಕೃತಿಕ ಉತ್ಪನ್ನಗಳನ್ನು ರೂಪಿಸಿ, ಅವುಗಳನ್ನು ಪರಂಪರೆಯೆಂದು ಘೋಷಿಸುವುದು (ಈ ಪರಂಪರೆಯೆಂಬುದು, ಅಲ್ಲಿ ರಂಗಮಂದಿರಗಳಲ್ಲೂ ಪ್ರದರ್ಶನಾಲಯಗಳಲ್ಲೂ ತರಗತಿಗಳಲ್ಲೂ ಹಾಗೂ ಪ್ರವಾಸಿ ತಾಣಗಳಲ್ಲೂ ಉಪಭೋಗಿಸಬಹುದಾದ ಉತ್ಪನ್ನಗಳ ಒಂದು ಸಮುಚ್ಚಯವಾಗಿರುತ್ತದೆ). ಜೊತೆಗೆ ಹಳೆಯ ಕೂಡುಕುಟುಂಬ ವ್ಯವಸ್ಥೆಯನ್ನು ಕಿತ್ತು ಅದರ ಬದಲಿಗೆ ಹೊಸ ಬಿಡಿಕುಟುಂಬಗಳನ್ನು ಕಟ್ಟುವುದು. ಇಂಥ ಬಿಡಿಕುಟುಂಬಗಳಲ್ಲಿ ವಯಸ್ಸಾದವರೂ ಮತ್ತು ಕಿರಿಯರೂ ನಮ್ಮ ಮೇಲೆ ಬಿದ್ದ ಜವಾಬ್ದಾರಿಯ ಹಾಗೆ, ಅಥವಾ ನಮ್ಮ ಖಾಸಗಿತನಕ್ಕೆ ಒದಗಿದ ತೊಡಕುಗಳಂತೆ ಕಾಣಿಸಿಕೊಳ್ಳುತ್ತಾರೆ; ಅಂಥವರ ಜವಾಬ್ದಾರಿಯನ್ನು ಹೊರುವುದು ಕೆಲವೊಮ್ಮೆ ಅನಿವಾರ್ಯವಾದರೂ ಅವರನ್ನು ಈ ಕುಟುಂಬಗಳೆಂದೂ ಸಮಗೌರವದಲ್ಲಿ ಕಾಣಲಾರವು. ಯಾಕೆಂದರೆ, ಈ ಕುಟುಂಬಗಳ ಕೇಂದ್ರ–ಕಾಮದ ಸರಕಿನ ವ್ಯಾಪಾರ ಸಂಬಂಧದಲ್ಲಿ ಕೂಡಿಕೊಂಡಿರುವ ಗಂಡುಹೆಣ್ಣುಗಳ ಜೋಡಿ ಮಾತ್ರವೇ.

ಇವೆಲ್ಲದಕ್ಕೆ ಸಮಾನಾಂತರವಾಗಿ, ಉಪಭೋಗವಾದಕ್ಕೆ ಒಂದು ಸೈದ್ಧಾಂತಿಕ ನೆಲೆ ನಿರ್ಮಿಸಿಕೊಳ್ಳುವುದೂ ಈ ಮಾರ್ಗಕ್ಕೆ ಅಗತ್ಯವಾಗುತ್ತದೆ. ಹಲವು ಐರೋಪ್ಯ

ವಿದ್ವಾಂಸರ ಪ್ರಕಾರ, ಆಧುನಿಕ ಉದಾರವಾದಿ ಬಂಡವಾಳ ವ್ಯವಸ್ಥೆಗೆ ಮೂಲಾಧಾರ–ಆಸ್ತಿಯನ್ನು ಬಯಸುವ ವ್ಯಕ್ತಿಯ ಪರಿಕಲ್ಪನೆ. ಈ ಪರಿಕಲ್ಪನೆಯನ್ನೀಗ ಉಪಭೋಗವನ್ನು ಬಯಸುವ ವ್ಯಕ್ತಿಯೆಂದು ಮಾರ್ಪಡಿಸಿಕೊಳ್ಳಬೇಕು. ಹಾಗೆಯೇ, ಆಸ್ತಿಯ ಹಕ್ಕನ್ನು ಉಪಭೋಗದ ಹಕ್ಕು ಎಂದು ಪುನರ್ವ್ಯಾಖ್ಯಾನಿಸಿಕೊಳ್ಳಬೇಕು. ಬಳಿಕ ಈ ಉಪಭೋಗಾಸಕ್ತ ವ್ಯಕ್ತಿಯ ಸಾರ್ವಭೌಮತ್ವವನ್ನು ಘೋಷಿಸಿಕೊಳ್ಳಬೇಕು–ಕಾರಣ, ರಾಷ್ಟ್ರ, ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಕುರಿತು ಪ್ರಸ್ತುತ ಇರುವ ಸಿದ್ಧಾಂತಗಳೆಲ್ಲವೂ ವ್ಯಕ್ತಿಯೆಂಬ ಪರಿಕಲ್ಪನೆಯ ಪಾವಿತ್ರ್ಯವನ್ನು ಆಧರಿಸಿಕೊಂಡೇ ರೂಪುಗೊಂಡಿರುವುದರಿಂದ, ಈಗ ಅದೇ ಪರಿಕಲ್ಪನೆಯು ಉಪಭೋಗವೆಂಬ ಕಾರ್ಯ ಮತ್ತು ಆ ಉಪಭೋಗದ ಸ್ವಾತಂತ್ರ್ಯಕ್ಕೂ ಆಧಾರವಾಗುವಂತೆ ಇದನ್ನು ಪುನರ್ ನಿರೂಪಿಸಿಕೊಳ್ಳುವುದು ಅಗತ್ಯ. ಸಾಮಾಜಿಕ–ರಾಜಕೀಯ ವಲಯಗಳಲ್ಲಿ ಕ್ರಿಯಾಶೀಲರಾಗಿರುವ ಕೆಲವರು ಸೂಚಿಸುವಂತೆ, ಪ್ರಸ್ತುತ ಇರುವ ಪ್ರಮಾಣೀಕೃತ ಮಾದರಿಯ ಉತ್ಪಾದನಾ ಕ್ರಮಗಳು ಪ್ರಮಾಣೀಕೃತ ಮಾದರಿಯ ಉಪಭೋಗದ ಕ್ರಮಗಳಿಗೂ ಕಾರಣವಾಗಿವೆ; ಯಾಕೆಂದರೆ ಇಂಥ ಮಾದರಿಗಳು ಮಾತ್ರವೇ ಇವತ್ತು ಆರ್ಥಿಕವಾಗಿ ಸಶಕ್ತವಾಗಿ ನಡೆಯಬಲ್ಲಂಥವಾಗಿವೆ. ಅದೇ ರೀತಿ, ಇವತ್ತು ಜಾಗತಿಕ ಸಮೂಹಸಂಸ್ಕೃತಿ ವಾಹಿನಿಗಳಲ್ಲಿ ಕಾಣಸಿಗುವ ಪ್ರಜಾಪ್ರಭುತ್ವದ ಆದರ್ಶಗಳು, ಸೂಕ್ಷ್ಮವಾಗಿ ಗಮನಿಸಿದರೆ, ಇಂಥ ಉಪಭೋಗಾಸಕ್ತ ಸಾರ್ವಭೌಮ ವ್ಯಕ್ತಿಯ ಪರಿಕಲ್ಪನೆ ಮತ್ತು ವ್ಯಕ್ತಿ–ಹಕ್ಕುಗಳನ್ನು ರಕ್ಷಿಸುವ ಸಲುವಾಗಿಯೇ ರೂಪುಗೊಂಡದ್ದು ಕೂಡ ಗೋಚರವಾಗುವಂತಿದೆ. ಜಾಗತಿಕ ಪರಿಸರ ಪರಿಸ್ಥಿತಿಯನ್ನು ಕುರಿತು ನಡೆದ ಕ್ಯೋಟೋ ನಿರ್ಣಯಕ್ಕೆ ಸಹಿ ಹಾಕಲು ವಿರೋಧ ವ್ಯಕ್ತಪಡಿಸುತ್ತ, ಆಗಿನ ಅಮೇರಿಕಾದ ಅಧ್ಯಕ್ಷರಾಗಿದ್ದ ಹಿರಿಯ ಜಾರ್ಜ್ ಬುಷ್ ಹೇಳಿದ್ದರು–ಮಾನ್ಯರೆ, ಅಮೇರಿಕನ್ ಜೀವನಕ್ರಮದಲ್ಲಿ ನಾವು ಯಾವುದೇ ರಾಜಿ ಮಾಡಿಕೊಳ್ಳುವುದು ಸಾಧ್ಯವೇ ಇಲ್ಲ. ಅಥವಾ ಇನ್ನೂ ಕೆಲವರು ಬೇರೆ ರೀತಿಯಲ್ಲಿ ಹೇಳಿರುವಂತೆ–'ಡಾಲರೀಕರಣಗೊಂಡ ಬಡತನ'ಕ್ಕೆ ಸಂವಾದಿಯಾಗಿ ಇವತ್ತು ಡಾಲರ್ ಪ್ರಭುತ್ವದ ಶ್ರೀಮಂತಿಕೆ ಮತ್ತು ಡಾಲರ್ ಪ್ರಣೀತ ವ್ಯಕ್ತಿತ್ವಗಳು ನಿರ್ಮಾಣವಾಗಿವೆ.

ಇಂಥ ಒಬ್ಬ ಉಪಭೋಗಕೇಂದ್ರಿತ ವ್ಯಕ್ತಿಗೆ–ಏಕಾಂಗಿತನದ, ಆತ್ಮರತಿಯ ಮತ್ತು ಸಮುದಾಯ ವಿಚ್ಛೇದಿತ ವ್ಯಕ್ತಿಗೆ–ಉಳಿಯುವ ಏಕೈಕ ಅಂತಿಮ ಮೌಲ್ಯವೆಂದರೆ, ಅದು ಉಪಭೋಗ ಮಾತ್ರ; ಅಂಥ ಉಪಭೋಗದಿಂದ ಮಾತ್ರವೇ ಆ ವ್ಯಕ್ತಿಗೆ ಸಾಮಾಜಿಕ ಅಂತಸ್ತು ಮತ್ತು ಸಂಬಂಧಗಳು ಸಾಧ್ಯವಾಗುತ್ತವೆ. ಅರ್ಥಾತ್,

ಖಾಲಿಯಾಗಿರುವ ತನ್ನ ಸಾಮಾಜಿಕ ಅಸ್ತಿತ್ವವನ್ನು ತುಂಬಿಕೊಳ್ಳುವ ಉಪಾಯವಾಗಿ ಆ ವ್ಯಕ್ತಿಯು ಉಪಭೋಗಕ್ಕೆ ಶರಣಾಗುತ್ತಾನೆ. ನಾನು ಉಪಭೋಗಿಸುತ್ತೇನೆ, ಆದ್ದರಿಂದ ನಾನು ಅಸ್ತಿತ್ವದಲ್ಲಿದ್ದೇನೆ ಎಂಬುದು ಅಂಥ ವ್ಯಕ್ತಿಯು ಘೋಷವಾಕ್ಯವಾಗುತ್ತದೆ.

ಜಾಗತಿಕ ಮಾರುಕಟ್ಟೆ ನಿರ್ಮಾಣದ ಎಲ್ಲ ಕಾರ್ಯಸೂಚಿಗಳ ಹಿಂದಿರುವ ಒಂದು ಮೂಲ ಅಂಗಾಂಶ–ಇಂಥ ಏಕಾಂಗೀಕರಣಗೊಂಡ ವ್ಯಕ್ತಿ. ಮಾರಾಟ ಮಾಡುವುದೆಂದರೆ ಮೂಲತಃ ಬಯಕೆಗಳನ್ನು ಸೃಷ್ಟಿಸುವ ಕೆಲಸ. ಮೂಲಭೂತ ಅಗತ್ಯಗಳನ್ನು ಕುರಿತು ಯಾರೂ ಜಾಹೀರಾತು ನೀಡುವ ಅಗತ್ಯ ಇರುವುದಿಲ್ಲ; ಯಾಕೆಂದರೆ, ಜನ ಅವನ್ನು ತಮ್ಮಷ್ಟಕ್ಕೆ ತಾವೇ ಪಡೆದುಕೊಳ್ಳುತ್ತಾರೆ, ಅಥವಾ ಅದಕ್ಕಾಗಿ ದುಡಿದು ಅವನ್ನು ಗಳಿಸಿಕೊಳ್ಳುತ್ತಾರೆ. ಆದರೆ ಕೃತಕ ಅಗತ್ಯಗಳನ್ನು ಸೃಷ್ಟಿ ಮಾಡಲಿಕ್ಕೆ ಜಾಹೀರಾತುಗಳ ಸಹಾಯ ಬೇಕಾಗುತ್ತದೆ. ಇಂಥ ಕೃತಕ ಅಗತ್ಯಗಳನ್ನು ಮೂಲಭೂತ ಮಾನವ ಅಗತ್ಯಗಳೆಂಬಂತೆಯೇ ಬಿಂಬಿಸುವ ಮೂಲಕ ಹೊಸ ಬಯಕೆಗಳನ್ನು ಸೃಷ್ಟಿಸುವ ಕಲೆ ಮತ್ತು ವಿಜ್ಞಾನವೇ ಮಾರುಕಟ್ಟೆಶಾಸ್ತ್ರ, ಮಾರುಕಟ್ಟೆಯು ಈ ರೀತಿ ಕೃತಕ ಮತ್ತು ಮೂಲಭೂತ ಅಗತ್ಯಗಳಿಗೆ ಕೊಂಡಿ ಹಾಕುತ್ತಿರುವ ಕೆಲಸವು, ಹಲವೊಮ್ಮೆ ನಮ್ಮ ಗಮನಕ್ಕೆ ಸಿಗದೆ ನುಣುಚಿಕೊಳ್ಳುತ್ತದೆ. ಆದ್ದರಿಂದಲೇ, ಈ ಉಪಭೋಗವಾದವೆಂಬುದು ಒಂದು ಕುಟಿಲೋಪಾಯವೆಂದೂ ಕೆಲವರು ಹೇಳುವುದಿದೆ; ಏರುಧ್ವನಿಯ ಆಕರ್ಷಕ ಜಾಹೀರಾತುಗಳ ಬೆಂಬಲ ಪಡೆದು ಈ ಉಪಭೋಗವಾದವು ಮುಗ್ಧ ಸಾಧಾರಣ ನಾಗರಿಕರನ್ನು ವಂಚಿಸುತ್ತದೆಂದು ಅವರ ಅಭಿಪ್ರಾಯ. ಆದರೆ, ಸಾಧಾರಣ ನಾಗರಿಕರು ಅಷ್ಟು ಸುಲಭವಾಗಿ ಮೋಸಹೋಗುವಂಥವರೇನಲ್ಲ. ಅವರು ಜಾಹೀರಾತುಗಳಿಂದ ಪ್ರಭಾವಿತರಾಗುತ್ತಾರೆ ನಿಜ, ಆದರೆ ಅದನ್ನು ಒಪ್ಪಿಬಿಡುವುದಿಲ್ಲ. ಆದ್ದರಿಂದ, ಆ ಜಾಹೀರಾತಿನ ಮೋಹಕತೆ ಅವನ್ನು ಸೆರೆಹಿಡಿಯುವುದಕ್ಕೆ ಅನುಕೂಲವಾಗುವಂತೆ, ಅವರ ಬದುಕುಗಳೊಳಗೆ ಒಂದು ಶೂನ್ಯಸ್ಥಿತಿಯನ್ನೇ ಮೊದಲೇ ನಿರ್ಮಿಸಿಕೊಳ್ಳುವುದು ಅಗತ್ಯವಾಗುತ್ತದೆ.

ಇಂಥ ಶೂನ್ಯಸ್ಥಿತಿಯೊಂದರ ಸೃಷ್ಟಿಯೇ ಈ ಪ್ರಕ್ರಿಯೆಯಲ್ಲಿ ತುಂಬ ಪ್ರಧಾನವಾದದ್ದು, ಯಾಕೆಂದರೆ, ವ್ಯಕ್ತಿಯೊಬ್ಬನ ಅಥವಾ ಒಬ್ಬಳ ಬದುಕಿನಿಂದ ಅವರಿಗಿರುವ ಆಳವಾದ ಸಮುದಾಯದ, ಕುಟುಂಬದ ಮತ್ತು ಪರಂಪರೆಯ ಬಂಧವನ್ನು ಕಡಿದುಹಾಕಿದರೆ ಮಾತ್ರವೇ ಅವರು ಏಕಾಂಗಿ–ವ್ಯಕ್ತಿಗಳಾಗಿ ಅಣುರೂಪಿ ವ್ಯಕ್ತಿತ್ವಗಳಾಗಿ ಮಾರ್ಪಡುತ್ತಾರೆ; ಆಗ ಮಾತ್ರವೇ ಅವರು ಬೇರೆಬೇರೆ ಹುಸಿ–

ಬಂಧಗಳಲ್ಲಿ ಅರ್ಥ ಹುಡುಕಲು ಆರಂಭಿಸುತ್ತಾರೆ. ಇಂಥ ಹುಸಿ ಬಂಧಗಳಲ್ಲಿ ಇವತ್ತು ಅತ್ಯಂತ ಪ್ರಮುಖವಾದದ್ದು ಬಳಕೆದಾರರ ನಡುವಿನ ಬಂಧ. ಈ ಬಂಧ ಎಷ್ಟು ಬಲವಾದದ್ದೆಂದರೆ, ಇವತ್ತು ಮೊದಲ ಜಗತ್ತಿನ ದೇಶಗಳ ರಾಷ್ಟ್ರಾಧ್ಯಕ್ಷರನ್ನೂ ಪ್ರಧಾನ ಮಂತ್ರಿಗಳನ್ನೂ ಈ ಉಪಭೋಗ–ಬಂಧವೇ ಅವರು ಇಂಥ ವಿರಾಟ್ ಉಪಭೋಗ ಸಂಸ್ಕೃತಿಗೆ ಪರವಾಗಿ ನಿಲ್ಲುವವರೋ ಅಥವಾ ವಿರೋಧಿಗಳೋ ಎಂಬುದನ್ನಾಧರಿಸಿ–ಮೇಲೆತ್ತಲಾಗುತ್ತದೆ, ಅಥವಾ ಕೆಡವಲಿಕ್ಕೂ ಸಾಧ್ಯವಾಗುತ್ತದೆ. ಈ ಜಗತ್ತಿನಲ್ಲಿ ಇಂದು, ಉಪಭೋಗವೇ–ಅಥವಾ ಉಪಭೋಗದ ಆಶಯವೇ– ಹಲವು ಬದುಕುಗಳಿಗೆ ಅರ್ಥವಂತಿಕೆಯನ್ನು ತಂದುಕೊಡುವ ಮಾಧ್ಯಮವಾಗಿದೆ; ಈ ಸಂಗತಿಯು ಜಗತ್ತಿನ ಬಹುಸಂಖ್ಯಾತ ಜನವರ್ಗಕ್ಕೆ ವಿಪರ್ಯಾಸವೆಂದು ಕಂಡೀತಾದರೂ ಇದು ಸತ್ಯ. ಈ ಬಳಕೆ ಸಂಸ್ಕೃತಿಯೇ ಇವತ್ತು ಹೊಸ ಬಗೆಯ ಒಂದು ಅಂತರಾಷ್ಟ್ರೀಯತೆಯ ಹುಟ್ಟಿಗೂ ಕಾರಣವಾಗಿದೆ. ಆದರೆ, ವೈಚಿತ್ರ್ಯವೆಂದರೆ, ಇಂಥ ಅಂತರಾಷ್ಟ್ರೀಯತೆಯೇ, ಆ ಸಮೂಹಕ್ಕೆ ಸೇರಿದವರು ಜಗತ್ತಿನ ಇನ್ನುಳಿದ ಸಮುದಾಯಗಳ ಮತ್ತು ನಾಡುಗಳ ಸ್ಥಿತಿಗತಿಗಳ ಬಗ್ಗೆ ತಿಳಿಯಬೇಕೆಂಬ ಜವಾಬ್ದಾರಿಯಿಂದ ಅವರನ್ನು ಮುಕ್ತಗೊಳಿಸುತ್ತದೆ. ಹಾಗೆ ತಿಳಿಯಬೇಕಾದ ಅಗತ್ಯವೇ ಈ ಸಂದರ್ಭದಲ್ಲಿ ಉದ್ಭವಿಸುವುದಿಲ್ಲ ಯಾಕೆಂದರೆ, ಉಳಿದ ಜನವರ್ಗವೂ ಉಪಭೋಗಾಸಕ್ತರೇ ಆಗಿದ್ದಾರೆಂದೂ ಮತ್ತು ಆದ್ದರಿಂದಲೇ ಅವರು ಅಸ್ತಿತ್ವದಲ್ಲಿದ್ದಾರೆಂದೂ ಈ ಮನೋಧರ್ಮವು ಭಾವಿಸಿಕೊಳ್ಳುತ್ತದೆ. ಅವರ ಉಪಭೋಗದ ಕ್ರಮವೊಂದನ್ನು ಅರಿತುಕೊಂಡರೆ ಸಾಕು, ಅವರನ್ನು ಅರಿತಂತೆಯೇ ಸರಿ–ಎಂದೂ ಈ ಉಪಭೋಗಿ ವರ್ಗವು ತಿಳಿದುಕೊಂಡಿದೆ.

ಹಾಗಿದ್ದರೂ, ಉಪಭೋಗವಾದವು ಸಂಸ್ಕೃತಿಗೆ ವಿರೋಧಿಯೇನಲ್ಲ. ಉಪಭೋಗ ವಾದವೂ ಕೂಡ ಒಂದು ಜೀವನದರ್ಶನವೇ ಆಗಿರುವುದರಿಂದ, ಅದರಲ್ಲಿ ಸಂಸ್ಕೃತಿಗೂ ಒಂದು ಅವಕಾಶ ಇದೆ. ಆದರೆ ನಾವು ಇದುವರೆಗೂ ಸಂಸ್ಕೃತಿಯೆಂದು ತಿಳಿದುಕೊಂಡಿದ್ದ ಸಂಗತಿಗೆ ಅಲ್ಲಿ ತೆರಪಿಲ್ಲ– ಅಂದರೆ, ಸದಾ ಸ್ಪಂದನಶೀಲವಾದ, ಹತೋಟಿಗೆ ಸಿಗದ, ಅಸ್ಪಷ್ಟ.

* * *

ಲೇಖಕರ ಪರಿಚಯ :

ಆಶೀಶ್ ನಂದಿ ಅವರು ಬಿಹಾರ ರಾಜ್ಯದ ಭಾಗಲ್‌ಪೂರದಲ್ಲಿ ಮೇ ೧೩, ೧೯೩೭ರಲ್ಲಿ ಬಂಗಾಳಿ ಕ್ರಿಶ್ಚಿಯನ್ ಕುಟುಂಬದಲ್ಲಿ ಜನಿಸಿದರು. ಆಶೀಶ್ ನಂದಿಯವರಿಗೆ ಮೂರು ಜನ ಮಕ್ಕಳು ಹುಟ್ಟಿದ ನಂತರ ಕುಟುಂಬವನ್ನು ಕಲ್ಕತ್ತಾಗೆ ಸ್ಥಳಾಂತರಿಸಲಾಯಿತು. ನಂದಿಯವರ ತಾಯಿ ಕಲ್ಕತ್ತಾದ 'ಲಾ ಮಾರ್ಟಿನಿಯರ್ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆಗೆ ಸೇರಿಕೊಂಡರು. ನಾಗಪೂರದ ಅಲ್ಮಾಮೇಟರ್ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿಯನ್ನು ಪಡೆದುಕೊಂಡರು. 'ರೋಲ್ ಆಫ್ ಎ ವ್ಯಾಲ್ಯೂಡ್ ಆಬ್ಜೆಕ್ಟ್ ಇನ್ ಪರ್ಸನಾಲಿಟಿ: ಎ ಕ್ಲಿನಿಕಲ್ ಸೈಕಾಲಾಜಿಕಲ್ ಸ್ಟಡಿ ಆಫ್ ಮನಿ' ಎಂಬ ವಿಷಯ ಕುರಿತು ಮಹಾಪ್ರಬಂಧವನ್ನು ರಚಿಸಿ ಗುಜರಾತ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದರು. ದೆಹಲಿಯ ಅಭಿವೃದ್ಧಿಶೀಲ ಸಮಾಜಗಳ ಅಧ್ಯಯನ ಕೇಂದ್ರದಲ್ಲಿ (ಸಿ.ಎಸ್.ಡಿ.ಎಸ್.) ಯುವ ಅಧ್ಯಾಪಕರಾಗಿ ಸೇರಿಕೊಂಡ ನಂದಿಯವರು ನಂತರ ಅದರ ನಿರ್ದೇಶಕರಾಗಿ ನಿವೃತ್ತಿಯನ್ನು ಪಡೆದರು.

ರಾಜಕೀಯ ಮನಃಶಾಸ್ತ್ರಜ್ಞ, ಸಾಮಾಜಿಕ ಸಿದ್ಧಾಂತಿ ಹಾಗೂ ಶ್ರೇಷ್ಠ ವಿಮರ್ಶಕರು. ಯುರೋಪಿಯನ್ ವಸಾಹತುಶಾಹಿ, ಅಭಿವೃದ್ಧಿ, ಆಧುನಿಕತೆ, ಜಾತ್ಯತೀತತೆ, ವಿಜ್ಞಾನ, ತಂತ್ರಜ್ಞಾನ, ಪರಮಾಣುವಾದ ಕುರಿತು ಸೈದ್ಧಾಂತಿಕ ವಿಮರ್ಶೆಗಳ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಕ್ರಿ.ಶ. ೨೦೦೭ರಲ್ಲಿ ಜಪಾನಿನ ಫುಕುವೋಕಾ ಏಷ್ಯನ್ ಕಲ್ಚರ್ ಗ್ರ್ಯಾಂಡ್ ಪ್ರಶಸ್ತಿ, ೨೦೧೯ರಲ್ಲಿ ಜರ್ಮನಿಯ ಕೊಫ್ಲರ್ ಫೌಂಡೇಶನ್‌ನಿಂದ ಹ್ಯಾನ್ಸ್ ಕಿಲಿಯನ್ ಪ್ರಶಸ್ತಿ ಸೇರಿದಂತೆ ಹಲವಾರು ಪುರಸ್ಕಾರಗಳು ಇವರಿಗೆ ಸಂದಿವೆ. ಬೇರೆ ಬೇರೆ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಫೇಲೋ ಆಗಿದ್ದಾರೆ. ಇತ್ತೀಚೆಗೆ ೨೦೨೪ರಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ನೀಡಿದ್ದಾರೆ.

ಅನುವಾದಕರ ಪರಿಚಯ :

ಕೆ.ವಿ. ಅಕ್ಷರ ಅವರು ಕನ್ನಡ ಭಾಷೆಯ ನಾಟಕಕಾರರು, ನಿರ್ದೇಶಕರು, ಬರಹಗಾರರು, ಅನುವಾದಕರು, ಸಂಸ್ಕೃತಿ ಚಿಂತಕರು, ಓರ್ವ ಪ್ರಸಿದ್ಧ ರಂಗಕರ್ಮಿ, ಕವಿಯಾಗಿಯೂ ಪ್ರಸಿದ್ಧರಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೆಗ್ಗೋಡಿನಲ್ಲಿ ಎಪ್ರಿಲ್ ೨೪, ೧೯೬೦ರಲ್ಲಿ ಜನಿಸಿದರು. ತಂದೆ ಕೆ.ವಿ. ಸುಬ್ಬಣ್ಣ

ಕೂಡ ಪ್ರಸಿದ್ಧ ರಂಗಕರ್ಮಿ ಮತ್ತು ಸಾಹಿತಿಗಳು. ತಾಯಿ ಶೈಲಜಾ. ಇವರು ಪ್ರಾರಂಭಿಸಿದ ನಾಟಕ ಸಂಸ್ಥೆ ನೀನಾಸಂ (ನೀಲಕಂಠೇಶ್ವರ ನಾಟ್ಯ ಸಂಘ).

ಶ್ರೀಯುತರು ಪದವಿ ಶಿಕ್ಷಣವನ್ನು ಸಾಗರದಲ್ಲಿ ಪೂರೈಸಿ ನಂತರ ರಾಷ್ಟ್ರೀಯ ನಾಟಕ ಶಾಲೆಯನ್ನು ಸೇರಿದರು. ರಂಗ ಕಲೆಯ ಕುರಿತು ಪದವಿಯನ್ನು ಲಂಡನ್‌ನಲ್ಲಿ ಪೂರ್ಣಗೊಳಿಸಿ. ನಂತರ 'ನೀನಾಸಂ' ತಂಡದ ನಿರ್ದೇಶಕರಾಗಿ ತರಬೇತುದಾರರಾಗಿ, ಆಡಳಿತ ಅಧಿಕಾರಿಯಾಗಿ, ಅಕ್ಷರ ಪ್ರಕಾಶನದ ಮೂಲಕ ಮುದ್ರಣ ಕಾರ್ಯವನ್ನು ಆರಂಭಿಸಿದರು. ಐದು ನಾಟಕಗಳನ್ನು ಪ್ರಕಟಿಸಿದ್ದಾರೆ. ೫೦ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶನ ಮಾಡಿದ್ದಾರೆ. ೩೦ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

'ವಿಶ್ವಾತ್ಮಕ ದೇಶ ಭಾಷೆ', 'ಮಾವಿನ ಮರದಲ್ಲಿ ಬಾಳೆಯ ಹಣ್ಣು' 'ರಂಗಭೂಮಿ ಪೂರ್ವ ಪಶ್ಚಿಮ' 'ಪ್ರತಿಭೆಯ ಒಂದು ಪ್ರವಾಹ' 'ಭಾರತದ ಸಾಂಪ್ರದಾಯಕ ರಂಗಭೂಮಿಗೆ ಪಶ್ಚಿಮದ ಪ್ರತಿಕ್ರಿಯೆ' 'ರಂಗಭೂಮಿಯ ಕನಸುಗಳು' 'ನದಿಯ ಹರೆಯದ ಗಾಡುಗಳು' 'ರಂಗ ಪ್ರಪಂಚ', 'ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು'. ಇವು ಇವರ ಪ್ರಮುಖ ಪ್ರಕಟಣೆಗಳು. ಇವರು ರಂಗಭೂಮಿಗೆ ಸಲ್ಲಿಸಿದ ಸೇವೆ ಹಾಗೂ ಸಾಹಿತ್ಯ ಕೃತಿಗಳಿಗಾಗಿ 'ರಂಗ ಪ್ರಪಂಚ' ಪುಸ್ತಕ ಹಾಗೂ 'ಸಹ್ಯಾದ್ರಿ ಕಾಂಡ' ನಾಟಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ರಂಗಮನೆ ಪ್ರಶಸ್ತಿ ಸೇರಿದಂತೆ ಹಲವು ಸಂಘ–ಸಂಸ್ಥೆಗಳು ಪ್ರಶಸ್ತಿ–ಪುರಸ್ಕಾರಗಳನ್ನು ನೀಡಿ ಇವರನ್ನು ಗೌರವಿಸಿವೆ.

ಲೇಖನದ ಆಶಯ :

ಜಾಗತೀಕರಣದ ಪರಿಣಾಮದಿಂದ ಹುಟ್ಟಿಕೊಂಡಿದ್ದೇ ಉಪಭೋಗವಾದ. ಬಾಹ್ಯ ಜೀವನದ ಆಡಂಬರವೇ ಉಪಭೋಗ, ಶ್ರೀಮಂತ–ಧನಿಕರಿಗೆ ಮಾತ್ರ ಸಂಬಂಧಿಸಿದ್ದು ಸೀಮಿತಗೊಂಡಿದ್ದು ಇಂತಹ ಬದುಕು ಇಂದು ಬಡವನನ್ನು ಆಕ್ರಮಿಸಿಕೊಂಡಿದೆ. ವ್ಯಕ್ತಿಯ ಆಂತರಂಗಿಕ ಸೌಂದರ್ಯಕ್ಕಿಂತಲೂ ಬಾಹ್ಯ ಆಡಂಬರ ಬದುಕಿಗೆ ಹೆಚ್ಚು ಮನ್ನಣೆ ದೊರೆತಿದೆ. ನಮ್ಮ ಜೀವನಕ್ಕೆ ಅವಶ್ಯವಲ್ಲದ ವಸ್ತುಗಳ ಸಂಗ್ರಹದೆಡೆಗೆ ನಾವು ಬೆನ್ನುಹತ್ತಿದ್ದೇವೆ. ಐಷಾರಾಮಿ ಬದುಕು ನಮ್ಮದಾಗಲೆಂಬ ಹುಂಬು ಬಯಕೆ–ಆಸೆಗಳು ವ್ಯಕ್ತಿಗೆ ನೆಮ್ಮದಿ ಜೀವನ ನಡೆಸಲು ಬಿಡುತ್ತಿಲ್ಲ.

ಹೊಟ್ಟೆಗೆ ಇಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಬೇಕೆಂಬ ಹಂಬಲ ನಮ್ಮದಾದರೆ ಬದುಕನ್ನು ನಿರ್ಮಿಸಿಕೊಳ್ಳುವುದು ಹೇಗೆ?

ನಾನು–ನನ್ನದು–ನಮ್ಮವರು ಎಂಬ ಭಾವನೆಗಳೆಲ್ಲ ಕಣ್ಮರೆಯಾಗಿ ಏಕಾಂಗಿತನದ ಜೀವನಕ್ಕೆ ನಾವು ಹಾತೊರೆಯುತ್ತಿದ್ದೇವೆ. ಕೂಡು ಕುಟುಂಬಗಳು ವಿಭಕ್ತ ಕುಟುಂಬಗಳಾಗುತ್ತಿವೆ. ಸಂಪತ್ತನ್ನು ಗಳಿಸುವ ಭೋಗಜೀವನವನ್ನು ನಡೆಸುವ ಭರದಲ್ಲಿ ನಾವು ಸಾಗಿದ್ದೇವೆ. ಉಪಭೋಗ ಜೀವನ ದರ್ಶನವನ್ನು ನೀಡಲು ಸಾಧ್ಯವೇ? ಅವಶ್ಯವೇ? ಇಂತಹ ಮೌಲಿಕ ಪ್ರಶ್ನೆಗಳನ್ನು ಕೇಳುವ ಮೂಲಕ, ಪ್ರಸ್ತುತ ಲೇಖನದಲ್ಲಿ ಅಶೀಶ್ ನಂದಿ ಅವರ ಒಂದು ಗಂಭೀರ ಚರ್ಚೆ ಮಾಡಿದ್ದಾರೆ.

ಪ್ರಸ್ತುತ ಲೇಖನವನ್ನು 'ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು' ಎಂಬ ಕೆ.ವಿ. ಅಕ್ಷರ ಅವರ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

■■

ಘಟಕ–೩

ವೈಚಾರಿಕತೆ

ಘಟಕ–೩ : ವೈಚಾರಿಕತೆ

ಭಾರತ ದೇಶವು ವಿಭಿನ್ನ ಸಂಸ್ಕೃತಿ, ಸಂಪ್ರದಾಯ, ಧಾರ್ಮಿಕ ಚಿಂತನೆಯ ದಟ್ಟ ಪ್ರಭಾವಕ್ಕೆ ಒಳಗಾದ ದೇಶವಾಗಿದೆ. ಪಾರಂಪರಿಕವಾಗಿ ರೂಢಿಸಿಕೊಂಡ ಬಂದ ಮೌಢ್ಯ ಅರ್ಥರಹಿತವಾದ ಅಂಧಾನುಕರಣೆಯ ಜಾತಿ, ವರ್ಗ, ವರ್ಣ, ಲಿಂಗ ತಾರತಮ್ಯದಂತಹ ಸಾಮಾಜಿಕ ಸ್ಥಿತ್ಯಂತರದ ಕಟ್ಟಳೆಗಳಿದ್ದು, ಅವುಗಳನ್ನು ಕಳಚಿಹಾಕಲು ಹಲವಾರು ಮೇಧಾವಿಗಳು ತಮ್ಮ ಆಲೋಚನಾ ಲಹರಿಯಿಂದ ಹೊಸ ಹೊಸ ಶೋಧ, ಸಂಶೋಧನೆ ಆವಿಷ್ಕಾರಗಳ ಮೂಲಕ ನಾಗರೀಕ ಜಗತ್ತಿನ ಕಣ್ಣು ತೆರೆಸಿದ್ದಾರೆ. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸಿದ ಮಹಾಪುರುಷರಲ್ಲಿ ಬುದ್ಧ, ಬಸವ, ನಾರಾಯಣ ಗುರು, ಪೆರಿಯಾರ್ ಈ.ವಿ. ರಾಮಸ್ವಾಮಿ ನಾಯ್ಕರ್, ಮಹಾತ್ಮ ಗಾಂಧಿ, ಡಾ. ಅಂಬೇಡ್ಕರ್‌ರು ಪ್ರಮುಖರು.

ತೀಕ್ಷ್ಣ ಬುದ್ಧಿ, ವೈಚಾರಿಕ ತಿಳುವಳಿಕೆಯ ಕುರಿತು ಸ್ಥಿತಪ್ರಜ್ಞೆಯಿಂದ ಪಾರಂಪರಿಕವಾಗಿ ಬಂದುದೆಲ್ಲವನ್ನು ತಳ್ಳಿಹಾಕದೆ ನಮ್ಮ ಆಚರಣೆ ಬದುಕಿನ ಕ್ರಮಗಳಲ್ಲಿನ ಸತ್ಯಾಸತ್ಯತೆಗಳನ್ನು ಪರಾಮರ್ಶಿಸುವ ಚಿಂತನಾಕ್ರಮವೇ ವೈಚಾರಿಕತೆ. ಇಂದು ನಾವು ಹೊಸ ಜಗತ್ತಿಗೆ ತೀವ್ರ ಸ್ಪರ್ಧೆಯನ್ನು ನೀಡಿ ಬದುಕುವ ಸಂದರ್ಭದಲ್ಲಿ ಪ್ರಗತಿಪರ ಆಲೋಚನೆಗಳನ್ನು ರೂಢಿಸಿಕೊಳ್ಳುವದು ಅಗತ್ಯವಾಗಿದೆ. ಅಲ್ಲದೆ ಸಾಮರಸ್ಯದ ಬದುಕಿಗಾಗಿ ಸಾರ್ವಕಾಲಿಕ ಜೀವನ ಮೌಲ್ಯಗಳಾದ ಸತ್ಯ, ಶೀಲ, ಸಂಯಮ, ದಯೆ, ಕ್ಷಮೆ, ಪ್ರಾಮಾಣಿಕತೆಗಳನ್ನೂ ರೂಢಿಸಿಕೊಳ್ಳಬೇಕಾಗಿದೆ.

ವಿಜ್ಞಾನ–ತಂತ್ರಜ್ಞಾನದ ಆವಿಷ್ಕಾರಗಳಿಗೆ ನಮ್ಮನ್ನು ಒಗ್ಗಿಸಿಕೊಂಡು ಬದಲಾಗುತ್ತಿರುವ ಕಾಲಗತಿಗೆ ಹೊಂದಿಕೊಂಡು ಹದಭರಿತ ಜೀವನ ಸಾಗಿಸುವದರಲ್ಲಿಯೇ ನಾಗರೀಕ ಜೀವನದ ರಹಸ್ಯವಿದೆ.

ಈ ದೃಷ್ಟಿಯಿಂದ ಶ್ರೇಷ್ಠ ಸಮಾಜವಾದಿ ಪ್ರತಿಪಾದಕ ರಾಮ ಮನೋಹರ ಲೋಹಿಯಾ ಅವರ 'ಸೌಂದರ್ಯ ಮತ್ತು ಮೈಬಣ್ಣ' ಎಂಬ ವರ್ಣನಿರಪೇಕ್ಷ ಸಾಧಿಸುವ ವೈಚಾರಿಕ ಲೇಖನ, ಸಮಾಜದಲ್ಲಿಯ ವಾಸ್ತವಿಕತೆಯನ್ನು ಅನಾವರಣಗೊಳಿದ ಕನ್ನಡದ ಆಸ್ತಿಯೆಂದೇ ಹೆಸರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರ 'ವೆಂಕಟಿಗನ ಹೆಂಡತಿ' ಎಂಬ ಕಥೆ ಹಾಗೂ ವೈದೇಹಿಯವರ 'ಗುಲಾಬಿ' ಟಾಕೀಸ್' ಎಂಬ ಲೇಖನ ಪ್ರಸ್ತುತ ಸಮಾಜದ ಪ್ರತಿರೂಪ. ವಿದ್ಯಾರ್ಥಿಗಳ ವೈಚಾರಿಕ ಸಾಮರ್ಥ್ಯವನ್ನು ಹೆಚ್ಚಿಸಲು ಇವುಗಳನ್ನು ಅಭ್ಯಾಸಕ್ಕೆ ಅಳವಡಿಸಲಾಗಿದೆ.

೭. ಸೌಂದರ್ಯ ಮತ್ತು ಮೈಬಣ್ಣ

❖

ರಾಮ ಮನೋಹರ ಲೋಹಿಯಾ

ಮನುಷ್ಯನ ಮೈಬಣ್ಣ ಸೌಂದರ್ಯಕ್ಕೆ ಒಂದು ಪ್ರಮಾಣವಲ್ಲ ಅಥವಾ ಅದು ಮತ್ತಾವುದೇ ಬಗೆಯ ಶ್ರೇಷ್ಠತೆಯ ಪ್ರಮಾಣವೂ ಅಲ್ಲ. ಹಾಗಿದ್ದರೂ ಚಂದವಾದ ಮೈಬಣ್ಣ ಮತ್ತು ಸೌಂದರ್ಯ ಇವೆರಡೂ ಒಂದೇ ಎಂಬಂತೆ ನಾವು ತಿಳಿಯುತ್ತೇವೆ. ಯೂರೋಪಿನ ಬಿಳಿ ನೆಲದಲ್ಲಿ ಮಾತ್ರವಲ್ಲ. ಏಷ್ಯಾ ಅಥವಾ ಅಮೇರಿಕದ ಉಷ್ಣ ಹವೆಯಲ್ಲಿ ಕೂಡ ಇದೇ ಭಾವನೆ ಮತ್ತಷ್ಟು ಹೆಚ್ಚಾಗಿಯೇ ಇದೆ. ಸೌಂದರ್ಯ ಮೀಮಾಂಸೆಯ ಈ ಅಪಮಾರ್ಗ ವಿವರಣೆಗೆ ನಿಲುಕದಂಥದ್ದು.

ಕಪ್ಪು ಜನ ಯಾವಾಗಲೂ ಔದಾಸೀನ್ಯಕ್ಕೆ ಗುರಿಯಾಗಿದ್ದರು ಎನ್ನುವ ಹಾಗಿಲ್ಲ; (ಕನಿಷ್ಠ ಭಾರತದ ಮಟ್ಟಿಗಂತೂ ಇದು ಸತ್ಯ, ಸಂಸ್ಕೃತ ಸಾಹಿತ್ಯದಲ್ಲಿ 'ಶ್ಯಾಮಾ' (ಕಪ್ಪಾಗಿ ಇರುವವಳು) ಎಂದರೆ ನಿಜವಾಗಿ ಚಂದವಾಗಿರುವವಳೇ ಎಳೆಯವಳೂ ಚೆಲುವೆಯೂ (ಎಳೆತನ ಮತ್ತು ಚೆಲುವು ಎರಡೂ ಒಂದೇ ಎಂಬಂತೆ ಕಾಣುತ್ತವೆ ಅನೇಕ ಸಲ) ಆಗಿದ್ದರೆ ಸಾಕು, ಆಕೆ ವಾಸ್ತವವಾಗಿ ಕಪ್ಪು ಅಲ್ಲದಿದ್ದರೂ 'ಶ್ಯಾಮಾ' ಎನ್ನಿಸಿಕೊಳ್ಳುತ್ತಿದ್ದಳು. ಆಶ್ಚರ್ಯ ಮೂಕವಾದ ಮೇಘಕ್ಕೆ ತಾನು ಸಂದೇಶ ತಲುಪಿಸಬೇಕಾದ ಯಕ್ಷಸುಂದರಿಯನ್ನು ಗುರುತಿಸುವುದು ಹೇಗೆ ಎಂಬುದನ್ನು ಕಾಳಿದಾಸ ವರ್ಣಿಸುತ್ತಾನೆ. ತೆಳುಮೈ, ಕೆಂಪು ತುಂಬಿದ ತುಟಿಗಳು, ಚಕಿತ ಹರಿಣಿಯದೆನ್ನುವಂಥ ಕಣ್ಣುಗಳು, ನಿತಂಬಗಳ ಭಾರದಿಂದ ಮೆಲು ನಡೆ–ಇಂಥ ಸಲ್ಲಕ್ಷಣಗಳ 'ಶ್ಯಾಮಾ' ಆಕೆ ಎಂದು.

ಭಾರತೀಯ ಪುರಾಣದ ಮಹಾಸ್ತ್ರೀ ನೀಲವರ್ಣೆಯಾಗಿದ್ದಳು. ದ್ರೌಪದಿಗೆ ಕೃಷ್ಣೆಯೆಂದೂ ಹೆಸರಿತ್ತು. ಆಕೆಯ ಐವರು ಗಂಡಂದಿರು ಮತ್ತು ಇನ್ನೂ ಒಂದೆರಡು ರಹಸ್ಯಪ್ರೇಮದ ಸೂಚನೆ ಇವು ಗಂಡು ಅಹಮ್ಮಿಗೆ ಮೆಚ್ಚೆನಿಸದಿದ್ದುದರಿಂದ ಪ್ರಾಯಶಃ

ಆಕೆಯ ಬಗ್ಗೆ ಹೆಚ್ಚಿನ ಔದಾಸೀನ್ಯ ಬೆಳೆದುಬಿಟ್ಟಿದೆ. ಪತಿವ್ರತೆಯರೂ ಶ್ವೇತವರ್ಣೆಯರೂ ಆದ ಸೀತಾಸಾವಿತ್ರಿಯರು ಭಾರತೀಯ ಸ್ತ್ರೀತ್ವವನ್ನು ಪ್ರತಿನಿಧಿಸುತ್ತಾರೆ ಎಂಬ ಮಾತಿನಲ್ಲಿ ತಥ್ಯ ಇಲ್ಲದಿಲ್ಲ. ಆದರೆ ಇವರ ಕೂಡ ಹೀಗೆ ಪ್ರತಿನಿಧಿಸುವವರು ಇನ್ನೂ ಕೆಲವರಿದ್ದಾರೆ ಎಂಬುದನ್ನು ನಿರ್ಲಕ್ಷಿಸುವಲ್ಲಿ ವಿವೇಕ ಕುಂಟಿತು ಎನ್ನಿಸುತ್ತದೆ. ಭಾರತೀಯ ಪುರಾಣ ಕಲ್ಪನೆಯಲ್ಲಿ ಪರಿಮಳ ಸೂಸುವಂಥ ತುಂಬ ಚೆಲುವಾದ ಎರಡು ಪುಷ್ಪಗಳು ಕೃಷ್ಣ ಮತ್ತು ಕೃಷ್ಣೆ; ಒಬ್ಬ ಗಂಡಸು, ಇನ್ನೊಬ್ಬಳು ಹೆಂಗಸು, ಇಬ್ಬರೂ ಕಪ್ಪು.

ಇಡೀ ಪ್ರಪಂಚದ ಪುರಾಣಗಳಲ್ಲಾಗಲಿ ಇತಿಹಾಸದಲ್ಲಾಗಲಿ ಸಮಕಾಲೀನ ಪುರುಷರೆಲ್ಲರಿಗಿಂತಲೂ ಬುದ್ಧಿವಂತಳು ಕುಶಲಳೂ ಆಗಿರುವ ಒಬ್ಬಳೇ ಹೆಣ್ಣು ಪ್ರಾಯಶಃ ದ್ರೌಪದಿ. ಆಕೆಯನ್ನು ಕೃಷ್ಣನೊಡನೆ ಹೋಲಿಸಿ ನೋಡುವ ಪ್ರಶ್ನೆ ಏಳುವದಿಲ್ಲ. ಏಕೆಂದರೆ ಸದಾ ಕುಶಲಳೂ, ತಲಸ್ಪರ್ಶಿಯಾದ ಜ್ಞಾನವುಳ್ಳವಳೂ ಆದ ಈಕೆ ಕೃಷ್ಣನಿಗೆ ಆತ್ಮೀಯಳಾಗಿದ್ದಳು, ಜೊತೆಗಾರ್ತಿಯಾಗಿದ್ದಳು. ಆತನ ಲೀಲಾ ಜೀವನದಲ್ಲಿ ರಾಧೆ ಇದ್ದ ಹಾಗೆ ಕರ್ಮಜೀವನದಲ್ಲಿ ದ್ರೌಪದಿ ನಾಯಕಿಯಾಗಿದ್ದಳು, ಪ್ರೇರಣೆಯಾಗಿದ್ದಳು. ಮಹಾಭಾರತದಲ್ಲಿ ಕೃಷ್ಣ ಕೃಷ್ಣೆಯರು ಸಮಾನ ಯೋಗ್ಯತೆಯ ನಾಯಕದ್ವಯರು, ಘರ್ಷಣೆಯ ಛಾಯೆಯೂ ಕಾಣದ ಸಹವರ್ತಿಗಳು. ಇಂಥ ದ್ರೌಪದಿ ಕಪ್ಪು ಬಣ್ಣದವಳಾಗಿದ್ದಳು.

ಹಾಗಿದ್ದರೆ ಬಿಳಿ ಮೈಬಣ್ಣದವರು ಸುಂದರ ಅಲ್ಲ ಎನ್ನೋಣವೇ? ಹಾಗೆ ಹೇಳುವುದು ಕೂಡ ಮತ್ತೆ ಅಸತ್ಯವೇ ಆದೀತು. ಹೆಣ್ಣಿನ ಚೆಲುವನ್ನು ಹೊಗಳುವ ಒಂದು ಮನೋಹರ ಪದ್ಯ, ಕಪ್ಪು ಕೂದಲಿಂದ ಆವೃತವಾದ ಸೊಗಸುವ ಆಕೆಯ ಹಣೆಯನ್ನು ಅಷ್ಟಮೀ ಚಂದ್ರನಿಗೆ ಹೋಲಿಸುತ್ತದೆ. ಅಂಥ ಹಣೆ ನಿಜವಾಗಿಯೂ ಚಂದದ್ದಿರಲೇಬೇಕು ಮತ್ತು ಈ ಅತಿ ಕೋಮಲ ಪದ್ಯಸೂಕ್ತಿ ಕೂಡ ಸಂಸ್ಕೃತದ್ದೇ. ಪ್ರಾಚೀನ ಭಾರತ ಮೈಬಣ್ಣ ಮತ್ತು ಚೆಲುವುಗಳನ್ನು ತೊಡರಿಕೆಯಿಲ್ಲದೆ ಬೇರಾಗಿ ನೋಡಬಲ್ಲ ಎಚ್ಚರವನ್ನು ಪ್ರಾಯಶಃ ಸಾಧಿಸಿಕೊಂಡಿತ್ತು. ಮತ್ತು ಎಂಥಲ್ಲೇ ಇದ್ದ ಚೆಲುವನ್ನೂ ಕಾಣಬಲ್ಲ ಶಕ್ತಿಯನ್ನು ಸಿದ್ಧಿಸಿಕೊಂಡಿತ್ತು. ಊಹಿಸಲು ಬರುವಂತೆ ಕೆಲವು ಕಾಲಗಳಲ್ಲಾದರೂ ಈ ದೇಶ, ಬಣ್ಣದ ಕಪ್ಪು ಬಿಳುಪುಗಳ ಬಗ್ಗೆ ಪೂರ್ವಗ್ರಹಬಿಟ್ಟು, ಅದರ ತೊಡಕಿಲ್ಲದೆ ಸೌಂದರ್ಯವನ್ನು ತೂಗಿನೋಡಬಲ್ಲ ಶಕ್ತಿ ಪಡೆದುಕೊಂಡಿತ್ತು. ಮುಂದಿನ ಪೀಳಿಗೆಗಳು ಸೌಂದರ್ಯಾನುಭವದ ಈ ವಿಶೇಷ ಪ್ರಬುದ್ಧತೆಯನ್ನು ಹೇಗೊ ಪೋಲು ಮಾಡಿಕೊಂಡು ಬಿಟ್ಟವು.

ಪ್ರಪಂಚದಲ್ಲಿ ಜಾಹೀರಾಗುವ ಸಮಾಚಾರಗಳಿಂದ ಊಹಿಸುವುದಾದರೆ, ಸೌಂದರ್ಯ ಸ್ಪರ್ಧೆಗಳಂಥ ವಿಧಿಗಳಲ್ಲಿ ಎದೆ-ಟೊಂಕ-ತೊಡೆಗಳ ಅಳತೆಗಳ ಮುಂತಾದವೇ ಸೌಂದರ್ಯ ನಿರ್ಣಾಯಕಗಳೆನ್ನಿಸಿಕೊಳ್ಳುತ್ತವೆ. ಆದರೆ ಕಪ್ಪು ಚೆಲುವೆಯೊಬ್ಬಳು ಮಾತ್ರ ಈ ತನಕ ಆಯ್ಕೆಯಾಗಿದ್ದಿಲ್ಲ. ಸುಮಾರು ಅರ್ಧ ಶತಮಾನದಿಂದ ನಡೆದಿರಬಹುದಾದ ಈ ಸೌಂದರ್ಯ ಸ್ಪರ್ಧೆಗಳಲ್ಲಿ ಒಮ್ಮೆ ಮಾತ್ರ ಅದೂ ಇತ್ತೀಚೆಗೆ, ಜಪಾನಿನ ಒಬ್ಬಳು 'ವಿಶ್ವ ಸುಂದರಿ'ಯ ಪದವಿಯಲ್ಲಿ ಕಾಲಿಡುವುದಕ್ಕಾಯಿತು. ವಿಶ್ವ ಸುಂದರಿಯ ಕಿರೀಟವನ್ನು ತಲೆಗಿಡುವುದಕ್ಕೆ ಮುಂಚೆ, ಅದಕ್ಕೆ ಹಿಂದೆಯೂ ಜಪಾನಿನ ಹೆಣ್ಣು ಮಕ್ಕಳು ಸುಂದರಿಯರಾಗಿದ್ದಿರಬೇಕು; ಈಗ ಒಮ್ಮೆಗೇ ಅವರು ಹಿಂದೆಂದಿಗಿಂತ ಚೆಲುವೆಯರಾಗಿಬಿಟ್ಟಿದ್ದಾರೆ ಎಂಬುದು ಸರಿ ಇರಲಾರದು. ಇಲ್ಲಿ ಅವರು ಬದಲಾದದ್ದಲ್ಲ, ಬದಲಾದದ್ದು ಕಾಲಿಫೋರ್ನಿಯಾದ ಸೌಂದರ್ಯ ವಿಮರ್ಶಕರ ನೋಡುವ ಕಣ್ಣು, ಆಫ್ರಿಕಾ ಏಷ್ಯಾಗಳ ಕಪ್ಪು ಬಣ್ಣದ ಮೇಲೂ ಮುಂದೊಂದು ಕಾಲದಲ್ಲಿ ಜಾಹೀರಾಗುವ ಸಮಾಚಾರಗಳಿಂದ ಊಹಿಸುವುದಾದರೆ, ಇಂಥ ಸರದಿ ಸುಳಿಯಬಹುದು.

ಕೆಲವು ವಾರಗಳ ಮಾತಲ್ಲ, ಹತ್ತಿಪ್ಪತ್ತು ವರ್ಷಗಳೂ ಅಲ್ಲ. ಹತ್ತಾರು ಶತಮಾನಗಳಿಂದ ಈ ತನಕ ನೋಡುವವರ ಕಣ್ಣುಗಳು ಹೀಗೆ ಏಕಪ್ರಕಾರ ನಿಷ್ಠೆಯಿಂದ ಮೋಸಗೊಳಿಸುತ್ತ ಬಂದಿವೆ. ಏಕೆಂದರೆ ಕಣ್ಣುಗಳು ನೋಡುವುದು ಮನಸ್ಸು. ಅವಕ್ಕೆ ನೋಡಲು ಏನನ್ನು ಕಲಿಸಿದೆಯೋ ಅದನ್ನು ಹೆಣ್ಣಿನ ಮಾಂತ್ರಿಕತೆ ಮತ್ತು ಸೊಬಗಿನ ಕಥೆಗಳಿಗೆ ತವರು ನೆಲ ಅಸ್ಸಾಂ. ಹೊರಗಿಂದ ಅಲ್ಲಿಗೆ ಬರುವ ಹೊಸಬರೆಲ್ಲ ಅಲ್ಲಿ ಹೆಣ್ಣುಗಳ ಚೆಲುವನ್ನು ಆಶ್ಚರ್ಯದಿಂದ ಹೊಗಳುತ್ತಾರೆ. ಅದರಲ್ಲಿ ಬಹಳ ಜನ ಲೋಕಾರೂಢಿ ಹೊಗಳುವವರು. ಏನು ಹೇಳುತ್ತಿದ್ದೇವೆ ಎಂಬುದನ್ನು ತಾವಾದರೂ ಅರ್ಥ ಮಾಡಿಕೊಳ್ಳುವ ಗೋಜಿಗೆ ಹೋಗದವರು. ಉಳಿದವರಲ್ಲೂ, ಮೃದುವಾಗಿ ಕರಗಿ ಇಳಿಯುವಂಥ ಬಿಳಿ ಬಣ್ಣದ ಚೆಲುವೆಯರ ಸೊಬಗನ್ನು ಹೊಗಳುವವರು ಎಷ್ಟು ಜನವೋ ಮತ್ತು ಕಣ್ಣು ಸೆರೆಗೈಯುವ ಕಪ್ಪು ಬಣ್ಣದ ಸೊಬಗಿಯರ ಲೋಕೋತ್ತರ ರೂಪ ಶಿಲ್ಪಗಳನ್ನು ಹೊಗಳುವವರೆಷ್ಟೋ? ಯಾರು ಸೌಂದರ್ಯವನ್ನು ಬಣ್ಣದೊಡನೆ ತಳುಕುಹಾಕಿ ಗೊಂದಲಗೊಳಿಸಿಕೊಳ್ಳುತ್ತಾರೋ ಅವರು ಅಸ್ಸಾಮಿನ ನಿಜವಾದ ಚೆಲುವನ್ನು ತಿಳಿಯಲಾರರು. ಅಸ್ಸಾಮಿನ ಟೀ ತೋಟದ ಹೆಣ್ಣುಗಳು, ಅವರಲ್ಲಿ ಕೆಲವರಂತೂ ಮುಖ್ಯವಾಗಿ ಛತ್ತೀಸ್‌ಘರ್ ಮತ್ತು ಒರಿಯಾ ಕುಲದವರು-ಆಕಾರ ಸೌಷ್ಠವದಿಂದ ಮುಖದ ಕಾಂತಿಯಿಂದ ಕಣ್ಣನ್ನು ಸೆಳೆದು ಯಾವತ್ತಿಗೂ ಸೆರೆಹಿಡಿದಿಟ್ಟು ಬಿಡುತ್ತಾರೆ

ಮತ್ತು ಈ ಕೆಲಸಗಾರ ಹೆಣ್ಣುಗಳ ಮೈಬಣ್ಣ ಕಪ್ಪು. ಅನೇಕಾನೇಕರು ತಮ್ಮ ಬದುಕಿನುದ್ದಕ್ಕೂ, ಕಪ್ಪು ಬಿಳುಪುಗಳೆರಡರಲ್ಲೂ ಕಾಣಬಹುದಾದ ಚೆಲುವಿನ ಈ ಮರ್ಮವನ್ನು ಒಮ್ಮೆಯಾದರೂ ತಟಕ್ಕನೆ ಹಾಯದೆ ಉಳಿದು ಬಿಡುತ್ತಾರೆ. ಕೆಲವರು ತಾರುಣ್ಯ ಕಳೆದು ಈ ಸತ್ಯವನ್ನು ತಿಳಿಯುತ್ತಾರೆ. ಪುರಾಣ ಕೂಡ ತರುಣ ಕೃಷ್ಣನಿಗೆ ಶ್ವೇತ ಶುಭ್ರೆಯಾದ ರಾಧೆಯನ್ನು ಸಂಗಾತಿಯಾಗಿ ಮಾಡಿ, ಅನಂತರದ ನಡುವಯಸ್ಸಿನ ರಾಜಕಾರಣಪಟುವಿಗೆ ಕೃಷ್ಣೆಯಾದ ದ್ರೌಪದಿಯನ್ನು ಆತ್ಮೀಯಳನ್ನಾಗಿ ಮಾಡಿದೆ. ಯಾರೊಬ್ಬರೂ ವಯಸ್ಸು ಬೆಳೆದಂತೆ ಉತ್ತರಕ್ಕಿಂತ ದಕ್ಷಿಣವನ್ನೇ ಪ್ರೀತಿಸಲು ತೊಡಗುತ್ತಾರೆ ಕಪ್ಪು ಬಣ್ಣದ ಕಡೆ ಆಕರ್ಷಿತರಾಗುತ್ತಾರೆ.

ನಾನು ಹೇಳುತ್ತಿರುವುದು ಗಂಡಿನ ದೃಷ್ಟಿಕೋನದಿಂದ ಕಂಡ ಹೆಣ್ಣಿನ ಚೆಲುವಿನ ಬಗ್ಗೆ. ಇದರಿಂದ, ಹೆಣ್ಣು ಚಂದದಗೊಂಬೆಯಲ್ಲದೆ ಬೇರೆಯಲ್ಲ ಎಂಬುದು ನನ್ನ ಅಭಿಪ್ರಾಯ ಎಂದು ಗ್ರಹಿಸಬಾರದು. ಒಮ್ಮೆ ಅದೇ ನನ್ನ ದೃಷ್ಟಿಕೋನವಾಗಿದ್ದರೆ, ದ್ರೌಪದಿಯ ಸೌಂದರ್ಯವನ್ನು ಯಾವಳ ಅನುಪಮ ಜ್ಞಾನಶಕ್ತಿಯೇ ಆಕೆಯ ಸೌಂದರ್ಯದ ಮೂಲನಿಧಿಯೆಂಬಂತೆ ತೋರುತ್ತದೆಯೋ ಅಂಥ ಸೌಂದರ್ಯವನ್ನು ಕಂಡುಕೊಳ್ಳುವುದು ನನಗೆ ಅಶಕ್ಯವಾಗುತ್ತಿತ್ತು. ಅಥವಾ ಯಾರಲ್ಲಿ ದುಡಿಮೆ, ಸ್ವಾತಂತ್ರ್ಯ ಚೆಲುವು ಇವುಗಳನ್ನು ಪ್ರತ್ಯೇಕ ಎಂದು ವಿಂಗಡಿಸಿ ಹೇಳುವುದು ಸಾಧ್ಯವಿಲ್ಲವೆಂದು ತೋರುವುದೋ ಅಂಥ ಅಸ್ಸಾಮಿನ ಟೀ ಹೆಣ್ಣುಗಳ ಚೆಲುವೂ ನನಗೆ ಕಾಣಸಿಗುತ್ತಿರಲಿಲ್ಲ. ನಾನು ಹೆಣ್ಣಾಗಿದ್ದರೂ ಪ್ರಾಯಶಃ ಗಂಡಿನ ಚೆಲುವನ್ನು ಬಹುತೇಕ ಇದೇ ದೃಷ್ಟಿಯಿಂದ ನೋಡುತ್ತಿದ್ದೆ. ಆದರೆ ಮೊದಲನೆಯದಾಗಿ ಗಂಡಸು ಮೈಬಣ್ಣದ ಕಾರಣ ಹೆಂಗಸಿನಂತೆ ಆ ಮೊತ್ತದ ಕೀಳು ನೋಟಕ್ಕೆ ಗುರಿಯಾಗುವುದಿಲ್ಲ. ಎರಡನೆಯದಾಗಿ ಹೆಣ್ಣು ಗಂಡಿನ ಚೆಲುವನ್ನು ಹೇಗೆ ನೋಡುತ್ತಾಳೋ ಅಷ್ಟೇ ಮಟ್ಟಿಗೆ, ತನ್ನ ಚೆಲುವನ್ನೇ ಅಳೆದು ಅಂದಾಜು ಮಾಡಿಕೊಳ್ಳುವುದರಲ್ಲೂ ಅತ್ಯಾಸಕ್ತಿ ಹೊಂದಿಬಿಡುತ್ತಾಳೆ. ಇವೊತ್ತು ಚೆಲುವು ಎನ್ನುವದು ಹೆಣ್ಣಿಗೆ ಒಂದು ಗುಣ ಎನ್ನುವಂತಾಗಿದೆ. ಒಂದು ವೇಳೆ ಗಂಡಿಗೂ ಇಷ್ಟೇ ಮಟ್ಟಿಗೆ ಚೆಲುವು ಅಗತ್ಯವೆನ್ನುವಂತಾದರೆ ಆ ಕಾಲ ಬಂದೀತೆನ್ನುವುದು ನನಗೆ ಸಂದೇಹ. ಆಗಲೂ ಈ ತನಕ ಹೇಳಿದ್ದೆಲ್ಲ ಹೆಚ್ಚಲ್ಲದಿದ್ದರೆ ಇಷ್ಟೇ ನಿಜವಾಗಿಯಾದರೂ ಉಳಿಯುತ್ತದೆ.

ಮಧುರೆ ವೈಗೈ ನದಿ ದಂಡೆಯಲ್ಲಿನ ಮುಖ್ಯ ಪಟ್ಟಣ. ಒಂದು ಕಾಲದಲ್ಲಿ ಅದು ಪಾಂಡ್ಯರ ಮಹಾಸಾಮ್ರಾಜ್ಯವನ್ನು ಘೋಷಿಸಿತ್ತು. ಈ ಪಟ್ಟಣ 'ಮೀನಾಕ್ಷಿ'ಯ ಆವಾಸಸ್ಥಾನವಾಗಿದೆ. ಇಂಡಿಯಾದ ಮಹಾದೇವಾಲಯಗಳಲ್ಲಿ ಒಂದೆನ್ನಿಸಿದ ಇಲ್ಲಿನ ದೇವಾಲಯಕ್ಕೆ ತಾನೊಬ್ಬಳೇ ಅಧಿಕಾರಿ ಎಂದುಕೊಳ್ಳುವ ಮೀನಾಕ್ಷಿ', ತಾನೊಬ್ಬಳೇ

'ಮೀನಾಕ್ಷಿ' (ಮೀನಿನಂತೆ ಕಣ್ಣಿದ್ದವಳು) ಎಂದು ಹೇಳಿಕೊಳ್ಳುವ ಹಾಗಿಲ್ಲ. ವೈಗೈ ತೀರದ ಹೆಣ್ಣುಗಳೆಲ್ಲ ಮೀನಾಕ್ಷಿಯರಾಗಿ ಈ ಚೆಲುವನ್ನು ಹಂಚಿಕೊಂಡಿದ್ದಾರೆ. ಮೀನಾಕ್ಷಿ ಮತ್ತು ಹರಿಣಾಕ್ಷಿಗಳ ನಡುವೆ ಇದೇ ಹೆಚ್ಚು ಸುಂದರ ಎಂದು ಎಲ್ಲಾ ಕಾಲದಲ್ಲೂ ತೀರ್ಪು ಹೇಳುವುದು ಕಷ್ಟ. ಮಧ್ಯಪ್ರಾಂತ್ಯಗಳ ಕಣ್ಣುಗಳು ಇಂದ್ರಿಯಗಳ ಕೂಡ ಮಾತಾಡುವುದೇ ಕೊಂಚ ಹೆಚ್ಚು ದಕ್ಷಿಣವಾಹಿನಿಯ ಈ ಕಣ್ಣುಗಳು ಆ ಕೊಂಚ ಹೆಚ್ಚನ್ನು ಜೀವದ ಕೂಡ ಆಡುತ್ತವೆ. ಮೀನಾಕ್ಷಿಗಳಲ್ಲಿ ಸಹಾನುಭೂತಿ ಕರುಣೆಗಳ ತುಳುಕು ತುಸು ಹೆಚ್ಚು ಎಂದು ಕಾಣುತ್ತದೆ. ವೈಗೈ ತೀರದ ಮೀನಾಕ್ಷಿಯರ ಮೈ ಬಣ್ಣ ಕಪ್ಪು; ಭಾರತದ ನಿಜದಕ್ಷಿಣವೆನ್ನಬಹುದಾದ ತಮಿಳು ನಾಡಿನ ಹೆಣ್ಣುಗಳೂ ಕಪ್ಪು.

ತಮಿಳುನಾಡಿನಲ್ಲಿ ಹಿಂದಿ ಚಲನಚಿತ್ರಗಳು ಜನಪ್ರಿಯವಾಗಿರುವುದರ ಜೊತೆಗೆ ತಮಿಳು ಚಿತ್ರಗಳೂ ಸಾಕಷ್ಟು ತಯಾರು ಆಗುತ್ತವೆ. ಇಲ್ಲಿ ಒಂದು ಅಂಶ ತುಂಬ ಕುತೂಹಲದ್ದೆನ್ನಿಸುತ್ತದೆ. ಈ ತಮಿಳು ಚಿತ್ರಗಳಲ್ಲಿ ನಾಯಕರಾಗಿರುವ ನಟರು ಸಾಮಾನ್ಯವಾಗಿ ತಮಿಳರೇ. ಆದರೆ ನಾಯಕಿಯರಾಗಿರುವ ನಟಿಯರು ಮಾತ್ರ ಅಷ್ಟೇ ಸಾಮಾನ್ಯವಾಗಿ ಆಂಧ್ರರು, ಮಲಯಾಳಿಗಳು ಮುಂತಾದವರು. ಇದಕ್ಕೆ ಕಾರಣ ಅನೇಕ ಇದ್ದಾವು. ನನಗೆ ಹೊಳೆದ ಒಂದು ಕಾರಣವನ್ನು ನಾನಿಲ್ಲಿ ಸೂಚಿಸಬೇಕೆನ್ನಿಸುತ್ತದೆ. ಒಮ್ಮೆ ಒಂದು ಚಿತ್ರದಲ್ಲಿ ನನಗೆ ತಮಿಳಿನವಳೇ ಆದ ತಾಂಬರಂ ಲಲಿತಳನ್ನು ನೋಡುವ ಅವಕಾಶ ಒದಗಿತು. ಚಿತ್ರದಲ್ಲಿ ಆಕೆ ಒಂದು ಸಣ್ಣ ಪಾತ್ರ ವಹಿಸಿದ್ದಳು. ತಮಿಳು ಚಿತ್ರಗಳಲ್ಲಿ ತಮಿಳೇತರ ನಟಿಯರಿರುವ ಕಾರಣ ಏನಿದ್ದೀತು ಎಂಬ ಬಗ್ಗೆ ಸುಳಿವು ಸಿಕ್ಕೀತೆಂದು ನಾನು ತುಂಬ ಎಚ್ಚರದಿಂದ ನೋಡಿದೆ. ದಪ್ಪ ಬಣ್ಣ ಮತ್ತು ಪೌಡರ್ ಮುಚ್ಚಿದ ಆಕೆಯ ಮುಖ, ತೆಳು ಬಣ್ಣದ ಹೊರಗೆ ತನ್ನ ನಿಜ ಬಣ್ಣ ತೋರಿಸುತ್ತಿದ್ದ ಆಕೆಯ ತೋಳುಗಳಿಂದ ಬೇರೆಯೇ ಆಗಿ ಕಾಣಿಸುತ್ತಿತ್ತು. ತಾಂತ್ರಿಕತೆಯ ಮಾತು ಬೇರೆ, ಇರಲಿ. ಆದರೂ ಒಬ್ಬ ಹೆಣ್ಣಿನ ಯಾವ ಯಾವ ಭಾಗ ಚಿತ್ರದಲ್ಲಿ ಹೊರಕಾಣುತ್ತದೋ ಅವೆಲ್ಲವನ್ನೂ ಬಣ್ಣ ಮೆತ್ತಿ ಊನ ಕಾಣದಂತೆ ಮುಚ್ಚಿಡಲು ಸಾಧ್ಯವೇ ಎಂದು ಆಶ್ಚರ್ಯಪಟ್ಟರೆ ತಪ್ಪಿಲ್ಲ.

ನನಗೆ ಕಂಡಂತೆ ಆ ಚಿತ್ರದಲ್ಲಿ ಬಂದ ಯಾವುದೇ ಹೆಣ್ಣಿಗಿಂತ ಸುಂದರಿಯಲ್ಲ ಲಲಿತ. ವಾಸ್ತವವಾಗಿ ಆಕಾರಸೌಷ್ಠವ ಉಳ್ಳವಳೂ, ಮೀನಾಕ್ಷಿಯೂ ಆದ ನೀಲ ವರ್ಣೆಗೆ ಸಾಟಿಯೇ ಇಲ್ಲ. ಆದರೆ ಕಪ್ಪು ಬಣ್ಣದ ತಮಿಳರು ಮಾತ್ರ ಹಾಗೆ ಭಾವಿಸುವುದಿಲ್ಲ. ಸಹಜವಾಗಿ ತಮ್ಮ ಚಿತ್ರಗಳಲ್ಲಿ ತಮಗಿಂತ ತೆಳುಬಣ್ಣದ ಆಂಧ್ರರೋ ಮಲಿಯಾಳಿಗಳೋ ಬೇಕೆನ್ನುತ್ತಾರೆ. ಅಲ್ಲಿನ ಚಿತ್ರಪ್ರಪಂಚದ ಕಥೆ ಹೇಳಿ, ಈ ನನ್ನ

ಅನಿಸಿಕೆಯನ್ನು ಮಿತ್ರನೊಬ್ಬ ಸಮರ್ಥಿಸಿದ ಚಿತ್ರ ಪ್ರೇಕ್ಷಕರ ಸೌಂದರ್ಯ ವಿಮರ್ಶೆಗೆ ಗುರಿಯಾಗುವ ಮೊದಲು ಈ ಕಪ್ಪು ಹೆಣ್ಣುಗಳು ನಿರ್ಮಾಪಕನ ಅಥವಾ ನಿರ್ದೇಶಕನ ಕೈಯಲ್ಲಿ ಹಲವು ಬಗೆಯ ಪಾಡುಪಡಬೇಕಾಗುತ್ತದಂತೆ. ನಿಜ, ಪ್ರೇಕ್ಷಕರಿಗೇನೋ ಬಣ್ಣ ಸಾಲುತ್ತದೆ. ಆದರೆ ನಿರ್ಮಾಪಕ ತುಸು ಹತ್ತಿರದಿಂದಲೇ ನೋಡಬೇಕಲ್ಲ.

ಸೌಂದರ್ಯ ನಿರ್ಧಾರದ ಈ ಆಪಮಾರ್ಗಕ್ಕೆ ರಾಜಕಾರಣದ ಚೋದನೆಗಳೇ ಕಾರಣವೆನ್ನಬೇಕು. ಯೂರೋಪಿನ ಬಿಳಿಯಜನ ಸುಮಾರು ಮೂರು ಶತಮಾನಗಳಿಗಿಂತ ಹೆಚ್ಚು ಕಾಲದಿಂದ ಜಗತ್ತನ್ನೇ ಅಡಿಯಾಳಾಗಿಸಿಕೊಂಡಿದ್ದಾರೆ. ವರ್ಣೀಯರಿಗೆ ದೊರಕದೆ ಉಳಿದ ಸಂಪತ್ತನ್ನು ಅಧಿಕಾರಿಗಳನ್ನು ತಾವು ದೊರಕಿಸಿಕೊಂಡಿದ್ದಾರೆ. ಯುರೋಪಿನ ಈ ಬಿಳಿಯರಂತೆ ಆಫ್ರಿಕಾದ ನಿಗ್ರೊಗಳು ಜಗತ್ತನ್ನು ಆಳಿದ್ದರೆ ಹೆಣ್ಣಿನ ಸೌಂದರ್ಯದ ಲಕ್ಷಣಗಳೇ ಬೇರೆಯಾಗುತ್ತಿದ್ದವು. ನಿಸ್ಸಂದೇಹವಾಗಿ, ಆಗ ಕವಿಗಳೂ ಲೇಖಕರೂ ನಿಗ್ರೋ ಚರ್ಮದ ಮೃದುವಾದ ರೇಶಿಮೆ ನುಣುಪನ್ನೂ, ಸತ್ವೋದ್ರೇಕಗೊಳಿಸುವ ಅದರ ಸ್ಪರ್ಶವನ್ನೂ, ಕಣ್ತುಂಬುವ ಸೊಬಗನ್ನೂ ಆಡಿಕೊಳ್ಳುತ್ತಿದ್ದರು, ಹಾಡಿಕೊಳ್ಳುತ್ತಿದ್ದರು. ಅವರ ತುಟಿ ಮೂಗುಗಳಲ್ಲಿ ಮಾರ್ದವ ಕೋಮಲತೆಗಳನ್ನು ಕಾಣುವ ರಸಕಲ್ಪನೆಯ ಕಡೆಗೆ ಸೌಂದರ್ಯ ಪ್ರಜ್ಞೆ ಹೊರಳುತ್ತಿತ್ತು. ರಾಜಕಾರಣ ಸೌಂದರ್ಯ ಕಲ್ಪನೆಯನ್ನು ರೂಪಿಸಬಲ್ಲದು, ಅಧಿಕಾರ ಕೂಡ ಚಂದವಾಗಿಯೇ ಕಾಣಿಸುತ್ತದೆ. ಅದರಲ್ಲೂ ಎಣೆಯೇ ಇಲ್ಲದ ಅಧಿಕಾರ.

ಪ್ರಪಂಚ ವಿಸ್ತಾರದಲ್ಲೂ ಶ್ವೇತವರ್ಣಕ್ಕೆ ಯಥೇಚ್ಛ ಅಧಿಕಾರ ದೊರೆತಿರುವಾಗ ಇಂಡಿಯಾದಲ್ಲಿರುವ ಒಂದು ವಿಶಿಷ್ಟ ಸ್ಥಿತಿ ಅದಕ್ಕೆ ಒಳನೇಯ್ದೆ ಕೊಟ್ಟು ಬಲಪಡಿಸಿದೆ. ಈ ದೇಶದಲ್ಲಿ ಬಿಳಿ ಮೈಬಣ್ಣದವರು ಅಥವಾ ಕಪ್ಪು ಕಡಿಮೆ ಇರುವವರು ಸಾಮಾನ್ಯವಾಗಿ ಮೇಲು ಜಾತಿಗೆ ಸೇರಿದವರಾಗಿದ್ದರು. ಜಾತಿ ಎಂಬುದಕ್ಕೆ ಹಿಂದುಸ್ತಾನಿಯಲ್ಲಿ 'ವರ್ಣ' ಎನ್ನುತ್ತಾರೆ. ಅದರ ಅರ್ಥ ಪ್ರಾಯಶಃ ಬಣ್ಣ. ಋಗ್ವೇದದಲ್ಲಿ ಶ್ವೇತವರ್ಣವನ್ನೇ ಆರ್ಯ ಎಂದು ಕರೆದಿದೆ. ಇಂಡಿಯಾದ ನಿಸರ್ಗ ಭೂಮಿ ಆಕಾಶಗಳು ಉಜ್ವಲ ವರ್ಣದವು. ಆ ಹಿನ್ನೆಲೆಯ ಎದುರು, ಗರಿಗರಿಯಾಗಿ ಒತ್ತಿಡದೆ ಅಲೆಅಲೆಯಾಗಿರುವ ಅಚ್ಚ ಬಿಳಿಯ ಉಡುಪು ನೋಡುವ ಕಣ್ಣುಗಳಿಗೆ ಹರ್ಷ ಕೊಡುತ್ತದೆ, ಧರಿಸಿದವನ ಚೆಲುವನ್ನು ಹೆಚ್ಚಿಸಿ ತೋರಿಸುತ್ತದೆ. ಆದರೆ ಅದಕ್ಕೂ ಮೈಬಣ್ಣಕ್ಕೂ ಯಾವ ಸಂಬಂಧವೂ ಇಲ್ಲ. ಹಾಗಿದ್ದರೂ, ಇಡೀ ಪ್ರಪಂಚದಲ್ಲಿ ಬಿಳಿಯರ ಮೇಲಾಟ ಪರಂಪರೆಯನ್ನೇ ಸೃಷ್ಟಿಸಿರುವ ಕಾರಣ, ಅದಕ್ಕೆ ಒತ್ತು ಕೊಟ್ಟ ಇಂಡಿಯಾದ ಜಾತಿಪದ್ಧತಿಯ ವೈಶಿಷ್ಟ್ಯವೂ ಕಾರಣವಾಗಿ ಶ್ವೇತವರ್ಣಕ್ಕೆ

ನಿರೋಧ ಕಾಣದ ಪ್ರತಿಷ್ಠೆ ದೊರಕಿಬಿಟ್ಟಿದೆ. ಚರ್ಮದ ಬಣ್ಣವೇ ಚೆಲುವಿಕೆಯೆನ್ನಿಸಿಕೊಂಡುಬಿಟ್ಟಿದೆ, ಇನ್ನಾವುದೇ ಸಹಗುಣಗಳನ್ನೂ ಬೇಡದೆ.

ಹಾಗಿದ್ದರೆ, ಮೈಬಣ್ಣ ಚೆಲುವಿನ ಅಂಶಗಳಲ್ಲಿ ಒಂದಲ್ಲವೆ? ಹೊಸತು ಹೊಸತಾಗಿ ನೋಡುವವನನ್ನು ಚಕಿತಗೊಳಿಸುತ್ತಿರುವಾಗ ಬಿಳಿ ಮೈಬಣ್ಣವೆಲ್ಲವೂ ಕಣ್ಣಿಗೆ ತಂಪೆರೆವ ಹಾಲುಗಲ್ಲಿನಂತೆ ಕಾಣಿಸುತ್ತದೆ ಮತ್ತು ಹಾಗೆಯೇ ಹೊಸತರಲ್ಲಿ ಎಲ್ಲ ಕಪ್ಪು ಮೈಬಣ್ಣಗಳೂ ಕಂದಿರಲಿ, ಮಣ್ಣುಗಪ್ಪಿರಲಿ, ಗೋಧಿಗೆಂಪಿರಲಿ ಎಲ್ಲವೂ–ಕರೆಯಿಲ್ಲದ ಬಾಳೆಯ ತುಂಬನ್ನು ನೆನಪಿಸುತ್ತವೆ. ಹೊಸತನ ಕಳೆದರೆ ಮಾತ್ರ ಬಿಳುಪು ಹೊರಪೆದ್ದಂತೆ ಕಾಣುತ್ತದೆ. ಕಪ್ಪು ಏಕರಾಗವೆನ್ನಿಸುತ್ತದೆ; ಎರಡೂ ಬೇಸರ ತರುತ್ತವೆ. ನಿಶ್ಚಯವಾಗಿಯೂ ಮೈಬಣ್ಣ ಸೌಂದರ್ಯದ ನಿರ್ಧಾರವಲ್ಲ. ಚರ್ಮದ ಯಾವುದೇ ಗುಣ ಸೌಂದರ್ಯವೆನಿಸಿಕೊಳ್ಳುವುದಿದ್ದರೆ ಅದು, ಅದರ ರಚನೆಯಿಲ್ಲದೆ–ಮೃದುವಾದ ಬಿರುಕಿಲ್ಲದ ಏಕರೀತಿಯ ರಚನೆಯಲ್ಲಿ. ಅಂಥ ಚರ್ಮದ ಸೊಬಗು, ಅದರ ಅತ್ಯುತ್ತಮ ಮಾದರಿಯಲ್ಲಿ ಎಷ್ಟೋ ಸಲ ಚೈನಾದಲ್ಲೂ, ಆಫ್ರಿಕಾ, ಇಂಡಿಯಾ ಮತ್ತು ಇಂಥದೇ ದೇಶಗಳ ಎಣ್ಣೆಗಪ್ಪು ಗೋಧಿಗೆಂಪಿನ ಹೆಣ್ಣುಗಳಲ್ಲಿಯೂ ಕಾಣಸಿಗುತ್ತದೆ. ಈ ಪ್ರಸಂಗದಲ್ಲಿ ನಾನು ಪ್ರಾಯಃ ಸಮಸ್ಥಿತಿಯ ಇನ್ನೊಂದು ದಿಕ್ಕಿಗೆ ಸ್ವಲ್ಪ ಹೆಚ್ಚು ವಾದಿಸಿದ್ದಿರಬಹುದು. ಏನು ಮಾಡುವುದು, ಅನೇಕ ಸಲ ಹಾಗಾಗುತ್ತದೆ. ಹಳೆಯ ವಾಲಿಕೆಯನ್ನು ಸರಿಪಡಿಸುವಾಗ, ಕಪ್ಪು ಮೈಬಣ್ಣದವರಲ್ಲಿರುವಂತೆ, ಸ್ವಲ್ಪ ವಿರಳವಾಗಿಯಾದರೂ, ರಕ್ತದಲ್ಲಿ ಹುಚ್ಚು ಭೋರ್ಗರೆಸುವ ಅಂಥ ಚರ್ಮದ ಸೊಂಪು ಬಿಳಿಯರಲ್ಲೂ ಕಾಣಸಿಗುತ್ತದೆ.

ಮೈಬಣ್ಣದ ಕಪ್ಪು ಬಿಳುಪುಗಳ ನಡುವೆ ಆಯ್ಕೆ ಮಾಡಹೊರಡುವದರಲ್ಲಿ ಅರ್ಥವಿಲ್ಲ, ನಿಜ. ಆದರೂ ಕೆಲವು ಸ್ವಗತ ಮನೋಮುದ್ರೆಗಳನ್ನು ಇಲ್ಲಿ ಗುರುತಿಸಿಡಬಹುದು. ಸ್ತ್ರೀಯರೆಲ್ಲ ಚಂದವಾಗಿಯೇ ಇರುತ್ತಾರೆ. ಅದರಲ್ಲೂ ಕೆಲವರು ತುಂಬಾ ಚಂದವಾಗಿರುತ್ತಾರೆ. ತುಂಬ ಚಂದವಾಗಿರುವ ಬಿಳಿ ಮೈಬಣ್ಣದವರು ಬಿಚ್ಚುಮನಸ್ಸನ್ನೂ ಮುಗ್ಧತೆಯನ್ನೂ ಸೂಸುವಂತಿರುತ್ತಾರೆ. ಆಪ್ಯಾಯಮಾನವೆನ್ನಿಸುತ್ತಾರೆ. ಸ್ಫಟಿಕಜಲ ಅಲೆಯಾಡಿ ಜುಗುಳುವ ಹಳ್ಳದಂತೆ, ಅಥವಾ ಇನ್ನೂ ಸರಿಯಾಗಿ ಹೇಳುವುದಾದರೆ–ಪರ್ವತವಾಹಿನಿಯ ಪಾರದರ್ಶಕ ಆಳದಂತೆ, ಬೆಳುದಿಂಗಳಿನ ಲಘುರಾಶಿಯಂತೆ. ತುಂಬ ಚಂದವಾಗಿರುವ ಕಪ್ಪು ಮೈಬಣ್ಣದವರಾದರೋ ಜೀವನದ ಹಾಗೂ ಸೃಷ್ಟಿಯ ಗೂಢವನ್ನು ತೇಲಿಸಿದಂತಿರುತ್ತಾರೆ. ಮೀನುಗಳಿಗೆ ಕಣ್ಣು ಕೊಡುವ, ಹೆಣ್ಣಾನೆಗೆ ಮೆಲುನಡೆ ಕೊಡುವ, ಮುಸ್ಸಂಜೆಯ ರಹಸ್ಯಗರ್ಭಕ್ಕೆ ವಿಶ್ರಾಂತಿ ವಿಲಾಸ ಕೊಡುವ ಮರ್ಮವನ್ನು

ಅರಳಿಸಿದಂತಿರುತ್ತಾರೆ. ಆಳವನ್ನು ಆಹ್ವಾನಿಸುವಂತಿರುತ್ತಾರೆ.

ಸೌಂದರ್ಯ ಮತ್ತು ಲೈಂಗಿಕತೆ ಒಂದಕ್ಕೊಂದು ಹತ್ತಿರ ಸಂಬಂಧಿಸಿದವು. ಕಪ್ಪು ಹೆಣ್ಣುಗಳು ವಾಸ್ತವವಾಗಿ ಯಜಮಾನಿಕೆ ಮೆರೆವ ಗಂಡುಗಳ ಲೈಂಗಿಕತೆಗೆ ಆಕರ್ಷಕವಾಗಿವೆ. ಆದರೆ ಇಂಥ ಆಕರ್ಷಣೆಯ ಕೇಂದ್ರಗಳು ನೈಟ್ ಕ್ಲಬ್‌ಗಳು ಇಲ್ಲವೆ ಮುಚ್ಚಿನ ಮರೆಗಳು ಇಂಡಿಯಾದ ವಿಷಯಕ್ಕೆ ಬಂದರೆ ಇಲ್ಲಿ ಜಾತಿಪದ್ಧತಿ ಮತ್ತೂ ಹೆಚ್ಚಿನ ಆತಂಕಗಳನ್ನು ನಿರ್ಮಿಸಿಬಿಟ್ಟಿದೆ. ಇಲ್ಲಿ ಮೇಲು ಜಾತಿ ಹಾಗೂ ಕೀಳು ಜಾತಿಯ ಗಂಡು ಹೆಣ್ಣುಗಳ ನಡುವೆ ಬದುಕಿನ, ಭಾಷೆಯ, ನಡವಳಿಕೆಯ ರೀತಿಗಳೇ ಬೇರೆಯಾಗಿವೆ. ಅಷ್ಟೇ ಅಲ್ಲ, ಈ ರೀತಿಗಳೆಲ್ಲ ಬೇರೆತನವನ್ನು ವಿಧಿಸುವುದಕ್ಕೇ ರೂಢಿಸಿಕೊಂಡವಾಗಿವೆ. ಕೆಳಜಾತಿಯ ಕಪ್ಪು ಹೆಣ್ಣು ತನ್ನ ಪ್ರೇಮದಲ್ಲಿ ಎಷ್ಟೇ ಪ್ರಾಮಾಣಿಕವಾಗಿದ್ದರೂ ಪ್ರಾಯಶಃ ಮೇಲುಜಾತಿಯವರ ಪ್ರೇಮತಂತ್ರಗಳನ್ನು ಸವಿಯಲಾರಳು, ರೂಢಿಸಿಕೊಳ್ಳಲಾರಳು. ಏನೆಂದರೂ ಲೈಂಗಿಕತೆಯಿಲ್ಲದೆ ಪ್ರೇಮವಿಲ್ಲ. ಪ್ರೇಮವಿಲ್ಲದೆ ಸೌಂದರ್ಯವಿಲ್ಲ. ಪ್ರೇಮಿಸುತ್ತಿರುವ, ಪ್ರೇಮಿಸಿಕೊಳ್ಳುತ್ತಿರುವ ಹೆಣ್ಣು ಕಪ್ಪಿರಲಿ, ಬಿಳುಪಿರಲಿ, ನಕ್ಷತ್ರ ತುಂಬಿ ಗೊಂಚಲು ಮಿನುಗುವ ಆಕಾಶದ ಚೆಲುವನ್ನು ಬೆಳಗುತ್ತಾರೆ. ಯಾರು ಸೌಂದರ್ಯವನ್ನು ಕುರಿತು ಆಡುತ್ತಾರೋ ಹಾಡುತ್ತಾರೋ ಅಂಥವರೇ ಮುಖ್ಯವಾಗಿ, ಕಳೆದ ಕೆಲವು ಶತಮಾನಗಳಲ್ಲಿ, ಕಪ್ಪು ಹೆಣ್ಣುಗಳನ್ನು ಅಂಥ ಪ್ರೇಮದಿಂದ ವಂಚಿಸಿಟ್ಟಿದ್ದಾರೆ., ಬದುಕಿನ ರೀತಿ ವಿಧವಿಧವಾಗಿರುವುದು, ಇಡೀ ಜಗತ್ತಿನಲ್ಲೇ ಕಾಲಕ್ರಮದಲ್ಲಿ ಬೆಳೆದು ಬಂದ ಕಪ್ಪು ಬಿಳುಪುಗಳ ಏರುಪೇರು, ಇಂಡಿಯಾದಲ್ಲಿನ ಜಾತಿಪದ್ಧತಿಯ ಅನುಷ್ಠಾನ ಇವೆಲ್ಲ ಶ್ವೇತ–ವರ್ಣೀಯರುಗಳ ನಡುವೆ ಅಚಲ ಆತಂಕಗಳನ್ನು ಕಟ್ಟಿ ನಿಲ್ಲಿಸಿವೆ. ಈ ಆತಂಕಗಳೆಲ್ಲ ಕಳೆದು ಹೋಗಲು ಕಾಲ ಬೇಕಾದೀತು. ಆದರೆ ಈ ಆತಂಕಗಳೆಲ್ಲ ತೀರ ಮಹತ್ತಾದ್ದು ಒಂದು ದೊಡ್ಡ ತಪ್ಪಿನ ಮೇಲೆ ನಿಂತಿದೆ, ಮೈಬಣ್ಣವನ್ನೇ ಚೆಲುವೆಂದು ಭ್ರಮಿಸುವ ತಪ್ಪಿನ ಮೇಲೆ.

ಜಗತ್ತಿನ ಮಹತ್ತರ ದಬ್ಬಾಳಿಕೆಯಲ್ಲಿ ವರ್ಣಹಿಂಸೆ ಒಂದಾಗಿದೆ. ಸಾಮಾನ್ಯವಾಗಿ ಹೆಣ್ಣು ಜಾತಿಯೇ ದಬ್ಬಾಳಿಕೆಗೆ ತುತ್ತಾಗಿದೆ. ಸ್ತ್ರೀವರ್ಗದ ಪ್ರತಿಭೆ ಅಥವಾ ಜನ್ಮ ಶಕ್ತಿಗೆ ತಕ್ಕುದಾದ ಅಭಿವ್ಯಕ್ತಿ ದೊರಕಿಸಿಕೊಡದೆ ಮಾನವಕುಲ ಅಷ್ಟುಮಟ್ಟಿಗೆ ದರಿದ್ರವಾಗಿಯೇ ಉಳಿದಿದೆ. ಸಂಖ್ಯೆಯಲ್ಲಿ ಬಹಳ ಹೆಚ್ಚಾಗಿರುವ ಕಪ್ಪು ವರ್ಣೀಯ ಸ್ತ್ರೀಯರಂತೂ ಇನ್ನೂ ಹೆಚ್ಚಿನ ದಬ್ಬಾಳಿಕೆಗೆ ಸಿಕ್ಕಿದ್ದಾರೆ. ಕಾತರ ಮತ್ತು ಕೀಳರಿಮೆಗಳನ್ನು ತಿನ್ನಿಸುತ್ತಲೇ ಅವರನ್ನು ಸಾಕುತ್ತಿದ್ದೇವೆ. ಒಬ್ಬ ಕಪ್ಪು ಹುಡುಗಿ ಆಕೆ ಸಣ್ಣ ಮಗುವಾಗಿದ್ದರೂ ಕೂಡ, ತನ್ನ ಕುಟಂಬದ ಬಿಳಿ ಹುಡುಗಿಯ ತಂಗಿಯೇ ಆಗಿದ್ದರೂ ಕೂಡ ಔದಾಸೀನಕ್ಕೆ ಕೀಳುನೋಟಕ್ಕೆ, ಕೀಳದರ್ಜೆಗೆ

ಮೀಸಲಿಟ್ಟ ಅಪಮನ್ನಣೆಗಳಿಗೆ ತನ್ನನ್ನು ಸದಾ ಒಪ್ಪಿಸಿಕೊಳ್ಳಬೇಕು. ಅದಕ್ಕೆ ತನ್ನನ್ನು ರೂಢಿಸಿಕೊಳ್ಳಬೇಕು. ಯಾವುದೇ ಗಂಡುಮಗುವಿನೊಡನೆ ಮತ್ತಾವುದೇ ಹೆಣ್ಣು ಮಗುವನ್ನು ಹೋಲಿಸಿದರೂ ಕಾಣುತ್ತದೆ, ಗಂಡಿನಂತೆ ಹೆಣ್ಣು ತನ್ನ ಸಹಜ ಬೆಳವಣಿಗೆಗೆ ಬೇಕಾದ ಅವಕಾಶವನ್ನು ಪಡೆಯದೇ ಹೋಗುತ್ತಾಳೆ ಎಂಬುದು. ಇದಕ್ಕೂ ಹೆಚ್ಚೆಂದರೆ ಹುಡುಗಿ ಕಪ್ಪಾಗಿದ್ದರಂತೂ ಮತ್ತೂ ಹೆಚ್ಚಿನ ಅಪಮಾನಕ್ಕೆ ಗುರಿಯಾಗುತ್ತಾಳೆ ಕೀಳ್ತನದ ಭಾರಕ್ಕೆ ನಲುಗುತ್ತಾಳೆ ಕಪ್ಪುಗಂಡಿಗೆ ಕೂಡ ಈ ಭಾರ ಇಲ್ಲವೆನ್ನುವಂತಿಲ್ಲ ಹೆಣ್ಣಿನಷ್ಟು ಅಲ್ಲದಿದ್ದರೂ.

ಮೈಬಣ್ಣವನ್ನು ತಿಳಿಗೊಳಿಸುತ್ತವೆ ಎನ್ನುವಂಥ ಸೋಪುಗಳು, ಕ್ರೀಮುಗಳು, ಲೋಷನ್ನುಗಳು ಮತ್ತು ಈಚೆಗೆ ಇಂಜೆಕ್ಷನ್‌ಗಳು ಇವೆಲ್ಲ ವರ್ಣೀಯ ಯುವಕ ಯುವತಿಯರ ಹೆಚ್ಚಿನ ಬೇಡಿಕೆಯನ್ನು ಸೆಳೆಯುತ್ತಿವೆ. ಅಧಿಕ ಸಂಖ್ಯೆಯ ಕಪ್ಪು ಜನ ಅಲ್ಪಸಂಖ್ಯಾತ ಬಿಳಿಯರೊಡನೆ, ಅವರ ಆಡಳಿತವನ್ನೇ ಹೊತ್ತು ಬದುಕುತ್ತಿರುವ ದಕ್ಷಿಣ ಅಮೇರಿಕದಂಥ ದೇಶದಲ್ಲಿ, ಸರ್ವಾನುಮತಿ ಪಡೆದ ಪ್ರಬಲಗೊಂಡ ವರ್ಣಹಿಂಸೆ ಉತ್ಕಟವಾಗಿ ಕಾಣಸಿಗುತ್ತದೆ. ಸಮಗ್ರ ಪ್ರಪಂಚವೇ ಈ ವರ್ಣಹಿಂಸೆಯನ್ನು ಅನುಭವಿಸುತ್ತಿದೆ. ಯಜಮಾನರಿಗಿಂತ ಗುಲಾಮರೇ ಮುಂದಾಗಿ, ಅವರಿಗಿಂತ ಹೆಚ್ಚು ನಿಷ್ಠೆ ತಾಳಿ, ರೂಢಿ ಮುಂದುವರಿಸುತ್ತಿರುವ ಕಾರಣ ಈ ಹಿಂಸೆ ಮತ್ತೂ ಅಸಹ್ಯವಾಗಿದೆ.

ಯಾವುದೇ ಮೌಲಿಕವಾದ ಒಂದು ತಪ್ಪನ್ನು ಆಧಾರ ಮಾಡಿಕೊಂಡು ಹೆಚ್ಚು ಭಾಗ ಹಿಂಸೆಗಳು ಬೆಳೆದು ಹರಡಿಕೊಳ್ಳುತ್ತವೆ. ಎಲ್ಲಕ್ಕಿಂತ ದೊಡ್ಡದೂ ಹೆಚ್ಚು ವ್ಯಾಪಿಸಿದ್ದೂ ಆದ ಈ ವರ್ಣ ಹಿಂಸೆ ಕೂಡ ಹಾಗೆಯೇ. ಸಮೃದ್ಧ ಸಂಖ್ಯೆಯುಳ್ಳ ಈ ವರ್ಣೀಯ ಮನುಷ್ಯ ವರ್ಗ ಬಿಳಿಯ ವಿರಳರು ಹಾಕಿಕೊಟ್ಟ ಸೌಂದರ್ಯ ಸೂತ್ರಗಳನ್ನು ಹೇಗೆ ಆತುರಗೊಂಡು ಸ್ವಸಂತೋಷದಿಂದ ಒಪ್ಪಿ ಕುಳಿತುಬಿಟ್ಟಿತ್ತು ಎಂಬುದು ಪ್ರಾಯಶಃ ಎಲ್ಲದಕ್ಕಿಂತ ದೊಡ್ಡ ಆಶ್ಚರ್ಯ. ಇದನ್ನು ವಿಶ್ಲೇಷಿಸಿ ನೋಡಿದರೆ, ಈ ಹಿಂಸೆ ಮತ್ತು ಹಿಂಸೆಯ ಬೆಳವಣಿಗೆಗೆ ವಾತಾವರಣ ಹದಗೊಳ್ಳುವ ಬಗೆ ಇವು ಶ್ರೀಮಂತರು ಬಡವರ ಮೇಲೆ, ಮೇಲುಜಾತಿ, ಕೀಳುಜಾತಿಯ ಮೇಲೆ, ಪರಭಾಷೆಯಾಡುವ ಜನ ಸ್ವಭಾಷೆಯಾಡುವವರ ಮೇಲೆ ಯಜಮಾನಿಕೆ ಹೇರುವಾಗ ಕಾಣುವಂಥದೇ ಆಗಿದೆ. ಕಪ್ಪು ಬಿಳಿಯದರ ನಡುವಿನ ಅಂತರದಲ್ಲಿ ಶ್ರೀಮಂತಿಕೆ ಮತ್ತು ಬಡತನಗಳ ನಡುವಣ ಅಂತರದಲ್ಲಿ ಹೇಗೋ ಹಾಗೆಯೇ ಅಸಂಖ್ಯಾತ ತರಗತಿ ಭೇದಗಳಿವೆ. ಕರಿಯಜನ ಎನ್ನುವವರಲ್ಲಿ ಇದ್ದಲಿನಂತೆ ಅಪ್ಪಟ ಕಪ್ಪು ಇರಬಹುದು, ಮುತ್ತಿನಂತೆ ತೆಳುಹಳದಿ ಇರಬಹುದು ಮತ್ತು ಮಧ್ಯೆ ಗೋಧಿ

ಗೆಂಪು, ಎಣ್ಣೆಗೆಂಪು ಕಂದು, ಕೌಲ ಮುಂತಾಗಿ ಸಹಸ್ರಾರು ವರ್ಣಭೇದಗಳಿರಬಹುದು. ಇದರಿಂದ ಸೌಂದರ್ಯ ನಿರ್ಧಾರದ ಯಜಮಾನಿಕೆ ವಹಿಸುವ ಬಿಳಿಯರಿಗೆ ವರ್ಣೀಯರ ಗುಂಪಿನಿಂದಲೇ ಹೇರಳ ಅನುಯಾಯಿಗಳು ದೊರಕುತ್ತಾರೆ, ಸುಲಭವಾಗಿ ಕರಿಯರು ಮತ್ತು ಬಿಳಿಯರ ನಡುವಣ ದೂರದಲ್ಲಿ ಶ್ರೀಮಂತಿಕೆ ಹಾಗೂ ಬಡತನಗಳ ನಡುವಣ ದೂರದಲ್ಲಿರುವಂತೆಯೇ ಅಸಂಖ್ಯಾತ ಮೆಟ್ಟಲುಗಳಿವೆ. ಇದರಿಂದ, ಸೂಕ್ತವಾದ ಒಂದು ಸೌಂದರ್ಯಮಟ್ಟವನ್ನು ಸ್ಥಾಪಿಸುವುದು ಅತಿ ಕಠಿಣವೆನ್ನಿಸಿದೆ, ಸೂಕ್ತವಾದ ಒಂದು ಆರ್ಥಿಕ ಮಟ್ಟವನ್ನೋ ನೈತಿಕ ಮಟ್ಟವನ್ನೋ ಸ್ಥಾಪಿಸುವುದು ಹೇಗೆ ಕಠಿಣವೋ ಹಾಗೆಯೇ.

ಹಾಗಿದ್ದರೆ ಕಪ್ಪು ಬಣ್ಣದ ಸುಂದರ ಸ್ತ್ರೀಯರು ತಮ್ಮ ಹೆಚ್ಚಳವನ್ನು ಅಥವಾ ಕನಿಷ್ಠ ತಮ್ಮ ಸಮಾನತೆಯ ಹಕ್ಕನ್ನು ಸ್ಥಾಪಿಸಿಕೊಳ್ಳುವುದು ಯಾವಾಗ? ಅಥವಾ ಪ್ರಾಯಶಃ ಬೇರೆ ಕ್ಷೇತ್ರಗಳಲ್ಲಿ ಆಗುವಂತೆ ಇಲ್ಲಿಯೂ ಕ್ರಾಂತಿಯ ದಾರಿಯನ್ನು ಹಿಂಸಕರೇ ರೂಪಿಸಿಕೊಡುತ್ತಾರೋ ಏನೋ, ಸೌಂದರ್ಯವನ್ನು ಅಳೆಯುವಲ್ಲಿ ಮತ್ತು ಮೈಬಣ್ಣ ಹಾಗೂ ಸೌಂದರ್ಯಗಳ ಅಂತರವನ್ನು ಗುರುತಿಸುವಲ್ಲಿ ರಸಪ್ರಜ್ಞೆಯ ಒಂದು ಹೊಸ ಕ್ರಾಂತಿಯೇ ನಡೆಯಬೇಕು. ಅಂಥ ಕ್ರಾಂತಿ ಮಾತ್ರ ಇಡೀ ಪ್ರಪಂಚದ ಮೇಲೆ ಸ್ವಾತಂತ್ರ್ಯದ ಹೊಸ ಗಾಳಿಯನ್ನೇ ತೂರಿಬಿಡಬಲ್ಲದು, ಯಾವುದೇ ರಾಜಕೀಯ ಅಥವಾ ಆರ್ಥಿಕ ಕ್ರಾಂತಿಗೆ ಸರಿಸಾಟಿಯಾಗಿ.

* * *

ಲೇಖಕರ ಪರಿಚಯ:

ರಾಮಮನೋಹರ ಲೋಹಿಯಾ ಉತ್ತರ ಪ್ರದೇಶದ ಅಂದಿನ ಫೈಜಾಬಾದ್ ಜಿಲ್ಲೆಯ ಅಕ್ಬರ್‌ಪುರದಲ್ಲಿ ೨೩–೦೩–೧೯೧೦ರಂದು ಹುಟ್ಟಿದರು. ಈಗ ಅಕ್ಬರ್‌ಪುರ ಪ್ರತ್ಯೇಕ ಜಿಲ್ಲೆಯಾಗಿದೆ. ಇವರ ತಂದೆ ಹೀರಾಲಾಲ್ ಮತ್ತು ತಾಯಿ ಚಂದಾ. ಲೋಹಿಯಾ ಅವರು 'ಎಕನಾಮಿಕ್ಸ್ ಆಫ್ ಸಾಲ್ಟ್ ಸತ್ಯಾಗ್ರಹ' ಎಂಬ ವಿಷಯದ ಮೇಲೆ ಜರ್ಮನಿಯ ಬರ್ಲಿನ್‌ನ ಹಂಬೋಲ್ಟ್ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಮಾಡಿ ಪಿಎಚ್.ಡಿ. ಪದವಿ ಪಡೆದರು. ಭಾರತದ ದೊಡ್ಡ ಚಿಂತಕರಲ್ಲಿ ಒಬ್ಬರಾದ ಲೋಹಿಯಾ ಅವರು ಹಿಂದಿ ಹಾಗೂ ಇಂಗ್ಲಿಷ್‌ನಲ್ಲಿ ಬರೆದ ಮುಖ್ಯ ಕೃತಿಗಳು ಭಾರತದ ಅನೇಕ ಭಾಷೆಗಳಿಗೆ ಅನುವಾದಗೊಂಡಿವೆ. 'ದಿ ಕ್ಯಾಸ್ಟ್ ಸಿಸ್ಟಮ್', ಇಂಟರ್‌ವೆಲ್ ಡ್ಯೂರಿಂಗ್ ಪಾಲಿಟಿಕ್ಸ್, ಮಾರ್ಕ್ಸ್, ಗಾಂಧಿ ಆಂಡ್ ಸೋಷಲಿಸಂ, ಲಾಂಗ್ವೇಜ್, ವಿಲ್ ಟು ಪವರ್ – ಅವರು ಬರೆದ ಕೆಲವು ಇಂಗ್ಲಿಷ್‌ನ ಮುಖ್ಯ

ಕೃತಿಗಳು. 'ಜಾತಿ ಪ್ರಥಾ', ಸಮಾಜವಾದಿ 'ಆಂದೋಲನ್ ಕಾ ಇತಿಹಾಸ್', 'ಲೋಕಸಭಾ ಮೆ ಲೋಹಿಯಾ' (ಸಂಪುಟಗಳು) ಲೋಹಿಯಾರ ಕೆಲವು ಹಿಂದಿ ಕೃತಿಗಳು.

ಅನುವಾದಕರ ಪರಿಚಯ :

ಕೆ.ವಿ. ಸುಬ್ಬಣ್ಣ ಅವರು ಪ್ರಸಿದ್ಧ ರಂಗಕರ್ಮಿ ಮತ್ತು ಸಾಹಿತಿಗಳು. ಬಹುಮುಖ ಪ್ರತಿಭೆಯುಳ್ಳ ಇವರು ರಂಗಭೂಮಿ, ಸಿನಿಮಾ, ಸಂಗೀತ, ಸಾಹಿತ್ಯ, ಕಲೆಗಳ ಕುರಿತು ಆಳವಾಗಿ ಅಧ್ಯಯನಗೈದವರು. ಕುಂಟಗೋಡು ವಿಭೂತಿ ಸುಬ್ಬಣ್ಣ ಎಂಬುದು ಇವರ ಪೂರ್ಣ ಹೆಸರು. ೧೯೩೨ ಫೆಬ್ರುವರಿ ೨೦ ರಂದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಹೆಗ್ಗೋಡನಲ್ಲಿ ಜನಿಸಿದರು. ೧೯೫೨ರಲ್ಲಿ ಬಿ.ಎ. ಆನರ್ಸ್ ಪದವಿಯನ್ನು ಪ್ರಥಮ ರ್‍ಯಾಂಕ್‌ನೊಂದಿಗೆ ಮೈಸೂರು ವಿಶ್ವವಿದ್ಯಾಲಯದಿಂದ ಪಡೆದುಕೊಂಡರು. ಸರಕಾರಿ ಹುದ್ದೆಗೆ ಆಶೆ ಪಡದೇ ತಮ್ಮ ಊರಿಗೆ ಬಂದು ಕೃಷಿಯಲ್ಲಿ ತೊಡಗಿದರು. ೧೯೪೯ರಲ್ಲಿಯೇ ತಾವು ವಿದ್ಯಾರ್ಥಿಯಾಗಿದ್ದಾಗ ನೀಲಕಂಠೇಶ್ವರ ನಾಟ್ಯ ಸೇವಾ ಸಂಘ (ನೀನಾಸಂ) ಎಂಬ ರಂಗ ಸಂಸ್ಥೆಯನ್ನು ನಿರ್ಮಿಸಿ, ರಂಗ ಚಟುವಟಿಕೆಗಳ ಮೂಲಕ ಅಂತಾರಾಷ್ಟ್ರೀಯ ವಿದ್ವಾಂಸರ ಗಮನ ಸೆಳೆದಿದ್ದರು. ಕನ್ನಡ ಸಾಹಿತ್ಯದಲ್ಲಿ ಅನೇಕ ಮೌಲಿಕ ಗ್ರಂಥಗಳನ್ನು ರಚಿಸುವದರ ಮೂಲಕ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ.

ಗಾರ್ಗಿಯ ಕಥೆಗಳು, ರಾಜಕೀಯದ ಮಧ್ಯೆ ಬಿಡುವ, ಅಭಿಜ್ಞಾನ ಶಾಕುಂತಲ, ಸೂಳೆ ಸನ್ಯಾಸಿ ಇವರ ಪ್ರಸಿದ್ಧ ನಾಟಕ ಕೃತಿಗಳು. ಇವರ 'ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು' ಎಂಬ ಕೃತಿ ಪ್ರಸಿದ್ಧಿವಾದುದು, ಸುಬ್ಬಣ್ಣ ನಾಟಕಕಾರ ಮಾತ್ರವಲ್ಲದೆ ಅನುವಾದಕ, ಉತ್ತಮ ವಿಮರ್ಶಕ ಹಾಗೂ ಪ್ರಕಾಶಕ ಕೂಡಾ ಆಗಿದ್ದರು. ಚಲನಚಿತ್ರಕ್ಕೆ ಸಂಬಂಧಿಸಿದಂತೆ ೨೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಹೆಗ್ಗೋಡಿನಲ್ಲಿ ಇವರು ಸ್ಥಾಪಿಸಿದ 'ಅಕ್ಷರ ಪ್ರಕಾಶನ'ವೆಂಬ ಸಂಸ್ಥೆಯೂ ಅತಿ ಮುಖ್ಯವಾದುದು. ಸಾಹಿತ್ಯ ಕ್ಷೇತ್ರಕ್ಕೆ ಇದು ಸಲ್ಲಿಸಿದ ಸೇವೆ ಅನುಪಮವಾದುದು. ಇವರು ಅಕ್ಷರ ಪ್ರಕಾಶನದ ಮೂಲಕ ೫೦೦ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ.

ಇವರ ಸಾಹಿತ್ಯ ಸೇವೆಯನ್ನು ಗಮನಿಸಿದ ಸರ್ಕಾರ, ಸಂಘ–ಸಂಸ್ಥೆಗಳು ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ೧೯೯೧ರಲ್ಲಿ ಫಿಲಿಫೀನ್ಸ್ ಸರ್ಕಾರ ಕೊಡುವ ಪ್ರತಿಷ್ಠಿತ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ. ಕಾಳಿದಾಸ ಸಮ್ಮಾನ್ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರಕಿವೆ. ಭಾರತ ಸರ್ಕಾರವು

ಪದ್ಮಶ್ರೀ ಪ್ರಶಸ್ತಿ ನೀಡಲು ಮುಂದೆ ಬಂದಾಗ ಅದನ್ನು ಅವರು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿದ್ದರು. ಶ್ರೀಯುತರು ೨೦೦೫ ಜುಲೈ ೧೬ರಂದು ಹೃದಯಾಘಾತದಿಂದ ನಿಧನರಾದರು.

ಲೇಖನದ ಆಶಯ:

ಸೌಂದರ್ಯಕ್ಕೂ ಮೈಬಣ್ಣಕ್ಕೂ ಸಂಬಂಧವಿರುತ್ತದೆ ಎಂಬ ಸಿದ್ಧ ಆಲೋಚನೆಯನ್ನು ಈ ಲೇಖನ ಪರಿಶೋಧಿಸುತ್ತದೆ. ಚರ್ಮದ ಬಣ್ಣವೇ ಸೌಂದರ್ಯದ ಅಳತೆಗೋಲು ಎಂಬ ಅಧಿಕಾರದ ರಾಜಕಾರಣವನ್ನು ಲೇಖನ ಪ್ರಶ್ನಿಸುತ್ತದೆ. ಚರ್ಮದ ಬಣ್ಣದ ಆಧಾರದ ಮೇಲೆ ಭೂ ಒಡೆತನ ಸಾಧಿಸುವ ಊಳಿಗಮಾನ್ಯ ಪದ್ಧತಿಯ ಕಡೆ ಲೇಖನ ಬೆರಳು ತೋರುತ್ತದೆ. ಸೌಂದರ್ಯ ಎಂದರೆ ಮೈಬಣ್ಣ ಅದು ಹೆಣ್ಣಿಗಿರಬೇಕು ಎಂಬ ಧೋರಣೆಗೆ ಇಡೀ ಹೆಣ್ಣು ಜಾತಿ ನಲುಗಿರುವುದು, ಆ ಮೂಲಕ ಜಗತ್ತಿನ ಮಹತ್ತರ ದಬ್ಬಾಳಿಕೆ ನಡೆದಿರುವುದನ್ನು ಲೇಖನ ಗುರುತಿಸಿದೆ. ಈ ತಾರತಮ್ಯವನ್ನು ಅರಿತುಕೊಂಡಾಗ ಮಾತ್ರ ಸ್ವಾತಂತ್ರ್ಯದ ಹೊಸ ಗಾಳಿ ಮನುಕುಲವನ್ನು ಶಾಂತವಾಗಿರಿಸಲು ಸಾಧ್ಯ ಎಂಬುದು ಲೇಖನದ ಆಶಯವಾಗಿದೆ.

ರಾಮಮನೋಹರ ಲೂಹಿಯಾ ಅವರ ಪ್ರಸ್ತುತ 'ಬ್ಯೂಟಿ ಆಂಡ್ ಸ್ಕಿನ್ ಕಲರ್' ಎಂಬ ಲೇಖನವನ್ನು ಕೆ.ವಿ. ಸುಬ್ಬಣ್ಣ ಅವರು ಕನ್ನಡಕ್ಕೆ ತರ್ಜುಮೆ ಗೊಳಿಸಿದ್ದಾರೆ. ಈ ಲೇಖನವನ್ನೇ ಬಳಸಿಕೊಳ್ಳಲಾಗಿದೆ.

■■

೮. ವೆಂಕಟಿಗನ ಹೆಂಡತಿ

❖

ಮಾಸ್ತಿ ವೆಂಕಟೇಶ ಅಯ್ಯಂಗಾರ

ಮೊನ್ನೆ ಶಿವರಾತ್ರಿಯ ದಿನ ನಾನೂ ಪುರೋಹಿತನೂ ಶ್ರೀರಾಮ್ ಅವರನ್ನು ನೋಡುವುದಕ್ಕೆ ಶಂಕರಪುರಕ್ಕೆ ಹೋದೆವು. ಅವರು ಬೆಳಗಿನ ಸುತ್ತಾಟ ಮುಗಿಸಿ ಹಿಂದಕ್ಕೆ ಬಂದಿರಲಿ, ಮನೆಯಲ್ಲಿ ಕಾಣೋಣ, ಎಂದು ನಾವು ಸ್ವಲ್ಪ ಸಾವಕಾಶವಾಗಿ ಹೋದರೆ, ನಾವು ಅವರ ಮನೆಯನ್ನು ಮುಟ್ಟುವ ಹೊತ್ತಿಗೆ ಸರಿಯಾಗಿ ಅವರು ಹೊರಕ್ಕೆ ಬಂದರು. ಅವರು ಆಗತಾನೆ ಸುತ್ತುವುದಕ್ಕೆ ಹೊರಟಿರುವುದನ್ನು ಕಂಡು ನಾವೂ ಜೊತೆಗೆ ಬರುತ್ತೇವೆಂದೆವು. ಸ್ವಲ್ಪವೇ ದೂರ ಸುತ್ತಿ ಹನುಮನ ಗಿರಿಯನ್ನೇರಿ ಪರಮಶಿವಯ್ಯರ ಸೀಮೆಬಸರಿ ಮರದಡಿ ಹೋದೆವು.

ಶಿವರಾತ್ರಿ ಬಂದಿತೆಂದು ಚಳಿ ಶಿವ ಶಿವಾ ಎನ್ನುತ್ತಿತ್ತು. ಪೂರ್ವದಿಂದ ಬೀಸುವ ಗಾಳಿ ತಣುವೇ; ಆದರೆ ಬಿಸಿಲು ಮೇಲುಗೈಯಾಗುತ್ತಿತ್ತು. ಇದು ತನಗೆ ತಿಳಿಯಿತೆಂಬಂತೆ ಸುತ್ತಣಲೋಕ ತಲೆಯೆತ್ತಿ ನಿಲ್ಲುವುದರಲ್ಲಿದ್ದಿತು. ನಮ್ಮೆದುರಿಗೆ ನಿಂತಿದ್ದ ಅರಳಿ ಮರವೇ ಅದಕ್ಕೆ ಸಾಕ್ಷಿ. ಯಾರೋ ಹಾಕಿದ ಮರದ ಸೊಪ್ಪನ್ನು ಧಾರಾಳವಾಗಿ ಕುಯಿದು ತಮ್ಮ ಆಡಿಗೆ ಮೇಯಿಸುವ ಮಹನೀಯರು ಇದನ್ನು ತರಿತರಿದು ತರಿದಿದ್ದರು. ಆದರೂ ಅದು ಅವಕಾಶ ಇದ್ದ ಕಡೆ ನಾಲ್ಕು ತಳಿರನ್ನು ತೋರಿದ್ದಿತು. ಮರ ಬರಿದಾದರೂ ತಳಿರು ತಳಿರೇ ಅದರ ತೆಳುವೊ, ಅದರ ಬಣ್ಣವೊ, ಅದರ ಬೆಡಗೊ! ನೆತ್ತಿಯನ್ನು ಸಾರುವುದರಲ್ಲಿದ್ದ ಸೂರ್ಯನ ರಶ್ಮಿ ಅದರ ಮೇಲೆ ಬಿದ್ದು ಅದನ್ನು ತೊಳಗಿಸಿದ್ದಿತು. ಬೆಳಕಿಗೆ ಸಿಕ್ಕಿದ ತಳಿರು ತಂದೆಯ ಕೈಸೇರಿದ ಕೂಸು ನಕ್ಕು ಹಾಲು ಹಲ್ಲನ್ನು ಎದೆಗೂಡನ್ನು ತೋರುವಂತೆ ತನ್ನ ಬೆನ್ನ ಕಾವನ್ನು ಅದರಿಂದ ಒಡೆದು ಅಗಲಕ್ಕೂ ಹರಿದಿರುವ ಕಾವಶಿವುರನ್ನು ಎತ್ತಿ ತೋರಿಸುತ್ತಿದ್ದಿತು. ಮರದ ಒಂದು ಕೊಂಬೆಯ ಮೇಲೆ ಒಂದು ಹದ್ದು ಕುಳಿತು

ಕೊಕ್ಕನ್ನು ರೆಕ್ಕೆಗೆ ತೀಡಿ ಕೊಕ್ಕನ್ನೂ ರೆಕ್ಕೆಯನ್ನೋ, ಎರಡನ್ನೂವೊ, ಸರಿಮಾಡಿಕೊಳ್ಳುತ್ತ ಇದ್ದಿತು. ಆಕಾಶ ತಿಳಿನೀಲ; ಬೋರಲು ಹಾಕಿದ ನೀಲಿಯ ಗುಡಾಣದಂತಿದ್ದಿತು. ಮೋಡದಕಲೆ ಇಷ್ಟೆಲ್ಲ; ತುಂಬಿ ಬರುತ್ತಿದ್ದ ಬೆಳಕಿಗೆ ಸ್ಥಳ ಮಾಡಿಕೊಡಲೆಂದು ಬಾನತಳವನ್ನೇ ಬಿಟ್ಟು ಮರೆಯಾಗಿದ್ದಿತು. ಅಗಲಕ್ಕೂ ಹರಡಿ ಬರಿದಾಗಿ ಕಾಣುತ್ತಿದ್ದ ಈ ಬಟ್ಟಬಯಲಲ್ಲಿ ಒಂದು ಹಕ್ಕಿ ರೆಕ್ಕೆ ಹರಡಿ ಹಾರುತಿತ್ತು. ಅದರ ಹಾರು ದೊಡ್ಡ ಹಕ್ಕಿಯ ಹಾರು; ಅದು ಇಲ್ಲವೆ ಹದ್ದು ಇರಬೇಕು, ಇಲ್ಲವೆ ಗರುಡ, ಅಷ್ಟು ದೂರವಿದ್ದ ಪಕ್ಷಿ ಹತ್ತಿರ ಬಂದಂತೆ ಸೂರ್ಯನ ರಶ್ಮಿ ಅದರ ರೆಕ್ಕೆಯಲ್ಲಿ ಹಾಯ್ದು ಅದರ ಬಣ್ಣವನ್ನು ತೋರಿಸಿಕೊಟ್ಟಿತು. ಕಾಯ್ದ ಅಪರಂಜಿ ಚಿನ್ನದ ಆ ಬಣ್ಣದಿಂದ ಅದು ಒಂದು ಗರುಡ ಎಂದು ಸ್ಪಷ್ಟವಾಯಿತು. ನಾನು ಹೀಗೆಂದುಕೊಳ್ಳುವ ಹೊತ್ತಿಗೆ ಪಕ್ಷಿ ತಲೆಯನ್ನು ನಮ್ಮ ಕಡೆಗೆ ತಿರುಗಿಸಿಕೊಂಡು ಬಂದಿತು. ಆ ಬಿಳುಪು; ಆ ಕೆಂಪು; ಅದೇನು ಅದರ ಚೆನ್ನ! ನಮ್ಮ ಪೂರ್ವಿಕರು ಇದನ್ನು ದೇವರ ವಾಹನವೆಂದು ಕಲ್ಪಿಸಿಕೊಂಡುದರಲ್ಲಿ ಆಶ್ಚರ್ಯವಿಲ್ಲ. ಕ್ಷೇಮಕಾರಿ ಹಾಗೆಯೇ ಸಾವಧಾನವಾಗಿ ದೂರಕ್ಕೆ ಹೋಗಿ ಮತ್ತೆ ಬಂದು ಗಗನದಲ್ಲಿ ಸುತ್ತುಹಾಕಿತು. ದೂರದಲ್ಲಿರುತ್ತ ತನ್ನ ಜೊತೆಯನ್ನು ಕರೆದು ಒಂದು ಕೂಗು ಕೂಗಿತು. ಕ್ಷಣದಲ್ಲಿ ನಮ್ಮ ಅರಳಿಯಮರದ ಮೇಲೆ ಎಲೆಯ ಸದ್ದಾಗಿ ಒಂದು ಹಕ್ಕಿ ಹಾರಿತು. ಅದು ಆ ಹದ್ದಲ್ಲ; ಎಲೆಯ ಮರೆಯಲ್ಲಿ ನನಗೆ ಕಾಣದೆ ಕುಳಿತಿದ್ದ ಒಂದು ಗರುಡ, ಅದು ಮರದಿಂದ ಹಾರಿ ಗಾಳಿಗೆ ಏರಿತು; ರೆಕ್ಕೆ ಬಡಿದು ನಭವನ್ನು ಸೇರಿ ಸಾವಧಾನವಾಗಿ ಹಾಯತೊಡಗಿತು. ಎರಡು ಗರುಡ, ಸ್ವಲ್ಪ ಹೊತ್ತು ದೂರ ದೂರದಲ್ಲಿ, ಸ್ವಲ್ಪ ಹೊತ್ತು ಹತ್ತಿರ ಹತ್ತಿರದಲ್ಲಿ, ಹಾರುತ್ತ ಒಂದನ್ನೊಂದು ಕರೆಯುತ್ತ ಇದ್ದವು. ಇವು ಹಾರುವುದನ್ನು ಸ್ವಲ್ಪ ಹೊತ್ತು ನೋಡುತ್ತಿದ್ದ ಮೇಲೆ ಶ್ರೀರಾಮರು ನಮಗೆ ತಮ್ಮ ಅನುಭವದ ಒಂದು ಸಂಗತಿಯನ್ನು ಹೇಳಿದರು.

೨

ಕಳೆದ ವರ್ಷ ಸಂಕ್ರಾಂತಿಯ ಸುಮಾರಿನಲ್ಲಿ ಒಂದು ದಿನ ನಾನು ಈ ಸುತ್ತಿನಲ್ಲಿ ನಡೆದು ಬರುತ್ತಿದ್ದೆನು. ಬೋವನಹಳ್ಳಿಯ ತಿಟ್ಟಿನಲ್ಲಿ ನಿಂತು ತಗ್ಗಿನಲ್ಲಿರುವ ಆ ಹಳ್ಳಿಯ ಮುಂದಿನ ಬಸರಿಮರವನ್ನು ನೋಡಲು ತಿರುಗಿದೆನು. ಬೋವನಹಳ್ಳಿಯ ದಾರಿ ಅಲ್ಲಿಂದ ಎಡಕ್ಕೆ ಇರುತ್ತದೆ; ಬಲಕ್ಕೆ ಎಂದೋ ಬರಿದಾದ, ಈಗ ಯಾರೂ ಹೆಸರು ಹೇಳದ, ಸಣ್ಣದೊಂದು ಹಳ್ಳಿಯ ಹಾಳು. ಹಾಳು ಎಂಬ ಮಾತು, ಮನೆಯಿದ್ದು ಅಳಿದ ಸ್ಥಳ ಎಂಬ ಭಾವದ ಸಂಪರ್ಕದಿಂದ, ಈಗ ಒಂದು ಅಶುಭ ವಾಚಕವಾಗಿದೆ. ಆದರೆ ನಿಜವಾದ ಮನೆಯಿಲ್ಲದಿದ್ದರೂ ಈ ಹಾಳಿನಲ್ಲಿ ಅಳಿದ

ಊರಿನ ಅವಲಕ್ಷಣವಿಲ್ಲ, ಕಟ್ಟಿಡ ಸಡಲಿದ ಒಂದು ಕಲ್ಲುಕಟ್ಟಿದ ಭಾವಿ ಇದೆ. ಹತ್ತಿರದಲ್ಲಿ ಪೂರ್ವದಲ್ಲಿ ಮನೆಗಳಿದ್ದ ಸ್ಥಳಗಳಲ್ಲಿ ಅಂದು ಹಾಕಿದ ಮರಗಳಿವೆ. ಹಳ್ಳದ ಓರದ ತಿಟ್ಟಿನಲ್ಲಿ ಒಂದು ಕಡೆಗೆ ಒಂದು ಸೇದುವ ಭಾವಿ, ಇನ್ನೊಂದು ಕಡೆ ಅಂದಿನ ದೇವಾಲಯದ ಅವಶೇಷ ಇವೆ. ಸೇದುವ ಭಾವಿಗೆ ಇಳಿಯುವ ಭಾವಿಗೆ ಮಧ್ಯೆ ಹೊಲಗಳ ಮಧ್ಯೆ ಹಾಯ್ದು ದೇವಾಲಯವನ್ನು ಅರ್ಧಸುತ್ತಿ ಹಳ್ಳಕ್ಕೆ ಹೋಗಿ ಸೇರುವ ಸಣ್ಣ ಕಾಲುವೆ ಇದೆ. ಭಾವಿಯ ಹತ್ತಿರ ದೊಡ್ಡದೊಂದು ದೇವಕಣಿಗಿಲೆ ಮರ, ಅದರ ಪಕ್ಕದಲ್ಲಿ ದಾರಿಗರಿಗಾಗಿ ನಿಲ್ಲಿಸಿರುವ ಹೊರೆ ಇಳಿಸುವ ಕಲ್ಲು, ತಿಟ್ಟಿನಿಂದ ನೋಡಿದರೆ ತುಂಬಿ ಬಾಳುತ್ತಿರುವ ಬೋವನಹಳ್ಳಿ ಒಂದು, ಬಾಳು ಮುಗಿದಿದ್ದರೂ ನಗುತ್ತಲೇ ಕಾಣುವ ಈ ಹಳೆಯೂರ ಹಾಳು ಇನ್ನೊಂದು, ಕಂಡು ಮನಸ್ಸಿಗೆ ಹರ್ಷವನ್ನು ನೀಡುತ್ತವೆ. ಆ ದಿನ ನಾನು ತಿಟ್ಟಿನಲ್ಲಿ ನಿಂತು ನೋಡಿದಾಗ ಹಳೆಯೂರು ಬೋವನಹಳ್ಳಿಗೂ ಹೆಚ್ಚಿನ ಒಂದು ಕಳೆಯಿಂದ ನಕ್ಕಿತು. ಇದು ಏಕೆ ಎಂದು ನಾನು ನೋಡಿದೆನು. ದೇವಕಣಿಗಿಲೆ ಮರದ ತುಂಬ ತುಂಬಿದ ಎಲೆಯ ಮಧ್ಯೆ ಕೊಂಬೆ ಕೊಂಬೆಯಲ್ಲಿ ಬೆಳ್ಳನೆ ಹೂತಿದ್ದಿತು. ನಾನು ಆ ದಾರಿಯಲ್ಲಿ ನಡೆದು ಮೂರು ದಿನ ಆಗಿದ್ದಿತು. ಮೂರು ದಿನದ ಹಿಂದೆ ಈ ಸಂಭ್ರಮ ಕಂಡಿರಲಿಲ್ಲ, ಮಧ್ಯೆ ಒದಗಿದ ಈ ಪುಷ್ಪಹಾಸದಿಂದ ಹಳೆ ಊರ ಹಾಳಿಗೆ ಹೊಸ ಬೆಳಗು ಬಂದಿದ್ದಿತು.

ಮೊನ್ನೆ ಏನೂ ತಿಳಿಯದಂತೆ ಇದ್ದ ಮರ ಇಂದು ಇಷ್ಟು ಬಿನ್ನಾಣ ಮಾಡಿದೆಯಲ್ಲ ಎಂದು ನಾನು ಯೋಚಿಸಿಕೊಂಡೆನು. ಹಿಂದಿನಿಂದ ಯಾವನೊ ತೆಲುಗಿನಲ್ಲಿ ಮಾತನಾಡಿಸಿದನು. 'ಸ್ವಾಮಿ ಈ ಹೊರೆ ಸ್ವಲ್ಪ ಇಳಿಸಿಕೊಡಿ!'

ನಾನು ಹಿಂದಿರುಗಿ ನೋಡಿದೆನು. ತೆಳ್ಳಗೆ ಎತ್ತರವಾಗಿ ನಮ್ಮ ಜನರ ವಾಡಿಕೆಯ ಶ್ಯಾಮಲ ವರ್ಣದ ತರುಣ ಒಬ್ಬ ಅವನು. ತಲೆಯ ಮೇಲೆ ಹೊತ್ತು ಹೊರಲಾಗದ ಒಂದು ಸೌದೆಯ ಹೊರೆಯನ್ನು ಹೇರಿಕೊಂಡು ಅದೆಷ್ಟು ದೂರದಿಂದಲೋ ಬಂದಿದ್ದನು. ಅವನ ಮುಖದಿಂದ ಬೆವರು ಸೋರುತ್ತಿತ್ತು. ನಾನು ಅವನ ಹೊರೆಯ ಕೆಳಕ್ಕೆ ಕೈ ಇಟ್ಟು 'ಇಳಿಸು' ಎಂದೆನು. ಅವನೂ ಅದನ್ನು ತನ್ನ ಕೈಯಿಂದ ಎತ್ತಿ ತಲೆಯನ್ನು ಸರಿಸಿಕೊಂಡು 'ಬಿಡಿ' ಎಂದು ಹೇಳಿ ಹೊರೆಯನ್ನು ಕೆಳಕ್ಕೆ ಹಾಕಿದನು.

ಹೊರೆಯನ್ನು ಕೆಳಗೆ ಇಳಿಸಿ ಅವನು ತಾನು ಹಾಕಿಕೊಂಡಿದ್ದ ಷರಟಿನ ಬಲ ಅಂಚಿನಿಂದ ಮುಖದ ಬೆವರನ್ನು ಒರಸಿಕೊಂಡು, 'ಬಹಳ ಕಷ್ಟವಾಗಿ ಹೋಯ್ತು ಸ್ವಾಮಿ. ದಿನಾ ಆ ಹೊರೆಕಲ್ಲಿನ ಹತ್ತಿರ ಹೋಗಿ ಇಳಿಸ್ತಾ ಇದ್ದೆ. ಈ ಹೊತ್ತು ತಡೆಯಲಿಲ್ಲ. ನಿಮ್ಮಂಥ ದೊಡ್ಡವರಿಗೆ ತೊಂದರೆ ಕೊಡಬೇಕಾಯ್ತು,' ಎಂದ.

ನಾನು 'ತೊಂದರೆ ಯಾತರದು? ಅಂಥದೇನೂ ಇಲ್ಲ. ಆದರೆ ಹೀಗೆ ಹೊರಬಾರದ ಹೊರೆಯನ್ನು ಏಕೆ ತಲೆಯ ಮೇಲೆ ಹೇರಿಕೊಂಡೆ?' ಎಂದೆನು.

ಅವನು, 'ಅಯ್ಯೋ ಸ್ವಾಮಿ, ಮನುಷ್ಯರಿಗೆ ಆತುರ ಇದೆಯಲ್ಲ, ನಾಲ್ಕು ಕಟ್ಟಿಗೆ ಹೆಚ್ಚಾಗಿದ್ದರೆ ಮೊದಲ ಬೀದೀಲೆ ಖರ್ಚಾಗುತ್ತೆ. ಮೂರು ಕಾಸು ಹೆಚ್ಚಾಗಿ ಬರುತ್ತೆ. ಸೌದೆ ಕೊಳ್ಳುವ ನಿಮ್ಮಂಥವರಿಗೆ ಬೇಕು ಅನ್ನಿಸೋ ಹೊರೆಯನ್ನ ತರಬೇಕು. ಬೇಗನೆ ಕೈಗೆ ಕಾಸು ತಕೊಳ್ಳಬೇಕು,' ಎಂದನು.

ನಾನು ದಾರಿಯ ಪಕ್ಕದ ಒಂದು ಕಲ್ಲಿನ ಮೇಲೆ ಕುಳಿತು ಅವನನ್ನು ಕುಳಿತುಕೊಳ್ಳಹೇಳಿ ಅವನ ಊರು, ಕೇರಿ ಕಷ್ಟಸುಖವನ್ನು ವಿಚಾರಿಸಿದೆನು. ಚಿಂತಾಮಣಿಯ ಕಡೆಯಿಂದ ಬಂದಿರುವ ನನಗೆ ಇವನೊಂದಿಗೆ ತೆಲುಗಿನಲ್ಲಿ ಮಾತನಾಡಲು ಕಷ್ಟವೇನೂ ಆಗಲಿಲ್ಲ.

ತರುಣನ ಹೆಸರು ವೆಂಕಟರಮಣ. ಅವನನ್ನು ಸಾಮಾನ್ಯವಾಗಿ 'ವೆಂಕಟಿಗ' ಎಂದು ಕರೆಯುವರು. 'ವೆಂಕಟರಮಣ' ಎನ್ನುವುದು ಸ್ವಲ್ಪ ಉದ್ದ; ಅಲ್ಲದೆ ಬಹು ಮರ್ಯಾದೆಯ ಹೆಸರು; ಇವನಂಥವರ ವಿಷಯಕ್ಕೆ ಅದು 'ವೆಂಕಟಿಗ' ಆಗುತ್ತದೆ. 'ವೆಂಕಟಿಗ' ಜನತೆಯ ಬಾಯಲ್ಲಿ 'ಯಂಗಟಿಗ' ರೂಪವನ್ನು ಪಡೆಯುತ್ತದೆ. ಯಂಗಟಿಗ ತಿರುಪತಿಯ ಬಳಿ ಒಂದು ಹಳ್ಳಿಯ ಹುಡುಗ. ಬೆಂಗಳೂರಿನಲ್ಲಿ ಬಾಳುವೆ ನಡೆಸಬೇಕು ಎಂದು ಬಂದಿದ್ದನು.

'ಯಾಕೆ, ನಿಮ್ಮೂರಿನಲ್ಲಿ ಜೀವನ ಆಗಲಿಲ್ಲವೇನಯ್ಯ?'

'ಆಗುತಿತ್ತು ದೇವರೆ. ಏನೂ ಇಲ್ಲದೆ ಇದ್ದರೂ ಬೆಟ್ಟಕ್ಕೆ ಸಾಮಾನು ಹೊತ್ತು, ಡೋಲಿ ಹೊತ್ತು, ಜೀವನ ಸಂಪಾದಿಸಬಹುದು. ಅದಕ್ಕೇನೂ ಕಷ್ಟ ಇಲ್ಲ.'

'ಹಾಗಾದರೆ ಇಷ್ಟು ದೂರ ಏಕೆ ಬಂದೆ ಮತ್ತೆ?'

'ಏನೋ ಬೇಸರ ಆಯ್ತು ಸ್ವಾಮಿ, ಕೊಂಚ ದಿನ ಊರಿಂದ ದೂರ ಇರೋದು ಒಳ್ಳೆಯದು ಎಂತ ಇತ್ತಲಾಗಿ ಬಂದುಬಿಟ್ಟೆ'

'ಇಷ್ಟು ಚಿಕ್ಕ ವಯಸ್ಸಿನಲ್ಲಿ ಬೇಸರ ಏಕಯ್ಯ ಬಂದಿತು? ನನಗೆ ಹೇಳಬಹುದೊ?' 'ಹೇಳದಂತೆ ಏನು ಸ್ವಾಮಿ! ನಮ್ಮ ತಂದೆಯಂತೆ ಕೇಳ್ತಿದೀರಿ. ಮಕ್ಕಳು ಮರಿ ಉಳ್ಳವರು. ಹೇಳಿ ಸುಖ ಇಲ್ಲ ಅಷ್ಟೆ'

'ಹೇಳಬಹುದಾದರೆ ಹೇಳು. ನಮ್ಮಿಂದ ಏನಾದರೂ ಮಾಡಲಾಗುತ್ತದೆಯೆ ನೋಡೋಣ.'

'ಅಯ್ಯೋ, ಯಾಕಾಗಬಾರದು ಸ್ವಾಮಿ. ಇಂಥಾದ್ದು ಎಷ್ಟು ಕೇಳಿರುತ್ತೀರೊ. ಪ್ರಪಂಚವನ್ನು ಬಲ್ಲವರು ಒಂದು ಸಮಾಧಾನದ ಮಾತು ಹೇಳಿದರೆ ನನ್ನ ಮನಸ್ಸಿಗೂ ಒಳ್ಳೆಯದು.' ಹೀಗೆಂದು ಅವನು ತನ್ನ ಕಥೆಯನ್ನು ಹೇಳಿದನು.

೩

ವೆಂಕಟಿಗ ತನ್ನ ಹಳ್ಳಿಯ ಕೂಲಿಕಾರರ ಒಬ್ಬ ತರುಣ. ಅವನ ನೆಂಟರಿಷ್ಟರು ಊರಿನ ತುಂಬ ಉಂಟು. ಅತ್ತೆಯ ಮಗಳು ರಂಗಿ ಎಂಬ ಹುಡುಗಿ ಇವನ ಜೊತೆಯಲ್ಲಿ ಬೆಳೆದಳು. ಚಿಕ್ಕಂದೇ ಇವರು ಗಂಡ ಹೆಂಡಿರಾಗತಕ್ಕವರೆಂದು ಹಿರಿಯರು ಗೊತ್ತು ಮಾಡಿದರು. ರಂಗಿ ಒಳ್ಳೆ ಚಲುವೆ. ಅವರ ಜನದಲ್ಲಿ ಆ ಬಣ್ಣ ಆ ಕಣ್ಣು ಅಪೂರ್ವ. ತಾನು ಎತ್ತರದ ಹುಡುಗ ಆದರೂ ಅವಳು ಎಂದೂ ತನ್ನ ಭುಜದ ಮಟ್ಟಕ್ಕೆ ಕಡಮೆ ಇದ್ದದಿಲ್ಲ. ಅವಳು ನಡೆಯುತ್ತಿದ್ದರೆ ಗುಡಿಯಲ್ಲಿ ನಿಲ್ಲಿಸಿದ್ದ ಕಲ್ಲಿನಮೂರ್ತಿ ಹೊರಗೇನು ನಡೆದು ಬಂದಿತೊ ಎಂಬಂತೆ ಕಾಣುವುದು. ಹುಡುಗ ಹುಡುಗಿ ಎಷ್ಟೋ ಕಾಲ ಬೆಟ್ಟಕ್ಕೆ ಸಾಮಾನು ಹೊತ್ತು ಕೂಲಿ ಗಳಿಸಿದರು; ಸುಖವಾಗಿ ಜೊತೆಯಲ್ಲಿ ಬೆಳೆಯುತ್ತಿದ್ದರು.

ತಕ್ಕ ವಯಸ್ಸಾಯಿತೆಂದು ಇವರಿಗೆ ಮದುವೆ ಮಾಡಿದರು. ಆದರೆ ಆ ಹೊತ್ತಿಗೆ ಇವರ ಗ್ರಹಚಾರ ಕೆಟ್ಟಿತು. ಊರಿನ ಪುಣ್ಯವಂತ ರೆಡ್ಡಿ ಒಬ್ಬ ಬೀದಿಯಲ್ಲಿ ಕಾಣುತ್ತಿದ್ದ ಈ ಹುಡುಗಿಯನ್ನು ನೋಡಿ ಇವಳಿಗೆ ಒಡವೆ ವಸ್ತ್ರದ ಆಸೆಯನ್ನು ಹುಟ್ಟಿಸಿ ಇವಳನ್ನು ತನ್ನ ಕೈಗೆ ಹಾಕಿಕೊಂಡನು.

ಬೇಗ ಅನ್ನುತ್ತೀರಿ, ನಾಯನ, ನಮಗೆ ತಿಳಿದಾಗ ಬೇಗ ಅಷ್ಟೆ ಇಂಥ ಪುಣ್ಯವಂತರು ಎಷ್ಟು ದಿನ ಈ ಹೂಟ ಮಾಟ ಮಾಡುತ್ತಾರೆ, ನಮಗೆ ತಿಳಿಯುತ್ತದೆಯೆ? ಅಲ್ಲದೆ ನಾಯನ, ಈ ಹೆಣ್ಣು ಅನ್ನುವುದರ ಮನಸ್ಸು ಹೇಗೆ ಒಲಿದರೂ ಆಯಿತು. ಈ ತಿಟ್ಟು ಯಾವ ಕಡೆಗೆ ಇಳಿದರೆ ಬೇಡ? ಈ ಹೊತ್ತು ನಾನು ಗಂಡ, ನನ್ನ ಕಡೆ ನೋಡುತಿರ್ತಾಳೆ, ನಾಳೆ ಯಾವನೊ ಚೆಲುವ ಎದುರಿಗೆ ಬರ್ತಾನೆ; ಅವನ ಕಡೆ ನೋಡ್ತಾಳೆ. ಬೇಕು ಅಂತ ನೋಡಿದಳೆ? ಕಂಡ ದೊಡ್ಡ ಮನುಷ್ಯ ಸುಮ್ಮನಿದ್ದರೆ ಸರಿಹೋಯಿತು. ಕೆಣಕಿದರೆ? ಎಲ್ಲಾ ಹೆಣ್ಣೂ ಬೇಡ ಎಂತಲೇ ಎನ್ನುತ್ತದೆಯೆ? ಅವನ ಮೀಸೆಯೇನು, ಅವನ ರುಮಾಲೇನು, ಅವನ ಆ ಕುದುರೆಯೇರಿ ಹೋಗ್ತಾ ಅವನ ದರ್ಪ ಏನು? ಗಂಡು ನನಗೇ ಆ ಪದವಿ ಬೇಕು ಎನ್ನಿಸುತ್ತಿರಬೇಕಾದರೆ, ಪದವಿ ಉಳ್ಳಾತ ಕರೆದರೆ ಎಲ್ಲಾ ಹೆಣ್ಣೂ ತಡೆದೀತೆ? ಏನೂ ಅರಿಯದ ಹುಡುಗಿ ಒಪ್ಪಿಕೊಂಡಿತು.

ತಾಯಿ ತಂದೆ, ಇದು ಬೇಡಮ್ಮ ಕುಲಕ್ಕೆ ಕೆಟ್ಟ ಹೆಸರು ಎಂದರು. ನಾನು ಬಹಳ ಹೇಳಿದೆ. 'ಬೇಡ ಹೆಣ್ಣೆ' ಎಂದೆ. ಎಂಥ ಒಳ್ಳೆ ಹುಡುಗಿ ಸ್ವಾಮಿ, ಕೂಲಿ ಹೊರೋ ದಿವಸದಲ್ಲಿ ನಂಬಿಕೆ ಅಂದರೆ ಅಂಥ ನಂಬಿಕೆ. ನಾವು ಕದಿಯೋಣ ಎಂದರೆ 'ಜೋಕೆ ದೇವರು ನೋಡುತ್ತಾನೆ' ಎನ್ನುತ ಇದ್ದಳು. ದೊಡ್ಡವಳಾದ ಮೇಲೆ ಯಾರಾದರೂ ಹುಡುಗರು ಸ್ವಲ್ಪ ಸಲಿಗೆ ಮಾಡಿದರೆ, 'ಏನೋ ಅದು, ನನ್ನ ಸೂಳೇನ್ನ ಮಾಡಿದ್ಯಾ' ಎನ್ನುತ್ತ ಇದ್ದಳು. ಅದೇನು ಕೆಟ್ಟ ಗಳಿಗೆಯೊ ಸ್ವಾಮಿ, ಕೆಲವು ದಿನ ನನ್ನ ತಪ್ಪಿಸಿ ಅವನ ಹತ್ತಿರ ಹೋದಳು, ಬಂದಳು, ಎಂದೋ ಒಂದು ದಿನ ಅವನ ಮನೆಗೆ ಹೋಗಿ ನಿಂತೂ ಬಿಟ್ಟಳು.

ನಮ್ಮ ತಾಯಿ, ನನ್ನ ಮಗನ ಸಂಸಾರ ಕೆಡಿಸಿದೆಯಾ, ಎಂದು ಆ ಪುಣ್ಯವಂತನ ಆ ಮುಂದೆ ಬಯ್ದಾಡಿ ಬಾಯಿ ಬಡಿದುಕೊಂಡಳು. ನಾನು ಹೋಗಿ ಅವಳನ್ನು ಮನೆಗೆ ಎಳೆದುಕೊಂಡು ಬಂದೆ. ಏನು ಹೇಳಿದರೂ ಮನೆಯ ಸೊಸೆಯ ಮಾತು. ಕೂಗಿದಷ್ಟು ನಮ್ಮ ಮರ್ಯಾದೆಯೇ ಕೆಡುತ್ತದೆ. ಬಾಳಿದರೆ ಚೆನ್ನಾಗಿತ್ತು, ಬಾಳಲಿಲ್ಲ, ಸುಮ್ಮನಿರೋಣ, ಎಂದು ಅವಳನ್ನು ತಡೆದೆ.

ನಮ್ಮ ಅತ್ತೆ, 'ನಿನ್ನ ಸಂಸಾರವನ್ನು ಕೆಡಿಸಿದೆನಲ್ಲೊ ತೆರ ಹಿಂದಕ್ಕೆ ಕೊಡುತ್ತೇನೆ. ಬೇರೆ ಹುಡುಗಿಯನ್ನು ಮದುವೆಯಾಗು' ಎಂದಳು. ಅವಳೇನೂ ನನಗೆ ದೂರವಲ್ಲವಲ್ಲ, ಸದ್ಯ ನನ್ನ ತಂದೆಗೆ ತಂಗಿ, ನಾನು ಕೆಟ್ಟರೆ ನೋಡಲಾರಳು; ಅಮ್ಮನ ಜೊತೆಗೆ ಅಮ್ಮನಂತೆ ಬೆಂದಳು. ಆದರೆ ನನಗೆ ಬೇರೆ ಮದುವೆ ಬೇಕು ಎನ್ನಿಸಲಿಲ್ಲ. 'ಇರಲಿಬಿಡು' ಎಂದೆ.

ಏನು ಮಾಡುವುದು ಎಂದು ತೋಚದೆ ಮೂರು ದಿನ ಕಳೆದೆ. ಆ ಪುಣ್ಯವಂತ ನನಗೆ, 'ನಿನ್ನ ಹೆಂಡತಿಯ ತೆರವನ್ನು ನಾನು ಕೊಟ್ಟುಬಿಡುತ್ತೇನೆ. ಬೇಕಾದರೆ ಇನ್ನು ನಾಲ್ಕು ಕಾಸುಕೊಡುತ್ತೇನೆ. ಅವಳನ್ನು ಒಪ್ಪಿ ನನಗೆ ಬಿಟ್ಟುಬಿಡು. ನೀನು ಬೇರೆ ಮದುವೆಯಾಗು, ಎಂದು ಹೇಳಿ ಕಳುಹಿಸಿದನು.

ನನಗೆ ತುಂಬ ದುಃಖವಾಯಿತು. ತುಂಬಾ ಕೋಪ ಬಂತು. ಆ ಸಂಜೆ ಯಾರೂ ಕಾಣದಂತೆ ನಾನು ಅವನ ಮನೆಗೆ ಹೋದೆನು. ಸಾಹುಕಾರನೊಂದಿಗೆ ಮಾತನಾಡಬೇಕೆಂದು ಹೇಳಿಕಳುಹಿಸಿದೆನು.

ನಾನು ತನ್ನನ್ನು ಏನಾದರೂ ಮಾಡಿಯೇನೆಂದು ಅವನಿಗೆ ಭಯ. 'ನಾನು ಬರಿಕೈಯಲ್ಲಿ ಬಂದಿದೇನೆ, ಆಯುಧವೇನೂ ತಂದಿಲ್ಲ' ಎಂದು ಧೈರ್ಯ ಹೇಳಿದ

ಮೇಲೆ ಅವನು ನನ್ನನ್ನು ಒಳಕ್ಕೆ ಕರೆಸಿಕೊಂಡನು. ನನ್ನ ಹೆಂಡತಿಯಾದವಳು ಅವನು ಕುಳಿತಿದ್ದ ಕೋಣೆಯ ಹಿಂದಿನ ಕೋಣೆಯಲ್ಲಿ ಇದ್ದದ್ದು ಕಂಡಿತು.

ನಾನು ಸಾಹುಕಾರನಿಗೆ, 'ಹೆಂಡತಿಗೆ ಬದಲು ಹೆಂಡತಿಯನ್ನು ಕೊಡುತ್ತೀನಿ ಎನ್ನುತ್ತೀಯಲ್ಲ. ಇದು ಮರ್ಯಾದೆಯ ಮಾತೆ? ನೀನು ಮಾಡಿರುವುದು ತಪ್ಪು. ಬೆಟ್ಟದ ಮೇಲಿರುವ ದೇವರು ಎಲ್ಲವನ್ನು ನೋಡುತ್ತಿದಾನೆ. ಒಳ್ಳೆಯದಾಗಬೇಕೆಂದು ಆಸೆಯಿದ್ದರೆ ನನ್ನ ಹೆಂಡಿರನ್ನು ನನ್ನೊಂದಿಗೆ ಹಿಂದಕ್ಕೆ ಕಳುಹಿಸು. ನೀನೂ ಬದುಕು. ನನ್ನನ್ನೂ ಬದುಕಿಸು. ಅವಳ ಮರ್ಯಾದೆಯನ್ನು ಉಳಿಸು. ಅದನ್ನು ಬಿಟ್ಟು ಹಣದ ಮಾತು ಬೇರೆ ಹೆಂಡಿರ ಮಾತು ಹೇಳಿದರೆ, ಮೂಳೆ ಬಿಡದ ನಾಯಿಯಂತೆ ನೀನು ನಿನ್ನ ದುರಾಶೆಯನ್ನು ಕಟ್ಟಿಕೊಂಡ ಹಾಗಾಯಿತು. ಅರಿಯದ ಹುಡುಗಿಯನ್ನು ಮರುಳು ಮಾಡಿ ಸುಖಪಟ್ಟೇನೆಂದು ತಿಳಿಯಬೇಡ,' ಎಂದೆನು. ಅವನು, 'ನಾನು ನಿನ್ನೊಂದಿಗೆ ಈ ಮಾತನ್ನೆಲ್ಲ ಆಡಲಾರೆ,' ಎಂದನು. ನಾನು, ಒಳ್ಳೆಯದು. ನನ್ನ ಹೆಂಡತಿ ನನ್ನೆದುರಿಗೆ ಬಂದು, ನಾನು ತನಗೆ ಬೇಡ ಎಂದು ಒಮ್ಮೆ ಬಾಯಲ್ಲಿ ಹೇಳಲಿ,' ಎಂದೆನು. ಅವನು 'ನಿನಗೆ ತೆರವನ್ನು ಕೊಟ್ಟು ಬೇರೆ ಮದುವೆಮಾಡಿಕೊ ಎಂದು ನಾನು ಹೇಳಿದ್ದು ಅವಳ ಇಷ್ಟದಿಂದಲೇ. ಅವಳು ಹೇಳದಿದ್ದರೆ ಈ ಮಾತು ನನಗೇಕೆ ಬೇಕಿತ್ತು?' ಎಂದನು. ನಾನು, 'ಆ ಮಾತನ್ನೇ ಅವಳು ನನ್ನೆದುರಿಗೆ ಒಮ್ಮೆ ಹೇಳಲಿ,' ಎಂದೆನು. ಅವನು ಹೇಳುತ್ತಾಳೇಳು,' ಎಂದು ನನಗೆ ಹೇಳಿ ಒಳಗಿನ ಕೋಣೆಯ ಕಡೆಗೆ ಮುಖಮಾಡಿ, 'ಒಳಗಿದ್ದೀಯಾ, ಇಲ್ಲಿ ಬಾ, ಹೇಳಿ ಕಳುಹಿಸು ಎಂದ ಮಾತನ್ನು ನೀನೇ ಹೇಳು, ಅವನು ಕೇಳಬೇಕಂತೆ,' ಎಂದನು. ನನ್ನ ಹೆಂಡತಿ ಹೊರಕ್ಕೆ ಬಂದಳು. ಅವಳ ಸೀರೆ, ಅವಳ ಕುಪ್ಪಸ, ಅವಳ ಗೊಲಸು, ಅವಳ ಕಡಗ, ಅದನ್ನೇನು ಹೇಳುವುದು? ಬಡವರ ತೊಡವಿನಲ್ಲಿ ಎಷ್ಟೋ ಚೆನ್ನಾಗಿದ್ದ ಹುಡುಗಿ ಈ ಐಶ್ವರದಲ್ಲಿ ನೋಡಬಾರದು ಎನ್ನುವಂತೆ ವಿಕಾರವಾಗಿ ಕಂಡಳು. ಅವಳ ಮುಖ ಅಂಥ ಸಂತೋಷವನ್ನೇನೂ ತೋರಿಸಲಿಲ್ಲ. ನಾನು ಅವಳನ್ನು ಕುರಿತು, 'ಸಾಹುಕಾರರು ನನಗೆ ಹೇಳಿ ಕಳುಹಿಸಿದ ಮಾತು ನಿನ್ನ ಮಾತು ಎನ್ನುತ್ತಾರೆ. ಅದನ್ನು ನೀನೇ ನನಗೆ ಹೇಳು' ಎಂದೆನು. ಅವಳು ಬಾಯಿ ತೆರೆಯಲಿಲ್ಲ. ನಾನು, ನನ್ನ ತೆರವನ್ನು ಹಿಂದಕ್ಕೆ ತೆಗೆದುಕೊಂಡು ನಾನು ಬೇರೆ ಮದುವೆಯಾಗಬೇಕೆಂದು 'ನೀನು ಇಷ್ಟಪಡುತ್ತೀಯಾ?' ಎಂದು ಕೇಳಿದೆನು. ಅವಳು ಹೌದು ಎಂಬ ಅರ್ಥಕ್ಕೆ ತಲೆ ಆಡಿಸಿದಳು. ನಾನು, 'ಒಳ್ಳೆಮಾತು ಹೇಳಿದೆ. ಆದರೆ ಇದನ್ನು ದೇವರು ಒಪ್ಪುವುದಿಲ್ಲ. ಎಷ್ಟೋ ಸಲ ಆ ಹಂತದ ಮೇಲೆ ಜೊತೆಯಾಗಿ ನಡೆದ ನಾವು ಹೀಗೆ ಬೇರೆಯಾಗಿ ಬಾಳುವುದು ಸರಿಯಾಗಲಾರದು.

ತಿರುಗಿ ನಿನಗೆ ಎಂದೇ ಆಗಲಿ ನನ್ನ ಬಳಿ ಬರಬೇಕು ಎನ್ನಿಸಿದರೆ ಸಂಕೋಚಪಡದೆ ಹೊರಟು ಬಂದುಬಿಡು. ನಾನು ಅದುವರೆಗೆ ಕಾದಿರುತ್ತೇನೆ.' ಎಂದೆನು. ಹೀಗೆಂದವನೆ ಹೊರಗೆ ಹೊರಟೆನು.

ಸಾಹುಕಾರನು ನಕ್ಕನು. ತನ್ನ ಮನೆಯಲ್ಲಿ ಸೇರಿದ ಹೆಣ್ಣು ತನಗೆ ಒಲಿದುಬಂದದ್ದು, ಒಲ್ಲದೆಹೋದ ಗಂಡನ ಬಳಿಗೆ ಹಿಂತಿರುಗಿ ಹೋಗುತ್ತದೆಯೆ? ನಾನು ಸಾಹುಕಾರನ ಮನೆಗೆ ಹೋದದ್ದನ್ನು ಹೇಗೋ ತಿಳಿದ ನನ್ನ ತಾಯಿ ಅವನ ಮನೆ ಬಾಗಿಲಲ್ಲಿ ಕಾದಿದ್ದು ನಾನು ಹೊರಗೆ ಬಂದಾಗ ನನ್ನ ಜೊತೆಯಾದಳು. ನಡೆದ ಸಂಗತಿಯನ್ನೆಲ್ಲ ಕೇಳಿ, 'ನೀನು ಏಕೆ ಹೀಗೆ ಮುಟ್ಠಾಳನಂತೆ ಆಡುತ್ತಿದ್ದೀಯೆ?' ಎಂದು ಕೇಳಿದಳು. ನಮ್ಮ ಅತ್ತೆ, 'ಬುದ್ಧಿ ಕೆಟ್ಟ ಹುಡುಗಿ ಹುಟ್ಟಿದ ಮನೆಗೆ ಕೆಟ್ಟ ಹೆಸರು ತಂದಳು. ಯಾಕೇ ಕೈನೆ ಎಂತ ಜುಟ್ಟು ಹಿಡಿದು ಎಳೆದುಕೊಂಡು ಬಂದು ಆಳುವುದನ್ನು ಬಿಟ್ಟು ಇದು ಏತರದೊ ನೀನು ಮಾಡುತ್ತಿರುವ ಸಾಮ?' ಎಂದಳು.

ಸಾಹುಕಾರನ ಹಿರಿಯ ಹೆಂಡತಿ ನನ್ನ ಮನೆಗೆ ಒಬ್ಬ ಹೆಂಗಸನ್ನು ಕಳುಹಿಸಿದಳು. ತನ್ನ ಗಂಡ ನನ್ನ ಸಂಸಾರವನ್ನು ಕೆಡಿಸಿದ್ದು ತನಗೆ ಬಹಳ ದುಃಖ. ಇನ್ನೊಬ್ಬಳನ್ನು ಮದುವೆಯಾಗಿದ್ದರೆ ಬೇಡ ಎನ್ನುತ್ತಿರಲಿಲ್ಲ. ಹೀಗೆ ಮದುವೆಯಾದ ಹೆಣ್ಣನ್ನು ಕದ್ದು ತಂದು ಮನೆ ಮುರಿದುಕೊಳ್ಳುತ್ತಿದ್ದಾನೆ. ಗಂಡನಾದ ನಾನು ಹೆಂಡತಿಯನ್ನು ಕರೆದುಕೊಂಡು ದೂರ ಎಲ್ಲಿಗಾದರೂ ಹೋಗುವುದಾದರೆ ತಾನು ಖರ್ಚುವೆಚ್ಚ ಕೂಡಿ ಎಲ್ಲ ಸಹಾಯವನ್ನು ಮಾಡುವುದಾಗಿ ತಿಳಿಸಿದಳು.

"ನನಗೆ ಇದು ಯಾವುದೂ ಒಪ್ಪಿಗೆಯಾಗಲಿಲ್ಲ, ನಾಯನ. ನನ್ನ ಹೆಂಡತಿ ವಿಷಯಕ್ಕೆ ನಾನು ಹೇಗೆ ನಡೆದುಕೊಳ್ಳಬೇಕು ಎನ್ನುವುದು ಒಂದೇ ನನಗೆ ಯೋಚನೆ. ಜನ ನನ್ನನ್ನು ಏನು ಹೇಳುತ್ತಾರೆ, ಜನ ಅವಳ ತೌರನ್ನು ಏನು ಹೇಳುತ್ತಾರೆ, ಸಾಹುಕಾರನಿಗೆ ಏನಾಗುತ್ತದೆ, ಇದೆಲ್ಲ ಅವಾಂತರದ ಮಾತು. ನಾನು ಕೈಹಿಡಿದ ಹುಡುಗಿ ಮನಚೆದರಿ ಬೇರೆಕಡೆ ಹೋದಳು. ನಾನೇನು ಮಾಡಬೇಕು? ಬೈಯಲಾ? ಹೊಡೆಯಲಾ? ಬಲವಂತ ಮಾಡಲಾ? ಬಿಟ್ಟುಬಿಟ್ಟೆ ಎನ್ನಲಾ? ಏನು ಮಾಡಲಿ? ನನ್ನ ಸ್ವಭಾವಕ್ಕೆ ನಾನು ಏನು ಮಾಡುತ್ತಿದ್ದೆನೋ ಅದೇ ಸಾಧ್ಯ. ಕೈಹಿಡಿದ ಹೆಣ್ಣು ಕೈಬಿಟ್ಟಳು. ನನಗೆ ಬೇಸರವಾಯ್ತು. ಕೋಪ ಬರಲಿಲ್ಲ. ಇನ್ನೊಬ್ಬ ಹೆಂಗಸು ಬೇಕೆನ್ನಿಸಲಿಲ್ಲ. ಇಲ್ಲದಿದ್ದರೆ ಇನ್ನೊಂದು ದಿನ, ಈ ಜನ್ಮಕ್ಕಲ್ಲದೆ ಇದ್ದರೆ ಇನ್ನೊಂದು ಜನ್ಮಕ್ಕಾದರೂ ನಾನು ಇವಳಿಗೆ ದಿಕ್ಕಾಗಿರಬೇಕು ಎಂದೇ ನನ್ನ ತಿಳಿವಳಿಕೆ. ಆದ್ದರಿಂದ ನಾನು ಯಾವ ಮಾತಿಗೂ ಕಿವಿಗೊಡಲಿಲ್ಲ. ಮಾರನೆಯ ದಿನ ಎದ್ದು ಇತ್ತ

ಹೊರಟುಬಂದುಬಿಟ್ಟೆ. ಇಲ್ಲಿ ಹೊಟ್ಟೆ ಹೊರೆಯುತ್ತಿದ್ದೇನೆ. ನಾಲ್ಕು ಕಾಸು ಉಳಿಯುತ್ತದೆ; ಅದನ್ನು ತಾಯಿಗೆ ಕಳುಹಿಸುತ್ತಾ ಇದ್ದೇನೆ. ಇಲ್ಲಿ ಪಾಳೆಯದಲ್ಲಿ ನಮ್ಮ ಕಡೆಯಿಂದ ಬಂದಿರುವ ಜನ ಇದ್ದಾರೆ. ಅವರಲ್ಲಿ ಒಬ್ಬರಿಗೆ ನಾಲ್ಕು ಕಾಸು ಕೊಟ್ಟು ಹಾಕಿದ್ದನ್ನು ತಿಂದುಕೊಂಡು ಕಾಲ ನೂಕುತ್ತಿದ್ದೇನೆ."

೪

ಭಾವಿಯೆಂದು ಇಣಿಕಿದರೆ ಪಾತಾಳ ಕಂಡಂತೆ ಲೋಕಾಭಿರಾಮವಾಗಿ ಕಷ್ಟಸುಖ ವಿಚಾರಿಸಿದರೆ ಒಂದು ವಿಷಾದಾಂತ ನಾಟಕ ಕಂಡಂತಾಯಿತು. ದಾರಿಯಲ್ಲಿ ಹೋಗುವ ಒಬ್ಬ ಸೌದೆ ಹೊರೆಕಾರನ ಜೀವನ ಇಷ್ಟು ದುರಂತವಾಗಿರಬಹುದೆಂದು ಯಾರಿಗೆ ತೋರಬೇಕು? ಅಥವಾ ದುರಂತವಾಗಿತ್ತು; ಹೊಟ್ಟೆಗೆ ಸಾಲದೆಯೊ, ಬಟ್ಟೆಗೆ ಇಲ್ಲದೆಯೊ, ಬಡತನದ ಬವಣೆಯಿಂದ ದುರಂತವಾಗಿರಬಹುದು. ಅದುಬಿಟ್ಟು ಈ ನಾಟಕೀಯ ದುರಂತ ಈ ಬಾಳನ್ನು ಕೆಡಿಸಿರಬೇಕೆ? ಹೀಗೆ ಕೆಟ್ಟ ಬಾಳನ್ನು ಸಹಿಸುತ್ತ ಈ ಸಾಮಾನ್ಯ ಮನುಷ್ಯ ಸೌದೆಯನ್ನು ಹೊರುವಷ್ಟೇ ಕೆಚ್ಚಿನಿಂದ ಈ ಚಿಂತೆಯನ್ನು ಸಹಿಸಬಲ್ಲ ಧೀರನಾಯಕನಾಗಿರಬೇಕೆ? ಧೀರನು ಮಾತ್ರವೊ, ಉದಾತ್ತನೂ ಹೌದೊ? ನನಗೆ ನಿಜವಾಗಿ ವಿಸ್ಮಯವಾಯಿತು. ಆದರೆ ಇಂಥ ದುಃಖಕ್ಕೆ ನಾನು ಸಮಾಧಾನವಾಗಿ ಏನನ್ನು ಹೇಳಬಹುದು? ಅಥವಾ ಇವನು ಆಡಿದ ಮಾತನ್ನು ಕೇಳಿದರೆ ಇವನಿಗೆ ನಾನು ಸಮಾಧಾನ ಹೇಳಬೇಕಾದ ಅವಶ್ಯಕತೆಯೂ ಕಾಣಲಿಲ್ಲ. ಯಾವ ಮಾತೂ ಆಡದಿದ್ದರೆ ಚೆನ್ನವಲ್ಲ ಎಂದು ನಾನು, 'ಪಾಪ, ನಿನಗೆ ಚಿಕ್ಕ ವಯಸ್ಸಿನಲ್ಲಿ ಇಂಥ ಕಷ್ಟ ಬಂದಿತಲ್ಲೋಪ್ಪ,' ಎಂದೆ. 'ಬೆಟ್ಟದ ದೇವರ ಇಷ್ಟ ಸ್ವಾಮಿ. ಅವನು ಬಡಿಸಿದ್ದನ್ನು ಉಣ್ಣಬೇಕು' ಎಂದು ಅವನು ಉತ್ತರಕೊಟ್ಟನು. ಇಷ್ಟುಹೊತ್ತಿಗೆ ದಾರಿಯಲ್ಲಿ ಯಾರೊ ಇಬ್ಬರು ನಡೆದುಕೊಂಡು ಬಂದರು. ವೆಂಕಟಿಗ ಅವರನ್ನು ಕರೆದು, 'ಅಪ್ಪಾ ಈ ಹೊರೆಯನ್ನು ಸ್ವಲ್ಪ ತಲೆಗೆ ಏರಿಸಿ,' ಎಂದನು. ಅವರ ಸಹಾಯದಿಂದ ಹೊರೆಯನ್ನು ಮತ್ತೆ ತಲೆಯಮೇಲೆ ತೆಗೆದುಕೊಂಡನು. 'ಕಾಲಿಗೆ ಬಿದ್ದೆ ದೇವರೆ, ನಾ ಬರುತ್ತೇನೆ,' ಎಂದು ಹೊರಟನು. ನಾನೂ ಎದ್ದು ಮನೆಯ ಕಡೆಗೆ ಮುಂದುವರಿದೆನು. ಕ್ಷಣಬಿಟ್ಟು ಈ ವಿವರವನ್ನು ತಿಳಿದುಕೊಳ್ಳಬೇಕೆಂದು ತೋರಿ, 'ವೆಂಕಟಪ್ಪಾ ನೀ ಊರು ಬಿಟ್ಟು ಎಷ್ಟು ದಿವಸವಾಯಿತು?' ಎಂದು ಕೇಳಿದೆನು. ಅವನು, 'ಆರು ತಿಂಗಳಾಯಿತು ಸ್ವಾಮಿ,' ಎಂದನು.

ಹದಿನೈದು ದಿನಕ್ಕೆ ತಿಂಗಳಿಗೆ ದೃಷ್ಟಿಯಿಂದ ಅವನ ಕಡೆ 'ಕಾಲಿಗೆಬಿದ್ದ ನಾಯನ, ಅದಾದಮೇಲೆ ಈ ದಾರಿಯಲ್ಲಿ ನಡೆಯುತ್ತ ನಾನು ಒಂದು ಸಲ ಇವನನ್ನು

ಕಾಣುತ್ತಿದ್ದೆನು. ನಾನು ಎತ್ತಲೋ ನೋಡದೆ ಇದ್ದರೂ ವೆಂಕಟಿಗ ತಾನೇ ಹತ್ತಿರ ಬಂದು, ಚೆನ್ನಾಗಿದ್ದೀರಾ' ಎಂದು ಕೇಳುವನು. ಒಂದೆರಡು ಸಲ ಅವನೇ ಏನೋ ಜ್ಞಾನವಾಗಿದ್ದು ನಾನು ಮಾತನಾಡಿಸಿದ್ದೂ ಉಂಟು. 'ಏನು ವೆಂಕಟಪ್ಪ, ಸೌದೆ ತರಲಿಕ್ಕೆ ಹೊರಟೆಯೊ, ವ್ಯಾಪಾರ ಚೆನ್ನಾಗಿದೆಯೊ, ಹದಿನೈದು ದಿವಸದಿಂದ ಇತ್ತ ಬರಲಿಲ್ಲವೊ,' ಎಂದು ಮುಂತಾಗಿ ನಾನು ಕೇಳುವುದು, ಅವನು ವಿನಯದಿಂದ ತಕ್ಕ ಉತ್ತರ ಕೊಡುವುದು, ಹೀಗೆ ನಮ್ಮ ಪರಿಚಯ ನಿಲ್ಲದೆ ನಡೆಯಿತು.

ಇಂಥ ಅವಿಸಹ್ಯವಾದ ನೋವಿನಿಂದ ಬದುಕು ಮುಗಿದಿದ್ದರೂ ವೆಂಕಟಿಗ ಹರ್ಷವಾಗಿಯೇ ಇರುವುದನ್ನು ನೋಡಿ ನನಗೆ ಒಂದು ದಿನ ಅವನ ಚೇತನ ಆ ಹಳ್ಳಿಯ ಪಾಳಿನಂತೆ ಅಜೇಯ ಎಂದು ಎನ್ನಿಸಿತು. ಅಥವಾ ಎಲೆಯೆಲ್ಲ ಉದುರಿಹೋದರೂ ಕೊಂಬೆಕೊಂಬೆಯ ಕೊನೆಗೆ ಹೂವನ್ನು ಧರಿಸಿ ನಿಲ್ಲುವ ದೇವಕಣಿಗಿಲೆಯಂತೆ ಆತ್ಮವಂತ ಸತ್ವ ಎಂದು ಕಂಡಿತು.

೫

ಸಾಮಾನ್ಯವಾಗಿ ಕಥೆ ಇಲ್ಲಿಗೆ ಮುಗಿಯಬೇಕು. ಆದರೆ ಇಷ್ಟೇ ಆಗಿದ್ದರೆ ನಾನು ಇದನ್ನು ಹೇಳಲು ತೊಡಗುತ್ತಿದ್ದೆನೊ ಇಲ್ಲವೊ. ವೆಂಕಟಿಗನ ಚರಿತ್ರೆ ಈ ವರ್ಷ ಮುಂದುವರಿಯಿತು. ಆ ಮುಂದರಿದ ಭಾಗವನ್ನು ಹೇಳುವುದು ನನಗೆ ಸಂತೋಷ.

ಈಗ ಒಂದು ತಿಂಗಳ ಹಿಂದೆ ಒಂದು ದಿನ, ನಾನು ಅವನನ್ನು ನಮ್ಮ ವಾಡಿಕೆಯ ದಾರಿಯಲ್ಲಿ ಕಂಡೆನು. 'ಏನು ವೆಂಕಟಪ್ಪ ಒಳ್ಳೆ ಸೌದೆ ಸಿಕ್ಕಿತೊ,' ಎಂದು ಕೇಳಿದೆನು. ಅವನು, 'ಸಿಕ್ಕಿತು ನಾಯನ, ನಿಮ್ಮ ಆಶಿಸ್ತಿನಿಂದ ಅದಕ್ಕೂ ಹೆಚ್ಚಿನ ಒಳ್ಳೆಯದು ಆಗಿದೆ,' ಎಂದನು.

ಏನು ಆಗಿರಬಹುದು ಎಂದು ನನಗೆ ತೋರಲಿಲ್ಲ. ಯಾರಾದರೂ ದಿನವೂ ಕಟ್ಟಿಗೆ ತಾ, ತಿಂಗಳಿಗೆ ಮೂವತ್ತು ರೂಪಾಯಿ ಕೊಡುತ್ತೇವೆ, ಎಂದು ಹೇಳಿದ್ದರೆ? ಇವನ ಹೆಚ್ಚಿನ ಶುಭ ಯಾವುದು? ಆ ಹೆಂಡತಿ ಹಿಂದಕ್ಕೆ ಬಂದಿರಬಹುದೊ? ಇರಲಾರದು; ಇಷ್ಟೆಲ್ಲ ಯೋಚನೆ ಮನಸ್ಸಿನಲ್ಲಿ ಹರಿಯುತ್ತಿರಲಾಗಿ ನಾನು, 'ಏನು ಸಂಗತಿ,' ಎಂದು ಕೇಳಿದನು.

ನಿಮ್ಮನ್ನ ಹದಿನೈದು ದಿವಸದ ಹಿಂದೆ ನೋಡಿದೆನಲ್ಲ ನಾಯನ, ಅದರ ಮಾರನೆಯ ದಿವಸ ನಮ್ಮ ಊರಿಂದ ಕಾಗದ ಬಂತು. ಅದನ ನಮ್ಮ ತಾಯಿ

ಬರೆಯಿಸಿದ್ದಳು. ಆ ಸಾಹುಕಾರನಾದವನು ಇನ್ಯಾವ ಒಬ್ಬ ಹೆಂಗಸನ್ನು ಹೊತ್ತುಕೊಂಡು ಬಂದನಂತೆ. ಅವನ ಮನೆಯಲ್ಲಿ ದೊಡ್ಡ ರಾದ್ಧಾಂತವಾಯಿತು. ಅವನ ಹೆಂಡತಿಯರು ಅವನ ಮನೆಬಿಟ್ಟು ಹೊರಟುಹೋಗುತ್ತೇವೆ. ಎಂತ ಹೇಳಿದರಂತೆ. ಈ ಹುಡುಗಿಗೂ ಬಹಳ ಬೇಸರವಾಯ್ತು. ಇವಳು, 'ನಾನು ನಿನ್ನ ಹತ್ತಿರ ಇರೋದಿಲ್ಲ,' ಎಂತ ಹೇಳಿದಳಂತೆ. ಅವನು, 'ನೀನೇನು ತಾಲಿ ಕಟ್ಟಿಸಿಕೊಂಡ ಹೆಂಗಸು ಎಂತ ತಿಳುಕೊಂಡೆಯೊ? ಬಿಸಿ ಹಿಟ್ಟು ಸಿಕ್ಕುತ್ತ ಅಂತ ಬಾಯಿ ತೆರೆದು ಬಂದ ನಾಯಿ, ನಿನಗೆಷ್ಟೇ ಅಹಂಕಾರ?' ಎಂದನಂತೆ ಹುಡುಗಿ, 'ದೇವರಂಥ ಗಂಡನ್ನ ಬಿಟ್ಟು ನಿನ್ನ ಹತ್ತಿರ ಬಂದೆ. ನನ್ನ ಬುದ್ಧಿಗೆ ಕತ್ತಲು ಮುಚ್ಚಿತ್ತು. ಆ ಹೊತ್ತು ಒಳ್ಳೆಯ ಮಾತಾಡಿ ನೀನು ನನ್ನನ್ನು ಕೆಡಿಸಿದೆ, ಮಿಂಡನಾದೆ. ಈ ಹೊತ್ತು ಕೆಟ್ಟ ಮಾತನ್ನಾಡಿ ನನ್ನ ಉದ್ಧಾರ ಮಾಡಿದೆ. ನೀನು ನನ್ನ ತಂದೆ' ಎಂದು ಹೇಳಿ ಅವನು ಕೊಟ್ಟಿದ್ದ ಒಡವೆ ವಸ್ತ್ರ ಎಲ್ಲವನ್ನೂ ಅಲ್ಲಿ ಬಿಟ್ಟು ಅವನ ಹೆಂಡತಿಯರ ಕಾಲಿಗೆ ಬಿದ್ದು, 'ನಾನು ನಿಮ್ಮ ಹಾಸಿಗೆ ಕೆಡಿಸಿದೆ, ನನ್ನ ಪಾಪವನ್ನು ಮನ್ನಿಸಿ' ಎಂದು ಬೇಡಿ ಹೊರಟು ಬಂದಳಂತೆ, ನಮ್ಮ ಮನೆಯ ಹತ್ತಿರ ಬಂದು ನಮ್ಮ ತಾಯಿಗೆ, 'ನೀನು ಹೇಳಿದ ಕೆಲಸ ಮಾಡಿಕೊಂಡು ನೀನು ಹಾಕಿದ್ದನ್ನು ತಿಂದುಕೊಂಡು...ಇರುತ್ತೇನೆ' ಎಂದಳು. ತಾಯಿ ಏನು ಮಾಡುವುದು ಎಂದು ಯೋಚಿಸುತ್ತಿದ್ದಳು. ಅವರಮ್ಮ ಬಂದು, ಬೇಕಾದಾಗ ಹೋದೆ, ಬೇಡವಾದಾಗ ಬರ್ತಾ ಇದೀಯ, ನಿನಗೆ ಅನ್ನ ಹಾಕಬಹುದೊ ಕೂಡದೊ ಹೇಳುವ ಯಜಮಾನ ಇಲ್ಲಿಲ್ಲ. ಅವನಿರೋ ಕಡೆಗೆ ಹೋಗು, ಅವನು ಒಪ್ಪಿಕೊಂಡರೆ, ಬಾಳು, ಇಲ್ಲದಿದ್ದರೆ ಹಾಳಾಗು' ಎಂದಳು. 'ನಾಳೆ ಬೆಂಗಳೂರಿಗೆ ಹೊರಟು ಬರುತ್ತಾಳೆ' ಎಂದು ಕಾಗದದಲ್ಲಿ ಬರೆದಿತ್ತು. ನನಗೆ ಸಂತೋಷವಾಯೋ ದುಃಖವಾಯೋ ನಾನೇ ಕಾಣೆ. ಮಾರನೆಯ ದಿನ ಸೌದೆಗೆ ಎಂತ ಹೊರಕ್ಕೆ ಬರದೆ ಪಾಳೆಯದಲ್ಲೇ ಇದ್ದೆ. ಅವಳ ದಿಟ್ಟ ನೋಡಿ, ನಾಯನ, ಮಗುವನ್ನು ಎತ್ತಿಕೊಂಡು ಒಬ್ಬಳೇ ಅಲ್ಲಿಂದ ಬಂದುಬಿಟ್ಟಿದ್ದಾಳೆ. ನಾನು ನಮ್ಮವರ ಮನೆ ಮುಂದುಗಡೆ ಕೂತಿದ್ದೆ, ನಾನಿರುವ ಕಡೆಗೆ ಸರಿಯಾಗಿ ಅವಳು ಬರಬೇಕೆ? ಈ ಪಾಳೆಯ ಎಲ್ಲಿ ಎಂದು ಜನರನ್ನು ಕೇಳಿಕೊಂಡು ಉದ್ದಕ್ಕೆ ನಾನು ಕುಳಿತಿದ್ದ ಜಗಲಿಯವರೆಗೆ ಬಂದಿದ್ದಾಳೆ. ನಾನು ಹಾಗೆ ಎದುರಿಗೆ ಸಿಕ್ಕುತ್ತೇನೆ ಎಂದು ಅವಳು ನಿರೀಕ್ಷಿಸಿರಲಿಲ್ಲ. ನನ್ನನ್ನು ಕಂಡಳು. ಕ್ಷಣ ಮುಖಕೆಟ್ಟಳು. ಮರುಕ್ಷಣ ಬಂದು ಮಗುವನ್ನು ನನ್ನ ಕಾಲ ಮೇಲೆ ಹಾಕಿ ತಾನೂ ಹಣೆಯನ್ನು ನೆಲಕ್ಕೆ ಇಟ್ಟು, 'ನನ್ನ ದೇವರು ತಿರುಗಿ ಸಿಕ್ಕಿದೆ, ಬದುಕಿಸಿದರೆ ಬದುಕಿಸು, ಸಾಯಿಸಿದರೆ ಸಾಯಿಸು' ಎಂದು ಅತ್ತುಕೊಂಡಳು. ನಾನು ಮಗುವನ್ನು

ಎತ್ತಿಕೊಂಡೆ. 'ಹಸುಗೂಸನ್ನು ಹೀಗೆ ಎಸೆಯುವುದೆ? ಏಳು' ಎಂದೆ. ಅವಳನ್ನು ಎತ್ತಿ ನಿಲ್ಲಿಸಿ ನಾನಿರುವ ಮನೆಯ ಹೆಂಗಸನ್ನು ಕರೆದು, 'ನನ್ನ ಹೆಂಡತಿ ಬಂದಿದ್ದಾಳೆ, ಒಂದು ಮನೆ ಮಾಡುವವರೆಗೆ ಇಲ್ಲಿ ಸ್ವಲ್ಪ ಸ್ಥಳ ಕೊಡವ್ವ' ಎಂದು ಕೇಳಿದೆ. ಆ ಹೊತ್ತು ಮಾರನೆಯ ದಿನ ಅಲ್ಲಿದ್ದು ಮೂರನೆಯ ದಿನ ಒಂದು ಗುಡಿಸಲಿನಲ್ಲಿ ಅರ್ಧವನ್ನು ಬಾಡಿಗೆಗೆ ಮಾಡಿಕೊಂಡೆವು. ಯಾವ ಹೊತ್ತಿನಲ್ಲಿ ನಾನು ಹೊತ್ತಿದ್ದ ಕಟ್ಟಿಗೆಯನ್ನ ನಿಮ್ಮ ಹಿರಿಯ ಕೈ ಮುಟ್ಟಿತೊ, ಒಣಗಿದ ಮರ ಚಿಗಿತಂತೆ ನನ್ನ ಬದುಕು ಚೆನ್ನವಾಯಿತು.'

ನಾನು, 'ತುಂಬ ಸಂತೋಷ. ಅಂತು ನಿನಗೆ ನಿನ್ನ ಹೆಂಡತಿಯ ವಿಷಯದಲ್ಲಿ ಕೋಪ ಇಲ್ಲವಲ್ಲ, ಮನಸ್ಸಿನಲ್ಲಿ ಕಲ್ಮಷ ಇಟ್ಟುಕೊಳ್ಳುವುದು ಬುದ್ಧಿ ಅಲ್ಲ,' ಎಂದೆನು.

ಅವನು, 'ಇಲ್ಲ ನಾಯನ, ಇಲ್ಲ, ತಿಳಿಯದ ಹುಡುಗಿ. ಈಗಲೂ ಅಷ್ಟೇ, ಅವಳೇನು ತಿಳಿದ ಹೆಂಗಸಲ್ಲ. ಪಾಪ,' ಎಂದನು.

ನನಗೆ ಇವನ ದೊಡ್ಡತನವನ್ನು ಕಂಡು ಆಶ್ಚರ್ಯವಾಯಿತು. ನಾನು, "ಮಗುವನ್ನು ಚೆನ್ನಾಗಿ ನೋಡಿಕೊಳ್ಳಬೇಕು," ಎಂದೆನು.

"ನೋಡಿಕೊಳ್ಳುತ್ತೇನೆ. ಸ್ವಾಮಿ, ತನ್ನನ್ನೇನೊ ಒಪ್ಪಿಕೊಳ್ಳುತ್ತಾನೆ. ಮಗುವಿಗೆ ಏನು ಎನ್ನುತ್ತಾನೋ ಎಂದು ಅವಳಿಗೆ ಭಯ ಇದ್ದಿರಬೇಕು. ಬಂದ ದಿನ ಸ್ವಲ್ಪ ಹೊತ್ತಿನಮೇಲೆ ಮಗುವನ್ನು ನನ್ನ ಹತ್ತಿರ ತಂದು 'ಇದರ ಮೂಗು ಹುಬ್ಬು ನೋಡು ನಿನ್ನ ಹಾಗೆಯೇ ಇದೆ. ಎಂದಳು. ಇದು ಹೌದೋ ಅಲ್ಲವೊ ನಾನೇಕೆ ನೋಡಲಿ? ನಾನು, 'ಹೌದು,' ಎಂದೆ. ಅವಳಿಗೆ ಸಮಾಧಾನವಾಯಿತು. ಮಗು ಯಾರದೇನು? ಬಾಲಗೋಪಾಲ. ಸಾಕಿದವರು ಪುಣ್ಯವಂತರು."

"ಈಗ ಮಗುವಿಗೆ ವರ್ಷ ಅರೆ ಆಗಿದೆಯೋ?" ಎಂದು ನಾನು ಕೇಳಿದೆನು. ವೆಂಕಟಿಗ, "ತಿಂಗಳು ಹೆಚ್ಚು ಕಡಮೆ. ಕೇಳಿ ಆಗುವುದೇನು? ಕೇಳಿದರೆ ವಿಚಾರಣೆ ಮಾಡಿದ ಅಂತ ನೊಂದುಕೊಳ್ಳುತ್ತಾಳೆ. ಅವಳು ಸಂತೋಷವಾಗಿರಲಿ ಸ್ವಾಮಿ, ನನ್ನ ಮಾತೇನು?" ಎಂದನು.

ವೆಂಕಟಿಗನ ಒಂದೊಂದು ಮಾತೂ ಅವನ ಜೀವ ಎಷ್ಟು ಹಿರಿಯದೆಂದು ತೋರುತ್ತಿತ್ತು. ನಾನು ಅವನನ್ನು "ಬರುವ ಕಾಸು ಸಾಕಾಗುತ್ತದೆ," ಎಂದು ಕೇಳಿದೆನು.

"ಬೇಕಾದಷ್ಟು ಆಯ್ತು ನಾಯನ, ಆದರೂ ನನ್ನ ಹೆಂಡತಿ ತಾನೂ ಮೂರುಕಾಸು ಗಳಿಸ್ತೇನೆ, ಅಂತ ದಿನ ಬಿಟ್ಟು ದಿನ ನನ್ನ ಜೊತೆಗೆ ಸೌದೆಗೆ ಬರ್ತಾಳೆ, ಬೇಡ

ಎಂದರೆ ಕೇಳ್ತಾ ಇಲ್ಲ. ತಲೆಮೇಲೆ ಹೊರೆ, ಕಂಕುಳಲ್ಲಿ ಮಗು, ನಡೀಲಾರದೆ ನಡೀತಾಳೆ, ಊಟಕ್ಕೆ ಚಿಂತೆಯಿಲ್ಲ."

೬

ರಥಸಪ್ತಮಿ ದಿನ ನಾನು ವೆಂಕಟಿಗನನ್ನು ಮೊದಲ ಸಲ ನೋಡಿದ ತಿಟ್ಟಿನ ಅತ್ತಟ್ಟು ಕಂಡೆನು, "ಎಲ್ಲಾ ಚೆನ್ನಾಗಿದ್ದೀರಾ," ಎಂದು ಕೇಳಿದೆನು. ಅವನು, 'ದೊಡ್ಡವರ ಆಶಿಸ್ಸು' ಎಂದು ಹೇಳಿ, "ಊರಿನಿಂದ ಮೊನ್ನೆ ಒಂದು ಕಾಗದ ಬಂತು ನಾಯನ, ಆ ಸಾಹುಕಾರನನ್ನ ಯಾರೋ ಕಡಿದುಹಾಕಿದರಂತೆ, ಪಾಪ, ಅನ್ಯಾಯವಾಗಿ ಕೆಟ್ಟುಹೋದ," ಎಂದನು.

ನಾನು, 'ಇದನ್ನು ಮನೆಯಲ್ಲಿ ಹೇಳಿದೆಯಾ?' ಎಂದು ಕೇಳಿದೆನು. ಅವನು ಕಾಗದ ಬಂದದ್ದನ್ನು ಅವಳು ಬಲ್ಲಳು. ಅದನ್ನು ಓದಿಸುವುದಕ್ಕೆ ಎಂದು ತೆಗೆದುಕೊಂಡು ಹೋದೆ. ಓದಿಸಿಕೊಂಡು ಬಂದು, 'ಅಮ್ಮ ಅತ್ತೆ, ಎಲ್ಲ ಚೆನ್ನ ಎಂದು ಬರೆದಿದ್ದಾರೆ,' ಎಂದು ಹೇಳಿದೆ. ನನ್ನ ಮುಖದಿಂದ ಅವಳಿಗೆ ಮತ್ತೇನೋ ತೋರಿರಬೇಕು. ಅವಳು ನನ್ನನ್ನು ದೃಷ್ಟಿಸಿ ನೋಡಿದಳು. 'ಇನ್ನೇನು ಸಂಗತಿ ಹೇಳು' ಎಂದಳು. ನಾನು 'ಏನು ಸಂಗತಿ ಎನ್ನುತ್ತೀಯೆ?' ಎಂದೆನು. ಅವಳು, 'ಮತ್ತೆ ಯಾಕೆ ಹಾಗೆ ನನ್ನನ್ನು ನೋಡ್ತಿ?' ಅವನಿಗೆ ಏನಾದರೂ ಆಯಿತು. ಎಂತಲೆ ಅವನಿಗೇನಾದರೆ ನನಗೇನು? ತಪ್ಪು ಗಂಟು ಬಿದ್ದಿತು. ಬಿಡಿಸಿಕೊಂಡಿತು. ಒಳ್ಳೆಯವನಾಗಿ ಬಾಳಿದರೆ ಸಂತೋಷ ಕೆಟ್ಟರೆ ಮತ್ತಷ್ಟು ಕೆಡುತ್ತಾನೆ, ಎಂದಳು, ನಾನು, 'ಸರಿ, ಇನ್ನೇನು ಕೆಡ್ತಾನೆ ಅವನು,' ಎಂದೆ. ಅವಳು ತಿಳಿದುಕೊಂಡಳು. ಎಲ್ಲರೂ ನಿನ್ನಂತೆ ಒಳ್ಳೆಯವರೇ ಇರ್ತಾರೆಯೇ? ಬೀದಿಗೆ ಬಂದ ಹಾವನ್ನ ಯಾರೋ ಕೊಲ್ಲುವುದೇ ನಿಜ. ಅವನಾಟವೂ ಮುಗಿಯಿತು,' ಎಂದಳು. ನಾನು ಏನೂ ಹೇಳಲಿಲ್ಲ. ಅವಳ ಕಣ್ಣಿನಲ್ಲಿ ಹನಿಗೂಡಿತ್ತು.

"ಹೆಣ್ಣು ಜೀವ, ಹಗೆ ಸತ್ತರೂ ಅಳಬೇಕು."

ಈ ಮಾತನಾಡುತ್ತ ನಾವು ತಿಟ್ಟಿನ ನೆತ್ತಿಯನ್ನು ಮುಟ್ಟಿದೆವು. ಎದುರಿಗೆ ಹಳೆಯೂರಿನವರೆಗೆ ಇಳಿನೆಲ. ಆ ಕಡೆ ನಾವು ನೋಡುವ ಹೊತ್ತಿಗೆ ವೆಂಕಟಿಗ, "ಅವಳೂ ಈ ಹೊತ್ತು ನನ್ನ ಜೊತೆಗೆ ಬಂದಳು, ನಾಯನ. ಮಗು ಸ್ವಲ್ಪ ಕಾಡಿತು. ಅದನ್ನ ಸಮಾಧಾನಮಾಡುತ್ತ ಕುಳಿತಿಕೊಂಡರೆ ಹೊತ್ತು ಕಳೆಯುತ್ತೆ. ಅಲ್ಲದೆ ಇವಳು ಒಂದು ದಿನ ಹೊರೆ ಹೊರದೇ ಇದ್ದರೆ ಏನು, ಅಂತ ನಾನು ಅವಳನ್ನ ಈ ಭಾವಿಯ ಹತ್ತಿರ ಬೇವಿನ ಮರದಡಿ ಕುಳ್ಳಿರಿಸಿ ಬಂದೆ. ಅಕೋ

ನೋಡಿ ನಾಯನ, ಅಲ್ಲಿ ಆ ಹೆಂಗಸೂ ಮಗೂ ಕಾಣ್ತಾರಲ್ಲ, ಅದೇ ನನ್ನ ಹೆಂಡತಿ ಮಗು," ಎಂದನು.

ನಾನು ಆ ಕಡೆ ನೋಡಿದೆನು. ಆ ತಾಯಿ ಆ ಮಗು ಆ ಅಳಿದ ಊರಿಗೆ ಒಂದು ಹೊಸಜೀವ ಬಂದಂತೆ ಕಾಣಿಸಿಕೊಂಡರು. ತಾಯಿ ಮಗುವಿಗೆ ನಾಲ್ಕು ದೇವಕಣಿಗಿಲೆ ಹೂವನ್ನು ಕೊಟ್ಟು ಆಡಿಸುತ್ತಿದ್ದಳು. ಎರಡು ಹೆಜ್ಜೆ ಮುಂದಿಡುವುದರಲ್ಲಿ ವೆಂಕಟಿಗ ನನಗೆ, "ಸ್ವಾಮಿ, ಒಂದು ಮಾತು," ಎಂದನು. ನಾನು, 'ಏನು ವೆಂಕಟಪ್ಪ?' ನಮ್ಮ ಸ್ವಾಮಿಯವರು ಎಂತ ಹೇಳೇನೆ. ತಾಯಿನ ಮಗೂನ ಹರಸಿ. ಆದರೆ ಊರಿನ ಆ ಸಂಗತಿ ನಿಮಗೆ ತಿಳಿದಿದೆ ಎನ್ನುವುದನ್ನು ತೋರಿಸಿಕೊಡಬೇಡಿ. ಅವಳು ಮನಸ್ಸು ಚಿಕ್ಕದು ಮಾಡಿಕೊಳ್ಳುತ್ತಾಳೆ.' ನಾನು, "ಒಳ್ಳೆಮಾತು, ನಾನ್ಯಾಕೆ ಆ ತಂಟೆಗೆ ಹೋಗಲಿ?" ಅವನು, "ಹೋಗೋದಿಲ್ಲ ನಾನು ಬಲ್ಲೆ ಆದರೂ ಮರೆತೆಲ್ಲಾದರೂ ಅರ್ಧ ಮಾತು ಜಾರಿ ಬಂದೀತು ಎಂತ ಬೇಡಿಕೊಂಡೆ; ಮನ್ನಿಸಬೇಕು," ಎಂದನು.

ನಾವು ಹಳೆಯೂರ ಬಳಿಗೆ ಬಂದೆವು. ವೆಂಕಟಿಗನ ಹೆಂಡತಿ ಎದ್ದು ನಿಂತಳು. ಮಗುವನ್ನು ಕೈಯಿಂದ ಹಿಡಿದು ತನ್ನ ಕಾಲದೆಶೆಗೆ ನಿಲ್ಲಿಸಿಕೊಂಡಳು. ವೆಂಕಟಿಗ ಅವಳಿಗೆ, "ನಮ್ಮ ಅಯ್ಯನೋರು, ನನ್ನನ್ನು ನೋಡಿಕೊಳ್ಳುವವರು. ನಿನಗೆ ಹೇಳಿದ್ದೆನಲ್ಲಾ ಅವರು, ಕಾಲಿಗೆ ಬೀಳು," ಎಂದನು. ಅವಳು ಬಂದು ಮಂಡಿಯೂರಿ ನನಗೆ ನಮಸ್ಕಾರ ಮಾಡಿದಳು. ನಾನು ಹರಸಿದೆನು. ಆಮೇಲೆ ಅವಳು ಬಹು ಸಂಭ್ರಮದಿಂದ ಮಗುವನ್ನು ನನ್ನ ಕಾಲಹತ್ತಿರ ಹಾಕಿದಳು. ಹೊಸಬನೆಂದು ಅದು ಚೀರಿತು. ನಾನು, 'ಮಗುವನ್ನು ಅಳಿಸಬೇಡ ಎತ್ತಿಕೋಮ್ಮ' ಎಂದೆನು. ಅವಳು ಅದನ್ನು ಎತ್ತಿಕೊಂಡಳು. ನಾನು ಅದರ ತಲೆಯನ್ನು ಸವರಿ, 'ನೂರು ವರ್ಷ ಬದುಕಲಿ,' ಎಂದೆನು.

ಮೊದಲ ಕ್ಷಣ ಮಗು ವೆಂಕಟಿಗನಂತೆ ಇದೆಯೇ ಎಂದು ನೋಡೋಣವೇ ಎನ್ನಿಸಿತು. ಒಡನೆಯೇ, "ಕೈಹಿಡಿದ ಗಂಡ ಮಾಡದಿರುವ ಪರೀಕ್ಷೆಯನ್ನು ನಾನು ಮಾಡಲಿಯೇಕೆ," ಎಂದುಕೊಂಡು ಸುಮ್ಮನಾದೆನು. ಇಂಥ ಸಂದರ್ಭವನ್ನು ಕುರಿತೇ ಹಿರಿಯರು ಮಾತೃಮೂಲವನ್ನು ನೋಡಬೇಡ ಎಂದು ಶಾಸನ ಮಾಡಿರುವುದು. ನನ್ನ ಹರಕೆಯಿಂದ ವೆಂಕಟಿಗನಿಗೆ ಅವನ ಹೆಂಡತಿಗೆ ತುಂಬ ಸಂತೋಷವಾಯಿತು. ಅಲ್ಲಿಂದ ನಾವು ಜೊತೆಯಾಗಿ ಹೊರಟೆವು. ತಾಯಿ ಮಗುವನ್ನು ಮುಂದೆ ಹೋಗಲು ಬಿಟ್ಟು ನಾನೂ ವೆಂಕಟಿಗನೂ ಸ್ವಲ್ಪ ಹಿಂದೆ ಮೆಲ್ಲನೆ ನಡೆದೆವು. ನಾಲ್ಕು ಹೆಜ್ಜೆ

ನಡೆದಮೇಲೆ ನಾನು ವೆಂಕಟಿಗನನ್ನು "ಹಾಗಾದರೆ ನೀನು ಬೆಂಗಳೂರಿನಲ್ಲಿಯೇ ನಿಲ್ಲುವುದಾಯಿತು," ಎಂದೆನು.

ಅವನು, "ಅದೇ ದೇವರ ಇಷ್ಟ ಅಂತ ಕಾಣದೆ. ಊರಿಗೆ ಹೋದರೆ ಹೊಟ್ಟೆ ಹೊರೆಯುವ ನೆಪದಲ್ಲಿ ನನ್ನ ಅಪ್ಪನ ಬೆಟ್ಟವನ್ನ ಹತ್ತಿ ಇಳಿಯಬಹುದಾಗಿತ್ತು. ವಾರದಲ್ಲಿ ತಿಂಗಳಲ್ಲಿ ಅವನ ಮುಖದ ತಿಲಕವನ್ನು ನೋಡಬಹುದಾಗಿತ್ತು. ಇವಳಿಗೆ ಅತ್ತ ಹೋಗುವ ಮನಸ್ಸಿಲ್ಲ. ಜೊತೆಯ ಜೀವಕ್ಕೆ ಒಲ್ಲದ್ದನ್ನು ನಾನೇಕೆ ಬೇಕು ಎನ್ನಲಿ? ದೂರದಲ್ಲೇ ಇರ್ತೇನೆ, ದೇವರೇ ಎನ್ನುತ್ತೇನೆ, ನನ್ನಪ್ಪ ಕಾಪಾಡಿಕೊಳುತ್ತಾನೆ," ಎಂದನು.

೭

ಶ್ರೀರಾಮ್ ಕಥನವನ್ನು ಮುಗಿಸಿದರು. ಈ ವೇಳೆಗೆ ಮರದ ಮೇಲೆ ಕುಳಿತಿದ್ದ ಹದ್ದು ಹಾರಿಹೋಯಿತು. ನಾನು ಆ ಗರುಡಪಕ್ಷಿ ಕಾಣುತ್ತದೇನೋ ಎಂದು ಗಗನದತ್ತ ನೋಡಿದೆನು. ಅವು ಕಾಣಲಿಲ್ಲ, ನಾವು ಮೂವರೂ ಎದ್ದು ಹಿಂದಿರುಗಿ ಬಂದೆವು.

* * *

ಲೇಖಕರ ಪರಿಚಯ :

ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರು ಕನ್ನಡದ ಆಸ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ 'ಮಾಸ್ತಿ' ಎಂಬ ಗ್ರಾಮದಲ್ಲಿ ದಿನಾಂಕ: ೬-೬-೧೮೯೧ರಲ್ಲಿ ಜನಿಸಿದರು. ಇವರು ಶ್ರೀನಿವಾಸ ಕಾವ್ಯನಾಮದಿಂದ ಸಾಹಿತ್ಯ ಕ್ಷೇತ್ರದಲ್ಲಿ ಪರಿಚಿತರು. ೧೯೧೪ರಲ್ಲಿ ಎಂ.ಎ. ಪದವಿ ಪಡೆದ ಅವರು ೧೯೧೫ರಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿ ನೇಮಕವಾದರು. ೧೯೪೫ರಲ್ಲಿ ಡೆಪ್ಯೂಟಿ ಕಮಿಷನರ್ ಆಗಿ ಸ್ವಯಂ ನಿವೃತ್ತಿಯಾದರು. ೧೯೨೯ರಲ್ಲಿ ಬೆಳಗಾವಿಯಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದರು. ೧೯೫೪ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದರು. ೧೯೪೨ರಲ್ಲಿ 'ರಾಜಸೇವಾಸಕ್ತ' ಎಂಬ ಬಿರುದು ಅವರಿಗೆ ಸಂದಿತು. ಸಣ್ಣಕಥಾ ಪ್ರಕಾರಕ್ಕೆ ಒಂದು ಮೂರ್ತಸ್ವರೂಪವನ್ನು ಕೊಟ್ಟವರು ಮಾಸ್ತಿ. ೧೯೨೦ರ ನವೋದಯ ಪ್ರಾರಂಭ ಕಾಲದಿಂದಲೂ ಕಥೆಗಳನ್ನು ಬರೆಯುತ್ತ ಬಂದ ಮಾಸ್ತಿ ಅವರನ್ನು 'ಸಣ್ಣಕಥೆಗಳ ಜನಕ' ಎಂದು ಗೌರವಿಸಲಾಗುತ್ತಿದೆ.

'ರಂಗನ ಮದುವೆ, ಸಣ್ಣಕಥೆಗಳು ೧ರಿಂದ ೧೫ ಭಾಗಗಳು, ಸುಬ್ಬಣ್ಣ (ನೀಳ್ಗತೆ), ಮಾತುಗಾರ ರಾಮಣ್ಣ, ಶೇಷಮ್ಮ ಅವರ ಸಣ್ಣಕಥಾ ಸಂಕಲನಗಳು. ಬಿನ್ನಹ, ಅರುಣ, ತಾವರೆ, ಚೆಲುವು, ಮಲಾರ ಮೊದಲಾದವು ಅವರ ಕಾವ್ಯ ಸಂಕಲನಗಳು. ಕಾಕನಕೋಟೆ, ಮಾಸ್ತಿ, ಯಶೋಧರಾ, ಭಟ್ಟರ ಮಗಳು, ಕಾಳಿದಾಸ, ಅಜ್ಜನ ದಾರಿ ಮೊದಲಾದವು ನಾಟಕಗಳು. ಚಿಕವೀರರಾಜೇಂದ್ರ, ಚನ್ನಬಸವ ನಾಯಕ ಅವರ ಪ್ರಸಿದ್ಧ ಕಾದಂಬರಿಗಳು. ವಿಮರ್ಶೆ, ಜನತೆಯ ಸಂಸ್ಕೃತಿ, ಜಾನಪದ ಸಾಹಿತ್ಯ, ಆದಿಕವಿ ವಾಲ್ಮೀಕಿ, ಕನ್ನಡಲೆಂಕ ಮೊದಲಾದವು ವಿಮರ್ಶಾ ಕೃತಿಗಳು. ೧೯೬೫ರಿಂದ ಅವರು 'ಜೀವನ' ಎಂಬ ಪತ್ರಿಕೆಯನ್ನು ಸಂಪಾದಿಸಿ, ಪ್ರಕಟಿಸುತ್ತಿದ್ದರು. ಅವರ ಸಣ್ಣ ಕಥಾ ಸಾಹಿತ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಾಪ್ತವಾಗಿದೆ. ೧೯೮೩ರಲ್ಲಿ ಅವರ 'ಚಿಕವೀರರಾಜೇಂದ್ರ' ಕಾದಂಬರಿಗೆ ಭಾರತೀಯ ಅತ್ಯುನ್ನತ ಜ್ಞಾನಪೀಠ ಪ್ರಶಸ್ತಿ ಬಂದಿದೆ. ೬-೬-೧೯೮೬ರಂದು ಇಹಲೋಕ ಯಾತ್ರೆ ಮುಗಿಸಿದರು.

ಕಥೆಯ ಆಶಯ :

'ವೆಂಕಟಿಗನ ಹೆಂಡತಿ' ಕಥೆಯ ಕೇಂದ್ರ ವ್ಯಕ್ತಿಯಾದ ವೆಂಕಟಿಗ ಒಬ್ಬ ಸಾಮಾನ್ಯ ಶ್ರಮಜೀವಿಯಾದರೂ ಅವನಲ್ಲಿ ಅಸಾಧಾರಣವಾದ ಮಾನವೀಯ ಗುಣಗಳಿವೆ. ತಾನು ಮದುವೆಯಾದ ಹೆಂಡತಿ ಹಣ, ವಸ್ತ್ರ, ಒಡವೆ ಮತ್ತು ಶ್ರೀಮಂತಿಕೆಗೆ ಆಸೆಪಟ್ಟು ವೆಂಕಟಿಗನನ್ನು ತೊರಿದು ಅದೇ ಊರಿನ ಶ್ರೀಮಂತ ವ್ಯಕ್ತಿಯ ಮನೆ ಸೇರಿ ಸಂಸಾರ ಮಾಡುತ್ತ ವೆಂಕಟಿಗನನ್ನು ತಿರಸ್ಕರಿಸುತ್ತಾಳೆ. ಇಂತಹ ಸಂದರ್ಭದಲ್ಲಿ ಸಹಜವಾಗಿ ಮೂಡಬಹುದಾದ ಭಾವನೆಗಳಾದ ಅಸೂಯೆ, ದ್ವೇಷಗಳನ್ನು ಮೀರಿ ವಿಚಲಿತನಾಗದ ವೆಂಕಟಿಗ ಆಕೆಯ ಬಗೆಗಿನ ವಿಶ್ವಾಸ ಕಳೆದುಕೊಳ್ಳದೇ ತಾನೇ ಊರನ್ನು ತೊರೆದು ಬೇರೆ ಊರಿಗೆ ಹೋಗಿ ನೆಲೆಸಿ ಕಾಡಿನಿಂದ ಕಟ್ಟಿಗೆ ತಂದು ಮಾರಿ ಜೀವನ ಸಾಗಿಸುತ್ತಿದ್ದನು.

ಇತ್ತಕಡೆ ವೆಂಕಟಿಗನ ಹೆಂಡತಿ ದುರಾಸೆಯಿಂದ ಸುಖ-ಭೋಗಗಳಿಗೆ ಆಸೆಪಟ್ಟು ಕೊನೆಗೆ ಆ ಶ್ರೀಮಂತ ವ್ಯಕ್ತಿಯಿಂದ ವಂಚಿತಳಾಗಿ ತಾನು ಮಾಡಿದ ತಪ್ಪಿಗೆ ಪಶ್ಚಾತಾಪ ಪಟ್ಟು, ವೆಂಕಟಿಗನ ಮನೆಗೆ ಮರಳಿ ಬರುತ್ತಾಳೆ. ಆಗ ವೆಂಕಟಿಗ 'ಪಶ್ಚಾತಾಪಕ್ಕಿಂತ ದೊಡ್ಡ ಶಿಕ್ಷೆ ಮತ್ತೊಂದಿಲ್ಲ' ಎಂದು ಅವಳಿಂದಾಗಿ ತಾನು ಊರನ್ನು ತೊರೆದಿದ್ದನ್ನು ಮರೆತು ಅವಳ ಮಗುವನ್ನು ತನ್ನದೆಂದು ತಿಳಿದು ಆಕೆಯನ್ನು ಮನೆಗೆ ಸೇರಿಸಿಕೊಳ್ಳುತ್ತಾನೆ. ವೆಂಕಟಿಗನ ಔದಾರ್ಯ, ಸಹನೆ, ಇವು

ದೊಡ್ಡ ಗುಣವಾಗಿ ಕಾಣುತ್ತವೆ. ಹೆಂಡತಿಯ ಮಾನಸಿಕ ದೌರ್ಬಲ್ಯವನ್ನು ಅರಿತು ಹೃದಯ ವೈಶಾಲ್ಯತೆಯನ್ನು ಮೆರೆದ ವೆಂಕಟಿಗನ ಪರಿಪಕ್ವತೆ ನಿಜಕ್ಕೂ ಸ್ಮರಣೀಯ.

ಜನಪದರ ಗರತಿಯ ಹಾಡುಗಳಲ್ಲಿ ಹೇಳಿದಂತೆ 'ಕೂಲಿ ಮಾಡಿದರೇನ ಕೋರಿ ಹೊತ್ತರೇನು ನಮಗ ನಮರಾಯ ಬಡವೇನ ಬಂಗಾರ । ಮಾಲ ಇದ್ದಾಂಗ ಮನಿಯಾಗ' ಎಂಬಂತೆ ಕಷ್ಟ-ಸುಖ, ಬಡತನ-ಸಿರಿತನದಲ್ಲಿ ಗಂಡನೊಂದಿಗೆ ಬಾಳಿ ಬದುಕಬೇಕಾದದ್ದು ಸತಿಯ ಧರ್ಮ ಎಂಬ ಆಶಯವನ್ನು ಈ ಕಥೆಯು ತಿಳಿಸುತ್ತದೆ.

ಈ ಕಥೆಯನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರ 'ಸಮಗ್ರ ಸಾಹಿತ್ಯ ಸಂಪುಟ-೨' ಕೃತಿಯಿಂದ ಆಯ್ದುಕೊಳ್ಳಲಾಗಿದೆ.

■■

೯. ಗುಲಾಬಿ ಟಾಕೀಸ್

❖

ವೈದೇಹಿ

ಅದು ಬೈತಲೆಯಂತೆ ಒಂದೇ ರಸ್ತೆಯಿರುವ ಊರು. ಒಂದಷ್ಟು ದೊಡ್ಡವರ ಮನೆಗಳು ಮತ್ತೊಂದಷ್ಟು ಸಣ್ಣ ಮನೆಗಳು, ಒಂದು ಊರೆನಿಸಿಕೊಳ್ಳಲು ಏನೆಲ್ಲ ಬೇಕೋ ಅದೆಲ್ಲ ಅಂಗಡಿ ಮುಂಗಟ್ಟು, ಸರ್ಕಾರಿ ಆಫೀಸು, ಸಣ್ಣಶಾಲೆ, ಒಂದು ಬಸ್‌ಸ್ಟ್ಯಾಂಡ್, ದೇವದಾರು ಧೂಪ ಮತ್ತು ಗಾಳಿ ಮರಗಳು ಇತ್ಯಾದಿ ಇತ್ಯಾದಿ.

ಊರಿಗೊಂದು ಬಯಲಿತ್ತು. ಸಂಜೆ ಹೊತ್ತು ಗಂಡಸರು ವಾಕಿಂಗ್ ಹೋಗಿ ಕುಳಿತುಕೊಳ್ಳುವ ಜಾಗೆಯಾಗಿತ್ತು ಅದು. ಆ ಜಾಗೆಯಲ್ಲಿ ಗಂಡಸರು ಮುಗಿದು ಹೋದ ಯುದ್ಧದ ಕುರಿತು ಮಾತನಾಡುತ್ತಿದ್ದರು. ಮುಂದೆ ಅಗಬಹುದಾದ ಯುದ್ಧದ ಸ್ವರೂಪ ಕುರಿತು ಮಾತನಾಡುತ್ತಿದ್ದರು. ಮಳೆಯ ಕುರಿತು ಮಾತಾಡುತ್ತಿದ್ದರು. ಶಾಲೆಯ ಮಾಸ್ಟರೊಬ್ಬರು ಅಂತಹ ಪಾರದರ್ಶಕ ಊರಿನಲ್ಲಿಯೂ ಒಬ್ಬ ಹುಡುಗಿಯನ್ನು ಹಾಳು ಮಾಡಲು ಯತ್ನಿಸಿದ್ದಂತೂ ಎಷ್ಟು ಸಲ ಚರ್ಚಿಸಿದ್ದಾರೋ.

ಬಯಲಿಗೆ ಹೆಂಗಸರು ಹೋಗುವ ಕಟ್ಟಳೆಯಿರಲಿಲ್ಲ. ಬಯಲಿಗೆಂದೇ, ಅವರು ತಾವಾಗಿ ರಸ್ತೆಗೇ ಇಳಿದದ್ದಿರಲಿಲ್ಲ. ಮನೆಯಾಯಿತು, ತಾವಾಯಿತು.

ಸಂಜೆ ಹೊತ್ತಿನಲ್ಲಿ ಮಕ್ಕಳನ್ನು ಆಟಕ್ಕೆ ಕಳಿಸಿ ತಲೆ ಬಾಚಿಕೊಂಡು, ಹಣೆಗಿಟ್ಟುಕೊಂಡು, ಸಂಜೆಮಲ್ಲಿಗೆ ದಂಡೆಯನ್ನೋ, ಸುರುಳಿ ಹೂವಿನ ದಂಡೆಯನ್ನೋ ಮುಡಿಗೇರಿಸಿಕೊಂಡು ಸ್ವಲ್ಪ ಸುಧಾರಿಸಿಕೊಂಡಿರುತ್ತಿದ್ದರು. ಅಥವಾ ನಾಳೆಯ ಕಡುಬಿಗೆ ಕೊಟ್ಟೆ ಸೆಡುತ್ತಲೋ, ಅಕ್ಕಿ–ಉದ್ದು ಅರೆಯುತ್ತಲೋ. ಹೂ ಕಟ್ಟುತ್ತಲೋ ಇರುತ್ತಿದ್ದರು. ಸೂರ್ಯ ಕಂತಿದೊಡನೆ ದೇವರಿಗೆ ದೀಪ ಹಚ್ಚಿ ತಾಳ ತಟ್ಟುತ್ತಾ ಭಜನೆ ಮಾಡುತ್ತಿದ್ದರು.

ಅವರು ಹೆಚ್ಚಾಗಿ ಒಂದೋ ಬಾಣಂತಿ, ಇಲ್ಲವೋ ಬಸುರಿ, ಇಲ್ಲವೇ ಮುಟ್ಟು ಅಥವಾ ಎಲ್ಲವನ್ನೂ ಮುಗಿಸಿ ಕುಳಿತವರಾಗಿರುತ್ತಿದ್ದರು. ಒಟ್ಟಿಗೆ ಬಾಳುತ್ತಿದ್ದ ಆ ಮನೆಗಳಲ್ಲಿ ಮನೆಯ ಒಂದಲ್ಲ ಒಂದು ಮೂಲೆಯಲ್ಲಿ ಒಂದಲ್ಲ ಒಂದು ಜನ ಕಣ್ಣೊರಸಿಕೊಳ್ಳುತ್ತ ನಿಲ್ಲುವುದೂ ಸಾಮಾನ್ಯವಾಗಿತ್ತು.

ಪುರುಷಲೋಕ ಮತ್ತು ಸ್ತ್ರೀಲೋಕ ಇಂತು ಇದ್ದಂತಹ ಆ ಊರಲ್ಲಿ ಹಿಂದೆ ಎಲ್ಲೋ ಒಮ್ಮೆ ಒಂದು ಸರ್ಕಸ್ಸು ಬಂದಿತ್ತು ಎಂದು ಹೇಳುವವರಿದ್ದಾರೆ. ಒಂದು ನಾಟಕ ಕಂಪೆನಿಯೂ ಬಂದಿತ್ತೆನ್ನುತ್ತಾರೆ. ಅದನ್ನೆಲ್ಲಾ ಎಷ್ಟು ಜನ ಹೆಂಗಸರು ನೋಡಿದ್ದಾರೆ ಅಂತ ಮಾತ್ರ ಯಾರೂ ಹೇಳುವವರಿಲ್ಲ. ನಾಟಕವನ್ನಾದರೂ ನೋಡಿದ್ದಾರೆ. ಸರ್ಕಸ್ಸು–ಗಿರ್ಕಸ್ಸು ಹೆಂಗಸರಿಗೆ ಹೇಳಿಸಿದ್ದೇ? ಎಂದು ಗದರಿಸಿಬಿಟ್ಟರೆ ಹಾಗೆ ಗದರಿದ ಗಂಡಸಿನ ದನಿಯಡಿ ಮುದುರಿ ಕುಳಿತುಕೊಳ್ಳುವವರಲ್ಲವೇ ಅವರೆಲ್ಲ?

ಆದರೆ ಕೆಲ ವರ್ಷಗಳಿಂದ ಅಲ್ಲೊಂದು ಟೆಂಟ್ ಪ್ರತೀ ಆರು ತಿಂಗಳಿಗೊಮ್ಮೆ ಬಂದು ಠಿಕಾಣಿ ಹೂಡುತ್ತಿತ್ತು. ಎಲ್ಲಾ ಊರು ಸುತ್ತಿ ಮುಗಿಸಿದ ಸಿನಿಮಾಗಳು ಕೊನೆಯುಸಿರು ಎಳೆಯುತ್ತ ಆ ಟೆಂಟ್‌ಗೆ ಬರುತ್ತಿದ್ದವು. ಅದು ಬಂದ ಮೇಲೆ ಹೆಂಗಳೆಯರ ಸ್ಥಿತಿ ತುಸುವೇ ಸುಧಾರಿದಂತೆ ಕಾಣುತ್ತಿದ್ದರೂ ಅದು ಎಷ್ಟರ ಮಟ್ಟಿಗೆ ಎಂಬುದು ಊಹಿಸಿಕೊಳ್ಳಬೇಕಷ್ಟೇ. ಯಾಕೆಂದರೆ ಆ ಸಿನಿಮಾಗಳನ್ನು ನೋಡಲು ಅವರು ಗಂಡಸರನ್ನೇ ಅವಲಂಬಿಸಿರಬೇಕಾಗಿತ್ತು. ಗಂಡಸರು ಎಲ್ಲಾದರೂ ಪ್ರಸನ್ನರಾದರೆ ಅವರನ್ನು ಸಿನಿಮಾಕ್ಕೆ ಒಯ್ಯುತ್ತಿದ್ದರು. ತಾವಾಗಿ ಹೋಗುವುದನ್ನು ಸ್ವತಃ ಹೆಂಗಸರೇ ಒಪ್ಪುತ್ತಿರಲಿಲ್ಲವಾಗಿ ಗಂಡು ಬಲವಿಲ್ಲದೆ ರಸ್ತೆಗಿಳಿಯುವುದನ್ನು ಅವರು ಕಲ್ಪಿಸಿಕೊಳ್ಳಲಾರರು ಕೂಡ. ಗಂಡಸರು ಅವರನ್ನು ಕರೆದುಕೊಂಡು ಹೋಗಿ ಟಿಕೆಟ್ ತೆಗೆಸಿಕೊಟ್ಟು, ಹೆಂಗಸರ ಗೇಟಿನ ಬಳಿ ಆ ಟಿಕೆಟ್‌ಗಳನ್ನು ಹರಿಸಿ, ಮುಚ್ಚಟೆಯಾಗಿ ಕೂರಿಸಿ ಸಿನಿಮಾ ಮುಗಿದ ಮೇಲೆ ವಾಪಸು ಕರೆದುಕೊಂಡು ಬರುತ್ತಿದ್ದರು.

ಹಾಗೆಂತ ಮುಂದಿನ ಸೀಟಿನಲ್ಲಿ ಚಾಪೆಯ ಮೇಲೆ ಕುಳಿತುಕೊಳ್ಳುವ ಕೊರಗ–ಕೂಸಾಳು ಹೆಂಗಸರೆಲ್ಲ ಸ್ವತಃ ಯಾರ ಎಗ್ಗಿಲ್ಲದೆ ಬಂದು ಕೂತು ಸಿನಿಮಾ ನೋಡುತ್ತ ಬಿಸಾತಿಲ್ಲದೆ ನಕ್ಕು–ಅತ್ತು ಎದ್ದುಹೋಗುತ್ತಿರಲಿಲ್ಲವೆ? ಎಂಬ ಪ್ರಶ್ನೆ ಕೇಳಿದರೆ 'ಅವೇ? ಲಂಗು ಲಗಾಮು ಇಲ್ಲದವು!' ಎಂಬೊಂದು ಸಂಸಾರದ ಮಾತು ಬಂದೀತು ಎಂದ ಮೇಲೆ ಲಂಗುಲಗಾಮು ಇರುವುದನ್ನೇ ಪ್ರೀತಿಸುತ್ತಿದ್ದ

ಹೆಂಗಸರು ಇವರೆಲ್ಲ ಎಂದರ್ಥವಾಯಿತಷ್ಟೆ. ಆದರೆ 'ಹನುಮಂತನು ಲಂಕೆಗೆ ಹಾರಿದನೂ' ಎಂದು ಹೇಳುತ್ತಿದ್ದಂತೆ ಹನುಮಂತನು ಲಂಕೆಗೆ ಹಾರುವ ದೃಶ್ಯ ಮೂಡುವಾಗ ಮುಸುಕುವ, ಬೆಕ್ಕಸಬೆರಗು ಮಾತ್ರ ಈ ಎಲ್ಲರಿಗೂ ಒಂದೇ ತೆರನದ್ದು. ಇನ್ನಿನ್ನು ಬರುವ ಸಿನಿಮಾಗಳಲ್ಲಿ ಮಾತು ಸಂಗೀತ ಇತ್ಯಾದಿಗಳಿವೆ ಎಂಬ ಸುದ್ದಿ ಆಗಲೇ ಊರನ್ನು ತಲುಪಿತ್ತು.

ಅದೇನೇ ಇರಲಿ.

ಒಂದು ರೀತಿಯಲ್ಲಿ ಬಾಯಿಪಾಠ ಹೇಳಿಕೊಟ್ಟಂತೆ ಶಾಂತವಾಗಿ, ನಿಯತ್ತಿನಂತೆ ಇದ್ದ ಊರು ತುಸುವಾದರೂ ಅದುರಿದ್ದು ಮತ್ತು ಹೆಂಗಳೆಯರು ಸ್ವಂತ ಕಾಲುಗಳಿಂದ ಹೆಜ್ಜೆಯಿಡಲಾರಂಭಿಸಿದ್ದು ಊರ ನಡುವಿನ ಧೂಪದ ಮರದ ದಪ್ಪ ಕಾಂಡಕ್ಕೆ ಕೊಡಲಿ ಏಟು ಬಿದ್ದ ಮೇಲೆಯೇ.

ಈ ಪೆಟ್ಟು ಊರಿನ ಹೆಂಗಸರ ಪ್ರಪಂಚದಲ್ಲಿ ಸಣ್ಣ ಮಟ್ಟಿನ ಕ್ರಾಂತಿಯನ್ನೇ ಮಾಡಿತೆನ್ನೋಣವೇ? ಚಾ ಲೋಟದಲ್ಲಿ ಎದ್ದ ಅಲೆ, ಚಿಕ್ಕದಾದರೂ ಅಲೆ ಮಾತ್ರ ಹೌದಷ್ಟೆ !

* *

ಅಷ್ಟರಮಟ್ಟಿಗೆ ಮುತ್ತಜ್ಜನಂತೆ ದೊಡ್ಡಕ್ಕೆ ಹರಡಿಕೊಂಡು ನಿಂತಿದ್ದ ಧೂಪದ ಮರಕ್ಕೆ ರಪ್ಪರಪ್ಪನೆ ಪೆಟ್ಟು ಬಿದ್ದಾಗ ಜನ ಇಲ್ಲೇನೋ ನಡೆಯಲಿದೆ ಎಂದು ಎದ್ದು ಬಂದು ಕೇಳಿದಾಗ ಅಲ್ಲಿ ಟಾಕೀಸು ಆಗುತ್ತದೆ ಅಂತಾಯಿತು ; ಕಟ್ಟಿಸುವುದು ಯಾವ ಚಂದ್ರಪ್ಪ ಬಹಳ ಹಿಂದೆ ಬೊಂಬಾಯಿಗೆ ಓಡಿಹೋದ ಗುಲಾಬಿ ಎಂಬವಳ ದತ್ತು ಮಗ ಈ ಗುಲಾಬಿಯನ್ನು ಊರಿನ ಮೋಹ ಪ್ರತಿ ವರ್ಷವೂ ಎಳೆದು ತರುತ್ತಿತ್ತು. ಮುಖ ಬೇರೆ, ಮೈ ಬೇರೆ ಕಾಣುವಂತೆ ಪೌಡರು ಬಳಿದುಕೊಂಡು ಗುಂಗುರುಗಳನ್ನು ಮೇಲೆಲ್ಲ ಪಸರಿಸಿಕೊಂಡು ಒಮ್ಮೆ ಕೈ ಬೀಸಿ ಊರೆಲ್ಲ ತಿರುಗುತ್ತ ಮತ್ತೆ ಬೊಂಬಾಯಿಗೆ ಮರಳುತ್ತಿದ್ದ ಆಕೆಗೆ ಊರು ಮನೆಯಲ್ಲಿ ತನ್ನದೊಂದು ಸೇವೆ ನಡೆಯಬೇಕು ಎಂದು ಆಸೆಯುಂಟಾಯಿತು. ಅದರ ಫಲ, ಈ ಟಾಕೀಸು.

ಸಂತೋಷದ ವಿಷಯವೇ. ಆ ಧೂಪದ ಮರವನ್ನು ನೋಡಿ ನೋಡಿ ಸಾಕಾಗಿ ಅದನ್ನು ಕಡಿಯಲು ತೊಡಗಿದಾಗ, ಹೌದಲ್ಲ! ಇದರ ಬದಲು ಇಲ್ಲೊಂದು ಟಾಕೀಸು ಬಂದರೆ....! ನಿಜವಾಗಿಯೂ ಗುಲಾಬಿಯ ಮಂಡೆ ಎಂದರೆ ಮಂಡೆನೆ.

ಎಲ್ಲರೂ ಹೀಗೆ ಖುಷಿಪಟ್ಟರು ಎನ್ನುವ ಹಾಗಿಲ್ಲ. ಸಿನೆಮಾ ಕಂಡು, ಊರಿಗೆ ಊರೇ, ಅದರಲ್ಲಿಯೂ ಹೆಣ್ಣು ಮಕ್ಕಳು ಹಾಳಾಗುತ್ತಾರೆಂದು ಸಂಕಟಪಟ್ಟ ಹಿರಿಯರಿಗೇನೂ ಕೊರತೆಯಿರಲಿಲ್ಲ. ಆದರೆ ಒಮ್ಮೆ ಊರು ಬೆಳೆಯಲು ತೊಡಗಿತೆಂದರೆ ಯಾವ ದೊಣ್ಣೆನಾಯಕನ ಮಾತು ಕೇಳುತ್ತದೆ? ಹಾಗೆ ಮಾತು ಕೇಳಿದ್ದೇ ಹೌದಾದಲ್ಲಿ ಆ ಊರು ಇನ್ನೂ ಕಾಡಲ್ಲಿಯೇ ಇರುತ್ತಿತ್ತು. ಎಲೆಗಳಡ್ಡವೇ ಬದುಕಿರುತ್ತಿತ್ತು. 'ಸಡಗರದ ನಾರಿಯರು ಹಡೆಯುವಾಗ ಸೂಲಗಿತ್ತಿ ಅಡವಿಯೊಳಗೆ ಹೆರುವ ಮೃಗನ ಹಿಡಿದು ರಕ್ಷಿಸುವರು. ಯಾರು? ಎಂದು ದಾಸರು ಕೇಳುವ ಪ್ರಸಂಗವೆ ಬರುತ್ತಿರಲಿಲ್ಲವಷ್ಟೆ !

* *

'ಗುಲಾಬಿ ಟಾಕೀಸು ಬಂದದ್ದೇ ಬಂದದ್ದು, ಊರು ಮೊದಲು ಅದುರಿದ್ದು ಸೂಲಗಿತ್ತಿ ಲಿಲ್ಲೀಬಾಯಿಯ ಮುಖಾಂತರ.

ಲಿಲ್ಲೀಬಾಯಿ, ಊರನ್ನು ಬಿಟ್ಟು ಇದ್ದಾಳು, ಆದರೆ ಊರು ಲಿಲ್ಲೀಬಾಯಿಯನ್ನು ಬಿಟ್ಟು ಇದ್ದೀತೆ! ಲಿಲ್ಲೀಬಾಯಿಯೇನು ಸ್ವತಃ ಸೂಲಗಿತ್ತಿ ಅಲ್ಲ. ಆದರೆ ಅಗತ್ಯ ಬಿದ್ದರೆ ಅದೂ ಆಗುವವಳು. ಮತ್ತು ಮೂರು ತಿಂಗಳಿಡೀ ತಾಯಿ–ಮಗುವಿನ ಚಾಕರಿ ಮಾಡಿ ಮುಗಿಸುವವಳು. ಸಿನೆಮಾ ಅಂದರೆ ಪ್ರಾಣ. ಟೆಂಟಿನಲ್ಲಿ ಬಂದ ಯಾವ ಸಿನಿಮಾವನ್ನು ಆಕೆ ನೋಡದೇ ಬಿಟ್ಟಿದ್ದಾಳಂತೆ? ಸಿನೆಮಾ ನೋಡುತ್ತಿರುವಾಗ ಹೊಟ್ಟೆನೋವಿನ ಮನೆಯಿಂದ ಕರೆ ಬಂದರೆ 'ಜೀರಿಗೆ ಕಷಾಯ ಮಾಡಿ ಕೊಡಿ. ಹುಸಿ ನೋವಾಗಿದ್ದರೆ ಅಲ್ಲಿಯೇ ಕಂತುತ್ತದೆ, ಇಲ್ಲವಾದರೆ ಜೋರಾಗುತ್ತದೆ. ಜೋರಾದರೆ ಮತ್ತೆ ಬನ್ನಿ' ಎಂದಾಳು; ಕೂತಲ್ಲಿಂದ ಅಜಕದೆ, ಪರದೆ ಮೇಲಿಂದ ಕಣ್ಣು ಬೇಳೆ ಕೀಳದೆ.

ಇಷ್ಟೇ ಅಲ್ಲ, ಆಕೆಗೆ ಮುಂಚಿನಿಂದಲೂ ಬೇಗ ಶ್ರೀಮಂತಳಾಗಬೇಕೆಂಬ ಆಸೆ ಇತ್ತು. ಅದಕ್ಕೆ ಕಾರಣವೂ ಇತ್ತು.

ಅವಳ ಗಂಡ ಕಲಾಯಿ ನಾಯಕ, ದುಡ್ಡು ದುಡಿಯುವುದರಲ್ಲಿ ದಡ್ಡ, ಯಾರದೋ ಮೇಲಿನ ಸಿಟ್ಟನ್ನು ತಿಕ್ಕಿ ತೀಡಿ ತೀರಸಿಕೊಳ್ಳುವವನಂತೆ ಪಾತ್ರೆಯೊಳಗೆ ತವರ ತಿಕ್ಕುತ್ತಿದ್ದ. ಹೀಗೆ ತೀರಿಸಿಕೊಳ್ಳುವುದರಿಂದಲೋ ಏನೋ ಕಡೆಗೆ ಸಿಟ್ಟಿಗೇಳುವ ಶಕ್ತಿಯನ್ನೂ ಕಳೆದುಕೊಂಡು ಬಿಟ್ಟಿದ್ದ. ಮಜೂರಿ ಇಂತಿಷ್ಟು ಎಂದು ಕಟ್ಟುನಿಟ್ಟಾಗಿ ಹೇಳಲೂ ಆರ. ಇಷ್ಟು ಎನ್ನುವ, ಅಷ್ಟೇಕೆ ಇಷ್ಟು ಸಾಲದೆ? ಎಂದರೆ ತಲೆ ತುರಿಸುವ ಕಷ್ಟ ಎನ್ನುವ. ಇಲ್ಲ ನಾವು ಕೊಡುವುದು ಇಷ್ಟೆ ಎಂದರೆ ಮಾತನಾಡದೆ

ತೆಗೆದುಕೊಳ್ಳುವ. ಎಂದ ಮೇಲೆ ಆತ ಬೊಂಬಾಯಿಗೆ ಓಡಿ ಹೋಗುವುದೇ ಅಂತಾಯಿತಲ್ಲ!

ಆತ ಓಡಿದನೇ ಅಥವಾ ಲಿಲ್ಲೀಬಾಯಿಯೇ ಓಡಿಸಿದಳೇ, ಅದನ್ನು ಸಸೆಯಲು ಸಾಧ್ಯವಾಗಲಿಕ್ಕಿಲ್ಲ. ಆದರೆ ಲಿಲ್ಲೀಬಾಯಿ, ಗಂಡನದೇ ವಯಸ್ಸಿನವನಾದ ವಾಟಮರೆ ಎಂಬವ ಎಲ್ಲೋ ಒಂದಷ್ಟು ವರ್ಷ ಕಣ್ಮರೆಯಾಗಿದ್ದು, ಬರುತ್ತ ದುಡ್ಡು ಕಟ್ಟಿಕೊಂಡು ಬಂದು ಊರಲ್ಲಿ ಒಂದು ಜವುಳಿ ಅಂಗಡಿ ತೆರೆದು ಒಂದು ಜನವಾದದ್ದನ್ನೂ, ಗಾಡಿ ಹೊಡೆಯುತ್ತಿದ್ದ ಯಂಕಪ್ಪರಾಯನೆಂಬವ ಈಗ ಲೇವಾದೇವಿಗೆ ತೊಡಗಿ ಹಿತ್ತಲು ಮನೆ ತೆಗೆದುಕೊಂಡದ್ದನ್ನೂ, ಮತ್ತು ಆ ಗಲಾಬಿ..! ತನ್ನೆದುರು ಅಂಗಿಗೂ ಗತಿಯಿಲ್ಲದೆ ಭುಜದಿಂದ ಒಂದು ಕಡೆ ಜಾರಿಕೊಂಡೇ ಇರುವ ಒಂದು ಇಡಿ ಅಂಗಿ ತೊಟ್ಟು ಓಡಾಡುತ್ತಿದ್ದ ಗುಲಾಬಿ, ಮೈ ತುಂಬ ಬಂಗಾರ ಹೇರಿಕೊಂಡು ಊರಿಗೆ ಬರುವುದನ್ನೂ ಕಣ್ಣಾರೆ ನೋಡಿದ್ದಳು. ಹೆರಿಸುವಾಗ ಅವಳ ಮನದಲ್ಲಿ ಮೂಡುವ ವೈರಾಗ್ಯದ ಭಾವನೆಗಳಿಗೆ ಆ ಮೇಲಿನ ಕ್ಷಣಗಳಾದರೂ ಹೇಗೆ ಹೊಂದಿಕೊಂಡಾವು?

ಹಾಗಾದರೆ ತನ್ನ ಗಂಡ ಬುರ್ನಾಸು ಅಂತಾಯಿತಲ್ಲ. ಎಷ್ಟು ಬಾಣಂತನ ಮಾಡಿದರೆ ಏನು? ಅದರ ದುಡ್ಡನ್ನೆಲ್ಲ ಸಂಸಾರಕ್ಕೇ ಹಾಕಬೇಕೆಂದರೆ! ಹೆಣ್ಣು ಹೆಂಗಸಿನ ಸಂಪಾದನೆ ಮೇಲೆ ತನ್ನ ಸಂಸಾರ ನಿಲ್ಲಬೇಕಾಯಿತೆ? ಅಂತೆಲ್ಲ ದಿನವೂ ಅವನೆದುರು, ಅವನನ್ನು ಉದ್ದೇಶಿಸದೆಯೇ ಹೇಳುತ್ತ 'ಇದು ಕಲಿ ಊರು. ಇಲ್ಲೇ ಇದ್ದರೆ ಬರ್ಕತ್ತಿಲ್ಲ. ಒಂದಷ್ಟು ಸಮಯ ಎಲ್ಲಾದರೂ ಹೋಗಬೇಕು. ಮತ್ತೆ ಬರಬೇಕು. ಎಲ್ಲ ಒಳ್ಳೆಯದಾಗುತ್ತದೆ' ಎಂಬ ತಾತ್ಪರ್ಯಕ್ಕೆ ಬಂದು ಮುಟ್ಟಿಕೊಳ್ಳುತ್ತಿದ್ದಳು. ಸ್ವಲ್ಪ ಆಚೆ ಈಚೆ ಮಾಡುವುದನ್ನೂ ಕಲಿಯಬೇಕು ಎಂದು ಗಂಡನಿಗೆ ಹರಾಖೋರತನವನ್ನೂ ಬೋಧಿಸಲು ಯತ್ನಿಸಿದಳು, ಎಲ್ಲದರ ಫಲವಾಗಿ ಗಂಡ ಬೊಂಬಾಯಿಗೆ ಓಡಿಹೋಗಿ ಬಹಳ ವರ್ಷಗಳೇ ಸಂದವು. ಪತ್ತೆಯಿಲ್ಲ.

ತಾನಾದರೂ ಏನಾದರೂ ಮಾಡಿ ದೊಡ್ಡವಳಾಗಬೇಕು ಎಂದು ಆಕೆ ಯಥಾರ್ಥವಾಗಿ ಆಸೆ ಪಡುತ್ತಿದ್ದರೆ ಆ ಸುಟ್ಟ ಊರಲ್ಲಿ ಏನುಂಟು?

ಅಂತೂ ಒಂದು ಟಾಕೀಸು ಬಂತು. ಹೆಚ್ಚು ಸಂತೋಷಪಟ್ಟವಳೆಂದರೆ ಲಿಲ್ಲೀಬಾಯಿಯೇ.

* *

ಲಿಲ್ಲೀಬಾಯಿ ಅವತ್ತು ಆಕೆ ಎಂದಿನಿಂದಲೂ ಹೊಕ್ಕು ಹೊರಡುವ ರಂಗರಾಯರ ಮನೆಗೆ ಬರುವ ಫೋರ್ಸ್ ಬೇರೆಯಿತ್ತು. ಮಗುವಿನ ಉಚ್ಚೆ ಬಟ್ಟೆ ಒಗೆಯಲು ಹಿಂದಿನ ದಿನ ಮನೆಗೆ ಕೊಂಡಯ್ದುವಳು ಒಣಗಿದ ಬಟ್ಟೆಗಳನ್ನು ಮಡಚಿ ಬುಟ್ಟಿಯಲ್ಲಿ ಇಟ್ಟುಕೊಂಡು ಬೆಳಿಗ್ಗೆ ಬಂದಳು. 'ನಾಳೆಯಿಂದ ನಾನು ಸಾಯಂಕಾಲದ ಮೇಲೆ ಬರುವುದಿಲ್ಲ. ನಾಲ್ಕು ನಾಲ್ಕುವರೆಗೆ ಬಂದು ಬಾಣಂತಿಗೆ ಕೈಕಾಲು ತೊಳೆಯಲು ನೀರು ಕೊಡುತ್ತೇನೆ. ಮತ್ತೆ ಬರುವುದು ಬೆಳಿಗ್ಗೆಯೇ. ಇದನ್ನೇ ನಂಬಿ ಕುಳಿತರೆ ನನ್ನ ಗಾಡಿ ಮುಂದೆ ನಡೆಯಬೇಕಲ್ಲ! ಅಂತೆಲ್ಲ ಬಟ್ಟೆಗಳನ್ನು ಸೇರಿಸಿಡುತ್ತ, ಗೋಡೆಗೋ, ಬಾಗಿಲಿಗೋ, ಮಂಚಕ್ಕೋ ಎಂಬಂತೆ ಹೇಳುತ್ತ ಹೋದಳು. ಇವಳಿಗೇನಾಯಿತು ಇವತ್ತು?

'ಏನು ಕುಡಗಿಡಕೊಂಡು ಬಂದಿದ್ದೀಯಾ ಯಂತ ಕತೆ?' ಎಂದು ಮಗುವಿನ ತಾಯಿ ವನಜಾಕ್ಷಿ ಎನ್ನಲು 'ಇಲ್ಯೇ, ನಾಳೆ ಹೊಸ ಟಾಕೀಸು ಓಪನ್ ಅಲ್ಲವೆ? ಹೆಂಗಸರ ಕಡೆ ಗೇಟ್ ಕೀಪರ್ ಕೆಲಸ ನಂಗೆ ಕೊಟ್ಟಿದ್ದಾರೆ'.

ರಾತ್ರಿ ಸೆಕೆಂಡ್ ಶೋ ಸಿನಿಮಾ ಮುಗಿಯುವವರೆಗೂ ತಾನು ಅಲ್ಲಿರಬೇಕು, ಬಾಗಿಲು ಹಾಕಿದ ಮೇಲೆಯೇ ಸೈ ಮನೆಗೆ ಹೋಗುವುದು. ಹಾಗಾಗಿ ಬೆಳಿಗ್ಗೆ ಬರುವುದು ಸ್ವಲ್ಪ ತಡವಾಗಬಹುದು. ಸುಧಾರಿಸಿಕೊಳ್ಳಬೇಕು. ಗುಲಾಬಿಯಿಂದಾಗಿ ತನಗೆ ಸಿಕ್ಕಿದ್ದು ಹೇಗೂ ಟಾಕೀಸಿನ ಹಿಂದೆಯೇ ಇದೆ ಮನೆ. ತಾನಾಗಿ ಅದೃಷ್ಟ ಒಲಿದು ಬಂದದ್ದಲ್ಲವೆ? ಅಂತೆಲ್ಲ ಹಿರಿಯ ಹೆಂಗಸರು ಬಂದು ತನಿಖೆ ನಡೆಸಲು ಉತ್ತರವಿತ್ತಳು ಲಿಲ್ಲಿ.

ಟಾಕೀಸೆಂದರೇನು!

ಟಾಕೀಸಿನಲ್ಲಿ ಲಿಲ್ಲಿ ಎಂದರೇನು!

ಗೇಟಿಗೆ ಹೋದರೆ ಅಲ್ಲಿರುವುದು ಈ ಲಿಲ್ಲೀಬಾಯಿ! ಹೆಂಗಸರಿಗೆಲ್ಲ ಇದು ಒಂದು ತರಹ ರೋಮಾಂಚನವನ್ನೇ ತಂದಿತ್ತು. ಆದರೆ ಜೊತೆಗೇ ಟಾಕೀಸನಿಂದಾಗಿ ಆ ಪುಟ್ಟ ಊರಿನಲ್ಲಿ ಬಾಣಂತನದ ಜನ ತಪ್ಪಿ ಹೋಯಿತು! ತನ್ನ ಒಂದು ತಿಂಗಳ ಸಂಬಳ ಬಾಣಂತನದ ಮೂರು ತಿಂಗಳ ಸಂಬಳಕ್ಕಿಂತಲೂ ಹೆಚ್ಚು ಎಂದು ಬಾಣಂತನದ ಕೆಲಸವನ್ನು ತೀರಾ ಜುಜುಬಿ ಮಾಡಿಬಿಟ್ಟಳು ಲಿಲ್ಲೀಬಾಯಿ. ಹೀಗೆನ್ನಲು ಅವಳಾದರೂ ಎಷ್ಟು ಕಾದಿದ್ದಳು. ಸಿನೆಮಾ ಟಾಕೀಸಿಗೂ ಲಿಲ್ಲೀಬಾಯಿಗೂ ಈ ನಮೂನೆಯ ನಂಟು ಬೀಳಬಹುದೆಂದು ಯಾರೂ ಊಹಿಸಲೇ ಇಲ್ಲವಾಗಿ

ಎಲ್ಲರೂ ಒಮ್ಮೆ ಮೈಕೊಡವಿ ಎಚ್ಚರಗೊಳ್ಳುವಂತಾಯಿತು. ಮತ್ತು 'ಗಂಡಸರೆದುರು ಹೆರುವುದೆ? ಎಂಬ ಕಾರಣಕ್ಕಾಗಿ ಮೂಲೆಗೊತ್ತಲ್ಪಟ್ಟ ಆ ಊರಿನ ಡಾಕ್ಟರ ಶಾಪು ಸುಣ್ಣ ಬಣ್ಣದಿಂದ ಶೋಭಿಸಲಾರಂಭಿತು.

ಹೊಸ ಟಾಕೀಸಿನಲ್ಲಿ ಟಾಕೀ ಸಿನೆಮಾಗಳು ಬರಲಾರಂಭಿಸಿದುವು.

* *

ದಿನೇ ದಿನೇ ಬಳೆ ಅಂಗಡಿಯಲ್ಲಿ ನಾನಾ ತರಹದ ಪೌಡರು ಡಬ್ಬಿಗಳು ಮತ್ತಿತರ ಪ್ರಸಾಧನಗಳು ಹೊಸದಾಗಿ ಬರಲು ಪ್ರಾರಂಭಿಸಿ ಅಂಗಡಿಯವನ ಬಿಸಿನೆಸ್ ಕುದುರಿದ್ದು, ದರ್ಜೆ ಹೆಂಗಸು ಹೊಸ ಫ್ಯಾಶನ್ನಿಗೆ ಸರಿಯಾಗಿ ಹೊಲಿಯುವುದೇ ಒಂದು ಸವಾಲಾಗಿ ಹಾಗೂ ಆಕೆ ಎಂತೋ ಎಣಿಸಿ ಹೊಲಿದದ್ದೇ ಫ್ಯಾಶನ್ ಆಗಿ ಆರೋಪಿಸಲ್ಪಟ್ಟು ಉಡುಗೆಯ ಲೋಕದಲ್ಲಿ ಅಲ್ಲೋಲ ಕಲ್ಲೋಲವಾಗಿ ಅದು ಹೆಂಗಸರ ನಡೆ–ನುಡಿಗಳಿಗೂ ದಾಟಿಕೊಂಡದ್ದು, ಮದುವೆ ಮಂಚಲುಗಳಲ್ಲಿ ಹೆಂಗಸರ ಅಲಂಕಾರ ಮತ್ತು ಮದುಮಗಳ ಅಲಂಕಾರಗಳನ್ನು ಸಿನೆಮಾ ಗಾಳಿ ಸವರಿದ್ದು, ರಂಗರಾಯರ ಮನೆ ಅಡುಗೆ ಹೆಂಗಸಿಗೆ ಧೂಪದ ಮರದ ಭೂತ ಮೈಮೇಲೆ ಬರಲು ಸುರುವಾಗಿ ಸಿನೆಮಾ ಕಾಸನ್ನು ಸುಳಿದು ಎದುರಿಟ್ಟೊಡನೆ ಇಳಿಯುತ್ತಿದ್ದದ್ದು, ಸಿನೆಮಾ ನೋಡಲಿಕ್ಕಾಗಿ ಹೆಂಗಸರು ಮುಟ್ಟಾಗುವುದನ್ನೇ ಕಾಯುತ್ತಾ ಮಡಿ ಮೈಲಿಗೆಯ ಪರಧಿಯಲ್ಲಿ ಒಂದು ಛಳಕನ್ನೇ ಹುಟ್ಟಿಸಿದ್ದು, ಅವರೆಲ್ಲರೂ ತಂತಮ್ಮ ಸ್ವರ ಮರೆತು ಹಿನ್ನೆಲೆ ಗಾಯಕಿಯರೇ ತಾವು ಎಂಬಂತೆ ಎಲ್ಲೆಂದರಲ್ಲಿ ತಾಲೀಮು ನಡೆಸಲಾರಂಭಿಸಿದ್ದು, ಸ್ಕೂಲ್‌ಡೇಗಾಗಿ ಚಲನಚಿತ್ರಗೀತೆಳ ಸ್ಪರ್ಧೆಯೂ ಸೇರಿಕೊಂಡದ್ದು, ಭಜನೆಗೂ ಸಿನೆಮಾ ಹಾಡುಗಳು, ಧಾಟಿಗಳು ಮಿಸಕ್ಕನೆ ದಾಟಿಕೊಂಡದ್ದು, ಪ್ರೀತಿಸುವಾಗಲೂ ಸಿನೆಮಾ ಶಬ್ದಗಳು ಸಹಾಯ ಮಾಡುತ್ತ ಶಬ್ದವಿಲ್ಲದ್ದಕ್ಕೆ ಏಕಾಏಕಿಯಾಗಿ ಪೋಜು ಎಂದು ಕಾಣತೊಡಗಿದ್ದು, ಎಲ್ಲಕ್ಕಿಂತ ಹೆಚ್ಚು ಮಗುವನ್ನು ತೂಗುತ್ತಾ ಜೋಗುಳವನ್ನು ಅಲ್ಲಲ್ಲೇ ಕಟ್ಟಿಕಟ್ಟಿ ಹಾಡುತ್ತಿದ್ದವರು. ಈಗ ಅವನ್ನೆಲ್ಲ ಮರೆತು ಸಿನೆಮಾದ ಜೋಗುಳವನ್ನು ಗುನುಗತೊಡಗಿದ್ದು– ಹೀಗೆಲ್ಲ ಒಂದೆಡೆಯ ಪರಿಣಾಮಗಳಾದರೆ, ಸಿನೆಮಾ ಇನ್ನೊಂದು ಪದರದಲ್ಲಿ ಇನ್ನೊಂದೇ ರೀತಿಯ ಕೈಕೋಚು ಸುರು ಮಾಡಿತ್ತು. ಅದೂ ಲಲ್ಲೀಬಾಯಿಯ ಮೂಲಕವೇ.

* *

ಲಿಲ್ಲೀಬಾಯಿಯಲ್ಲಿ ಈಗ ಬೇಕಾದಷ್ಟು ವಿಷಯಗಳಿವೆ. ಇವತ್ತು ಸಾಯಂಕಾಲ ಹೊರಗೆ ನೋಡುತ್ತಿರಿ. ಬಸ್ಸಿನಿಂದ ಹೊಸ ಫಿಲ್ಮು ಪೆಟ್ಟಿಗೆ ಇಳಿಯುತ್ತದೆ– ಎಂದರೆ ಅವಳು ಹೇಳವುದು ಸತ್ಯವೇ! ಸಂಜೆ ಮಾಯಾಲೋಕವನ್ನು ಹೊತ್ತು ಇಳಿಯುವ ಪೆಟ್ಟಿಗೆ! ಆಗ ಟಾಕೀಸಿನ ಹೊರಗೇಟಿನ ಕಂಬಕ್ಕೊರಗಿ ಅಡ್ಡ ಕತ್ತರಿ ಕಾಲು ಹಾಕಿಕೊಂಡು ಈ ಟಾಕೀಸು ಫಿಲ್ಮೊ ಎಲ್ಲ ತನ್ನದೇ ಎಂಬಂತಹ ಛಾಪಿನಲ್ಲಿ ತನ್ನ ಕುತ್ತಿಗೆಗೆ ನೇತು ಹಾಕಿಕೊಂಡು ಸರುಗಂಟಿನ ಚೀಲದೊಳಗೆ ಅಡಿಕೆ ಹೋಳಿಗಾಗಿ ಕೈಯಾಡಿಸುತ್ತ ಅದು ಸಿಕ್ಕಿದ್ದರೂ ಬಿಟ್ಟು ಮತ್ತೆ ಕೈಯಾಡಿಸುತ್ತ ನಿಂತಳೆಂದರೆ ಪೂರ್ವಾಶ್ರಮದ ಲಲ್ಲೀಬಾಯಿ ಎಲ್ಲಿಯೋ ಏನೋ.

ಹೊಸದಾಗಿ ಬಂದ ಸಿನೆಮಾ ಹೇಗಿದೆಯೆಂದು ಆಕೆ ನೋಡಿದ ಮರುದಿನವೇ ಹೇಳುವಳು. 'ಪೇಪರು ಬಂತಲ್ಲ!' ಎಂದು ಗಟ್ಟಿಯಾಗೊಮ್ಮೆ ಯಾರಾದರೂ ಹೇಳಿದರೆ ಅದು ಆಕೆ ಬಂದಳೆಂದೇ ಅರ್ಥವಾಗಿ ಹೆಂಗಸರು ಮಕ್ಕಳಾದಿಯಾಗಿ ಎಲ್ಲ ಹೊರಗೆ ಬರುವರು. 'ಇದು ಹೋಕಿಲ್ಲದ ಸಿನೆಮಾ. ಇಸಿ ಬರೀ ಹಡಂರಂಡೇವು ತೆಗೆದದ್ದು. ಬಾಡಿ ಲಾಗಾಯ್ತು ಕಾಂಬಂಥ ಡ್ರೆಸ್ಸು ಹಾಕಿಕೊಂಡು ಕುಣಿಯುವುದೆಂದರೆ' ಇತ್ಯಾದಿ ತಾನು ಹಿಂದಿನ ರಾತ್ರಿ ಕೂತಲ್ಲಿಂದ ಮಿಸುಕಾಡದೆ ಕಂಡ ಸಿನೆಮಾ ಕುರಿತು ಮರುದಿನ ರಂಗರಾಯರ ಮನೆ ಸಪೂರ ಜಗುಲಿಯಲ್ಲಿ ಗೋಡೆಗೆ ಹಿಂತಲೆ ಒರಗಿಸಿಕೊಂಡು ಕೂರುತ್ತ ಹೇಳುತ್ತಿರುತ್ತಾಳೆ. ಅವಳ ಮಾತು ಕೇಳಿದವರು ಹಟಕ್ಕೊ ಹಾಗಾದರೆ ಏನುಂಟು ನೋಡುವ ಅಂತ ಆ ಸಿನೆಮಾಕ್ಕೆ ಹೋಗುವುದುಂಟು. ಇಲ್ಲ, ಮುಂದೆ ಬರುವ ಭಕ್ತರ ಸಿನೆಮಾಕೆ ಹೋಗುವ ಎಂದು ನಿರ್ಧರಿಸುವ ಪಾಪಭೀರುಗಳೂ ಇದ್ದಾರೆ. ಮುಂಬರುವ ಸಿನೆಮಾ ಯಾವುದೆಂದು ಕೂಡ ಮುಂಚಿತವಾಗಿ ಕಣ್ಣುಮುಚ್ಚಿ ಹೇಳುವಂತಾದ ಲಿಲ್ಲೀಬಾಯಿ ಇಡೀ ಸಿನಿಮಾ ಪ್ರಪಂಚವನ್ನೇ ಬಲ್ಲ ನಾರಿಯಂತೆ ಕಾಣಲಾರಂಭಿಸಿದಳು.

ಇಷ್ಟೇ ಸರಿಯೆ? ಲಿಲ್ಲೀಬಾಯಿಯ ಹತ್ತಿರ ದಿನ ಹೋದಂತೆ ಸಿನೆಮಾಕ್ಕಿಂತ ರುಚಿಕಟ್ಟಾದ ಮಸಾಲೆಗಳು ಸೇರಿಕೊಂಡವು. ಟಾಕೀಸಿನ ಮ್ಯಾನೇಜರು ನೋಡಲಿಕ್ಕೆ ಅಷ್ಟು ಸಂಭಾವಿತನಂತೆ ಕಾಣುವವ ಟಾಕೀಸು ಗುಡಿಸುವ ಕೂಸಿನೊಂದಿಗೆ ಮಲಗಿದ. ಪಾಯಿಖಾನೆ ತೊಳೆಯುವ ಕೊರಾತಿಯನ್ನೇ ಎಳೆದುಕೊಂಡ.. ಬರೀ ಹೆಣ್ಣು ಮರಳ. ತಾನು ಹುಲಿಯಂತಿರುವುದಕ್ಕೆ ಬಚಾವಾಗಿದ್ದೇನೆ..

ಎಲ್ಲವನ್ನೂ ಕಂಡಂತೆಯೇ ವಿವರಿಸುವ ಲಿಲ್ಲೀಬಾಯಿ ಕಡೆಗೆ 'ನಾನು ಇಷ್ಟರವರೆಗೆ ಕಣ್ಣಲ್ಲಿ ಕಂಡಿದ್ದಿಲ್ಲ' ಎಂದೂ ಹೇಳಿ ಪಾಪ ಕಳೆಯುವಳು. ಎಷ್ಟು

ಮಾಡಿದರೂ ಮುಗಿಯದ ಮನೆಗೆಲಸದಲ್ಲಿ ಚಪ್ಪೆಗಟ್ಟುತ್ತಿದ್ದ ಹೆಂಗಸರಿಗೆ ಇವೆಲ್ಲ ಹೊಸತಾಗಿ ಕಂಡು ಅವಳು ಬಂದಳೆಂದರೆ ಬೆನ್ನು ಸರ್ತ ಮಾಡಿಕೊಂಡು ಒಂದೆಡೆ ಕುಳಿತು ಅವಳ ಮಾತನ್ನು ಆಲಿಸುತ್ತಾರೆ. ಮತ್ತಷ್ಟು ಕೆದಕಿ ಕೆದಕಿ ನಗುತ್ತಾರೆ. ವ್ಯಕ್ತಿ, ಸ್ಥಳ, ಹೇಳುವವರು, ವಾತಾವರಣ ಎಲ್ಲ ಬೇರೆ. ಕಾಲ ಬೇರೆಯೆಂದ ಮೇಲೆ ಇವೆಲ್ಲವೂ ಕೂಡ ಹೊಸತಾಗಿ ಕಾಣಬೇಕಲ್ಲವೆ? ಈಗ ಆಕೆಗೆ ಯಾರ ಮನೆಗೆ ಹೋದರೂ ಒಂದು ಲೋಟ ಕಾಫಿ ನೀರು ಹುಟ್ಟುತ್ತದೆ. ತಿಂಡಿ ಮಿಕ್ಕದ್ದರೆ ಅದೂ ಹೊರಗೆ ಬರುತ್ತದೆ. ಲಿಲ್ಲೀಗೆ ಕೊಟ್ಟರೆ ನುಕ್ಸಾನಿಲ್ಲವೆಂದು ಏನೂ ಉಳಿಯದಂತೆ ಅಚ್ಚುಕಟ್ಟಾಗಿ ಅಡುಗೆ ಮಾಡಬಲ್ಲಂತ ದಿನಸೀ ಅಂಗಡಿಯ ಕೊಂಕಣಿ ಮನೆಯವರಾದಿಯಾಗಿರಬೇಕೆಂದು ತೀರ್ಮಾನಿಸಿ ಕೊಂಡಿದ್ದಾರೆ.

ಊರಿನ ದೊಡ್ಡವರ ಮನೆಯ ಹೆಂಗಸರಂತೂ ಸಿನೆಮಾಕ್ಕೆ ಬರಲುಂಟೆ? ಮರುದಿನವೇ ಪೇಪರು ಹೊರಟಾಯಿತು. 'ಅಮ್ಮ, ಓ ಅಮ್ಮ, ನಿನ್ನೆ ಇಂಥವರು ಸಿನೆಮಾಕ್ಕೆ ಬಂದರದ್ದಲ್ಲವ? ಅತ್ತೆ ಸೊಸೆ ಇಬ್ಬರೂ? ಛೆ! ಸಂತಸಖೂ ಸಿನೆಮಾ. ನೋಡುತ್ತ ನೋಡುತ್ತ ಅತ್ತೆಯೂ ಮರುಕಿದ್ದು, ಸೊಸೆಯೂ ಮರುಕಿದ್ದು. ನಾನು ಸಿನೆಮಾ ಕಾಣುವುದನ್ನು ಬಿಟ್ಟು ಕಡೆಗೆ ಈ ಸಿನೆಮಾ ಕಾಣುತ್ತ ಕುಳಿತದ್ದಲ್ಲವೆ!'

ಆಗ–ಅಂಥವರೇ ಆ ಸಿನೆಮಾಕ್ಕೆ ಬಂದ ಮೇಲೆ ಅದು ಖಂಡಿತ ನೋಡುವಂತಹುದೆ ಇರಬೇಕು– ಎಂದು ನಿರ್ಧಾರವಾಗುತ್ತದೆ. ಮನೆಯ ಗಂಡಸರ ಹತ್ತಿರ.. 'ಇಂಥವರ ಮನೆಯವರೂ ಬಂದಿದ್ದರಂತೆ.. ಕೆಟ್ಟದು ಏನೂ ಇಲ್ಲವಂತೆ. ಮರಕಿ ಮರಕಿ ಇಟ್ಟರಂತೆ..–ಇತ್ಯಾದಿ ಹೇಳಿ ಅಪ್ಪಣೆ ಕೇಳಲು ಸುಲಭವಾಗುತ್ತದೆ. ಸಾಮಾನ್ಯವಾಗಿ ಪೋಸ್ಟರನ್ನು ಕಂಡು ಇದು ತಮ್ಮ ಮನೆ ಹೆಂಗಸರು ನೋಡಲು ಹೇಳಿಸಿದ್ದೋ ಅಲ್ಲವೋ? ಎಂದು ತೀರ್ಮಾನಿಸುವ, 'ಹೆಂಗಸರಿಗೆಲ್ಲ ಸಿನೆಮವ! ಮತ್ತೇನಲ್ಲವ!' ಎಂದು ಒಮ್ಮೆ ದೊಡ್ಡ ಸ್ವರ ತೆಗೆದು ಅವರ ಸದ್ದಡಗಿಸಬಲ್ಲಂಥ ಗಂಡಸರೂ ಇಂತಹ ಅರ್ಜಿ ಬಂದಾಗ ಗಮನಿಸುತ್ತಾರೆ. ಅಂತಹ ದೊಡ್ಡವರ ಮನೆಯವರೇ ಅಷ್ಟು ಅಳಬೇಕಾದರೆ ಅದರಲ್ಲಿ ಹೆಂಗಸರು ಕಾಣಬಾರದಂತಹ ದೃಶ್ಯಗಳು ಇರಲಿಕ್ಕಿಲ್ಲವೆಂದು ಲೆಕ್ಕಹಾಕಿ ಒಪ್ಪಿಗೆ ಕೊಡುತ್ತಾರೆ. ಇದೂ ಅಲ್ಲದೇ ಗೇಟಿನಲ್ಲಿ ಲಿಲ್ಲೀಬಾಯಿಯೇ ನಿಂತಿರುವುದರಿಂದ ಈಗ ಹೆಂಗಸರನ್ನು ತಾವೇ ಕರೆದುಕೊಂಡು ಹೋಗಿ ಕೂಡಿಸಬೇಕೆಂದೇನೂ ಇಲ್ಲ. ಏನೇನೂ ಧೈರ್ಯವಿಲ್ಲದ ಹೆಂಗಸರೂ ಲಿಲ್ಲೀಬಾಯಿಯಿದ್ದಾಳೆ ಎಂಬ ಧೈರ್ಯದ ಮೇಲೆ ರಸ್ತೆಗಿಳಿಯುತ್ತಾರೆ. ಹಾಗೆ ಹೋಗಿ ಹೋಗಿ ತಾವಾಗಿ ರಸ್ತೆಗಿಳಿಯುವ ಧೈರ್ಯವನ್ನು ಸಂಪಾದಿಸಿದ್ದಾರೆ.

ಪ್ರೇಕ್ಷಕಿಯರ ಸಂಖ್ಯೆಯನ್ನು ಅವಳಿಗರಿವಿಲ್ಲದಂತೆಯೇ ಆದರೇ ದುಡ್ಡು? ಜಾಸ್ತಿ ಮಾಡಿದ ಲಿಲ್ಲೀಬಾಯಿ ಅರಿವಿಲ್ಲದಂತೆಯೇ ಇನ್ನೊಂದು ವಿದ್ಯೆಯನ್ನೂ ಮಾಡಿದಳು.... ಎರಡು ಟಿಕೆಟಿಗೆ ನಾಲ್ಕು ಅಲ್ಲ ಆ ಇಬ್ಬರಿಗೆ ಕೊಡಬೇಕಾದ ಟಿಕೆಟಿನ ಅರ್ಧ ಹಣವನ್ನು ಸಿನೆಮಾ ಸುರುವಾದ ಮೇಲೆ ಅವರು ಕುಳಿತಲ್ಲಿಗೇ ಬಂದು ಕತ್ತಲಲ್ಲಿ ಬಳಚಿ ಕೀಸಿಕೊಂಡು ಸೀರೆ ನೆರಿಗೆಯ ಅಂಬಡೆಯೊಳಗೆ ಸಿಕ್ಕಿಕೊಳ್ಳುವುದನ್ನು.

ಇದು ತೀರಾ ಅನಿರೀಕ್ಷಿತವಾಗಿತ್ತು. ಅಷ್ಟೇ ಅಲ್ಲ ಹೆಂಗಸರ ಮನೋಲೋಕದಲೊಂದು ಸಣ್ಣ ಆಂದೋಲನವನ್ನೇ ಮಾಡಿತು. ಅವರು ತೀರಾ ಸಂದಿಗ್ಧಕ್ಕೊಳಗಾಗಿ ಚಡಪಡಿಸುವಂತಾಯಿತು. ಸಿನೆಮಾಕ್ಕೆ ಹೋಗಬೇಕು. ಆದರೆ ಒಬ್ಬಿಬ್ಬರು ಹೋಗುವಂತಿದೆಯೇ? ಮನೆ ತುಂಬ ಜನ, ಮನೆತುಂಬ ಮಕ್ಕಳು. ಒಬ್ಬರು ಹೊರಟರೆಂದರೆ ದಂಡೇ ಹೊರಡುತ್ತದೆ. ದುಡ್ಡು? ಇಂತಹ ಸಂದರ್ಭದಲ್ಲಿ ಲಿಲ್ಲೀಬಾಯಿಯ ಒಳಹುಂಡಿ ವ್ಯಾಪಾರವನ್ನು ಒಪ್ಪಬೇಕೇ ಬಿಡಬೇಕೆ?

ಇಷ್ಟರವರೆಗೆ ಇಂತಹದೆಲ್ಲ ಮಾಡಿ ತಿಳಿಯದವರು. ಮರ್ಯಾದೆಯೆಂದರೆ ಪೂರ್ತಿ ಮರ್ಯಾದೆಯೇ ಎಂದು ನಂಬಿಕೊಂಡು ಬಂದವರು. ಸಂದಿಗ್ಧವನ್ನು ಹೊರಲಾರದೆ ಗಂಡಸರ ಹೆಗಲಿಗೇ ಹಾಕಿಬಿಟ್ಟರು.

'ಏನು ಇಷ್ಟು ಜನರು ಸಿನೆಮಾಕ್ಕೆ ಹೋಗುವುದೇ! ದುಡ್ಡೆಂದರೆ ಹುಣಸೇ ಬೀಜವೆಂತ ಮಾಡಿದ್ದೀರ ಹೇಗೆ?'

ಆಗ ಈ ದೊಡ್ಡ ಸ್ವರದ ಎದುರಿದ್ದವರು ಕಂಬ ಚಿವುಟುತ್ತ ಅಷ್ಟರೊಳಗೆ ಹೆದರಿ ತುಂಬಿನಿಂತ ಕಣ್ಣುಗಳಿಂದಾಗಿ ನೇರ ನೋಡದೆ 'ಇಲ್ಲ ಅಷ್ಟು ಕೊಡಬೇಕಾದ್ದಿಲ್ಲ. ಲಿಲ್ಲೀಬಾಯಿ..

ಈ ವ್ಯವಸ್ಥೆ ಗಂಡಸರಿಗೆ ಅಡ್ಡಿಲ್ಲ ಅಂತ ಕಾಣುತ್ತದೆ. ಅವರು ಎಷ್ಟು ಜನಕ್ಕೆ ಸಾಕೆಂದರೋ ಅಷ್ಟು ದುಡ್ಡನ್ನು 'ಜಾಗ್ರತೆ ಆಚೆ ಈಚೆ ಕಾಣದೆ ಸೀದ ಹೋಗಿ ಬನ್ನಿ'– ಎಂಬ ಹುಶಾರಿನ ಮಾತಿನೊಂದಿಗೆ ನೀಡತೊಡಗಿದರು.

ಇದು ಸಾಂಕ್ರಾಮಿಕವಾಗಿ ಹರಡತೊಡಗಿ ಅಂತಿಂಥವರ ಮನೆಗೆ ಹೆಣ್ಣು ಕೊಡುವುದಿಲ್ಲ ಅಥವಾ ತರುವವರಲ್ಲ–ಎಂದು ಎಲ್ಲಿಲ್ಲದ ಜರ್ಬು ತೋರುವಂಥ ಹೆಂಗಸರೂ ಇದಕ್ಕೆ ಮಾತ್ರ ಬಹಳ ಬೇಗ ಒಗ್ಗಿ ಹೋದರು. ಮನೆಯಿಂದ ಹೊರಡುವಾಗ ಮೂವರಿರುವ ಅವರು ಟಾಕೀಸು ಹತ್ತಿರವಾಗುತ್ತಲೇ ಆರು

ಜನರಾದರೆ ಅವರಾದರೂ ಏನು ಮಾಡಿಯಾರು? ಮಕ್ಕಳ ಕಣ್ಣುತಪ್ಪಿಸಿ ಹೊರಡುವುದೆಂದರೆ ತಪ್ಪುವುದು ಅವರ ಕಣ್ಣೇ. ಅವರಿಗೆ ಗೊತ್ತೇ ಆಗದಂತೆ ಮಕ್ಕಳು ಹಿಂಬಾಲಿಸುತ್ತಿದ್ದವು.

ಲಿಲ್ಲೀ, ಮೂರು ಟಿಕೆಟು ಮಾಡಿಸಿದರೆ ಸಾಲದೆ? – ಎಂದು ಕೇಳುವಲ್ಲಿಯವರೆಗೂ ತಯಾರಾದರು. ಅದಕ್ಕೆ ಎಂದೂ ಮುಖ ನೋಡಿ ಮಾತನಾಡುವ ಅಭ್ಯಾಸವಿಲ್ಲದ ಲಿಲ್ಲೀ ಗೋಡೆ ನೋಡುತ್ತ 'ಸಾಕಲ್ಲ ಸರಸರ ನಡೆಯಿರಿ. ಟಾಕೀಸು ಕವುಂಚಿ ಹೋಗುವುದಿಲ್ಲ. ಗುಲಾಬಿ ದಿವಾಳಿ ಆಗುವುದೂ ಇಲ್ಲ' ಎನ್ನುವಳು. ಮುಂದಿನದು ಅವರವರ ಅಂತರಂಗಕ್ಕೆ ಗೊತ್ತಿರುವಂಥದು.

ಹೀಗೆ ದಿನ ಹೋಗುತ್ತಿರುವಾಗ ಲಿಲ್ಲೀ ಬೆಟ್ಟಿನಷ್ಟಗಲದ ಅಂಚಿನ ಮಗ್ಗದ ಸೀರೆ ಉಡುತ್ತಿದ್ದವಳು ಅದನ್ನು ಬಿಟ್ಟು ಮತ್ತೆಗಿನ ವಾಯಿಲ್ ಸೀರೆಗಳನ್ನು ಖರೀದಿಸಿದಳು. 'ಟಾಕೀಸಿನೊಳಗೆ ಸೆಕೆಯಲ್ಲವೆ? ಮಗ್ಗದ ಸೀರೆಯುಟ್ಟು ನಿಂತರೆ ಮೈಯೆಲ್ಲ ಬೆಂದು ಮುದ್ದೆ' ಎಂದು ಯಾಕೆ ಏನು ಎಂದು ಯಾರೂ ಕೇಳದಿದ್ದರೂ ಹೇಳುವಳು. ಒರಟು ಸೀರೆ ಈಗ ಮನೆಯ ಹತ್ತಿರ ಉಡಲಿಕ್ಕೆ ಮಾತ್ರ. ಗಂಡ ಅಂತಹ ಕಲಾಯಿ ನಾಯಕನಾದರೂ ತನ್ನ ಮನೆಯ ಪಾತ್ರೆಗಳೆಲ್ಲ ಒಟ್ಟೆ ಕಲಾಯಿಯೂ ಇಲ್ಲ. ಎನ್ನುತ್ತ ಹೊಸತಾಗಿ ಊರಿಗೆ ಬಂದಿದ್ದ ಸ್ಟೀಲಿನ ಎರಡು ಪಾತ್ರೆಗಳನ್ನು ಕೊಂಡಳು. ಕಿವಿಯಲ್ಲಿ ಒಂದು ಜೊತೆ ಕುಡುಕುಗಳು ಬಂದವು. ಮೀನು ಪೇಟೆಗೆ ಹೋಗುವುದು ಸಾಮಾನ್ಯವಾಯಿತು. ಒಗೆಯುವ ಕಲ್ಲು ಸರಿ ಇಲ್ಲವೆಂದು ಕಷ್ಟಪಡುತ್ತಿದವಳು ಮನೆ ಹಿಂಬದಿಯಲ್ಲಿ ಮೊಣಕಾಲೆತ್ತರಕ್ಕೆ ಒಗೆಯುವ ಕಲ್ಲನ್ನು ಹಾಕಿಸಿಕೊಂಡು ಒತ್ತಿನಲ್ಲಿ ಎರಡು ಬಾಳೆ ಕುರಲಿಗಳನ್ನು ನೆಟ್ಟಳು. ಕಲ್ಲುಹಾಕಿಸಿದ ದಿನ ಎದುರು ಸಿಕ್ಕವರೊಡನೆ 'ಏನೇ ಆಗಲಿ, ಒಂದು ಒಗೆಯುವ ಕಲ್ಲು ಹಾಕಿಸಿಕೊಂಡೆ'–ಎಂದು ಸುಖಿಸಿದಳು. ಒಮ್ಮೆ ಸೀರೆ ಕೊಳ್ಳುವಾಗ ವಾಟಮರೆ 'ಏನು ಲಿಲ್ಲೀ, ದೆಸೆ ವಕ್ಕಿದ ಹಾಗೆ ಕಾಣುತ್ತದೆ. ಹೀಗೇ ನಡೆದರೆ ಮನೆ ಕಟ್ಟಸುತ್ತೀಯಾ ಏನು?–ಎಂದು ವಾರೆಯಾಗಿ ನಕ್ಕನಂತೆ. ಅದು ಅವಳ ನೆತ್ತಿಗೇ ಏರಿ, 'ಹೋಗ, ನೀನು ಹೇಗೆ ದುಡ್ಡು ಮಾಡಿದೆ ಅಂತ ನನಗೆ ಗೊತ್ತಿಲ್ಲವೆ? ಈಗ ಜವಳಿ ಅಂಗಡಿ ಇಟ್ಟು ಮೆರೆಯುತ್ತಾನೆ. ನನ್ನಂಥ ಬಡವೆ ಎರಡು ಬಾಳೆ ಕುರಲಿ ನೆಟ್ಟು ಸುಖ ಪಡುವುದನ್ನೂ ಕಾಣಲಿಕ್ಕಾಗುವುದಿಲ್ಲ ನಿನ್ನ ಕೈಯಿಂದ ಸುಳ್ಳ?' ಎಂದಾಗ ಆತ ಕಪಾಳ ಮುಟ್ಟಿಕೊಂಡನಂತೆ. 'ಹಾಗಾದರೆ ಆ ಬೇವರ್ಸಿ ನನಗೆ ದುಡ್ಡು ಮಾಡಲಿಕ್ಕೆ ಬರುವುದಿಲ್ಲ ಅಂತ ಮಾಡಿಕೊಂಡನೆ? ಎಂದು ಒಮ್ಮೆ ಕೇಳಿಕೊಂಡರೆ, ಇನ್ನೊಮ್ಮೆ

'ಇಷ್ಟಕ್ಕೂ ಕಿರಿ ಬೆಟ್ಟು ಹಿಗ್ಗಿದರೆ ಎಷ್ಟು ಹಿಗ್ಗಿತು? ನಾನು ದುಡ್ಡು ಮಾಡಿದರೂ ಎಷ್ಟು ಮಾಡಿಯೇನು? ಇವನ ಹಾಗೆ ಯಾರ ಯಾರದೋ ಮನೆ ಪೂರ್ತಿ ಬರಿಗುಡಿ ಮಾಡಲು ನನ್ನಿಂದ ಆದಿತೇ! ಆದರೂ ಅವನನ್ನು ಕೇಳುವವರಿಲ್ಲ, ನನ್ನನ್ನು ಕೇಳುವವರಿದ್ದಾರೆ ಎಂದರೆ!'– ಎಂದು ಚಿಂತಿಸುವಳು.

ಹೀಗೆ–

ಒಂದು ರೀತಿಯಲ್ಲಿ ಊರು ಹುರುಪಿಂದ ಸಾಗುತ್ತಿರುವಾಗ ಹೆಂಗಸರು ಸಂಜೆಹೊತ್ತು ಸಿನೆಮಾಕ್ಕೆ ಹೋಗುವುದಿದ್ದರೆ ಬೇಗ ಹಾಲು ಕರೆಯುತ್ತಾ, ಆವತ್ತು ಮಾತ್ರ ತಡವಾಗಿ ಮನೆ ಸೇರುವಂತೆ ಕಾಣುವ ದನಗಳಿಗೆ ಬೈಯುತ್ತಾ, ಕನ್ನಡಿ ಮುಂದೆ ಪೌಡರು, ಕ್ಲಿಪ್ಪು ಮುಳ್ಳು, ಬಾಚಣಿಗೆಗಳಲ್ಲಿ ಕಳೆದು ಹೋಗುತ್ತಿರುವಾಗ ಮತ್ತು ಮಕ್ಕಳ ಕಣ್ಣು ತಪ್ಪಿಸುವುದು ಹೇಗೆಂದು ಉಪಾಯ ಮಥಿಸುತ್ತಿರುವಾಗ,

ಲಿಲ್ಲೀಬಾಯಿಯ ದಾರಿ ಸುಗಮವಾಗಿ ಸಾಗುತ್ತ ಮನೆಯೆದುರಿನ ತೆಂಗು ಮೇಲೆ ಬರುತ್ತಿರುವಾಗ, ಒಗೆಯುವ ಕಲ್ಲಿನ ಬುಡದ ಬಾಳೆ ಗೊನೆಹಾಕಿ, ಮರಿಹಾಕಿ, ಹಿಂಡಲಾಗಿರುವಾಗ; ಅವಳ ಕುಡುಕುಗಳಲ್ಲಿ ಎಣ್ಣೆ ಕೂತು 'ಚೊಕ್ಕ ಮಾಡಬೇಕು' ಎಂಬಂತಹ ನೆಲೆನಿಂತ ಜೀವನದವರ ಚಿಂತನೆಗಳು ಅವಳ ಮನದಲ್ಲಿರುವಾಗ ಬೊಂಬಾಯಿಗೆ ಹೋದ ನಾಯಕನ ನೆನಪೇ ಅಳಿಸಿ ಹೋಗುವಂತಹ ಬದುಕನ್ನು ಅವಳು ಸಿನೆಮಾದಲ್ಲಿ ಅದ್ದಿಕೊಂಡು ಬಾಳುತ್ತಿರುವಾಗ–

ಟಾಕೀಸಿನ ಮ್ಯಾನೇಜರ ಕೊರಾತಿಯನ್ನು ರೂಮಿನೊಳಗೆ ಕರೆದುದ್ದನ್ನು ಲಿಲ್ಲೀ ಸ್ವತಃ ಕಂಡುಬಿಟ್ಟಳು.

ಅದಿನ್ನೂ ಬೆಳಗಿನ ಹೊತ್ತು, ರಾತ್ರಿ ನಿದ್ದೆಗೆಟ್ಟು ಮನೆಗೆ ಲಿಲ್ಲೀ ಇನ್ನೂ ಮಲಗಿರುವ ಸಮಯ. ಮುದಿ ಅಬ್ಬೆ 'ಕಾಫಿಪುಡಿ ಇಲ್ಲ' ಅಂತು. ಹಾಗಾದರೆ ಇವತ್ತು ಕಾಫಿ ಮಾಡುವುದು ಬೇಡ. ಎರಡು ಸಿಂಗಲ್ ತರುತ್ತೇನೆ' –ಎಂದು ಗಿಂಡಿ ಹಿಡಿದು ಲಿಲ್ಲೀ ಎದ್ದು ಹೊರಗೆ ಬಂದಳು. ಕಣ್ಣು ಕೂರುತ್ತ ಎಂದಿನಂತೆ ಟಾಕೀಸಿನ ಅಂಗಳದಲ್ಲಿ ಹಾದು ಬರುವಾಗ ಪಿಸುಪಿಸು ಕೇಳಿಸಿತು. ಯಾರದು ಸುಡುಗಾಡು ಎನ್ನುತ್ತಾ, ನಿಲ್ಲುವುದು ಬೇಡ ಹೋಗುವ, ಎಂದುಕೊಳ್ಳುತ್ತಲೇ ನಿಂತಳು. ನಾರಾಯಣನ ಹೋಟೆಲಿಗೆ ಎಂದರೂ ಕಾಲುಗಳು ಸೀದ ಪಿಸುಪಿಸುವಿನ ಜಾಗವನ್ನೇ ಮುಟ್ಟಿ ಬಾಗಿಲ ಚಡಿಯಲ್ಲಿ ಇಣುಕಿದಳು.

ಆಗದ್ದಕ್ಕೆಲ್ಲ ಇಸಿ ಎಂದೇ ಮಾತು ಆರಂಭಿಸುವ ಲಿಲ್ಲೀ ಆವತ್ತು ಕಡಿಮೆಯೆಂದರೆ ನೂರು ಬಾರಿ ಇಸಿ ಎಂದಿರಬಹುದೇನೋ. 'ಇಸಿ. ಇವತ್ತಿನ ಸಿನೆಮಾ ಎಂದರೆ

ಮಾ ಘನವಾದ್ದು, ಎಂದೂ ಇಲ್ಲದ್ದು. ನಾನು ಪೂರ್ತಿ ಕಂಡದ್ದಲ್ಲವೆ? –ಎಂದು ಅವಳು ಹೇಳುವುದನ್ನು ಕೇಳುತ್ತಲೂ ಅಲ್ಲಿದ್ದವರ ಕಿವಿ ಎಸಳುಗಳು ಅರಳುತ್ತವೆ. ಮುಂದಿನ ಕತೆ ಹೇಳಬೇಕೆಂದರೆ ಮಕ್ಕಳೆಲ್ಲ ಆಚೆಗೆ ಹೋಗಬೇಕೆಂದಾಯಿತು.

ಎಲ್ಲ ಹೇಳಿದಳು ಲಿಲ್ಲೀಬಾಯಿ, ಹೇಳಬೇಕೆಂದು ಕಂಡ ಕಡೆಯಲ್ಲೆಲ್ಲ ಗುಟ್ಟಾಗಿ ಹೊಟ್ಟೆಯುಬ್ಬರ ಇಳಿಯುವವರೆಗೂ, 'ಆ ಮ್ಯಾನೇಜರನ ಇದನ್ನೇ ಕೊಯ್ದು ಹಾಕುವವರಿಲ್ಲದೆ ಹೋಯಿತಲ್ಲ! ಕೂಸಿಗೂ ಕೊರಾತಿಗೂ ಮಧ್ಯೆ ಹಿಡಿಯುತ್ತದೆ ನೋಡಿ ಇನ್ನು!

ಗಾಳಿಗೂ ಕಿವಿ ಇದೆ ಎಂಬುದು ಯಾವಾಗಲೂ ಮರೆಯುವ ಮಾತಷ್ಟೆ! ಮ್ಯಾನೇಜರ ಲಿಲ್ಲೀಯನ್ನು ಕಂಡರೆ ವಿಷ ಕಾರತೊಡಗಿದ. ಒಂದುದಿನ ಅವಳನ್ನು ಕರೆದು 'ನೋಡು ಲಿಲ್ಲೀ, ನೀನು ಮೂರಕ್ಕೆ ಆರು ಜನರನ್ನು ಒಳಗೆ ಬಿಡುವುದು ನನಗೆ ಗೊತ್ತಿಲ್ಲವೆಂದು ತಿಳಿಯಬೇಡ. ಇಲ್ಲಿ ಇರಬೇಕೆಂದು ಆಸೆ ಇದ್ದರೆ ಬಾಯಿಗೆ ಹೊಲಿಗೆ ಹಾಕಿಕೊ' – ಎಂದನಂತೆ. 'ಹೋಕಿಲ್ಲದ ಗಂಡು ಜಾತಿ'. ನಾನು ಯಾರನ್ನೂ ಪುಗ್ಸಟೆ ಬಿಡಲಿಲ್ಲ. ಬೇಕಾದರೆ ಜನ ಬಿಟ್ಟು ಚೆಕ್ ಮಾಡು' ಎಂದು ನೀನು ತಾನು ಎಂದೇ ಸಂಬೋಧಿಸಿ ಆಕೆ ಹಾರಾಡಿದಳಂತೆ. ಹೀಗೆ ಹಾರಾಡಿ ರೇಗಿಹೋದ ದಿನ. ಸಂಜೆ ಮಂಜುನಾಥಯ್ಯ ಎಂಬ ದೊಡ್ಡವರ ಮನೆಯಿಂದ ಹೆಂಗಸರು ಮಕ್ಕಳ ಒಂದು ದಂಡೇ ಬಂತು. ಹೀಗೆ ಬರುವವರು ನೇರ ಕೌಂಟರಿಗೆ ಹೋಗಿ ಟಿಕೆಟ್ ತರುವುದಿಲ್ಲ. ಬದಲು ಲಿಲ್ಲೀಯ ಬಳಿಗೇ ಹೋಗಿ ಎಷ್ಟು ತರುವುದೆಂದು ಕೇಳಿ ಅಷ್ಟನ್ನು ತರಿಸುವುದು ಆಕೆಯೇ ಮಾಡಿಸಿದ ರೂಢಿಯಷ್ಟೇ!. ಇವತ್ತು?

ಲಿಲ್ಲೀಬಾಯಿಯ ಕಣ್ಣೇ ಮೇಲಾದ ಹಾಗಿತ್ತು. ಯಾರೋ ಇವರು ತನಗೆ ಗೊತ್ತೇ ಇಲ್ಲವೆಂಬಂತೆ ಗೋಡೆ ನೋಡುತ್ತ 'ಎಷ್ಟು ಎಂದು ನನ್ನ ಹತ್ತಿರ ಏನು ಕೇಳುವುದು? ಹೋಗಿ, ಕೌಂಟರಿನಿಂದ ಟಿಕೆಟ್ ತೆಗೆದುಕೊಂಡು ಬನ್ನಿ. ಅಲ್ಲಿಯವರೆಗೆ ಒಳಗೆ ಬಿಡುವುದಿಲ್ಲ. ಇದೇನು ನನ್ನ ಅಜ್ಜನ ಟಾಕೀಸಾ'– ಎಂದೇ ಬಿಟ್ಟಳು.

ಹಿಂದಿನ ದಿನವಷ್ಟೇ ತಮ್ಮಲ್ಲಿಗೆ ಬಂದು, ಮ್ಯಾನೇಜರನ್ನು ಕುರಿತು ಬಾಯಿ ಒಣಗುವವರೆಗೆ ಹೇಳಿ, ಒಂದು ಕಾಸಂಡಿ ಮಜ್ಜಿಗೆ ನೀರು ಆರಿಸಿ, ಒಂದು ಕುಕ್ಕೆ ತುಂಬ ಉಪ್ಪಿಗೆ ಹಾಕಿದ ಹಲಸಿನ ಸೊಳೆ, ಬೇಸಿ ಮಾವಿನ ಕಾಯಿ ಮತ್ತು ಗೋವೆ ಹಣ್ಣುಗಳನ್ನು ತುಂಬಿಕೊಂಡು ಹೋದವಳು ಇದೇ ಸತ್ತವಳೆ! ಮಂಜುನಾಥಯ್ಯನ ಹೆಂಡತಿ ದಿಗ್ಭ್ರಾಂತರಾದರು. ತನ್ನನ್ನು ಏನೆಂದು ತಿಳಿದಳು

ಈ ಲಿಲ್ಲೀಬಾಯಿ? ಎಂಟನೂರು ಮುಡಿ ಅಕ್ಕಿ ಹುಟ್ಟುವಳಿಯವರು. ಇವತ್ತಿಗೆ ಅವಳನ್ನೇ ಕೊಂಡುಕೊಳ್ಳುವಷ್ಟು ಶಕ್ತಿಯುಳ್ಳವರು, ಮುಂಜುನಾಥಯ್ಯನ ಹೆಂಡತಿ ಅವಡುಗಚ್ಚಿದರು. ಆದರೆ ತುಸು ಈಚೆ ಬಂದು ಸೀರೆಯಂಬಡೆಯೊಳಗಿಂದ ದುಡ್ಡು ತೆಗೆದರೆ ಅಲ್ಲಿ ಇದ್ದುದೆಷ್ಟು?

ಮಂಜುನಾಥಯ್ಯನ ಹೆಂಡತಿ ಸಂಕಟಗೊಂಡರು. ಎಷ್ಟು ನೂರು ಮುಡಿ ಅಕ್ಕಿ ಹುಟ್ಟುವಳಿ ಇದ್ದರೇನಾಯಿತು? ಮನೆಯಲ್ಲಿ ತಾವು ಬಗ್ಗಿದ ಬೆನ್ನು ಎತ್ತದೆ ಗೇಯ್ದರೇನಾಯಿತು? ಹಾಗಾದರೆ ಒಂದು ದಮಡಿಯಾದರೂ ಹೆಚ್ಚಿಗೆ ತನ್ನ ಬಳಿ? ಇರುವಷ್ಟನ್ನಾದರೂ ತಾನು ಬೇಡಿ ಪರದೇಶಿಯಂತೆ ಕೇಳಿ ತೆಗೆದುಕೊಳ್ಳಬೇಕಾಯಿತಲ್ಲವೆ? ಇರಲಿ, ಲಿಲ್ಲೀ ಇದ್ದಾಳೆ ಎಂಬ ಧೈರ್ಯದ ಮೇಲೆ ಬಂದರೆ ಇವತ್ತು ಇವಳು ಹೀಗೆ. ತಾವು ಎಷ್ಟು ಕಣ್ಣು ತಪ್ಪಿಸಿ ಹೊರಟರೂ ಬೆಂಬಿಡದೆ ಬಂದ ಮಕ್ಕಳ ಮೇಲೆಯೂ ಸಿಟ್ಟು ಬಂತು. ಕುಂಟಿ ಕೋಣಗಳಾದರೂ ಇನ್ನೂ ಬುದ್ಧಿ ಬಂದಿಲ್ಲವಲ್ಲ. ಯಾಕಾದರೂ ಹುಟ್ಟಿಕೊಂಡವೋ; ತಮಗೊಂದು ಸಿನಿಮಾ ಕೂಡ ನೋಡಲು ಬಿಡದವು; ಯಾವತ್ತೂ ಅನಿಸದಿದ್ದುದೆಲ್ಲ ಅವರಿಗೆ ಅನಿಸತೊಡಗಿತು. ಜೊತೆಗೆ ಬಂದ ಎಳೆಯ ವಾರಗಿತ್ತಿಯರಂತೂ ಪೂರ್ತಿ ಬೆಪ್ಪುಬಡಿದಿದ್ದರು.

ಆಸೆಗಣ್ಣಿನಿಂದ ಬಾಗಿಲಿಗೆ ಇಳಿಬಿಟ್ಟಿದ್ದ ಕಪ್ಪುಪರದೆಯ ಚಡಿಯಿಂದ ಒಳಗೆ ಇಣುಕುತ್ತಿದ್ದ ಮಗಳ ಕೆನ್ನೆ ಚಿವುಟಿ 'ಎಲ್ಲಿಗೆ ಹೋಗುತ್ತೇನೆಂದರೂ ಹಾಜರು. ದರಿದ್ರದವು' ಎಂದು ಬೈಯ್ದು ಈಚೆಗೆ ಎಳೆದುಕೊಂಡರು. ಹಿರಿಯ ರಾಮು ಮಾಣಿಯನ್ನು ಕರೆದು ಮಗನೆ ನಮಗೊಂದು ನಾಲ್ಕು ಜನರಿಗೆ ಟಿಕೇಟು ತಂದುಕೊಟ್ಟು ನೀವೆಲ್ಲ ಮನೆಗೆ ನಡೆಯಿರಿ' ಎಂದರು. ಆದರೆ ಮೇಲು ಕ್ರಾಪು ಬಾಚಿಕೊಂಡು ಸಿನೆಮಾ ನೋಡುವ ಅಂಗಲಾಪಿನಿಂದ ಬಂದಿದ್ದ ರಾಮು ಮಾಣಿ. ಕೆಪ್ಪನಂತೆ ಎಲ್ಲೋ ನೋಡುತ್ತ ಸೊಂಟಕ್ಕೆ ಕೈಕೊಟ್ಟು ಡೊಂಕಾಗಿ ನಿಂತಿರಲು ಅವನನ್ನೊಮ್ಮೆ ತಿವಿದು ಒತ್ತಿಟ್ಟ ಸ್ವರದಲ್ಲಿ 'ಇಲ್ಲಿಂದ ನಿವಾಳಿಸುತ್ತೀಯ ಇಲ್ಲ ಹೆಡೆ ಮಂಡೆ (ತೆಂಗಿನ ಹೆಡೆ) ಯಿಂದ ಹಾಕಬೇಕಾ? ನಿಮ್ಮನ್ನೆಲ್ಲ ನಾಳೆ ಕಳಿಸುವ, ಹ್ಞಾಂ ರಾಮು ಮಾಣಿ ಟಿಕೇಟು ತಂದುಕೊಟ್ಟು ವಾಲಗ ತೆಗೆದ ಮಕ್ಕಳನ್ನೂ, ಮುಖ ಸಣ್ಣದು ಮಾಡಿಕೊಂಡ ಮಕ್ಕಳನ್ನೂ ಎಳೆದುಕೊಂಡೇ ಮನೆಗೆ ತೆರಳಿದ; ಏನೋ ಈಗ ಈಗ ಮೀಸೆ ಬರುವ ಮಕ್ಕಳೇ ಆಡುವ ಒರಟು ಮಾತೊಂದನ್ನು ಬಿಸಾಡಿ.

ಆವತ್ತು ಮಂಜುನಾಥಯ್ಯನ ಹೆಂಡತಿ ಸಿನಿಮಾ ಕಂಡದ್ದು ಕಂಡ ಹಾಗಾಗಲಿಲ್ಲ. ಲಿಲ್ಲೀ ಹಾಗೆ ಹೇಳಿದ ಮೇಲೆ ವಾಪಾಸು ಹೋಗುವುದು ಸರಿಯಲ್ಲವೆಂದು,

ಗರ್ವಕ್ಕೇ ಬಂದು ಕುಳಿತದ್ದೆಂದು ಉಳಿದ ಮೂವರು ವಾರಗಿತ್ತಿಯರೊಡನೆ ಹೇಳಿದರು. ಅಳುತ್ತಾ ನಡೆದ ಮಕ್ಕಳು ಕಣ್ಮುಂದೆ ಬಂದಾಗೆಲ್ಲಾ ಯಾಕಾದರೂ ಇಲ್ಲಿ ಕುಳಿತಿದ್ದೇವೆ ಅಂತಲೇ ಅನಿಸುತ್ತಿತ್ತು. 'ಒಟ್ಟಾರೆ ಅತಂತ್ರರಾದೆವಲ್ಲ; ಕೈ ತುಂಬ ದುಡ್ಡನ್ನು ಗಂಡಸರು ಕೊಟ್ಟಿದ್ದರೆ, ಅವರ ಮರ್ಯಾದೆಯೇ ಉಳಿಯುತ್ತಿತ್ತು' ಎಂದಾಗ ವಾರಗಿತ್ತಿಯರಲ್ಲೊಬ್ಬಳು 'ಸುಮ್ಮನಿರಿ ಅಕ್ಕ, ಊರವರು ಏನು ಹೇಳುತ್ತಾರೆ? 'ಮಂಜುನಾಥಯ್ಯನ ಮನೆಯವರು' ಎನ್ನುತ್ತಾರೆ. ನಮ್ಮ ಹೆಸರು ಹೇಳುತ್ತಾರೆಯೇ? ಅಂದ ಮೇಲೆ ಮರ್ಯಾದೆ ಎಲ್ಲಿ ಹೋಯಿತು? – ಎಂದು ಕೇಳಿದಳು–ಒಂದು ನಮೂನೆ, ನಾವು ಹೇಗೂ ಯಾವ ಲೆಕ್ಕಕ್ಕೂ ಇಲ್ಲದವರಲ್ಲವೆ ಎಂಬಂಥ, ಕಹಿ ಬೆರೆಸಿ, ಆ ಕಹಿ ಇಷ್ಟು ದಿನ ಎಲ್ಲಿತ್ತೋ. 'ಆದರೂ ಇದು ಸಮನಲ್ಲ'– ಎಂದು ಹಲುಬಿದರು ಮಂಜುನಾಥಯ್ಯನ ಹೆಂಡತಿ. ಲಿಲ್ಲೀಬಾಯಿ ಹಾಗೆ ಹೇಳದ ಹೊತ್ತಿಗೆ ಅಲ್ಲಿದ್ದ ಕೆಲ ಊರಿನ ಜನರನ್ನು ನೆನೆದು, ನನಗಂತೂ ಹೊಲಸು ಮೆಟ್ಟಿದ ಹಾಗಾಗಿದೆ' ಎಂದು ನರಳಿದರು.

ರಂಗರಾಯರ ಮನೆ ಜಗಲಿ ಇರುವದಾದರೂ ಯಾತಕ್ಕೆ, ಲಲ್ಲೀಬಾಯಿ ಇಂತಹ ಸಂದರ್ಭದಲ್ಲಿ ಬಂದು ಗೊರಗೊರ ದನಿಯಲ್ಲಿ ಪುರಾಣ ಬಿಡಿಸದಿದ್ದರೆ! ಅಂದೂ ಹೇಳಿದಳು. ಪುನಃ ಮ್ಯಾನೇಜರನ ಕೃತ್ಯದ ಬಗ್ಗೆ, ನೂರು ಬಾರಿ ಎಂಜಲಿಲ್ಲದ ಥೂ ಎಂದಳು. 'ನಾ ಕಂಡೆನಲ್ಲ ಈಗ. ನನ್ನ ಕಂಡರೆ ಆಗುವುದಿಲ್ಲ. ನಾನು ಪುಗ್ಸಟ್ಟೆ ಬಿಡುತ್ತೇನೆ ಅನ್ನುತ್ತಾನೆ. ಹೌದೇ ಅಮ್ಮ, ಗಂಡಸರು ಭುಜ ಹಾರಿಸಿದರೆ ನಾವು ಕಣ್ಣು ಹಾರಿಸಬೇಕು. ಆಗ ಎಲ್ಲ ಸಮ. ಅದು ನನ್ನಿಂದ ಆಗಲಿಲ್ಲ ಕಾಣಿ. ಹೀಗೆ! ಒಟ್ಟಾರೆ ಸತ್ಯ ಧರ್ಮ ನ್ಯಾಯ ಎಂಬವರಿಗೆ ಇದು ಕಾಲ ಅಲ್ಲ. ನೀವೇ ಹೇಳಿ, ದೇವರ ಸಾಕ್ಷಿಯಾಗಿ, ನಾನು ಎಂದಾದರೂ ಟಿಕೇಟಿಲ್ಲದೆ ಒಳಗೆ ಬಿಟ್ಟಿದ್ದುಂಟೆ!– ಸತ್ಯದೇವತೆಯೇ ಎದುರು ಕುಳಿತಿದ್ದರೂ ಇಲ್ಲವೆನ್ನಬೇಕು ಹಾಗಿತ್ತು ಅವಳ ವಾದ.

ಹಿಂದಿನ ದಿನದ ಘಟನೆ ಹೇಳಿ 'ಹೌದೇ. ಇವರೆಲ್ಲ ದೊಡ್ಡವರು, ನಾವು ಹೇಳಬಾರದು, ಇವರ ಮರ್ಯಾದೆ ಮುಕ್ಕಾಗುತ್ತದೆ. ನಾಳೆ ಕುತ್ತಿಗೆಗೆ ಬರುವುದು ಯಾರಿಗೆ?

ಮಂಜುನಾಥಯ್ಯನ ಮನೆಯವರ ಪ್ರಕರಣ ಕೇವಲ ಅದೊಂದೇ ಪ್ರಕರಣವಾಗಿ ಉಳಿಯಲಿಲ್ಲ. ಊರಿನ ಹಿರಿಯ ಮಗಳೆನಿಸಿಕೊಂಡವರ ಮತ್ತೊಂದಿಷ್ಟು ಹೆಂಗಸರೂ ಲಿಲ್ಲೀಬಾಯಿಯ ವಿಚಿತ್ರ ಅವತಾರಕ್ಕೆ ಈಡಾಗಿ ತಮ್ಮ ಅತಂತ್ರತೆಯನ್ನು

ಕಂಡುಕೊಳ್ಳುವಂತಾಯಿತು. ಲಿಲ್ಲೀ ಬಿಡುತ್ತಾಳೆಂತ ತಾವು ಇಷ್ಟು ದಿನ ಒಪ್ಪಿಕೊಂಡವರಾದರೂ ಎಂಥವರು–ಎಂದು ತಮ್ಮ ಆತ್ಮದೊಳಗೆ ತಾವೇ ಇಣುಕಿಕೊಳ್ಳುವರು. 'ದೊಡ್ಡವರ ಮನೆಯಾದರೇನು! ಕೈಯಲ್ಲಿ ದುಡ್ಡಿಲ್ಲದ ಮೇಲೆ!' –ಎಂಬಂಥ ಹಂಗುನುಡಿಯನ್ನು ಲಿಲ್ಲೀ ಆಡದೆ ಬಿಡಲಿಲ್ಲ.

ಮತ್ತೆ ಇನ್ನೇನೇ ನುಡಿದಳೋ ಅವಳಿಗೇ ಗೊತ್ತಿಲ್ಲ. ಸ್ವಯ ತಪ್ಪಿ ಹೋದ ಹಾಗಿತ್ತು. ಏನಾದರೂ ಮಾಡಿ ತನ್ನ ಕೆಲಸ ಉಳಿಸಿಕೊಳ್ಳಬೇಕು ಎಂಬುದೊಂದೇ ಅವಳ ಕನವರಿಕೆಯಾಯಿತು.

ಈಗೀಗಂತೂ ಗೇಟಿನಲ್ಲಿ ನಿಂತೊಡನೆ ಮ್ಯಾನೇಜರನ ದೂತರು ಸುತ್ತೆಲ್ಲ ಅಡಗಿ ನೋಡುತ್ತಿದ್ದಾರೆ ಅಂತನಿಸುತ್ತಿತ್ತು. 'ಬೇವರ್ಸಿ ಮಗನೆ, ಬೇರೆಲ್ಲೂ ಜಾಗವಿಲ್ಲ ಅಂತ ಪಾಯಿಖಾನೆ ಬಾಗಿಲ ಸಂದಿಯಲ್ಲಿ ಹೊಕ್ಕಿಕೊಂಡಿದ್ದೀಯಾ? ಧೈರ್ಯವಿದ್ರೆ ಹೊರಗೆ ಬಾ ಗುಲಾಮ' ಎನ್ನುತ್ತ ಟಿಕೇಟು ಹರಿಯುವಳು. 'ಹೋಗಾ ನಿನ್ನಂಥ ಹತ್ತು ಜನರನ್ನು ಕಂಡಿದ್ದೇನೆ ಬಿಡು'–ಎನ್ನುತ್ತಿದ್ದಳು. ಸಿನೆಮಾಕ್ಕೆ ಬರುವ ಹೆಂಗಸರು ಮೊದ ಮೊದಲು ಗಲಿಬಿಲಿಗೊಂಡರೂ ಕಡೆಕಡೆಗೆ 'ಲಿಲ್ಲೀಗೆ ಎರಡು ಸುತ್ತು ಬಿದ್ದು ಹೋಯಿತೆಂದು' ಕೊಂಡರೆ, ಮತ್ತೆ ಕೆಲವರು 'ಮ್ಯಾನೇಜರ ಕೊರಾತಿಯೊಟ್ಟಿಗೆ ಇದ್ದದ್ದನ್ನು ಬಾಗಿಲ ಸಂದಿಯಲ್ಲಿ ಕಾಣುವ ತೆವಲು ಯಾಕೆ ಬೇಕಿತ್ತು ಲಿಲ್ಲೀಗೆ? ಗಂಡನಿಲ್ಲದೆ ಇರುವಾಗ ಇವೆಲ್ಲ ವಸ್ತ್ರ ಬಿಚ್ಚಿ ಕುಣಿಯುವ ಅವತಾರಕ್ಕೆ ಸಾಕು'– ಎಂಬಿತ್ಯಾದಿ ಮನೋವಿಜ್ಞಾನವನ್ನು ಅರೆದು ಕುಡಿದವರಂತೆ ಹೇಳುವರು.

'ನಾನು ಸರ್ಪದ ಜಾತಿ. ಅವಳನ್ನು ಸುಮ್ಮನೆ ಬಿಡುವವನೆ'? ಎಂದು ಹಾರಾಡುತ್ತಿದ್ದ ಮ್ಯಾನೇಜರ್, ಅವ ಹಾರಾಡಿದಷ್ಟೂ ಲಿಲ್ಲೀಯ ರೇಗಾಟ ಏರುತ್ತಲೇ ಹೋಯಿತು.

ಟಾಕೀಸಿನ ವಾತಾವರಣ ಹೀಗೆ ಹದಗೆಟ್ಟ ಕಾಲದಲ್ಲಿ ಚಂದ್ರಪ್ಪ ಬೊಂಬಾಯಿಯಿಂದ ಬಂದ. ಗುಲಾಬಿ ತೀರಿಕೊಂಡಳಂತೆ. ಬೂದಿಯನ್ನು ತನ್ನ ಅಜ್ಜಿಯ ಮಲ್ಲಿಗೆ ಹಿತ್ತಲಿಗೆ ಹಾಕಲು ಹೇಳಿದ್ದಳಂತೆ. ಅದಕ್ಕಾಗಿ.

ಇನ್ನು ಮುಗಿಯಿತು ಎಂದುಕೊಂಡಳು ಲಿಲ್ಲೀಬಾಯಿ. ರಂಗರಾಯರ ಮನೆಗೆ ಬಂದು ಎಷ್ಟು ಹೊತ್ತು ಕುಳಿತಿದ್ದಳೋ. ಯಾವ ಮಾತಿಗೂ ಹೂಂ ಇಲ್ಲ. ಹ್ಞಾಂ ಇಲ್ಲ. ಏನು ಕೊಟ್ಟರೂ ಮುಟ್ಟಳು. ಒಂದಷ್ಟು ಹೊತ್ತು ಹಾಗೇ ಕೂತು ಎದ್ದು ಹೋದಳು. ಆದರೆ ನಡೆದದ್ದೇ ಬೇರೆ.

ಚಂದ್ರಪ್ಪ 'ಏನು ಟಾಕೀಸೆಂದರೆ ಬೊಂಬಾಯಿ ಸೂಳಗೇರಿ ಅಂತ ಮಾಡಿದನೇ ಆವ?'–ಎಂದು ತನಗೆ ತೋಚಿದ ಉಪಮೆಯಲ್ಲಿ ಗರ್ಜಿಸಿದನಂತೆ.

ಅಂತೂ ಮ್ಯಾನೇಜರ ವಜವಾದ.

ಲಿಲ್ಲೀ ಬಂದು ಅದದೇ ಹೇಳಿದಳು. 'ಅಮ್ಮ, ಸತ್ಯ ಎಂದರೆ ಹೇಗಿದೆ ನೋಡಿ! ನನ್ನನ್ನು ಅವ ತೆಗೆದು ಹಾಕುವುದಿಲ್ಲಪ್ಪ. ಗುಲಾಬಿಯ ಶಿಫಾರಸ್ಸಿನ ಮೇಲೆ ಕೆಲಸ ಕೊಟ್ಟದ್ದಲ್ಲವೆ ನನಗೆ? ಒಂದು ಪಾವಣೆ ಮುಟ್ಟದೆ ಗೇಟು ಕಾದದ್ದಕ್ಕೆ ಸಾರ್ಥಕವಾಯಿತು'. ಅವತ್ತು ಹೊಟ್ಟೆ ತುಂಬ ಮಾತಾಡಿದಳು. ಕೊಟ್ಟ ಕಾಫಿ ಕುಡಿದಳು. ತಿಂಡಿ ತಿನ್ನದೆ ಅಬ್ಬೆಗಾಯಿತು ಎಂದು ಕಟ್ಟಿಕೊಂಡು ಹೋದಳು.

ಆದರೆ ದೇವರೆಂಬವ ಯಾವ ದಿಕ್ಕಿಗೆ ಯಾವ ಹೊತ್ತಿಗೆ ಹೇಗೆ ಗರಕ್ಕನೆ ತಿರುಗಿ ನಿಲ್ಲುವನೆಂದು ಸ್ವತಃ ಆದಿಕೇಶವರಾಯನಿಗಾದರೂ ತಿಳಿಯುವಂತಹ ಮಾತೇ?

ನಾಲ್ಕು ದಿನವಿದ್ದ ಚಂದ್ರಪ್ಪ. ಅಷ್ಟು ದೂರದ ಬೊಂಬಾಯಿಯಿಂದ ಇಲ್ಲಿನ ತನಗೆ ನೋಡಿಕೊಳ್ಳಲು ಕಷ್ಟವಾಗುತ್ತದೆ ಎನ್ನುತ್ತ ತಿರುಗಿದ. ಕಡೆಗೆ ಯಾರೋ ಪರವೂರಿನವರಿಗೆ ಮಾರಿ, ಇಷ್ಟರೊಳಗೆ ಗಟ್ಟಿಯಾಗಿ ಬೇರೂರಿ ನರ್ಸಿಂಗ್ ಹೋಂ ಕಟ್ಟಿಸುತ್ತಿದ್ದ ಅದಕ್ಕೆ 'ಗುಲಾಬಿಯ ಹೆಸರಿನಲ್ಲಿ ಒಂದು ಸ್ಪೆಷಲ್ ರೂಂ ಇರಲಿ. ಅವಳ ಸೇವೆಯಾ ಅದಕ್ಕೆ ಬೇಕಾದಷ್ಟು ದುಡ್ಡು ಕೊಟ್ಟು ಉಳಿದದ್ದನ್ನು ಕಟ್ಟಿಕೊಂಡು ಹೊರಟುಹೋದ. 'ಗುಲಾಬಿ ಟಾಕೀಸು' ಹೆಸರು ಬದಲಾಯಿತು.

ಹೊಸ ಮ್ಯಾನೇಜ್‌ಮೆಂಟಿನಲ್ಲಿ ತನಗೆ ಕರೆ ಬರುತ್ತದೆ ಎಂದು ಕಾದಳು ಲಿಲ್ಲೀಬಾಯಿ. ಹಳಬರನ್ನೇ ನೇಮಿಸಿಕೊಳ್ಳುತ್ತದೆ ಎಂಬ ವದಂತಿ ಇತ್ತು. ಸ್ವತಃ ನಾಲ್ಕು ಸಲ ಹೋಗಿ ಮುಖ ತೋರಿಸಿ ಸಂಬಂಧಪಟ್ಟವರಿಗೆ ನಮಸ್ಕಾರ ಹೇಳಿ ಬಂದಿದ್ದಳು ಕೂಡ ಆದರೆ 'ಹೆಂಗಸರ ಕಡೆ ಹೆಂಗಸು ಗೇಟ್‌ಕೀಪರ್ ಏಕೆ? ಅವರವರು ಒಳಗೊಳಗೇ ಮಸಲತ್ತು ಮಾಡುವುದು ಬ್ರಹ್ಮನಿಗೂ ತಿಳಿಯುವುದಿಲ್ಲ' ಅಂತೆಲ್ಲ, ಗಂಡಸರಿಗೆ ಮಸಲತ್ತು ಮಾಡಲಿಕ್ಕೇ ಬರುವುದಿಲ್ಲ ಎಂಬಂತೆ, ಚರ್ಚೆಯಾಗಿ ಲಿಲ್ಲೀಯ ಜಾಗದಲ್ಲಿ ಶೀನ ಎಂಬವ ನೇಮಕಗೊಂಡ.

* *

ಆದರೆ ಲಿಲ್ಲೀಯನ್ನು ಊರು ಬಿಟ್ಟು ಹಾಕುತ್ತದೆಯೇ? ಆಸ್ಪತ್ರೆಯಲ್ಲಿ ಹೆರಿಗೆ ಮುಗಿಸಿ ಮನೆಗೆ ಬಂದ ಬಾಣಂತಿ–ಮಗುವಿನ ಮೂರು ತಿಂಗಳ ಚಾಕರಿಗೆ

ಲಿಲ್ಲೀಯೇ ಬರಬೇಕಾಯಿತು. ಆದರೆ ಎಷ್ಟು ಸಲ? ಎರಡು ಮೂರು ಮಕ್ಕಳಾದದ್ದೇ, ಹೆಚ್ಚಿನವರು ಗುಟ್ಟಿನಲ್ಲಿ' ಮಕ್ಕಳಾಗದಂತೆ' ಮಾಡಿಸಿಕೊಂಡೇ ಆಸ್ಪತ್ರೆಯಿಂದ ಹೊರಬೀಳುತ್ತಿದ್ದರು! ಕಾಲ ಎಷ್ಟು ಬೇಗ ದಾಟಿತು!.

ಈಗ ಟಾಕೀಸಿನಲ್ಲಿ ಲಿಲ್ಲೀ ಇಲ್ಲದಿದ್ದರೇನಾಯಿತು? ಊರಿನ ಹೆಂಗಸರಿಗೆ ಮುಂಚಿನಷ್ಟು ಭೀತಿಯೂ ಇಲ್ಲ. ಮುಂಚಿನಷ್ಟು ಖಾಲಿ ಕೈಯೂ ಇಲ್ಲ. ಸಂಜೆ ಸಿನೆಮಾಕ್ಕೆ ಹೋಗುತ್ತೇವೆ ಎಂದು ದೃಢವಾಗಿ ಹೇಳಿ ಹೋಗುವಷ್ಟು ಧೈರ್ಯ ಕಲಿತಿದ್ದಾರೆ. ಗಂಡಸರು ಗದರಿದರೆ 'ಅದೇನು ಒಂದು ಸಿನೆಮಾ ನೋಡಲು ನಾಲಾಯಕಾದೆವೆ? ಒಳ್ಳೇ ಕತೆ! ನೀವು ಹೇಳಿದ ಹಾಗೆ ಕೇಳುತ್ತಿದ್ದರೆ ಹೇಗೂ ಕುಣಿಸಿರಿ'– ಎಂದು ತುರುಬಿಗೆ ಮುಳ್ಳು ಕುತ್ತುತ್ತಾ ಉತ್ತರ ಕೊಡಲು ತಯಾರಾಗಿದ್ದಾರೆ. ದುಡ್ಡು? ಪೂರಾ ಸತ್ಯಂಭಟ್ಟರಾದರೆ ಸತ್ತು ನಿಗರಿಹೋದೆವು ಎನ್ನುತ್ತ ಮೂರು ಜನ ಹೊರಟರೆ ನಾಲ್ಕು ಜನ ಹೋಗುತ್ತೇವೆಂದು ಜಾಸ್ತಿ ವಸೂಲಿ ಮಾಡುವುದನ್ನು ಮತ್ತು ಹೆಚ್ಚಿಗಿರುವುದನ್ನು ಕೂಡಿಟ್ಟು ಮತ್ತು ಯಾವತ್ತಾದರೂ ಉಪಯೋಗಿಸುವುದನ್ನು ಕಲಿತಿದ್ದಾರೆ.

ಗುಲಾಬಿ ಸತ್ತು ಎಲ್ಲಿದ್ದಾಳೋ. ಆದರೆ ಅವಳ ಸೇವೆಯ ಟಾಕೀಸು ಮಾತ್ರ ಈಗ ಪರಭಾರೆಯಾದರೂ, ಊರಿನಲ್ಲಿ ಅಗೋಚರವಾದೊಂದು ಅಲೆಯೆಬ್ಬಿಸಿ ಶಾಂತವಾಗಿ ನಿಂತಿದೆ. ಒಮ್ಮೆ ಎದ್ದ ಅಲೆ ಯಾವತ್ತೂ, ದಡ ಸಿಕ್ಕುವವರೆಗೂ ವಿಸ್ತರಿಸುತ್ತಲೇ ಹೋಗುತ್ತದೆ, ಎಂದೂ ಹಿಂದಕ್ಕೆ ಮರುಳುವುದಿಲ್ಲವಷ್ಟೇ?

* * *

ಲೇಖಕರ ಪರಿಚಯ :

ವೈದೇಹಿ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ 'ವಾಸಂತಿ' ಅವರು ೧೯೪೫ ಫೆಬ್ರವರಿ ೧೨ರಂದು ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಜನಿಸಿದರು. ತಂದೆ ಐರೋಡಿ ವೆಂಕಟ ನರಸಿಂಹ ಹಾಗೂ ತಾಯಿ ಮಹಾಲಕ್ಷ್ಮಿ. ಸಣ್ಣ ಕಥೆ, ಕಾವ್ಯ, ಕಾದಂಬರಿ, ಮಕ್ಕಳ ಸಾಹಿತ್ಯ, ಅನುವಾದ ಸಾಹಿತ್ಯ, ಪ್ರಬಂಧ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಇವರು ಸೇವೆಗೈದಿದ್ದಾರೆ.

ಕರ್ಮವೀರ, ಮಯೂರ, ಸುಧಾ, ಪ್ರಜಾವಾಣಿ, ಉದಯವಾಣಿ, ಕಸ್ತೂರಿ, ಸಂಕ್ರಮಣ, ವನಿತಾ, ಮಲ್ಲಿಗೆ ಮುಂತಾದ ಪತ್ರಿಕೆಗಳಲ್ಲಿ ಇವರ ಕಥೆಗಳು ಪ್ರಕಟವಾಗಿವೆ.

ವೈದೇಹಿಯವರ ಕೃತಿಗಳಾದ ಮರಗಿಡಬಳ್ಳಿ, ಅಂತರಂಗದ ಪುಟಗಳು, ಗೋಲ, ಸಮಾಜ ಶಾಸ್ತ್ರಜ್ಞೆಯ, ಟಿಪ್ಪಣಿಗೆ ಅಮ್ಮಚ್ಚಿ, ಎಂಬ ನೆನಪು, ಕ್ರೌಂಚ ಪಕ್ಷಿಗಳು, ಕತೆ ಕತೆ ಕಾರಣ ಇವು ಕಥಾ ಸಂಕಲನಗಳಾಗಿವೆ. ಬಿಂದು ಬಿಂದಿಗೆ, ಪಾರಿಜಾತ, ಹೂವ ಕಟ್ಟುವ ಕಾಯಕ, ದೀಪದೊಳಗಿನ ದೀಪ, ಇವರ ಕವನ ಸಂಕಲನಗಳಾಗಿವೆ. ಅಸ್ಪೃಶ್ಯರು ಇವರ ಕಾದಂಬರಿಯ ಹೆಸರು. ಸುಂಟರಗಾಳಿ ಮೂಕನ ಮಕ್ಕಳು, ಗೊಂಬೆ ಮ್ಯಾಕ್‌ಬೆತ್, ಡಣಾಡಂಗುರ, ನಾಯಿಮರಿ ನಾಟಕ, ಸೂರ್ಯ ಬಂದ, ಆನೆ ಮತ್ತು ಪುಟ್ಟ, ಕೋಟ ಗುಮ್ಮ, ಹಕ್ಕಿಹಾಡು, ಅರ್ಧ ಚಂದ್ರ ಮಿಠಾಯಿ, ಅಳಿಲು ರಾಮಾಯಣ,ಸತ್ತ ಅಂದ್ರೆ ಸಾಯ್ತಾರ, ಆನೆ ಬಂತೋ ಆನೆ, ರಾಜ ಲಿಯರ್ ಮುಂತಾದವುಗಳು ಮಕ್ಕಳ ಸಾಹಿತ್ಯದ ಕೃತಿಗಳಾಗಿವೆ. ಮಲ್ಲಿನಾಥ ಧ್ಯಾನ, ಮೇಜು ಮತ್ತು ಬಡಿಗೆ ಜಾತ್ರೆ ಇವು ಪ್ರಬಂಧ ಸಂಕಲನಗಳಾಗಿವೆ. 'ಇರುವಂತಿಕೆ' ಇವರ ಅಭಿನಂದನಾ ಗ್ರಂಥದ ಹೆಸರು. ಇವರ ಕಥೆಗಳು ಹಿಂದಿ, ಮಲಯಾಳಂ, ತಮಿಳು, ತೆಲುಗು,ಇಂಗ್ಲಿಷ್ ಭಾಷೆಗಳಲ್ಲಿ ಅನುವಾದವಾಗಿವೆ.

ವೈದೇಹಿ ಅವರ ಸಾಹಿತ್ಯ ಸೇವೆಗೆ ಮೂಡಬಿದರೆಯಿಂದ 'ಗೋಲ' ಕೃತಿಗೆ, ಕಥಾ ಆರ್ಗನೈಜೇಷನ್ ನವದೆಹಲಿಯಿಂದ ಕಥಾ ಪುರಸ್ಕಾರ, 'ಹಗಲು ಗೀಚಿದ ನೆಂಟ' ಕೃತಿಗೆ ಕರ್ನಾಟಕ ಲೇಖಕಿಯರ ಸಂಘದಿಂದ ಅನುಪಮಾ ಪುರಸ್ಕಾರ, ಶಿವಮೊಗ್ಗದಿಂದ ಎಂ. ಕೆ. ಇಂದಿರಾ ಪುರಸ್ಕಾರ, 'ಅಸ್ಪೃಶ್ಯರು' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಐದು ಮಕ್ಕಳ ನಾಟಕಗಳು, ಸಾಹಿತ್ಯ ಅಕಾಡೆಮಿ ಪುರಸ್ಕಾರ, ಕರ್ನಾಟಕ ರಾಜ್ಯ ಸರ್ಕಾರದಿಂದ ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, 'ಕ್ರೌಂಚ ಪಕ್ಷಿಗಳು' ಎಂಬ ಸಣ್ಣ ಕಥಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ.

ಲೇಖನದ ಆಶಯ :

ವೈದೇಹಿಯವರ 'ಗುಲಾಬಿ ಟಾಕೀಸ್' ಕಥೆಯ ನಾಯಕಿ ಗುಲಾಬಿ ಹತ್ತರ ಜೊತೆಗೆ ಹನ್ನೊಂದಾಗಿರದೆ ತನ್ನ ಊರನ್ನು ಬಿಟ್ಟು ಓಡಿ ಹೋಗುವುದು ಎಲ್ಲಾ ಸಂಪ್ರದಾಯಗಳ ವಿರುದ್ಧ ದಂಗೆ ಏಳುವ ಕ್ರಮವಾಗಿದೆ. ಅವಳು ತನ್ನ ಪರಿಸರದಿಂದ ದೂರ ಉಳಿದರೂ ತನ್ನ ಜನರನ್ನು ಮರೆಯದೆ ಅವರನ್ನು ಬದಲಾವಣೆ ಮಾಡಲು ಬಯಸುತ್ತಾಳೆ. ಆದ್ದರಿಂದ ಆ ಊರಿನಲ್ಲಿ ಟಾಕೀಸ್‌ನ್ನು ಕಟ್ಟಿಸುತ್ತಾಳೆ. ಗುಲಾಬಿಯಿಂದ ಪ್ರಭಾವಿತಳಾಗಿದ್ದ ಸೂಲಗಿತ್ತಿ ಲಿಲ್ಲೀಬಾಯಿ ಗುಲಾಬಿಯ ಪ್ರತಿಬಿಂಬದಂತೆ ಬಿಂಬಿತಳಾಗಿದ್ದಾಳೆ. ಲಿಲ್ಲೀಬಾಯಿ ತನ್ನ ಸಾಂಪ್ರದಾಯಿಕ ಸೂಲಗಿತ್ತಿ ಕೆಲಸವನ್ನು

ಬಿಟ್ಟು ಗುಲಾಬಿ ಕಟ್ಟಿಸಿದ ಟಾಕೀಸ್‌ನಲ್ಲಿ ಕೆಲಸಗಿಟ್ಟಿಸಿಕೊಂಡು ಕೈತುಂಬ ಹಣ ಮಾಡಿಕೊಂಡು ವಿಲಾಸಿ ಜೀವನವನ್ನು ನಡೆಸುತ್ತಿದ್ದಳು. ಆಕೆ ಊರಿನ ಮಹಿಳೆಯರಿಗೆ ಟಾಕೀಸ್‌ನಲ್ಲಿ ಬಂದು ಹೊಸ ಸಿನೆಮಾದ ಕಥೆಗಳನ್ನು ಹೇಳಿ ಅವರಲ್ಲಿ ಕುತೂಹಲ ಮೂಡಿಸುತ್ತ ಪ್ರಭಾವಿ ಮಹಿಳೆಯಾಗಿ ಕಂಡು ಬಂದಳು.

ಮಹಿಳೆ ಕೇವಲ ನಾಗರೀಕ ಹಕ್ಕುಗಳಿಂದ ಮಾತ್ರ ಸ್ವತಂತ್ರಳಾಗುವದಿಲ್ಲ. ಅಕೆಗೆ ಆರ್ಥಿಕ ಸ್ವಾತಂತ್ರ್ಯದ ಅಗತ್ಯತೆಯು ಬಹಳ ಮುಖ್ಯವಾದದ್ದು. ಆದ್ದರಿಂದ ಮಹಿಳೆಯರು ಸಿನೆಮಾ ನೋಡಲು ಅಗತ್ಯವಾದ ಹಣ ಹೊಂದಿಸಲು ಉಳಿತಾಯದ ಯೋಜನೆಯಲ್ಲಿ ತೊಡಗಿದರು ಅಲ್ಲದೇ ತಮ್ಮ ಗಂಡಂದಿರಿಂದ ಸಿನೆಮಾ ನೋಡಲು ಬೇಕಾದ ಹಣವನ್ನು ಪಡೆಯುವ ತಂತ್ರಗಳನ್ನು ಯೋಚಿಸತೊಡಗಿದರು. ಈ ಮೊದಲು ಪುರುಷರು ಊರಿಗೆ ಬಂದ ಸರ್ಕಸ್ ನೋಡಲು ಅನುಮತಿ ನೀಡದೆ ಗದುರಿಸುತ್ತಿದ್ದರು. ಊರಿಗೆ ಟಾಕೀಸ್ ಬಂದ ನಂತರ ಮಹಿಳೆಯರು ನಾವು ಸಿನೆಮಾ ನೋಡಿ ಬರುತ್ತೇವೆಂದು ಹೇಳುವಷ್ಟು ಧೈರ್ಯವನ್ನು ತಂದುಕೊಂಡರು.

ಆ ಊರಿನ ಮಹಿಳೆಯುರು ಹೊಸ ಪೀಳಿಗೆಗೆ ಜನ್ಮ ನೀಡುವ ಸಂತಾನೊತ್ಪತ್ತಿಯಷ್ಟೇ ತಮ್ಮ ಕೆಲಸವೆಂದೂ ತಿಳಿದಿದ್ದರೂ ಸೂಲಗಿತ್ತಿ ಲಿಲ್ಲೀಬಾಯಿಯು ಟಾಕೀಸ್‌ನ ಮೂಲಕ ಗುಲಾಮಗಿರಿ ಬದುಕಿನ ಪ್ರಸವ ವೇದನೆಯಿಂದ ಮುಕ್ತಗೊಳಿಸಿ ಸ್ವತಂತ್ರ ಜೀವನದ ಅರಿವು ಮೂಡಿಸುವ ಒಂದು ಸಣ್ಣ ಅಲೆಯನ್ನು ಎಬ್ಬಿಸಿದಳು.

■■

ಘಟಕ–೪

ಬಹುಶಿಸ್ತೀಯ ಅರಿವು

ಘಟಕ–೪ : ಬಹುಶಿಸ್ತೀಯ ಅರಿವು

ಇಂದು ಸಾರಿಗೆ ಮತ್ತು ಸಂವಹನ ಕ್ಷೇತ್ರದ ಗಣನೀಯ ಬೆಳವಣಿಗೆಯಿಂದ ಜಗತ್ತಿನ ವಿಸ್ತಾರ ಕಡಿಮೆಯಾಗಿದೆ. ಒಂದು ಪ್ರದೇಶದ ಸಾಹಿತ್ಯ, ಕಲೆ, ಸಂಸ್ಕೃತಿಗಳು ಆಚಾರ–ವಿಚಾರ, ಕ್ರೀಡೆ, ಉಡುಗೆ–ತೊಡುಗೆ, ಆಹಾರ, ವಿಜ್ಞಾನ–ತಂತ್ರಜ್ಞಾನ ಹೊರಜಗತ್ತಿಗೆ ಪರಿಚಯವಾಗಿವೆ. ವಾಣಿಜ್ಯ ಕ್ಷೇತ್ರವು ಹೆಚ್ಚು ವಿಸ್ತೃತಗೊಂಡು ಇಡೀ ವಿಶ್ವವೇ ಮುಕ್ತ ಮಾರುಕಟ್ಟೆಯಾಗಿ ಪರಿಣಮಿಸಿದೆ. ಸಾಂಪ್ರದಾಯಿಕತೆಯಲ್ಲಿ ಆಧುನಿಕತೆ ಬೆರಸಿ, ಆಧುನಿಕತೆಗೆ ಸಾಂಪ್ರದಾಯಿಕತೆಯ ಸ್ಪರ್ಶ ನೀಡಿ ಸ್ಥಳೀಯ ಸಂಪನ್ಮೂಲಗಳಿಗೆ ಜಾಗತೀಕ ಮಟ್ಟದ ಮಾನ್ಯತೆ ದೊರೆತು, ವಿದೇಶಿಯ ಸರಕುಗಳಿಗೂ ನಮ್ಮ ದೇಶದಲ್ಲಿ ಮಾನ್ಯತೆ ದೊರೆಯುತ್ತಿವೆ.

ಇಂದಿನ ಕ್ಷಿಪ್ರವಾಗಿ ಬದಲಾಗುತ್ತಿರುವ ಉದ್ಯೋಗ ಕ್ಷೇತ್ರದಲ್ಲಿ ಉದ್ಯೋಗದಾತ ಸಂಸ್ಥೆಗಳು ವೈವಿಧ್ಯಮಯ ಕೌಶಲ್ಯ ಮತ್ತು ಜ್ಞಾನವನ್ನು ಹೊಂದಿರುವ ವೃತ್ತಿಪರತೆಯನ್ನು ಆಪೇಕ್ಷಿಸುತ್ತ ತೀವ್ರ ಸ್ಪರ್ಧೆಯನ್ನು ಸೃಷ್ಟಿಸುತ್ತಿವೆ. ಆದ್ದರಿಂದ ಒಂದೇ ಕ್ಷೇತ್ರದಲ್ಲಿ ತಜ್ಞತೆಯನ್ನು ಪಡೆಯುವದಲ್ಲದೆ ಬಹುಮುಖ ಪ್ರತಿಭೆ ಹೊಂದುವ ಮೂಲಕ ಉದ್ಯೋಗದಲ್ಲಿ ಸುಸ್ಥಿರತೆಯನ್ನು ಹೊಂದಬಹುದಾಗಿದೆ. ಈ ಹಿನ್ನೆಲೆಯಲ್ಲಿ ಒಂದು ವಿಷಯದ ಜೊತೆಗೆ ಬೇರೆ ವಿಷಯಗಳನ್ನು ಹಾಗೂ ಒಂದೇ ವಿಷಯವನ್ನು ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡುವ ಬಹುಶಿಸ್ತೀಯ ಅಧ್ಯಯನ ಇಂದು ಹೆಚ್ಚು ಪ್ರಸ್ತುತವೆನಿಸಿದೆ.

ಈ ಹಿಂದೆ ಕಾವ್ಯಗಳನ್ನು ವಾಚನದ ಮಾಡುವುದರ ಮೂಲಕ ಅಧ್ಯಯನ ಮಾಡಲಾಗುತ್ತಿತ್ತು. ನಂತರ ಗಮಕ ಕಲೆಯ ಮೂಲಕ ಪರಿಣಾಮಕಾರಿಯಾಗಿ ಕಲಿಕೆ–ಬೋಧನೆಯಲ್ಲಿ ಬಳಸಿಕೊಳ್ಳಲಾಗುತ್ತಿದೆ. ಆಧುನಿಕ ಕಾಲಘಟ್ಟದಲ್ಲಿ ಒಂದು ಕಾವ್ಯವನ್ನು ಕಾವ್ಯ–ಕುಂಚ–ಗಾಯನದ ಪರಿಕಲ್ಪನೆಯಲ್ಲಿ ಆಸ್ವಾದಿಸಲಾಗುತ್ತಿದೆ. ಕಥೆ ಕಾದಂಬರಿಗಳನ್ನು ಸಿನೇಮಾ, ಧಾರಾವಾಹಿಯಾಗಿ ಅಳವಡಿಸಿಕೊಂಡು ಕಾವ್ಯಗಳನ್ನು ನಾಟಕದ ರೂಪದಲ್ಲಿ ನಾಟಕಗಳನ್ನು ಕಾವ್ಯ ಮೊದಲಾದ ಸಾಹಿತ್ಯ ಪ್ರಕಾರಕ್ಕೆ ಅಳವಡಿಸಿಕೊಂಡು ಅಧ್ಯಯನ ಹಾಗೂ ಆಸ್ವಾದನೆಯ ಉಪಕ್ರಮಗಳು ಕಂಡು ಬಂದಿವೆ. ಪ್ರಸ್ತುತ ಎಚ್. ಎಲ್. ಪುಷ್ಪ ಅವರ 'ಭೂಮಿಯಲ್ಲ ಇವಳು' ನಾಟಕದ ವಿಮರ್ಶೆಯ ಲೇಖನವನ್ನು ಅಭ್ಯಾಸಕ್ಕೆ ಅಳವಡಿಸಲಾಗಿದೆ. ಕಥೆ, ಸಂಭಾಷಣೆ ಪಾತ್ರಗಳು ಹೀಗೆ ಬಹುಶಿಸ್ತೀಯ ಅಧ್ಯಯನದ ಅಭಿರುಚಿಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಪ್ರಯತ್ನವನ್ನು ಮಾಡಲಾಗಿದೆ.

೧೦. ನದಿಯ ಹಾದಿಯೊಳಗೆ

❖

ಸಿ. ಬಸವಲಿಂಗಯ್ಯ, ಮೈಸೂರು

ಸೂಚನೆ :

(ಎಚ್. ಎಲ್. ಪುಷ್ಪ ಅವರ 'ಭೂಮಿಯಲ್ಲ ಇವಳು' ನಾಟಕದ ಕತೆ, ಸಂಭಾಷಣೆ, ಪಾತ್ರಗಳು ಹಾಗೂ ವೈಚಾರಿಕತೆಯನ್ನು ಅನುಲಕ್ಷಿಸುವುದು.)

ಕನ್ನಡದ ಹೆಚ್ಚು ನಾಟಕಗಳು ಪುರಾಣಕಥನಗಳನ್ನೇ ಆಶ್ರಯಿಸಿ ಕೃಷಿಗೊಂಡ ಸೃಜನಶೀಲ ಕೃತಿಗಳು. ಆಧುನಿಕ ಸಾಮಾಜಿಕ ಬದುಕನ್ನು ಸಹ ಪುರಾಣ, ಐತಿಹಾಸಿಕ ಜಾನಪದೀಯ ಹಿನ್ನೆಲೆಯಲ್ಲೇ ವರ್ತಮಾನವನ್ನು ಅರ್ಥೈಸುವ ಪ್ರಕ್ರಿಯೆಗಳಾಗಿ ನಾಟಕಗಳು ಬಂದಿವೆ. ಪುರಾಣಕಥನದಲ್ಲಿ ವರ್ತಮಾನದ ವಾಸ್ತವಕ್ಕೆ ತನ್ತಾನೆ ಪ್ರತಿಮಾ ವಿಧಾನ ನಿರ್ಮಾಣಗೊಳ್ಳುತ್ತದೆ, ಅಲ್ಲದೆ ಪಾತ್ರನಿರೂಪಣೆಗೆ ರೂಪಕಶಕ್ತಿ ಸಾಧ್ಯವಾಗಲು ವಿಸ್ಮೃತಿಗೆ ಒಳಗಾದ ಕಥನಗಳು ನೆರವಿಗೆ ಬರುತ್ತವೆ.

ಕನ್ನಡ ರಂಗಭೂಮಿಗೆ ಜನ್ನನ ಯಶೋಧರ ಚರಿತೆ ಆಕರ ಗ್ರಂಥವಾಗಿ ಆಧುನಿಕ ನೆಲೆಯಲ್ಲಿ ನಾಟಕ ರಚನೆಗೊಳ್ಳಲು ಪ್ರೇರಣೆ ಒದಗಿಸುತ್ತಾ ಬಂದಿದೆ. ಗಿರೀಶ್ ಕಾರ್ನಾಡರು ತಮ್ಮ 'ಹಿಟ್ಟಿನ ಹುಂಜ' ನಾಟಕವನ್ನು ೧೯೬೬ ರಲ್ಲಿ ಬರೆದು ಪ್ರಕಟಮಾಡಿದ್ದು ೧೯೮೦ರ ಮೊದಲಿಗೆ, ಆದರೆ; ೧೯೫೭ರಲ್ಲಿ ವರದರಾಜ ಹುಯಿಲಗೋಳ 'ಅಮೃತಮತಿ' ಬಾನುಲಿ ನಾಟಕ ಪ್ರಕಟಿಸಿದ್ದರು. ೧೯೬೮ರಲ್ಲಿ ಎರಡನೆಯ ಮುದ್ರಣ ಹೊರತಂದರು. ದೇವೇಂದ್ರಕುಮಾರ ಹಕಾರಿ ಸಹ 'ಅಮೃತಮತಿ' ಕುರಿತು ನಾಟಕ ಬರೆದಿದ್ದಾರೆ. ಯಶೋಧರ ಚರಿತೆಯ ಅಮೃತಮತಿ ಸ್ತ್ರೀ ಸಂವೇದನೆ ಮೂಲಕ 'ಭೂಮಿಯಲ್ಲ ಇವಳು' ಡಾ.ಎಚ್.ಎಲ್. ಪುಷ್ಪ ಅವರ ವಿಭಿನ್ನ ಅನುಭವದ ಪ್ರಥಮ ಅನುಸಂಧಾನ ಎನ್ನಬಹುದು. ದೇಹ ಮತ್ತು ಮನಸ್ಸಿನ

ವೈರುಧ್ಯಗಳ ನಡುವಿನ ಸಂಘರ್ಷದ ಎಳೆಯಾಗಿ ಕಾರ್ನಾಡರ 'ಹಿಟ್ಟಿನ ಹುಂಜ'ದಲ್ಲಿ ಬೀಜರೂಪವಾಗಿ ಒಡಮೂಡಿ ಮುಂದೆ 'ಹಯವದನ' 'ನಾಗಮಂಡಲ' ನಾಟಕಗಳಲ್ಲಿ ಸವಿಸ್ತಾರವಾಗಿ ನಿರೂಪಣೆಗೊಳ್ಳುತ್ತದೆ. ಈ ದ್ವಂದ್ವ ಕಾರ್ನಾಡರ ನಾಟಕದ ಶಕ್ತಿಯೂ ಹೌದು. ಅಪೂರ್ಣತೆಯ ದಾಂಪತ್ಯ ಜೀವನಕ್ಕೆ ಆಧುನಿಕ ಭಾರತದಲ್ಲಿ ಹಲವು ಭಾಷೆಗಳಲ್ಲಿ ಇದು ಪುನರಾವರ್ತನೆಯಾಗಿ ಬರುತ್ತದೆ. ಹಿಂದಿಯ ಮೋಹನ್ ರಾಖೇಶ್ 'ಅಧೆ ಅಧೂರ' ನಾಟಕವು ಬದುಕಿನ ಅಪೂರ್ಣತೆಯನ್ನು ಕಟ್ಟಿಕೊಡುವುದೆ ಆಗಿದೆ. ಈ ಎಳೆ ಮತ್ತೆ ಪುಷ್ಪರವರ 'ಭೂಮಿಯಲ್ಲ ಇವಳು' ನಾಟಕದಲ್ಲಿ ವಿಸ್ತಾರಗೊಳ್ಳುತ್ತಿದೆ ಎನಿಸಿದರೂ, ಜೈನತತ್ವದ ಹಿನ್ನೆಲೆಯಲ್ಲಿ ಆಧುನಿಕ ಬದುಕನ್ನು ಮುಖಾಮುಖಿಯಾಗಿಸುವ ಪ್ರಯೋಗ ಸಾಧ್ಯವಾಗಿದೆ.

ಜೈನ ಧರ್ಮದ ಕಥನ ವಿಧಾನ ವಾಸ್ತವವಾದಿ ಕಥೆಗಾರರ ಕ್ರಮಕ್ಕೆ ಬದುಕಿಗೆ, ನಾಟಕಕ್ಕೆ ಪೂರಕವಾಗಬಲ್ಲ ಶಕ್ತಿಯುಳ್ಳ ಹಲವು ಕಥಾನಕಗಳು ಪಂಪ, ರನ್ನ, ಜನ್ನ ಅಲ್ಲದೆ ಜೈನ ಕಥೆಗಳಿಂದ ಶಕ್ತಿಯುತವಾಗಿ ಒದಗಿ ಬಂದಿವೆ. ದೊರೆ ಯಶೋಧರ, ತಾಯಿ ರಾಜಮಾತೆ ಹಿಟ್ಟಿನ ಹುಂಜ ಬಲಿ ಕೊಟ್ಟ ಪಾಪಕ್ಕೆ ಆರು ಜನ್ಮಗಳನ್ನು ಎತ್ತಿ ಏಳನೇ ಜನ್ಮದಲ್ಲಿ ಅಣ್ಣ ತಂಗಿಯರಾಗಿ ನಾಟಕದಲ್ಲಿ ಕಾಣಿಸಿಕೊಳ್ಳುತ್ತಾರೆ. ನಾಟಕ ಫ್ಲಾಶ್‌ಬ್ಯಾಕ್ ತಂತ್ರದಲ್ಲಿ ಮುಂದುವರೆಯುತ್ತದೆ. ಜನ್ಮಾಂತರ ಕಥೆಗಳ ಈ ನಾಟಕ ನವೀನವಾಗಿದೆ.

ಡಾ.ಡಿ.ಆರ್.ಎನ್. ಹೇಳುವಂತೆ "ವರ್ತಮಾನದ ಬಿಕ್ಕಟ್ಟುಗಳಿಗೆ ಈಗ ಲಭ್ಯವಿರುವ ಚಿಂತನೆ ಕ್ರಮಗಳು ಮತ್ತಷ್ಟು ಸಂಕಿರಣಗೊಳಿಸುವಲ್ಲಿ ಜಾಗತೀಕರಣ ಆವರಿಸಿದೆ. ಹಿಂದೆ ವಸಾಹತುವಿನ ಮರೆಯಲ್ಲಿ ಎಲ್ಲಾ ಕಥಾನಕಗಳು ವಿಸ್ಮೃತಿಗೆ ತಳ್ಳಲ್ಪಟ್ಟವುಗಳಾದವು." ಅಂತಹ ಮಹಾವಿಸ್ಮೃತಿಗಳಿಗೆ ಒಳಗಾದ ಕಥಾನಕಗಳು ಆಧುನಿಕ ನಾಟಕ ರಚನೆಗೆ ವರ್ತಮಾನದ ವಾಸ್ತವ ಬದುಕನ್ನು ಅರ್ಥಮಾಡಿಕೊಳ್ಳಲು ಒದಗಿಬರುವಂತೆ 'ಭೂಮಿಯಲ್ಲ ಇವಳು ನಿರೂಪಣೆಗೊಂಡಿದೆ. ಅಮೃತಮತಿಯ ಕಥನ ಹಳೆಯದಾದರು ಆಧುನಿಕತೆ ಸೃಷ್ಟಿಸಿರುವ ಬದುಕಿನ ಜಟಿಲತೆಗೆ ಕನ್ನಡಿಯಾಗಿದೆ.

ಜೈನಧರ್ಮ ಜನ್ಮಾಂತರಗಳ ಕರ್ಮಸಿದ್ಧಾಂತಗಳನ್ನು ಬಲವಾಗಿ ನಂಬಿ ಬದುಕುವ ಧರ್ಮ. ಅದರ ಸಂವೇದನೆಯ ಮಹತ್ವವಿರುವುದೇ ಮಾನವ ಬದುಕಿನ ವಾಸ್ತವ ತೀವ್ರತೆಗಳನ್ನು ಭವಗಳ ಮುಖೇನ ಭೋಗಜೀವನವನ್ನು ತಿಳಿಸುವುದು ಮತ್ತು ಮೋಕ್ಷಕ್ಕೆ ದಾರಿ ಮಾಡಿಕೊಡುವುದು. ಇದು ಅಪಾಯಕಾರಿ, ಅವಮಾನಕರ ದಾಂಪತ್ಯದ ಪ್ರಣಯ ಎಂದೂ ಗೊತ್ತಿದ್ದರೂ ಅಮೃತಮತಿ ತನಗೆ ದೊರೆಯುವ

ಆನಂದಕ್ಕೆ ವಿಕೃತನಾದ ಬದಗ (ಮಾವುತನ ದೇಹವನ್ನು ಅವನ ಒಡಲಾರಾಗದ ಸಮ್ಮೋಹಕ್ಕೆ ಒಳಗಾಗಿ ವ್ಯಾಮೋಹಗೊಂಡು ತನ್ನನ್ನು ತಾನು ಗಾನದ ಮಾಧುರ್ಯ ನಂತರ ಆ ಸ್ವರದ ದೇಹಕ್ಕೆ ಅರ್ಪಿತಳಾಗುತ್ತಾಳೆ. ಧನ, ಕನಕ, ಅರಮನೆ, ಸುಂದರ ಅರಸನಿದ್ದರೂ ಕೊರತೆಯಿಂದ ಬಳಲುವ ಅಮೃತಮತಿ ಬದಗನ ಮೋಹದ ಗಾನಕ್ಕೆ ಬಲಿಯಾಗುತ್ತಾಳೆ. ಗಾನಸುಧೆ ಅದ್ಭುತವಾಗಿ ಮೊದಲು ಅಮೃತಮತಿಯ (ಕಿವಿ) ಕರಣ ಕುಡಿಯುತ್ತದೆ. ಕಣ್ಣ ಆಶೆ ಅವನನ್ನು ಶೋಧಿಸಿದಾಗ ಅವಳ ಕಾಮದೇವ ವಿಕೃತನಾದ ಅಷ್ಟಾವಂಕ ಅಷ್ಟವಕ್ರನಾದರೂ ಅವಳ ಮನದನ್ನನೆ ಆಗುತ್ತಾನೆ. 'ಕೆಟ್ಟ ವಿದಿಗೆ ಕಣ್ಣಿಲ್ಲ', 'ಪ್ರೇಮಕ್ಕೆ ಕುರುಡು' ಎಂಬ ಸಾಂಪ್ರದಾಯಕ ಕ್ಲೀಷೆಪದಗಳು ನಾಟಕದಲ್ಲಿ ಅರ್ಥಕಳೆದುಕೊಳ್ಳುತ್ತವೆ. ಅದೇ ಮಾನವನ ವಾಸ್ತವವೆಂಬಂತೆ ಚಿತ್ರಣಗೊಂಡಿದೆ. ರಾಜ ಜೈನ ಮತಸ್ಥನಾದರು ಕೇಡಿನ ವಿಮುಕ್ತಿಗೆ ರಾಜಮಾತೆಯ ಮಾತಿನಂತೆ ತನ್ನ ಪೂರ್ವಜರ ಧರ್ಮದ ಆಚರಣೆಯಾದ 'ಬಲಿ' ಕೊಡುವ ಕ್ರಿಯಾ ವಿಧಿಗೆ ಹಿಟ್ಟಿನ ಹುಂಜ ಬಲಿಕೊಟ್ಟರೂ ಅಹಿಂಸವಾದಿಯ ಕ್ರಿಯಾವಿಧಿ ಹಿಂಸೆ ಮಾನಸಿಕವಾದ್ದರಿಂದ ದೈಹಿಕ ಕ್ರೌರ್ಯಕ್ಕಿಂತ ಹೆಚ್ಚಿನ ಬೆಲೆ ಬೇಡುತ್ತದೆ. ರಾಜನೇ ಬಲಿಪಶುವಾಗುತ್ತಾನೆ. ನಗರಗಳ ಹಿನ್ನೆಲೆಯಲ್ಲಿ ಯಶೋಧರ ಅಮೃತಮತಿ ಧ್ವನಿ ಪೂರ್ಣವಾದ ಪಾತ್ರಗಳು, ಕೊಳೆಗೇರಿಯ ವಯಸ್ಸಾದ ಮುದುಕಿ, ಹುಡುಗಿಯರು ರಾಣಿಯ ದಾಸಿಯಾದ ಮಾದೇವಿ, ದೇಹವನ್ನೆ ದುಡಿಮೆಗೆ ಒಡ್ಡಿರುವ ವೇಶ್ಯಯರು, ಅರಮನೆಯಲ್ಲಿ ಪುನರಾವರ್ತಿತವಾಗುತ್ತಿರುವ ರಾಜ-ರಾಣಿಯರ ಏಕತಾನತೆಯ ಬದುಕಿನ ಕಥೆ-ಕಥೆಯ ವಸ್ತು- ಆ ವಸ್ತುವಿನಲ್ಲಿರುವುದು ಅಪೂರ್ಣತೆಯ ಆಶಯ. ಈ ಮೂರು ಅಂಶಗಳು ಪುನರಾವರ್ತಿತವಾಗಿ ತ್ರಿಸ್ಥಲ ಪ್ರಜ್ಞೆ ಒದಗಿ ಬಂದು ಈ ಮೂರರ ನಡುವೆ ಘರ್ಷಣೆ ಸೃಜನಶೀಲಗೊಂಡು ಬದುಕಿನ ದುರಂತವನ್ನು ಪರಕಾಷ್ಠೆಗೆ ಒಯ್ಯುತ್ತದೆ.

ಕಥಾನಾಯಕಿ ಅಮೃತಮತಿ ಬಾಹ್ಯ ಪ್ರಪಂಚದಲ್ಲಿ ಯಾವ ಕೊರತೆಗಳಿರದ ಮಹಾರಾಣಿ, ಅರಮನೆ, ಚಿನ್ನದಾಭರಣಗಳು, ಸುಂದರನಾದ ರಾಜ ಎಲ್ಲವೂ ಅವಳವೇ, ಆದರೆ ಅವುಗಳೆಲ್ಲ ಚರ್ಮಕ್ಕೆ ಶೃಂಗಾರ ಮಾಡುವ ಒಡವೆಗಳು ಮಾತ್ರ! ರಾಜನಿದ್ದರೂ ಅಂತರಂಗದ ಸಖನಾಗಿಲ್ಲ. ಬದುಕನ್ನು ಪರಿಪೂರ್ಣವಾಗಿ ಅನುಭವಿಸಿ ಬಿಡುವ ಛಲದಹೆಣ್ಣು ಅಮೃತಮತಿಗೆ ಕೊರತೆ ದೇಹದ್ದಾಗಿರದೆ ಆತ್ಮದ್ದಾಗಿದೆ. ಅಂದರೆ ಒಳ-ಹೊರಗೆ ಏಕಗೊಂಡು ಆನಂದ ತರುವ ಅಂತರಂಗದ ಸಖನ ಕೊರತೆಯಿಂದ ಬಳಲುತ್ತಾಳೆ. ರಾಜ, ಅಮೃತಮತಿಯ ಬಾಹ್ಯ ಸೌಂದರ್ಯ, ದೇಹದ ಒಡೆಯನಾಗಿದ್ದರು ಅಂತರಂಗದ ಮನಸ್ಸಿನ ದೊರೆಯಾಗಿಲ್ಲ. ಸಾಮಾನ್ಯ

ಗಜಶಾಲೆಯ ಸೇವಕ ‘ಬದಗ’ ತನ್ನ ರಾಗದಿಂದ ರಾಣಿಯ ಅಂತರಂಗ ಪ್ರವೇಶಿಸಿ ಅಂತಪುರದಲ್ಲಿ ರಾಜನಿದ್ದರೂ ರಾಣಿ ಇಲ್ಲದಂತೆ ಪಲ್ಲಟಗೊಳಿಸುವ, ವ್ಯಾಮೋಹಗೊಳಿಸುವ ಧ್ವನಿಯ ಒಡೆಯನಾಗಿದ್ದಾನೆ. ಈ ಒಳಿತು–ಕೆಡಕು, ಸುಂದರ–ವಿಕೃತ, ನೀತಿ–ಅನೀತಿ, ಅರಸ–ಸೇವಕ ಯಾವ ಕಟ್ಟಳೆಗಳು ಸಂಬಂಧಗಳನ್ನು ಉಳಿಸುವುದಿಲ್ಲ. ಈ ನಾಟಕದಲ್ಲಿ ಜೈನಮತಸ್ಥಳಾದ ಅಮೃತಮತಿಯಿದ್ದಾಳೆ. ಪೂರ್ವಾಪರದಲ್ಲಿ ಕ್ಷತ್ರಿಯರಾದ ರಾಜಮಾತೆ–ರಾಜನಿದ್ದಾನೆ. ಆದರೆ ತತ್ವದಿಂದ ಪಾತ್ರಗಳು ಬದಲಾಗುವುದಿಲ್ಲ. ತಲ್ಲಣಗಳಿಂದ, ಪ್ರೇಮ, ಮೋಹ ದಿಗ್ರಮೆಗಳಿಂದ, ಬದುಕಿನ ಏರಿಳಿತ ಜನರನ್ನು ಪರಿವರ್ತಿಸುತ್ತದೆ. ಹಾಗಾಗಿ ಆಧುನಿಕತೆ ತನ್‌ತಾನೆ ಇಣುಕಿದೆ. ಅರಮನೆ ಆಡಳಿತ ಅಂತಃಪುರದ ರಾಣಿಯರು ಜೀವನದಲ್ಲಿ ತುಂಬಾ ಆಕರ್ಷಕವಾಗಿ ತೀವ್ರವಾಗಿ ಬಾಹ್ಯ ಸುಖ ಅನುಭವಿಸುತ್ತಿದ್ದ ಯಶೋಧರ ದೊರೆಗೆ ಪಟ್ಟದ ರಾಣಿಯ (ಅಮೃತಮತಿ) ಪ್ರೇಮ ಇದ್ದಕ್ಕಿದ್ದ ಹಾಗೆ ಕಣ್ಮರೆಯಾಗುತ್ತದೆ. ರಾಣಿಯ ಹಾವಭಾವಗಳಲ್ಲಾದ ಬದಲಾವಣೆಗಳು ಅವಳ ಬೆನ್ನಟ್ಟುವಂತೆ ಮಾಡಿ ಸತ್ಯ ಅರಿವಿಗೆ ಬಂದು ತನ್ನ ಪುರುಷಶಕ್ತಿಯ ಬಗೆಗೆ ಜಿಗುಪ್ಸೆ ಆವರಿಸುತ್ತದೆ. ಕೊಲ್ಲಬೇಕಾಗಿರುವ ವೈರಿ ಎದುರಿಗಿದ್ದರೂ, ಅವನ ಸ್ಥಾನಮಾನಕ್ಕಿಂತ ಖಡ್ಗದ ಘನತೆಯೇ ಹೆಚ್ಚಿನದು, ಅಲ್ಲದೆ ಜೀವತೆಗೆಯುವ ಕೆಲಸ ಹಿಂಸೆಗೆ ದಾರಿ ಮಾಡಿ ಸೂಕ್ಷ್ಮತೆಯು ಮತ್ತಷ್ಟು ಜಟಿಲಗೊಳ್ಳುತ್ತದೆ. ಗಟ್ಟಿ ವ್ಯಾಮೋಹಿಗಳು ಮಾತ್ರ ಕೇವಲಜ್ಞಾನವನ್ನು ದಟ್ಟವಾಗಿ ವೃದ್ಧಿಸಿಕೊಳ್ಳಬಲ್ಲರು ಎಂಬ ಸತ್ಯ ಮಾರ್ಮಿಕವಾಗಿ ನಾಟಕದ ಒಳಗೆ ಎಳೆಯಾಗಿ ಹೆಣೆದುಕೊಂಡಿದೆ. ಅಂತವರು ದುರಂತವನ್ನು ಸೃಷ್ಟಿಸಬಲ್ಲರು. ಅತಿವ್ಯಾಮೋಹ ಮೋಕ್ಷಕ್ಕೆ ಕಾರಣವಾಗಬಹುದು. ಆದರೆ ನಾಟಕಕಾರರ ಉದ್ದೇಶ ಇಲ್ಲಿ ಕೇವಲ ಜ್ಞಾನವಲ್ಲ, ದಟ್ಟವಾದ ಜೀವನಾನುಭವವನ್ನು ಕಟ್ಟಿಕೊಡುವುದು. ಈ ಆಧುನಿಕ ಜಗತ್ತಿನಲ್ಲಿ ಸಂಸಾರವೆಂಬ ಸಾಗರದಲ್ಲಿ ಗಂಡು–ಹೆಣ್ಣು, ದೇಹ–ಮನಸ್ಸು (ಆತ್ಮ) ಏಕವಾಗಿ ಆಕರ್ಷಿತವಾಗಿ ಪ್ರೇಮಿಸಲಾಗದೆ ಹೋದರೆ ವಿಘಟನೆಯ ಅಂತಿಮ ಸತ್ಯ ಎಂಬ ನಿಲುವಿನದು. ಗಂಡು ಹೆಣ್ಣಿಗೆ, ಹೆಣ್ಣು ಗಂಡಿಗೆ ಪೂರ್ಣವಾಗಿ ಒಳ–ಹೊರಗೆ ಕೊಟ್ಟುಕೊಳ್ಳುವುದು ಆಗದಿದ್ದಾಗ ಬದುಕು ದುರಂತವಾಗುತ್ತದೆ ಎಂಬ ಆಶಯ ಆಧುನಿಕ ನೆಲೆಯದು. ಪ್ರಿಯತಮೆ (ಕರ) ತನ್ನ ಪ್ರಿಯಕರನನ್ನು ತಾನು ಬಯಸಿದಂತೆ ಪಡೆಯಲು ಯಾವ ಕಠಿಣವಾದ ಹಾದಿಯನ್ನು ತುಳಿಯಬಲ್ಲಳು(ನು). ಅಲ್ಲದೆ ಅದು ಕೈಗೂಡದೆ ಹೋದರೆ ತನ್ನ ಬಂಧುಗಳನ್ನ ಕೊಲ್ಲಬಲ್ಲಳು(ನು), ಮನುಷ್ಯರೆಂದರೆ ಕೇವಲ ಭಾವನೆಗಳು ಎಂಬುದು ಸಕಾರಣವಾಗಿ ಬಂದಿದೆ. ದಟ್ಟವಾಸನೆಗಳನ್ನೆ ಮೇಳೈಸಿಕೊಂಡ ಅಮೃತಮತಿ ತೀವ್ರ

ವ್ಯಾಮೋಹಕ್ಕೆ ಒಳಗಾಗುತ್ತಾಳೆ. ದೊರೆ ಯಶೋಧರನಲ್ಲಿ ಕಾಣಲಾಗದ ದೈಹಿಕ–ಮಾನಸಿಕ ಭೋಗವನ್ನು ಅಷ್ಟಾವಂಕ ಬದಗನಲ್ಲಿ ಕಂಡು ಪೂರ್ಣತೆ ಪಡೆಯುತ್ತಾಳೆ.

ಜನ್ನನ ಯಶೋಧರ ಚರಿತೆಯ ಅಮೃತಮತಿಯ ಕಥನ ಕನ್ನಡ ಕವಿಗಳ ಮನಸ್ಸನ್ನು ಬಹಳವಾಗಿ ಕಾಡಿದ ಕಾವ್ಯಭಾಗವೆಂದು ಈಗಾಗಲೇ ಹೇಳಿದೆ. ಅಮೃತಮತಿಯ ವಿಕೃತ ಪ್ರಣಯದ ಪ್ರಸಂಗದ ಮೂಲಕ ಕವಿ ಜನ್ನ ಉದಾತ್ತವಾದ ಧಾರ್ಮಿಕ, ನೈತಿಕ ಸೂಕ್ಷ್ಮತೆಯ ಹಿನ್ನೆಲೆಯಲ್ಲಿ ಪಾರಮಾರ್ಥಿಕವಾದ ಮೋಕ್ಷಕ್ಕೆ ಪೀಠಿಕೆ ಹಾಕುತ್ತಾನೆ. ಅಮೃತಮತಿಯ ಲೈಂಗಿಕ ತೃಷೆ ಮೇಲುನೋಟಕ್ಕೆ ಅನೈತಿಕ, ವಿಕೃತವೆಂಬ ಆವರಣ ಅಣಿಗೊಳಿಸಿ ಮನಸ್ಸು ಹೇಸಿ ಜಿಗುಪ್ಸೆಗೊಂಡು ಪರಿವರ್ತನೆಗೊಳ್ಳುವ ವಾತಾವರಣ ನಿರ್ಮಾಣಕ್ಕೆ ಕಾರಣವಾದರೂ, ವಾಸ್ತವ ಬದುಕಿಗೆ ಅಮೃತಮತಿಯ ಭೋಗಲಾಲಸೆ, ತೃಪ್ತಿಯಾಗದ ಕಾಮನೆ ಅಪೂರ್ಣತೆಯಿಂದ ನರಳಿ ಪೂರ್ಣತೆಗೆ ತುಡಿಯುವ ಮನಸ್ಸು ಶೀಲ–ಅಶ್ಲೀಲ, ನೈತಿಕ–ಅನೈತಿಕ, ಸುಂದರ–ಕುರೂಪಿ ಎಂಬ ಯಾವ ಜಿಜ್ಞಾಸೆಗೆ ತೊಡಗದೆ ವಾಸನೆಗಳ ಪರಿಪೂರ್ಣತೆಗೆ, ತೊಡಗಿಕೊಳ್ಳುವ ಛಲ ಅಮೃತಮತಿ ಪಾತ್ರಕ್ಕೆ ದಕ್ಕಿದೆ.

ಈ ಜಿಜ್ಞಾಸೆ ಕೇವಲ ದೇಹದ, ಚರ್ಮದ ಆನಂದಕ್ಕೆ ಸೀಮಿತವಾದುದಲ್ಲ, ಅದು ಅಂತರಂಗದ ಒಳಗೂ ತುಂಬಿದೆ. ನಾಟಕದ ಮುಖ್ಯಪಾತ್ರವಾದ ರಾಣಿಯು ಕೇವಲ ಹೊರಗಿನ ಲೈಂಗಿಕ ಮೋಹಕ್ಕಲ್ಲ, ದೇಹ ಮತ್ತು ಅಂತರಂಗದ (ಆತ್ಮ) ಆನಂದಕ್ಕಾಗಿ ಹಂಬಲಿಸುವವಳು. ರಾಜ ಅವಳ ದೇಹದ ಒಡೆಯನಷ್ಟೆ ಆತ್ಮದ ಒಡೆಯನಾಗಿಲ್ಲ. ಹಲವು ರಾಣಿಯರ ಏಕಾಂತಗಳನ್ನು ಒಬ್ಬನೆ ತುಂಬಲಾರ. ಬಾಹ್ಯವಾಗಿ ಮದುವೆ, ಅಧಿಕಾರದ ಮೂಲಕ, ರಾಣಿಯ ದೇಹದ ಮಾಲೀಕನಾಗಿದ್ದಾನೆ ಅಷ್ಟೆ. ಅರಮನೆಯ ಸೇವಕ ‘ಬದಗ’ ವಿಕೃತವದನ ಹೊಂದಿದ್ದರೂ ತನ್ನ ಸುಮಧುರವಾದ ಗಾನ ಸುಧೆಯಿಂದ ಕೋಲಾಹಲಗೊಂಡ ಅಮೃತಮತಿಯ ಮನಸ್ಸನ್ನು ಆವರಿಸುತ್ತಾ ರತಿ ವಿಲಾಸ ಬಿತ್ತಿ ಕಿವಿಗಳ ಮೂಲಕ ಅವಳ ಹೃದಯ ತಣಿಸಿ ದೇಹದ ಒಡೆಯನೂ ಆಗುವ ಮೂಲಕ ರಾಜ್ಯಶಕ್ತಿಯ ಎಲ್ಲಾ ಕಟ್ಟುಪಾಡುಗಳನ್ನು ಮುರಿಯುವ ಪ್ರತಿನಾಯಕನಾಗುತ್ತಾನೆ. ಅವನ ಅಪೂರ್ಣ ಬದುಕಿಗೆ ರಾಣಿ ಪೂರ್ಣತೆ ತರುತ್ತಾಳೆ. ಜೈನ ಧರ್ಮ ಸಂಕೇತಿಸುವ ದಿಗಂಬರ ಸ್ಥಿತಿಗೆ ಈ ನಾಟಕ ಪೂರಕವಾಗಿಯೆ ನೇಯ್ಕೆಗೊಂಡಿದೆ. ‘ಬತ್ತಲಾಗದೆ ಬಯಲು ಸಿಕ್ಕದಿಲ್ಲ’ ಎಂಬ ದಿಗಂಬರ ಸ್ಥಿತಿ ಎಷ್ಟು ಸುಲಿದರು ಜನ್ಮ ಜನ್ಮಾಂತರಗಳ ಪದರುಗಳು ಹಾಗೇ ಉಳಿದು ಮಾನವನನ್ನು ಕೆಣಕುತ್ತಾ ಹೋಗುವ ಕರ್ಮಸಿದ್ಧಾಂತ ನಾಟಕದ

ಪೂರ್ವರಂಗದಲ್ಲಿ ಘನೀಕೃತಗೊಂಡಿದೆ. ಜನ್ಮಾಂತರಗಳ ಪದರಗಳು ಈರುಳ್ಳಿ ಗಡ್ಡೆಯಂತೆ ಪದ–ಪದರಗಳ ಎಲ್ಲಾ ವಿವರಗಳು ಸುಲಿದುಕೊಂಡಾಗ ಉಳಿಯುವುದು ಶೂನ್ಯ! ಆ ಅಪೂರ್ಣತೆಯ ಬದುಕಿಗೆ ಪೂರ್ಣತೆಯ ಶೋಧನೆ ನಿರಂತರವಾಗುತ್ತದೆ. ನಾಟಕ ವರ್ತಮಾನದ ಮಾನವನ ಬದುಕು ಅರ್ಥವಿಲ್ಲದ ಅಪೂರ್ಣತೆಯನ್ನು ರೂಪಕವಾಗಿ ತೋರಿಸುತ್ತದೆ. ಧರ್ಮತತ್ವದಲ್ಲಿ ಆ ಅಪೂರ್ಣತೆಯೇ ಪೂರ್ಣತೆಯ ದಿವ್ಯಜ್ಞಾನ ಪಡೆದು ಮೋಕ್ಷದ ಮಾರ್ಗವಾಗುತ್ತದೆ. ಹಿಟ್ಟಿನ ಹುಂಜವೂ ಹಿಂಸೆಯ ಒಂದು ಪ್ರತಿಮೆಯಾಗುತ್ತದೆ. ರಾಣಿಯನ್ನು ಅವಳ ಕೇಡಿನ ಆಲೋಚನೆಯನ್ನು ಬಲಿಕೊಡಲು ರಾಜಮಾತೆ–ರಾಜ ಮುಂದಾಗುತ್ತಾರೆ. ಆ ಹಿಟ್ಟಿನ ಹುಂಜ ಬದಗನ ಅಂತರಂಗದಲ್ಲಿ ಜೀವ ಉಳಿಸಿಕೊಳ್ಳಲು ರಕ್ಷಣೆ ಪಡೆಯುತ್ತದೆ. ಅಹಿಂಸೆ–ಹಿಂಸೆಯ ದ್ವಂದ್ವ ಯುದ್ಧದಲ್ಲಿ ಅಹಿಂಸೆಯೇ ಗೆಲ್ಲುತ್ತದೆ, ಹಿಂಸೆ ಪತನಗೊಳ್ಳುತ್ತದೆ. ದೇಶ ಭ್ರಷ್ಟನಾಗುವ ರಾಜ–ರಾಜಮಾತೆ ಹಿಂಸೆಯ ಪ್ರತೀಕವಾಗುತ್ತಾರೆ. ನಾಟಕ ಅಂತಿಮವಾಗಿ ಈಗಾಗಲೇ ರೂಪಗೊಂಡಿರುವ ನೈತಿಕತೆಯ ಸಿದ್ಧ ಮಾದರಿಯ ಜಿಜ್ಞಾಸೆಗೆ ತೊಡಗದೆ ಮಧುರ ಗಾನದಲ್ಲಿ ಲೀನಗೊಳ್ಳುತ್ತದೆ.

ಹಲವು ಸ್ತರಗಳಲ್ಲಿ ಪಾತ್ರಗಳ ಮೂಲಕ ಕಥೆ ಹೇಳುವ ಮತ್ತು ಪಾತ್ರಗಳ ಮೂಲಕ ನಾಟಕ ಕಟ್ಟುವ ಕ್ರಮ ಸಾಧ್ಯವಾಗಿದೆ. ಲೌಕಿಕ ಕಥನದ ಮೂಲಕ ಪಾರಮಾರ್ಥಿಕ ಆಶಯಗಳನ್ನು ಹೊರಡಿಸುವ ಉದ್ದೇಶ ನಾಟಕಕ್ಕೆ ಇಲ್ಲದಿದ್ದರೂ, ಬದುಕಿನ ಸಂಕೀರ್ಣತೆಯನ್ನು ಆಧುನಿಕ ಸಮಾಜಕ್ಕೆ ತಿಳಿಸುವುದೇ ಆಗಿದೆ. ರಾಣಿ ವಿರಹಿಣಿ, ದುಃಖತಪ್ತ ಕಾಮನೆಗಳ ತೊಳಲಾಟದಲ್ಲಿ ಅಸ್ತವ್ಯಸ್ತಗೊಂಡವಳು. ಆದರೆ ಎಲ್ಲಾ ಭಯಗಳನ್ನು ದಾಟುವ ಆಧ್ಯಾತ್ಮಿಕ ಶಕ್ತಿ ಇದೆ ಎನಿಸುತ್ತದೆ. ಆಧುನಿಕ ನೆಲೆಯಲ್ಲಿ ಸ್ತ್ರೀ ಮುಕ್ತಿ ಪರಿಕಲ್ಪನೆ ಎನ್ನಬಹುದೇನೊ?

ಇಡೀ ನಾಟಕ ಕತ್ತಲೆಯ ಹಿನ್ನೆಲೆಯಲ್ಲಿ ಕಳೆಕಟ್ಟುತ್ತದೆ. ಕತ್ತಲೆಯೂ ಒಂದು ರೂಪಕವಾಗಿ ಮುಂದಿನ ದುರಂತಗಳನ್ನು ಸಾಂಕೇತಿಕವಾಗಿ ಧ್ವನಿಸುತ್ತದೆ. ನಾಟಕ ಕೇವಲ ಪಾತ್ರಚಿತ್ರಣದಿಂದಾಗುವುದಿಲ್ಲ. ಮಾನವನ ಬದುಕಿನ ಅರ್ಥವನ್ನು ಅವನ ಆವರಣವನ್ನು ರೂಪಕಗಳಿಂದ ಪಡೆದುಕೊಳ್ಳುವ ಒಂದು ಪರಿ. ಆ ಪರಿ ಅಥವಾ ಕ್ರಮ ಲೇಖಕಿಗೆ ಕಾವ್ಯಗುಣದಿಂದ ದಕ್ಕಿದೆ.

ಕನ್ನಡದಲ್ಲಿ ತೀವ್ರವಾಗಿ ನಾಟಕ ಬರೆದ ಮಹಿಳಾ ಬರಹಗಾರರು ಬೆರಳಣಿಕೆಯಷ್ಟು, ವೈದೇಹಿ ಹೊರತು ಪಡಿಸಿದರೆ (ಸಂಧ್ಯಾ ಶಿವಪ್ರಕಾಶ್ ಕೆಲವು ಏಕಾಂಕಗಳನ್ನು ಬರೆದಿದ್ದಾರೆ) ಎಚ್.ಎಲ್. ಪುಷ್ಪ ತಮ್ಮ ಕಾವ್ಯ ಅಮೃತಮತಿಯ

ಸ್ವಗತದ ಮೂಲಕ ಹೆಣ್ಣಿನ ಅಂತರಂಗಗಳನ್ನು ಬಿಚ್ಚಿಟ್ಟವರು. ಈ ನಾಟಕದಲ್ಲು ಅಮೃತಮತಿ ಲೇಖಕಿಯ 'ಮತಿ'ಯಲ್ಲಿ ಕಾಡಿ ತನ್ನ ತಲ್ಲಣಗಳನ್ನು ಆಧುನಿಕ ಸಮಾಜಕ್ಕೆ ಪರಿಚಯಿಸಿಕೊಳ್ಳುವ 'ಮಹಾಮರವು' ಸ್ಮೃತಿಗೆ ತಿರುಗಿದಂತೆ ಭಾಸವಾಗುತ್ತದೆ. ನಾಟಕದ ರಚನ ತಂತ್ರ ಕನ್ನಡಕ್ಕೆ ಹೊಸದಲ್ಲದಿದ್ದರೂ, ಪದ್ಯಗಳು, ಸಂಕೀರ್ಣತೆಯಿಂದ ಬದುಕು ಸರಳವಾದುದಲ್ಲ ಎಂಬುದನ್ನು ಮನದಟ್ಟು ಮಾಡುತ್ತಾರೆ. ನಾಟಕದ ಆರಂಭದಲ್ಲಿ ಬರುವ ಪಾತ್ರಗಳು ತಮ್ಮ ಜನ್ಮಾಂತರ ಕಥೆ ಹೇಳಿ ನಿರ್ಗಮಿಸಿ ಪುನಃ ರಂಗಕ್ಕೆ ಬರದಿರುವ ವಿಸ್ಮೃತಿಯು ಆ ಪಾತ್ರಗಳಿಗೆ ಬಂದಿದೆ ಎಂಬುದು ಹೊರತುಪಡಿಸಿದರೆ ಮತ್ತೆ ಮತ್ತೆ ನಾಟಕದ ನಾಯಕಿ ರಾಣಿಯೇ ಪ್ರಮುಖವಾದ ಪಾತ್ರವಾಗಿ ಜೀವನದಿಯಂತೆ ರಂಗದ ತುಂಬಾ ಭೋರ್ಗರೆದು ಹರಿದಿದ್ದಾಳೆ.

'ಭೂಮಿಯಲ್ಲ ಇವಳು' ಧಾರ್ಮಿಕ, ನೈತಿಕ ಹಿನ್ನೆಲೆಯಿಂದ ಬಿಡಿಸಿ ನೋಡಿದರೆ ಅದೊಂದು ಶೃಂಗಾರ ಕಾವ್ಯದಂತೆ ಭಾಸವಾಗುತ್ತದೆ. ಮೂಲಕಾವ್ಯದ ಹಿನ್ನೆಲೆಯಲ್ಲಿಯೂ ಅಮೃತಮತಿಯ ವಿಕೃತ (ಏಕೆಂದರೆ ಸುಂದರ ರಾಜ ಪುರುಷ, ಅರಮನೆ ಧನ, ಕನಕ ಇದ್ದು ಗಜಶಾಲೆಯ ಮಾವುತನ ವಿಕೃತವದನವನ್ನು ಬಯಸುವ ಮನಸ್ಸು) ಮೋಹ ಮತ್ತು ನಂತರದ ಮಾನವ ಹಲವಾರು ಕೃತಕ ಆವರಣಗಳನ್ನು ಬದುಕಿಗಾಗಿ ಸೃಷ್ಟಿಸಿಕೊಳ್ಳಬಲ್ಲ ಸಾಮರ್ಥ್ಯವನ್ನು ಹೇಳುತ್ತದೆ.

ಲೈಂಗಿಕ ಕ್ರಿಯೆಗಳು ವಂಚನೆಯ ಮಾರ್ಗಗಳಾಗಿ ಅಸಹ್ಯವೆಂದು ಭಾಸವಾಗುವಂತಿವೆ. ಅಮೃತಮತಿಗೊದಗಿದ ಭೀಕರವಾದ ಶಿಕ್ಷೆಯಿಂದಲೂ ಅಷ್ಟಾವಂಕನ ಬಗೆಗೆ ಅವಳ ಮೋಹ ನಿಷ್ಠೆ ಎಂದಿನಂತೆ ಉಳಿಯುತ್ತದೆ. ಅವಳ ಅಧಃಪತನ ಜಿಗುಪ್ಸೆ ತರುತ್ತದೆ ನಿಜ, ಆದರೆ ಅವಳು ಜನ್ಮಜನ್ಮಾಂತರಗಳ ಅದಮ್ಯ ವಿಧಿಯ ಆಟದ ಕೈಗೊಂಬೆಯೆಂಬ ಸಮಾಧಾನವನ್ನು ಜನ್ನನ ಕಾವ್ಯವು ಮೂಡಿಸುವಂತಿದೆ. ಆದರೆ ನಾಟಕಕಾರರಿಗೆ ಹೇಳಬೇಕಾಗಿರುವ ಅಂಶ ಅದಾಗಿರದೆ, ಆಧುನಿಕ ಸಮಾಜದ ಸಂಸಾರಗಳ ಬಿಕ್ಕಟ್ಟುಗಳು ಮುಖ್ಯವಾಗಿವೆ ಎನಿಸುತ್ತದೆ. ಪುಷ್ಪ ಅವರ ಅಮೃತಮತಿ ಸ್ತ್ರೀಮುಕ್ತಿ ಆಂದೋಲನದ ವ್ಯಕ್ತಿನಿಷ್ಠ ಅಭಿಪ್ರಾಯಕ್ಕೆ ಪಕ್ಕಾದ ನಾಯಕಿಯಾಗಿದ್ದಾಳೆ, ಪುರುಷಪ್ರಧಾನ ಸಮಾಜದ ಕಟ್ಟಳೆಗಳನ್ನು ಧಿಕ್ಕರಿಸುವ ದಟ್ಟ ಕಾಮನೆಗಳ ಪಾತ್ರವಾಗಿದ್ದಾಳೆ. ಆಧುನಿಕ ಸಮಾಜದ ಸಂಸಾರಗಳು, ಬದುಕು ಅಪೂರ್ಣತೆಯಿಂದ ನರಳುವ ಸಂಕಟಗಳಿಗೆ ಕಾರಣಗಳನ್ನು ಹುಡುಕುವ ಜಿಜ್ಞಾಸೆಗೆ ಹಚ್ಚುತ್ತದೆ. ಮುಚ್ಚುಮರೆಯಿಲ್ಲದ ಜೀವನವನ್ನು ಸ್ವೀಕರಿಸಲು ಆತುರಳಾಗಿರುವ ಅಮೃತಮತಿ ಆಧುನಿಕ ಕಾಲದ ಬದುಕಿನ ಜಟಿಲತೆಗಳಿಗೆ ರೂಪಕವಾಗುತ್ತಾಳೆ.

ಪಾತ್ರವರ್ಗ ಧಾರವಾಡದ ಕನ್ನಡ ಶೈಲಿಗೆ ಒಗ್ಗಿಸಿಕೊಳ್ಳಲು ಹವಣಿಸಿದಂತೆ ಕಂಡರೂ, ಸಂಭಾಷಣೆ ಕಾವ್ಯಗುಣದಿಂದ ಸಾಮಾನ್ಯ ಕನ್ನಡವೂ ಕಾವ್ಯಮಯವಾಗಿ ನಾಟಕೀಯತೆ ಒದಗಿ ಬಂದಿದೆ.

ಅಮೃತಮತಿಯ ಆತ್ಮಗತದಂತೆ ಕೊಳೆಗೇರಿಯ ತಿಪ್ಪಜ್ಜಿ, ದಿನ ನಿತ್ಯದ ಬದುಕಿಗೆ ಮೈಯ್ಯ ವ್ಯಾಪಾರಕ್ಕಿಳಿದಿರುವ ಗಣಿಕೆಯರು ಆಧುನಿಕ ಬೆಲೆವೆಣ್ಣುಗಳನ್ನು ನೆನಪಿಸುತ್ತಾರೆ. ಬದುಕಲೇಬೇಕೆಂಬ ಜೀವನ ಸಿದ್ಧಾಂತಕ್ಕೆ ಕಟ್ಟುಬಿದ್ದವರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅಮೃತಮತಿ ಪಾತ್ರ ಗಮನಿಸಿದರೆ ಸಿಕ್ಕ ಸಿಕ್ಕವರಿಗೆಲ್ಲ ಸೆರಗು ಹಾಸುವ ಗಣಿಕೆಯ ವ್ಯಭಿಚಾರಭಾವದವಳಲ್ಲ. ತನ್ನ ಪ್ರೇಮ ಜೀವನದ ಒಳ-ಹೊರಗೂ ಏಕಗೊಂಡು Divine esseme ಗೆ ಪಕ್ಕಾದಂತೆ ಭಾಸವಾಗುತ್ತದೆ.

ನಾಟಕದ ನಡುವೆ ಬರುವ ಪದ್ಯಗಳು ನಾಟಕದ ಬೀಜರೂಪದಲ್ಲಿ ಅರ್ಥೈಸಲು ಸಹಕಾರಿಯಾಗಿವೆ.

ಕನ್ನಡ ರಂಗಭೂಮಿಗೆ ಈ ಗದ್ಯ-ಪದ್ಯ ರಚನಾ ವಿಧಾನ ಹೊಸದಲ್ಲದಿದ್ದರೂ ನಾಟಕದ ಆವರಣವೆ ಕಾವ್ಯಮಯವಾಗಿರುವುದರಿಂದ ಪದ್ಯಗಳು ಘನೀಕೃತಗೊಂಡು ಸಂದೇಶ ನೀಡುವಲ್ಲಿ ಯಶಸ್ವಿಯಾಗಿವೆ. ದೃಶ್ಯದಿಂದ ದೃಶ್ಯಕ್ಕೆ ಪದ್ಯಗಳು ಮುಂದಿನ ಕಥನ ಹೇಳುವಲ್ಲಿ ಫಲಕಾರಿಯಾಗಿವೆ. ಒಟ್ಟಾರೆ ಪ್ರಯೋಗಕ್ಕೆ ತೊಡಗಿಸುವ ನಿರ್ದೇಶಕರಿಗೆ ಗೀತನಾಟಕವಾಗಿಯು ಕಾಣಬಹುದು. ಆಧುನಿಕ ನಾಟಕದ ವಾಸ್ತವ ಶೈಲಿಗೂ ಅಳವಡಿಸಿಕೊಳ್ಳಬಲ್ಲ ರಚನಾ ವಿನ್ಯಾಸ ನಾಟಕದ ಒಳಗೆ ಒದಗಿಬಂದಿರುವುದು ನಾಟಕದ ವಿಶಿಷ್ಟತೆ ಎನಿಸಿದೆ. ಸಂಭಾಷಣೆಯ ಕಾವ್ಯಗುಣಕ್ಕೆ ಉದಾ: "ಅಜ್ಜಿ: ಲೋಕದಲ್ಲಿ ಹೆಣ್ಣು ಯಾಕೆ ಜಾರಾಳ ಸ್ವಾಮಿ, ಆಕೀಗೆ ಗಂಡನ ಜತಿ ಜೀವನ ನದಿ ಸಳ ಸಳ ಹರಿದ್ಹಾಂಗ ಸಾಗಬೇಕು. ಎಲ್ಲಾದರೂ ಒಂದೀಟು ಅಡೆ ತಡೆಯಾದ್ರೆ ಆಕಿ ಕೊಳ್ಳು ನಾರಾಳ, ಹೆಣ್ಣು ಒಂದು ನದೀ ಇದ್ದಾಂಗ, ಆಕೀಗೆ ತೇಲಿಸಾದು ಗೊತ್ತು ಮುಳುಗಿಸಾದು ಗೊತ್ತು. ಆಕೀ ನದಿ ಸ್ವಾಮಿ, ಮಹಾನದಿ ಆಕಿ". ನಾಟಕ ಮುಕ್ತಾಯದ ಹಂತ ತಲುಪಿದರು ಈ ಹಾಡು ಮತ್ತೆ ಮತ್ತೆ

"ಎಲ್ಲಿತ್ತೇ ಈ ಧಾರೆ
ಎಲ್ಲಿ ಅಡಗಿತ್ತೇ ಈ ಧಾರೆ
ಸಾವಿರ ಸಾವಿರ ಬೆಟ್ಟಗಳ ಹಾಡು
ತಣಿಯದ ಕಣಿವೆಗಳ ಈ ಕೂಗು
ಜಲ, ಜಲ, ಜಲ ಜಲತರಂಗಗಳ ರಾಗ

ಎಲ್ಲಿತ್ತೇ, ಎಲ್ಲಿ ಅಡಗಿತ್ತೇ
ಈ ಹಾಡು"

ನಮ್ಮ ಬದುಕಿಗೂ ಪುನರಾವರ್ತಿತವಾಗಿ ಕಾಡಹೊಕ್ಕರೂ ಕತ್ತಲಾದಾಗ ಕಾಡುತ್ತದೆ. ಎಚ್.ಎಲ್. ಪುಷ್ಪ ಅವರು ಕವಯತ್ರಿ ಆಗಿರುವುದರಿಂದ ನಾಟಕ ಕಟ್ಟುವ ಕಾಯಕ ತ್ರಾಸಿನದಾಗಿಲ್ಲ ಎನಿಸಿದೆ. ಆರಂಭದ ನಾಟಕದಲ್ಲೇ ವೃತ್ತಿ ನಿರತ ನಾಟಕಕಾರರ ಎಲ್ಲಾ ಕಸುವುಗಳು ಗೊತ್ತಿರುವ ಪ್ರಬುದ್ಧತೆ ಕಂಡುಬರುತ್ತದೆ. ನಾಟಕ ರಚನಾ ವಿನ್ಯಾಸ ಈಗಾಗಲೇ ಕನ್ನಡದಲ್ಲಿ ಆಗಿ ಹೋಗಿರುವ ಸಿದ್ಧ ಮಾದರಿಯದೆ ಆದರೂ ಕಾವ್ಯಗುಣದಿಂದ ಹೊಸತನ ಬಂದಿದೆ. ಎಷ್ಟೇ ಆದರೂ ನಾಟಕವೇ ಕಾವ್ಯ ಅಲ್ಲವೇ? ಕವಿಗಳ ನಾಟಕ ರಚನೆಗೆ ತೊಡಗಿದರೆ ನಾಟಕಕ್ಕೆ ಲಾಭ ಕಾವ್ಯಕ್ಕೆ ಸಹ. ಏಕಕಾಲಕ್ಕೆ ದಕ್ಕುವ ಗುಣ ಈ ನಾಟಕದಿಂದ ಕನ್ನಡ ರಂಗಭೂಮಿಗೆ ಬಂದಿದೆ. ಪ್ರಯೋಗಶೀಲ ಕನ್ನಡ ರಂಗಭೂಮಿ ಈ ಪ್ರಥಮ ನಾಟಕವನ್ನು ಸಂತೋಷದಿಂದ ಸ್ವೀಕರಿಸುವ ಭರವಸೆ ನನಗಿದೆ.

* * *

ನಾಟಕಕಾರರ ಪರಿಚಯ :

ಕನ್ನಡದ ಸ್ತ್ರೀ ಸಂವೇದನೆಯ ಬರಹಗಾರರ ಮುಂಚೂಣಿಯಲ್ಲಿ ಒಬ್ಬರಾದ ಡಾ. ಎಚ್.ಎಲ್. ಪುಷ್ಪ ಅವರು ಸೆಪ್ಟೆಂಬರ್ ೧೮, ೧೯೬೨ರಂದು ದೊಡ್ಡಬಳ್ಳಾಪುರದ ಹೊಸಹಳ್ಳಿ ಉಜ್ಜನಿಯಲ್ಲಿ ಜನಿಸಿದರು. ತಂದೆ ಲಕ್ಷ್ಮಣಗೌಡ. ತಾಯಿ ಕಮಲಮ್ಮ. ಪುಷ್ಪ ಅವರು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸ್ತ್ರೀವಾದಿ ಚಿಂತಕಿಯಾಗಿ ಕಾವ್ಯ ಪ್ರವೇಶಿಸಿದ ಪುಷ್ಪರವರು 'ಅಮೃತಮತಿಯ ಸ್ವಗತ' ಎಂಬ ಕವನ ಸಂಕಲನದಲ್ಲಿಯೇ ಭರವಸೆಯನ್ನು ಮೂಡಿಸಿದ ಕವಯಿತ್ರಿ. 'ಗಾಜುಗೋಳ', 'ಲೋಕದ ಕಣ್ಣು', ಮದರಂಗಿ, ವೃತ್ತಾಂತ, ಲೋಹದ ಕಣ್ಣು ಮುಂತಾದ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ.

'ಭೂಮಿಯಲ್ಲ ಇವಳು, ಗೆಲ್ಲಲಾರ್ಕುಮೆ ಮೃತ್ಯುರಾಜನಂ, ಪರ್ವಾಪರ್ವ-ಇವು ನಾಟಕಗಳು. 'ಅವಲೋಕನ, ಗಂಧಗಾಳಿ, ವಚನ ಸಾಹಿತ್ಯ ಮತ್ತು ಸ್ತ್ರೀತ್ವದ ಕಲ್ಪನೆ ವಿಮರ್ಶಾ ಕೃತಿಗಳು. 'ಆಧುನಿಕ ಕನ್ನಡ ನಾಟಕಗಳಲ್ಲಿ ಮೈಮನಸ್ಸುಗಳ ಸಂಬಂಧ' ಎಂಬ ಸಂಶೋಧನೆಗೆ ಕನ್ನಡ ವಿಶ್ವವಿದ್ಯಾಲಯವು ಪಿಎಚ್.ಡಿ. ಪದವಿ

ಪ್ರದಾನ ಮಾಡಿದೆ. 'ಸ್ತ್ರೀ ಎಂದರೆ ಅಷ್ಟೇ ಸಾಕೆ' ಇವರ ಪ್ರಮುಖ ಲೇಖನಗಳ ಸಂಕಲನ. 'ಅನ್ವೇಷಣೆ' ಸಾಹಿತ್ಯ ಪತ್ರಿಕೆಗೆ ಗೌರವ ಸಂಪಾದಕರಾಗಿದ್ದಾರೆ.

'ಭೂಮಿಯಲ್ಲ ಇವಳು' ನಾಟಕಕ್ಕೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ದೊರೆತಿದೆ. 'ಉದಯಭಾರತಿ ರಾಷ್ಟ್ರೀಯ ಪುರಸ್ಕಾರ' ಡಾ. ಪು.ತಿ.ನ. ಪುರಸ್ಕಾರ, ಡಾ. ಕಡೆಂಗೋಡ್ಲು ಶಂಕರಭಟ್ಟ ಪ್ರಶಸ್ತಿ, ಸಾರಂಗಮಠ ಪಾಟೀಲ ಪ್ರಶಸ್ತಿ ಮುಂತಾದ ಪ್ರಶಸ್ತಿ–ಪುರಸ್ಕಾರಗಳು ಇವರ ಸೇವೆ ಸಂದಿವೆ.

ಲೇಖಕರ ಪರಿಚಯ :

ಸಿ. ಬಸವಲಿಂಗಯ್ಯನವರು ಜನಿಸಿದ್ದು ೨೯ ಜುಲೈ ೧೯೫೮. ಭಾರತೀಯ ರಂಗಭೂಮಿ ನಿರ್ದೇಶಕರಾಗಿ, ಬೆಂಗಳೂರು ವಿಭಾಗ ಕೇಂದ್ರದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ರಂಗಭೂಮಿಯ ಕಲಾವಿದರಾದ ಇವರು ಹಲವಾರು ನಾಟಕಗಳನ್ನು ರಂಗಕ್ಕೆ ಅಳವಡಿಸಿ ಶ್ರೇಷ್ಠ ನಿರ್ದೇಶಕರೆಂಬ ಕೀರ್ತಿ ಗಳಿಸಿದವರು. ರಂಗಭೂಮಿಯ ಕುರಿತು ವಿಶಿಷ್ಟ ಚಿಂತನಾ ಕ್ರಮವನ್ನು ನಮ್ಮ ಮುಂದೆ ಇಟ್ಟವರು. ಮಲೆಗಳಲ್ಲಿ ಮಧುಮಗಳು, ಕುಸುಮಬಾಲೆ, ಅಂತಿಗೊನೆ, ಶೂದ್ರ ತಪಸ್ವಿ, ಟಿಪ್ಪುವಿನ ಕನಸುಗಳು, ರಾಜಾ ಈಡಿಪಸ್, ಬೆರಳ್‌ಗೆ ಕೊರಳ್ ಮೊದಲಾದ ಕಾದಂಬರಿ ಹಾಗೂ ಶ್ರೇಷ್ಠ ನಾಟಕಗಳನ್ನು ರಂಗಕ್ಕೆ ಅಳವಡಿಸಿ ನಿರ್ದೇಶಿಸಿದ್ದಾರೆ. ಇವರಿಗೆ ಶಿವಕುಮಾರ ರಾಜ್ಯಮಟ್ಟದ ಪ್ರಶಸ್ತಿ, ಶ್ರೀ ಕೆ. ವಿ. ಶಂಕರೇಗೌಡ ಪ್ರಶಸ್ತಿ, ೧೯೯೬ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಗೌರವ ಫೆಲೋಶಿಫ್, ೨೦೦೧ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮೊದಲಾದ ಪುರಸ್ಕಾರಗಳು ದೊರಕಿವೆ.

ಪ್ರಸ್ತುತ 'ನದಿಯ ಹಾದಿಯೊಳಗೆ' ಎಂಬ ಸಿ. ಬಸವಲಿಂಗಯ್ಯ ಅವರ ಲೇಖನವನ್ನು ಎಚ್. ಎಲ್. ಪುಷ್ಪ ಅವರ 'ಭೂಮಿಯಲ್ಲ ಇವಳು' ನಾಟಕ ಕೃತಿಯ ಮುನ್ನುಡಿಯಿಂದ ಆಯ್ದುಕೊಳ್ಳಲಾಗಿದೆ.

■■

ಘಟಕ–೫

ಕೌಶಲ್ಯ ಕನ್ನಡ

ಘಟಕ–೫ : ಕೌಶಲ್ಯ ಕನ್ನಡ

ಭಾರತ ದೇಶವು ಇಂದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಂದಿಗೆ ಗುರುತಿಸಿಕೊಳ್ಳುತ್ತಿರುವುದು ಅಭಿಮಾನದ ಸಂಗತಿ. ಆದರೆ ನಿಜವಾದ ಅಭಿವೃದ್ಧಿ ಯಾವುದು? ಎಂಬುದು ಮುಖ್ಯವಾದ ಪ್ರಶ್ನೆ. ಕಳೆದ ೭೮ ವರ್ಷಗಳಲ್ಲಿ ಶೈಕ್ಷಣಿಕ ರಂಗದಲ್ಲಿ ಸಾಧಿಸಿದ ಪ್ರಗತಿಯೇನು? ನಮ್ಮ ಸಂವಿಧಾನವು ಕೊಡಮಾಡಿದ ಶೈಕ್ಷಣಿಕ ಹಕ್ಕನ್ನು ಬಳಸಿಕೊಂಡು ಎಷ್ಟು ಜನ ಭಾರತೀಯರು ಸುಶಿಕ್ಷಿತರಾಗಿದ್ದಾರೆ? ಇಂದಿಗೂ ಸಹ ಶಿಕ್ಷಣ ಪಡೆದುಕೊಂಡ ಮೊದಲನೆಯ ಪೀಳಿಗೆಯವರು ಪೂರ್ಣಪ್ರಮಾಣದಲ್ಲಿ ಸರ್ಕಾರಿ ಸೌಮ್ಯದ ನೌಕರಿಗಳಲಿಲ್ಲ. ಬಡತನ ತಾಂಡವ ಆಡುತ್ತಿದೆ. ಪೂರ್ವೋತ್ತರ ರಾಜ್ಯಗಳಲ್ಲಿ ಇಂದಿಗೂ ಬಸ್ಸಗಳನ್ನು ಕಾಣದ ಜನರಿದ್ದಾರೆ. ಹೀಗಿರುವಾದ ದೇಶ ಪ್ರಗತಿ ಹೊಂದಿದೆ ಎಂದರೆ ಅರ್ಥ!

ವಿಜ್ಞಾನ ಮತ್ತು ತಂತ್ರಜ್ಞಾನದ ಯುಗದಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸುವುದು ಒಂದು ರೀತಿಯ ಹಳಸಲು ವಿಚಾರವಾಗಿದೆ. ಆದ್ದರಿಂದ ಎಲ್ಲ ಪ್ರಾಧ್ಯಾಪಕರು ಮೊಬೈಲ್, ಟಿ.ವಿ. ಕಂಪ್ಯೂರ್ ಮುಂತಾದವುಗಳ ಜೊತೆಯಲ್ಲಿ ನಮ್ಮ ಕಲಿಕಾಕ್ರಮವು ಬದಲಿಸಿಕೊಳ್ಳಬೇಕಾದ ಅಗತ್ಯವಿದೆ; ಅನಿವಾರ್ಯವಿದೆ. ಶರವೇಗದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೌಶಲವನ್ನು ಓರೆಗೆ ಹಚ್ಚುವ ಕಾರ್ಯ ಭರದಿಂದ ಸಾಗುತ್ತಿದೆ.

ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಒಂದು ಚಿಕ್ಕ ಪತ್ರವನ್ನು ಬರೆಯಲು ಸಾಧ್ಯವಾಗುತ್ತಿಲ್ಲ. ಖಾಸಗಿ ಪತ್ರಗಳೆಂದರೇನು? ಗೊತ್ತಿಲ್ಲ. ಸರ್ಕಾರಿ ಪತ್ರಗಳು, ಅರೆ ಸರ್ಕಾರಿ ಪತ್ರಗಳಂತೂ ದೂರದ ಮಾತು. ಈ ನಿಟ್ಟಿನಲ್ಲಿ ಪತ್ರಗಳನ್ನು ಬರೆಯುವ ಅಭ್ಯಾಸವನ್ನು ವಿದ್ಯಾರ್ಥಿಗಳಿಗೆ ಮಾಡಿಸುವುದು ಅಗತ್ಯವಾಗಿದೆ. ಈ ಕಾರಣದಿಂದ ಅಭ್ಯಾಸಕ್ಕೆ ಪತ್ರಗಳನ್ನು ಅಳವಡಿಸಲಾಗಿದೆ. ಸರ್ಕಾರದ ಆದೇಶ, ಸುತ್ತೋಲೆ, ಅಧಿಸೂಚನೆಗಳ ಮಾದರಿಗಳನ್ನು ನೀಡಲಾಗಿದೆ. ವಾಣಿಜ್ಯ ವ್ಯವಹಾರದ ಪತ್ರಗಳು ವಾಣಿಜ್ಯ ವಿದ್ಯಾರ್ಥಿಗಳಿಗೆ ಬಹಳ ಮುಖ್ಯ. ಆದ್ದರಿಂದ ವಾಣಿಜ್ಯ ವ್ಯವಹಾರದ ಪತ್ರಗಳು ಹಾಗೂ ಅಧ್ಯಯನದ ವರದಿಗಳನ್ನು ಸಹ ಇಲ್ಲಿ ನೀಡಲಾಗಿದೆ. ಇಂಥ ಅನೇಕ ಕೌಶಲ್ಯಗಳು, ಬರವಣಿಗೆಯ ಕೌಶಲ್ಯ, ಓದುವ ಕೌಶಲ್ಯ, ಬೋಧನೆಯನ್ನು ಕೇಳುವ ಕೌಶಲ್ಯ ವಿದ್ಯಾರ್ಥಿಗಳಲ್ಲಿ ಮೂಡಿಸುವುದೇ ಮುಖ್ಯ ಉದ್ದೇಶವಾಗಿದೆ; ಗುರಿಯಾಗಿದೆ.

೧೧. ಪತ್ರದ ವಿಧಗಳು : ಖಾಸಗಿ, ಅರೆಸರ್ಕಾರಿ, ಸರ್ಕಾರಿ ಪತ್ರದ ಮಾದರಿಗಳು

❖

ಪತ್ರ ಲೇಖನ :

ಸಾಹಿತ್ಯ ಪ್ರಕಾರಗಳಲ್ಲಿ ಕಾವ್ಯ, ನಾಟಕ, ಕಥೆ ಮೊದಲಾದವು ತುಂಬಾ ಪ್ರಾಚೀನವಾದವು ಮತ್ತು ಪ್ರಸಿದ್ಧವಾದವು ಆಗಿವೆ. ಪತ್ರಲೇಖನವೂ ಬರವಣಿಗೆಯ ಮುಖ್ಯ ಪ್ರಕಾರ. ಪತ್ರ ಲೇಖನಕ್ಕೆ ಸುದೀರ್ಘವಾದ ಇತಿಹಾಸವಿದೆ. ಕಾಳಿದಾಸನ ಮೇಘ ಸಂದೇಶ ಕೃತಿಯಲ್ಲಿ ವಿರಹಿ ಯಕ್ಷ ತನ್ನ ಪ್ರಿಯತಮೆಗೆ ಮೇಘಗಳ ಮೂಲಕವೇ ಸಂದೇಶ ಕಳಿಸುತ್ತಾನೆ. ನಳ–ದಮಯಂತಿಯರು 'ಹಂಸ'ವನ್ನು ಸಂದೇಶವಾಹಕವಾಗಿ ಬಳಸಿದರೆ, ಪ್ರೇಮಿಗಳು ಎಲೆ, ನವಿರಾದ ಬಟ್ಟೆ ಮೊದಲಾದವುಗಳನ್ನು ಬಳಸಿ ಪತ್ರ ರೂಪದಲ್ಲಿ ಬರೆಯುವ ಮೂಲಕ ಭಾವನೆಗಳನ್ನು ವಿನಿಮಯ ಮಾಡಿಕೊಂಡಿರುವುದುಂಟು. ರಾಜರ ಕಾಲದಲ್ಲಿ ರಾಜ ತನ್ನ ಆಡಳಿತ ಸಂಬಂಧಿಯಾದ ಅನೇಕ ವಿಚಾರಗಳನ್ನು ತನ್ನ ಕೈಕೆಳಗಿನ ಸಾಮಂತ, ಮಾಂಡಲೀಕರಿಗೆ ತಿಳಿಸಲು ಪತ್ರಗಳ ಮೊರೆ ಹೋಗುತ್ತಿದ್ದರು. ಇದು ನಮ್ಮ ಎದುರಿಗೆ ಇರುವವರ ಜೊತೆ ಸಂಭಾಷಣೆ ನಡೆಸಿದಂತೆ ದೂರದಲ್ಲಿರುವ ವ್ಯಕ್ತಿಗಳ ಜೊತೆ ಮಾತುಕತೆಗೆ, ಪರಸ್ಪರ ವಿಚಾರ ವಿನಿಮಯಕ್ಕೆ ಬಳಕೆಯಾಗುವ ಪರಿಣಾಮಕಾರಿಯಾದ ಸಾಧನ ಪತ್ರ.

ಪತ್ರದ ವಿಧಗಳು :

೧. ಖಾಸಗಿ ಪತ್ರಗಳು ಅಥವಾ ವೈಯುಕ್ತಿಕ ಪತ್ರಗಳು
೨. ಅರೆಸರ್ಕಾರಿ ಪತ್ರಗಳು
೩. ಸರ್ಕಾರಿ ಪತ್ರಗಳು
೪. ವ್ಯವಹಾರಿಕ ಪತ್ರಗಳು

ಸ್ವಂತ ವಿಚಾರ, ವಿವರಗಳನ್ನು ಒಳಗೊಂಡ ಪತ್ರಗಳು ಖಾಸಗಿ ಪತ್ರ ಅಥವಾ ವೈಯುಕ್ತಿಕ ಪತ್ರಗಳಾದರೆ, ವ್ಯವಹಾರ ಆಡಳಿತ ಸಂಬಂಧಿ ಪತ್ರಗಳು ವ್ಯವಹಾರಿಕ ಪತ್ರಗಳು. ಗೊತ್ತುಪಡಿಸಿದ ಸ್ವರೂಪ ಮತ್ತು ಭಾಷೆಯನ್ನು ಬಳಸಿಕೊಂಡು ಅಧಿಕೃತ ಉದ್ದೇಶಕ್ಕಾಗಿ ಬರೆಯಲಾದ ಪತ್ರಗಳು ಸರ್ಕಾರಿ ಪತ್ರಗಳಾದರೆ, ಕೆಲವು ಸಂದರ್ಭಗಳಲ್ಲಿ ಅತ್ಯಂತ ಜರೂರಾಗಿ ಅಧಿಕಾರಿಯ ಗಮನವನ್ನು ಸೆಳೆದು ಪರಿಶೀಲನೆ ನಡೆಸಲು ಇತರ ಅಧಿಕಾರಿಗಳು ಪತ್ರ ಬರೆಯುವುದುಂಟು. ಅಲ್ಲದೇ ಸರ್ಕಾರಿ ಆಧೀನ ಸಂಸ್ಥೆಗಳಿಂದ ಬರೆಯಲಾಗುವ ಪತ್ರಗಳನ್ನು ಅರೆ ಸರ್ಕಾರಿ ಪತ್ರಗಳೆನ್ನಲಾಗುವುದು.

ಖಾಸಗಿ ಪತ್ರಗಳು :

ಖಾಸಗಿ ಪತ್ರಗಳಲ್ಲಿ ಭಾವನೆಗಳಿಗೆ ಹೆಚ್ಚು ಒತ್ತು. ಖಾಸಗಿ ಪತ್ರ ಸಾಮಾನ್ಯವಾಗಿ ವೈಯಕ್ತಿಕ ವಿಷಯಗಳಿಗೆ ಸಂಬಂಧಿಸಿದ್ದು, ಒಬ್ಬ ವ್ಯಕ್ತಿಯಿಂದ ಇನ್ನೊಬ್ಬರಿಗೆ ಕಳುಹಿಸಲಾಗುತ್ತದೆ. ಖಾಸಗಿ ಪತ್ರಗಳು ೧೮ನೇ ಶತಮಾನದಿಂದೀಚೆಗೆ ವೈಯಕ್ತಿಕ ಸಂವಹನದ ಜನಪ್ರಿಯ ರೂಪಗಳಾಗಿವೆ. ಮನುಷ್ಯ ನಾಗರಿಕನಾದಂತೆ, ಆಧುನಿಕ ಸೌಲಭ್ಯಗಳು ಹೆಚ್ಚಾದಂತೆ, ಬದುಕಿನ ರೀತಿ–ನೀತಿಗಳು ಬದಲಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಉದಾಹರಣೆಗೆ ದೂರವಾಣಿ, ಪೇಜರ್, ಮೊಬೈಲ್, ಕಂಪ್ಯೂಟರ್ ಬಂದ ಮೇಲೆ ಪತ್ರದ ಬರವಣಿಗೆ ಇನ್ನಿಲ್ಲದಂತೆ ಕಡಿಮೆಯಾಯಿತು.

ಜಗತ್ತಿನ ಯಾವುದೇ ಮೂಲೆಯಲ್ಲಿರುವವರನ್ನು ಎಸ್.ಎಂ.ಎಸ್. ಇ–ಮೇಲ್, ವ್ಯಾಟ್ಸಾಪ್, ಇನ್ಸ್ಟ್ರಾಗ್ರಾಮಗಳ ಮೂಲಕ ಕ್ಷಣ ಮಾತ್ರದಲ್ಲಿ ಸಂಪರ್ಕಿಸುವ ಸಾಧ್ಯತೆ ಈಗ ಹೆಚ್ಚಾಗಿದೆ. ಆದುದರಿಂದ ಪತ್ರ ಬರೆಯುವವರ ಸಂಖ್ಯೆ ಕ್ಷೀಣಿಸಿದೆ. ಆದರೂ ಪತ್ರ ಸಾಹಿತ್ಯಕ್ಕೆ, ಕೈಬರಹದ ಪತ್ರಗಳಿಗೆ ಅದರದ್ದೆ ಆದ ವಿಶೇಷ ಸ್ಥಾನವಿದೆ, ಮೌಲ್ಯವಿದೆ, ಮಹತ್ವವಿದೆ. ಗಾಂಧಿಜೀ–ರವೀಂದ್ರನಾಥ ಟ್ಯಾಗೋರರ ನಡುವಣ ಪತ್ರ ವ್ಯವಹಾರ, ಎ.ಎನ್. ಮೂರ್ತಿರಾಯರ 'ಪತ್ರಗಳು–ಚಿತ್ರಗಳು' ಇಂಥ ಕೃತಿಗಳು ಪತ್ರಗಳ ಮಹತ್ವವನ್ನು ಎತ್ತಿ ಹಿಡಿಯುತ್ತವೆ. ಪ್ರಸಿದ್ಧ ವ್ಯಕ್ತಿಗಳ ಪತ್ರಗಳನ್ನು ಓದುವಾಗ ಆ ವಿಶೇಷ ಅನುಭವ ಆಗುತ್ತದೆ. ಆತ್ಮೀಯರ ಕೈಬರಹದ ಪತ್ರವನ್ನು ನೋಡುವುದೇ ಒಂದು ಚಂದ, ಓದುವುದು ಆನಂದ. ಕೈಬರಹದ ಪತ್ರ ಆತ್ಮೀಯತೆಯನ್ನು ಹೆಚ್ಚಿಸುತ್ತದೆ, ಪ್ರೀತಿಯನ್ನು ಬೆಳೆಸುತ್ತದೆ, ಸುಂದರ ನೆನಪಾಗಿ ಉಳಿಯುತ್ತದೆ. ಆದುದರಿಂದ ಪತ್ರ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಅಗತ್ಯವಿದೆ. ಕೌಟುಂಬಿಕ, ಆತ್ಮೀಯ ಅಥವಾ ವ್ಯವಹಾರಿಕ ಪತ್ರಗಳಾಗಲಿ ಎರಡರಲ್ಲೂ ಸಾಮಾನ್ಯವಾದ ಕೆಲವು ಲಕ್ಷಣಗಳಿವೆ. ದಿನಾಂಕ, ಪತ್ರದ ಪ್ರಾರಂಭ, ಸಂಬೋಧನೆ, ವಿಷಯ

ನಿರೂಪಣೆ ಅಥವಾ ಪತ್ರದ ಒಡಲು, ಮುಕ್ತಾಯ, ಬರೆದವರ ಸಹಿ ಇವುಗಳೆಲ್ಲ ಯಾವುದೇ ರೀತಿಯ ಪತ್ರದಲ್ಲಾದರೂ ಇರಲೇಬೇಕಾದ ಅಂಶಗಳು.

ಖಾಸಗಿ ಪತ್ರದ ಮಾದರಿ– ೦೧

ಅಮ್ಮನಿಂದ ಮಗಳಿಗೆ ಪತ್ರ

ಇವರಿಗೆ

ವಿದ್ಯಾ ಬೆಳಗಾಂವಕರ
ಎಸ್.ಎಸ್.ಎಲ್.ಸಿ. (ಬಿ. ವಿಭಾಗ)
ವಿದ್ಯಾ ನಿಕೇತನ ಪ್ರೌಢಶಾಲೆ
ಹಾಸನ

ದಿನಾಂಕ :...............

ಪ್ರೀತಿಯ ವಿದ್ಯಾಳಿಗೆ,

ನಾವು ಇಲ್ಲಿ ಆರೋಗ್ಯದಿಂದ ಇದ್ದೇವೆ. ನಿನ್ನೆ ದಿನ ನಿನ್ನ ಪತ್ರ ಬಂದು ತಲುಪಿತು. ನೀವು ಶಾಲೆಯಿಂದ ಪ್ರವಾಸಕ್ಕೆ ಹೋದ ವಿಚಾರ ತಿಳಿದು ಸಂತೋಷವಾಯಿತು. ನೀನು ಹಂಪಿ ನೋಡಿದ ಬಗ್ಗೆ ತುಂಬಾ ಚೆನ್ನಾಗಿ ಬರೆದಿರುವೆ. ನೀನು ಕಳಿಸಿದ ಫೋಟೋಗಳನ್ನು ಮತ್ತು ನೀನು ಬರೆದ ಪತ್ರವನ್ನು ನೋಡಿದ ನಿನ್ನ ಅಪ್ಪ "ನೋಡು, ನಮ್ಮ ಮಗಳು ಎಷ್ಟು ಚೆನ್ನಾಗಿ ಪತ್ರ ಬರೆದಿದ್ದಾಳೆ" ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ನೀನು ಪತ್ರವನ್ನು ಬರೆಯುತ್ತಾ ಇರು. ನಿನ್ನ ಬರವಣಿಗೆ ಬಹಳಷ್ಟು ಸುಧಾರಿಸುತ್ತದೆ, ಆರೋಗ್ಯದ ಕಡೆಗೆ ಗಮನ ಕೊಡು, ಅಭ್ಯಾಸದತ್ತ ಒಲವು ಇರಲಿ, ವ್ಯರ್ಥವಾಗಿ ಸಮಯ ಕಳೆಯಬೇಡ, ಚೆನ್ನಾಗಿ ಊಟ ಮಾಡು, ಆಟ ಆಡು, ನಿದ್ರೆ ಮಾಡು, ಅದೇ ರೀತಿ ಚೆನ್ನಾಗಿ ಓದಿ ಕೀರ್ತಿ ಸಂಪಾದಿಸಬೇಕು. ನಮ್ಮ ಶ್ರಮಕ್ಕೆ ತಕ್ಕ ಪ್ರತಿ ಫಲ ಇರುತ್ತದೆ ಎಂಬುದನ್ನು ನೆನಪಿಡು. ಆಗಾಗ ಪತ್ರ ಬರೆಯುತ್ತಿರು. ನಿನಗೆ ಒಳ್ಳೆಯ ದಾಗಲಿ...

ಶುಭಾಶೀರ್ವಾದಗಳೊಂದಿಗೆ,

ನಿನ್ನ ಪ್ರೀತಿಯ ಅಮ್ಮ
ಶಾರದ

೨. ಅರೆ ಸರ್ಕಾರಿ ಪತ್ರ :

ಇಂಗ್ಲೀಷಿನ 'ಡೆಮಿಅಫಿಷಿಯಲ್' ಲೆಟರ್ ಎಂಬುದನ್ನೆ 'ಅರೆ ಸರ್ಕಾರಿ ಪತ್ರ' ಅಥವಾ 'ಅರೆ ಅಧಿಕೃತ ಪತ್ರ' ಎಂಬುದಾಗಿ ಕರೆಯಲಾಗುತ್ತದೆ.

ಅರೆ ಸರ್ಕಾರಿ ಪತ್ರವು ಸರ್ಕಾರಿ ಪತ್ರದ ಒಂದು ವಿಧ. ಸರ್ಕಾರಿ ಪತ್ರದಲ್ಲಿ ಇರುವ ಎಲ್ಲಾ ಅಂಗಗಳು ಯಥಾವತ್ತಾಗಿ ಇದರಲ್ಲಿಯೂ ಇರುತ್ತವೆ. ಆದರೆ ಸರ್ಕಾರಿ ಪತ್ರದಲ್ಲಿ ಒಳ ವಿಳಾಸದಲ್ಲಿ ಅಧಿಕಾರಿಯ ಪದ ನಾಮವನ್ನು ಬರೆಯಲಾಗುತ್ತದೆ. ಉದಾ: ಜಿಲ್ಲಾಧಿಕಾರಿಗಳು, ತಹಶೀಲ್ದಾರರು, ಎಸ್.ಪಿ., ಇತ್ಯಾದಿ. ಆದರೆ ಅರೆ ಸರ್ಕಾರಿ ಪತ್ರದಲ್ಲಿ ಅಧಿಕಾರಿಯ ಹೆಸರಿಗೇ ಪತ್ರ ಬರೆಯಲಾಗುತ್ತದೆ. ಉದಾ: ಅರಣ್ಯ ಸಂರಕ್ಷಣಾಧಿಕಾರಿಗಳು, ಬಂಡೀಪುರ ಎಂದು ಬರೆದರೆ ಅಧಿಕೃತ ಪತ್ರ ಶ್ರೀ ವಿಜಯ್, ವಲಯ ಅರಣ್ಯಾಧಿಕಾರಿಗಳು, ಬಂಡೀಪುರ ಎಂದು ಬರೆದರೆ ಅದು ಅರೆ ಅಧಿಕೃತ ಪತ್ರ, ಹೀಗೆ ಬರೆಯುವಾಗ 'ಆತ್ಮೀಯ' ಎಂಬ ಪದವನ್ನು ಬಳಸುವುದುಂಟು. ಆತ್ಮೀಯ ಪದ ಬಳಕೆ ಹಾಗೂ ವ್ಯಕ್ತಿಯ ಹೆಸರು ಬಳಸಿ ಪತ್ರ ಬರೆಯುವುದರಿಂದ ಇದು ವೈಯುಕ್ತಿಕ ಪತ್ರದ ಲಕ್ಷಣವನ್ನು ಪಡೆಯುತ್ತದೆ. ಆದರೆ ಪತ್ರದ ಒಳಗಿನ ವಿಷಯ ಆಡಳಿತಕ್ಕೆ ಸಂಬಂಧಪಟ್ಟಿದ್ದು ಆಗಿರುವುದರಿಂದ ಇದು ಅಧಿಕೃತ ಪತ್ರವಾಗಿರುತ್ತದೆ. ಅರ್ಧ ವೈಯುಕ್ತಿಕವೂ, ಅರ್ಧ ಅಧಿಕೃತವೂ ಆದುದರಿಂದ ಇದನ್ನು 'ಅರೆ ಅಧಿಕೃತ ಪತ್ರ'ವೆಂದು ಕರೆಯಲಾಗುತ್ತದೆ.

ಅರೆ ಸರ್ಕಾರಿ ಪತ್ರ ರಚನೆಗೆ ಅಧಿಕಾರಿಯ ಕಛೇರಿಯ ತಲೆಬರಹ (ಲೆಟರ್ ಹೆಡ್) ಬಳಸಬೇಕು. ಇದರಲ್ಲಿ ಅಧಿಕಾರಿಯ ಹೆಸರು, ಹುದ್ದೆ, ಸ್ಥಳ, ದಿನಾಂಕಗಳ ವಿವರ ವಿರುತ್ತದೆ. ಈ ಬಗೆಯ ಮುದ್ರಿತ ತಲೆ ಬರಹ ಇಲ್ಲದಿದ್ದಲ್ಲಿ ಇದೇ ರೀತಿಯಾಗಿ ಬೆರಳಚ್ಚು ಮಾಡಿ (ಟೈಪ್) ಪತ್ರ ಬರೆಯಬೇಕು. ಒಳ ವಿಳಾಸವನ್ನು ಬರೆಯಬೇಕಾದ ಸ್ಥಳದಲ್ಲಿ ಒಳ ವಿಳಾಸ ಬರೆಯದೆ, ಪತ್ರದ ವಿಷಯ ಮುಗಿದ ಮೇಲೆ ಒಳ ವಿಳಾಸ ಬರೆಯಬೇಕು. ಕೇವಲ ಹುದ್ದೆಯ ವಿವರ ಸಹಿತವಾದ ವಿಳಾಸ ಬರೆಯದೆ, ಅಧಿಕಾರಿಯ ಹೆಸರು ಹುದ್ದೆಯ ವಿವರ ಬರೆಯಬೇಕು. ಸಾಂಪ್ರದಾಯಿಕವಾದ 'ಮಾನ್ಯರೆ' ಸಂಬೋಧನೆಯ ಬದಲು ಆತ್ಮೀಯರೆ/ ಸಹೃದಯರೆ/ ಪ್ರಿಯ ಬಂಧು ಎಂದು ಬರೆಯಬೇಕು. ಈ ಗೌರವ ಸಂಭೋದನೆಯ ಚರಣದ ಮೇಲು ಭಾಗದಲ್ಲಿ ಅರೆ ಸರ್ಕಾರಿ ಪತ್ರ ಎಂದೂ ನಮೂದಿಸಬೇಕು. ಗೌರವ ಸಂಬೋಧನೆ ಅನಂತರ ವಿಷಯಸೂಚಿ, ಉಲ್ಲೇಖಗಳಿರಬೇಕು. ಮುಕ್ತಾಯದಲ್ಲಿ Yours faithfully ಬದಲಾಗಿ ಇಂಗ್ಲಿಷ್ನಲ್ಲಿಯೂ Yours sin-

cerely ಬಳಸುವುದುಂಟು. ಕನ್ನಡದಲ್ಲಿ ತಮ್ಮ ವಿಶ್ವಾಸಿ ಬಳಸಬೇಕು. ಸಹಿ, ಹುದ್ದೆಯ ವಿವರಗಳೂ ಅಗತ್ಯ. ಬಲಗಡೆ ವಿಳಾಸದಾರರ ಪೂರ್ಣ ವಿಳಾಸ ಬರೆಯಬೇಕು.

ಈ ಬಗೆಯ ಪತ್ರಗಳನ್ನು ಕಛೇರಿಯಲ್ಲಿ ಅಧಿಕಾರಿಗಳೇ ಸ್ವತಃ ಬರೆಯುವುದುಂಟು, ಮುಖ್ಯ ಗುಮಾಸ್ತರೂ ನೆರವು ನೀಡುವುದುಂಟು. ಇವುಗಳನ್ನು ವಿಳಾಸದಾರ ಅಧಿಕಾರಿಯ ಹೊರತಾಗಿ ಮತ್ತೊಬ್ಬರು ತೆರೆಯುವಂತಿಲ್ಲ. ನೇರವಾಗಿ ಅಧಿಕಾರಿಗಳ ಗಮನಕ್ಕೆ ಹೋಗುತ್ತದೆ.

ಅರೆ ಸರ್ಕಾರಿ ಪತ್ರವನ್ನು ಬರೆಯುವ ಸಂದರ್ಭಗಳು :

೧. ವಿಷಯವನ್ನು ತುರ್ತಾಗಿ ಸಂಬಂಧಪಟ್ಟ ಅಧಿಕಾರಿಯ ನೇರ ಗಮನಕ್ಕೆ ತರಬೇಕಾದ ಸಂದರ್ಭದಲ್ಲಿ.

೨. ವಿಷಯ ಗೌಪ್ಯವಾಗಿದ್ದು ಅದನ್ನು ಸಂಬಂಧಪಟ್ಟ ಅಧಿಕಾರಿಗೆ ಮಾತ್ರ ತಿಳಿಸಬೇಕಾದಾಗ.

೩. ಸಂಬಂಧಪಟ್ಟ ಅಧಿಕಾರಿಯ ಕೆಲಸವನ್ನು ಶ್ಲಾಘಿಸಬೇಕಾದ ಸಂದರ್ಭದಲ್ಲಿ.

೪. ಸಂಬಂಧಪಟ್ಟ ಅಧಿಕಾರಿ ಅಧಿಕೃತ ಪತ್ರಕ್ಕೆ ಸಕಾಲದಲ್ಲಿ ಉತ್ತರಿಸದೇ ವಿಳಂಬ ಮಾಡಿದ ಸಂದರ್ಭದಲ್ಲಿ.

ಅರೆ ಸರ್ಕಾರಿ ಪತ್ರ ಮಾದರಿ :

ದಿನಾಂಕ :....................

ಇವರಿಗೆ,

ಎನ್. ಮೂರ್ತಿ
ಕಾಲೇಜು ಶಿಕ್ಷಣ ಇಲಾಖೆ
ಬೆಂಗಳೂರು

ಆತ್ಮೀಯರೆ,

ನಮ್ಮಕ ಛೇರಿಯ ದಿನಾಂಕ............ ರ ಪತ್ರದ ವಿಷಯವನ್ನು ತಾವು ಜರೂರಾಗಿ ಪರಿಶೀಲಿಸಿ ಕೆಲವು ನೇಮಕಗಳನ್ನು ತತ್‌ಕ್ಷಣವೇ ಮಾಡಬೇಕೆಂದು ತಮ್ಮನ್ನು ಮತ್ತೊಮ್ಮೆ ಪ್ರಾರ್ಥಿಸುತ್ತೇನೆ. ಪ್ರಸ್ತುತ ಖಾಲಿಯಿರುವ ಆಂಗ್ಲ ವಿಭಾಗದ ಹುದ್ದೆಗಳಿಗೆ ಬೇಗನೆ ಅಧ್ಯಾಪಕರುಗಳನ್ನು ಬೇರೆಡೆಗಳಿಂದ ವರ್ಗ ಮಾಡಿಯಾಗಲಿ ಇಲ್ಲವೆ ಹೊಸದಾಗಿ ಹಂಗಾಮಿ ನೇಮಕ ಮಾಡಿಯಾಗಲಿ ಆದಷ್ಟು ಬೇಗ ಕಳುಹಿಸಿ ಕೊಡಬೇಕೆಂದು ಕೋರುತ್ತೇನೆ.

ತಾವು ವಿಳಂಬ ಮಾಡಬಾರದಾಗಿ ವಿನಂತಿ,

ನಿಮ್ಮ ನಂಬುಗೆಯ
(ಸಹಿ)
ಡಾ. ಕಾಂತರಾಜು
ಪ್ರಾಚಾರ್ಯರು
ಪ್ರಥಮ ದರ್ಜೆ ಕಾಲೇಜು, ಬೆಂಗಳೂರು

ಸರ್ಕಾರಿ ಪತ್ರಗಳ ಮಾದರಿಗಳು :

ಸರ್ಕಾರ ತನ್ನ ದೈನಂದಿನ ವ್ಯವಹಾರಗಳನ್ನು ನೆರವೇರಿಸಿಕೊಂಡು ಹೋಗಬೇಕಾದರೆ ಪತ್ರಗಳ ಮೂಲಕ ಅದು ಒಬ್ಬರಿಂದ ಮತ್ತೊಬ್ಬರಿಗೆ ತಲುಪಿಸಬೇಕು. ಅಂತಹ ಪತ್ರಗಳು ಕಾನೂನು ಬದ್ಧವಾಗಿರಬೇಕು. ಅವುಗಳು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ವ್ಯಾಪ್ತಿಯಲ್ಲಿರಬೇಕು. ಯೋಜನೆಗಳು, ಸಿಬ್ಬಂದಿವರ್ಗ, ಆಯವ್ಯಯ ಟೆಂಡರ್‌ಗಳು ಇವೆಲ್ಲಾ ಅವುಗಳಲ್ಲಿ ಅಂಗಗಳಿವೆ. ಶಾಂತಿ ಮತ್ತು ಸುವ್ಯವಸ್ಥೆಗಳನ್ನು ಕಾಪಾಡುವಲ್ಲಿ ಚಾಕಚಕ್ಯತೆ ಇರಬೇಕು. ಸರ್ಕಾರ ಜನತೆಯ ಶಿಕ್ಷಣ ಆರೋಗ್ಯ, ಕೈಗಾರಿಕೆ, ವ್ಯವಸಾಯಗಳಲ್ಲಿ ಪ್ರಗತಿ ಸಾಧಿಸಬೇಕು. ಇವುಗಳಿಗೆಲ್ಲಾ ಪತ್ರ ಮಾಧ್ಯಮವೊಂದೆ ಸುಗಮ ಮಾರ್ಗ.

ಹಾಗೆಯೇ ಸರ್ಕಾರಿ ಕೆಲಸಗಳಲ್ಲಿ ಅನೇಕ ಇಲಾಖೆಗಳಿದ್ದು ಅವುಗಳ ಮುಖ್ಯಾಧಿಕಾರಿಗಳು ತಿಳಿಸಿದ ನಿಯಮಗಳಿಗೆ, ಅಧಿನಿಯಮಗಳಿಗೆ ಮತ್ತು ನಿಬಂಧನೆಗಳಿಗೆ ಅನುಸಾರವಾಗಿ ಕೆಲಸ ನಿರ್ವಹಿಸಬೇಕು. ಪ್ರತಿಯೊಂದು ಇಲಾಖೆಯಲ್ಲಿಯೂ ಒಂದು ಮುಖ್ಯ ಕಛೇರಿ ಇದ್ದು, ಅದರಲ್ಲಿ ಮುಖ್ಯ ಅಧಿಕಾರಿ, ಸಹಾಯಕ ಅಧಿಕಾರಿ, ಅಧ್ಯಕ್ಷರು, ಗುಮಾಸ್ಥರು, ಕಿರಿಯ ಸಹಾಯಕರು, ಒಬ್ಬ ಜವಾನರು ಇರುತ್ತಾರೆ. ಒಂದೊಂದು ಇಲಾಖೆಯಿಂದ ಹೊರಬರುವ ಪ್ರತಿಯೊಂದು ಪತ್ರಗಳಿಗೂ ಎಲ್ಲಾ ಸಿಬ್ಬಂದಿಯವರು ಜವಾಬ್ದಾರರಾಗಿರುತ್ತಾರೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮದೇ ಆದ ಜವಾಬ್ದಾರಿಯಿಂದ, ಬುದ್ಧಿವಂತಿಕೆಯಿಂದ ತಮ್ಮ ತಮ್ಮ ಕೆಲಸ ನಿರ್ವಹಿಸಬೇಕಾಗುತ್ತದೆ.

ಸರ್ಕಾರಿ ಪತ್ರದ ಅಂಗಗಳು

೧. ಶಿರೋನಾಮೆ
೨. ಒಳ ವಿಳಾಸ
೩. ಗೌರವ ಸಂಬೋಧನೆ
೪. ಪತ್ರದ ವಿಷಯ
೫. ಗೌರವ ಮುಕ್ತಾಯ ಸಹಿ, ಹುದ್ದೆಯ ಸೀಲು
೬. ಜೊತೆ ಪತ್ರಗಳು–ವಿಷಯ ಸೂಚಿ–ಕಿರು ಸಹಿಗಳು

ಸರ್ಕಾರಿ ಪತ್ರದ ಮಾದರಿ :

ಕರ್ನಾಟಕ ಸರ್ಕಾರ

ಪತ್ರ ಸಂಖ್ಯೆ............./೧೧-೨೪

ಅಸಿಸ್ಟೆಂಟ್ ಕಮೀಷನರವರ ಕಛೇರಿ

ಚಿಕ್ಕೋಡಿ ಉಪ-ವಿಭಾಗ

ಚಿಕ್ಕೋಡಿ

ದಿನಾಂಕ...............

ಜಿಲ್ಲಾಧಿಕಾರಿಯವರು

ಬೆಳಗಾವಿ

– ಇವರಿಗೆ

ಮಾನ್ಯರೇ,

ತಾವು ದಿನಾಂಕ............. ರಂದು ಬರೆದ ಕ್ರಮ ಸಂಖ್ಯೆ............. ಪತ್ರದ ಪ್ರಕಾರ ನಮ್ಮ ಕಛೇರಿಯ ಮೊದಲನೆಯ ದರ್ಜೆ ಗುಮಾಸ್ತರಾದ ಶ್ರೀ ನಾರಾಯಣ ಎಂ. ಅವರ ಸೇವಾ ಪುಸ್ತಕವನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಟ್ಟಿರುತ್ತೇನೆ.

ತಮ್ಮ ವಿಶ್ವಾಸಿ

(ಸಹಿ).......

ಸಹಾಯಕ ಉಪ-ವಿಭಾಗಾಧಿಕಾರಿ

ಚಿಕ್ಕೋಡಿ

■■

೧೨. ಸರ್ಕಾರದ ಆದೇಶ, ಸುತ್ತೋಲೆ, ಅಧಿಸೂಚನೆಯ ಮಾದರಿಗಳು

❖

ಆದೇಶ :

ಸರಕಾರಿ ಆದೇಶಗಳು ಸಕ್ಷಮ ಪ್ರಾಧಿಕಾರ ಅಥವಾ ಸಕ್ಷಮ ಅಧಿಕಾರಿ ತನ್ನ ಕೆಳಗಿನ ಇಲಾಖೆ ಅಥವಾ ಉದ್ಯೋಗಿಗಳಿಗೆ ಹೊರಡಿಸುವ ನಿರ್ದೇಶನಗಳು ಅಥವಾ ಸೂಚನೆಗಳು ಆದೇಶಗಳಾಗಿವೆ. ಆದೇಶವನ್ನು ಸ್ವೀಕರಿಸುವ ವ್ಯಕ್ತಿಯು ಈ ಆದೇಶಗಳನ್ನು ಅನುಸರಿಸಬೇಕಾಗುತ್ತದೆ. ಇಲಾಖೆಯ ಕೆಳ ಹಂತದಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಸಕ್ಷಮ ಅಧಿಕಾರಿ ಹೊರಡಿಸುವ ಆದೇಶಗಳಿಗೆ ಬದ್ಧರಾಗಿರಬೇಕಾಗುತ್ತದೆ. ಇಲ್ಲವಾದಲ್ಲಿ ಕಾನೂನು ರೀತ್ಯ ಶಿಕ್ಷೆಗೆ ಅಥವಾ ದಂಡನೆಗೆ ಗುರಿಯಾಗಬೇಕಾಗುತ್ತದೆ.

ಸರ್ಕಾರದ ದೈನಂದಿನ ಆಡಳಿತದಲ್ಲಿ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಬರುತ್ತಿರುತ್ತದೆ. ಕೆಲವೊಂದು ವಿಷಯಗಳ ಬಗ್ಗೆ ತೀರ್ಮಾನ ಕೈಗೊಳ್ಳುವುದು ಕೇವಲ ಉನ್ನತ ಸ್ತರದಲ್ಲಿ ಮಾತ್ರ ಸಾಧ್ಯ. ಸಾರ್ವಜನಿಕ ನೀತಿಗೆ ಸಂಬಂಧಿಸಿದಂತಹ ಅಥವಾ ಮಹತ್ವದ ವಿಷಯ ಎಂದು ಪರಿಗಣಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ತೀರ್ಮಾನ ಕೈಗೊಳ್ಳುವುದು ಹಾಗೂ ಆದೇಶಗಳನ್ನು ಹೊರಡಿಸುವುದು ನಡೆಯುತ್ತಲೇ ಇರುತ್ತದೆ. ಇಂತಹ ತೀರ್ಮಾನಗಳನ್ನು ಒಳಗೊಂಡ ಪತ್ರರೂಪವನ್ನು ಆದೇಶ ಎಂದು ಕರೆಯಲಾಗುತ್ತದೆ.

ಸುತ್ತೋಲೆ :

ಒಂದೇ ವಿಷಯವನ್ನು ಅನೇಕ ಇಲಾಖೆಗಳಿಗೆ ಅಥವಾ ಅನೇಕರಿಗೆ ತಿಳಿಸಬೇಕಾಗಿ ಬಂದಾಗ ಸುತ್ತೋಲೆಯನ್ನು ಹೊರಡಿಸಲಾಗುತ್ತದೆ. ಹೀಗಾಗಿ, ಇದರಲ್ಲಿ ನಿರ್ದಿಷ್ಟ ವಿಳಾಸಗಳನ್ನೆಲ್ಲ ನಮೂದಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಸಂಬಂಧವಾಗಿ ಕೊನೆಯಲ್ಲಿ ಒಂದು ಸಾಮಾನ್ಯ ಸೂಚನೆ ಇರುತ್ತದೆ.

೧. ಎಲ್ಲ ಇಲಾಖಾ ಮುಖ್ಯರಿಗೆ
೨. ಎಲ್ಲ ವೇತನ ಬಟವಡೆ ಅಧಿಕಾರಿಗಳಿಗೆ
೩. ಎಲ್ಲ ಜಿಲ್ಲಾ ಖಜಾನೆಯ ಅಧಿಕಾರಿಗಳಿಗೆ
೪. ಎಲ್ಲ ರೆವಿನ್ಯೂ ಅಧಿಕಾರಿಗಳಿಗೆ

ಪತ್ರ ಶೀರ್ಷಿಕೆಯ ಭಾಗ ಮುಗಿದ ನಂತರ 'ಸುತ್ತೋಲೆ' ಎಂಬ ಮಾತು ಎದ್ದು ಕಾಣುವಂತೆ ನಮೂದಿತವಾಗಿರುತ್ತದೆ ಎಂಬುದನ್ನು ಬಿಟ್ಟರೆ, ಉಳಿದಂತೆ ಇದು ಸಾಮಾನ್ಯ ಅಧಕೃತ ಪತ್ರದಂತೆಯೇ ಇರುತ್ತದೆ. ಕೆಲವು ವೇಳೆ ವಿಷಯ ಮತ್ತು ಉಲ್ಲೇಖ ಸಂಬಂಧವಾದ ನಮೂದುಗಳು ಇರದೆ ನೇರವಾಗಿ ಸಂಬಂಧಪಟ್ಟ ವಿಷಯವೇ ಒಂದೆರೆಡು ವಾಕ್ಯಗಳಲ್ಲಿ ನಿರೂಪಿತವಾಗಿಬಿಟ್ಟಿರಬಹುದು.

ಅಧಿಸೂಚನೆ :

ಶಾಸನ ಸಭೆಗಳು ಆಗಿಂದಾಗ್ಗೆ ರೂಪಿಸುವ ನಿಯಮಗಳು, ತಿದ್ದುಪಡಿಗಳು, ಕಾಯ್ದೆಗಳು, ಗೆಜೆಟೆಡ್ ಅಧಿಕಾರಿಗಳ ನೇಮಕ, ಸ್ಥಿರೀಕರಣ, ಬಡ್ತಿ, ಹಿಂಬಡ್ತಿ, ಸೇವಾವಧಿ ವಿಸ್ತರಣೆ, ವರ್ಗಾವಣೆ, ತರಬೇತಿ, ನಿಯೋಗ, ರಜೆ ಮಂಜೂರಾತಿ ಈ ಸಂಬಂಧವಾದ ಅಧಿಕೃತವಾದ ಪ್ರಕಟಣೆಗಳನ್ನು ಅಧಿಸೂಚನೆಗಳೆಂದು ಕರೆಯಲಾಗುತ್ತದೆ. ಇದರಲ್ಲಿ ಅಧಿಕಾರಿಯ ಸಹಿ ಮತ್ತು ಹುದ್ದೆಗೆ ಸಂಬಂಧವಾದ ವಿವರಗಳು ಮಾತ್ರ ಇರುತ್ತವೆ.

ಇಂಥ ಅಧಿಸೂಚನೆಗಳ ಪ್ರಕಟಣೆಗಳಿಗೆ ಸರ್ಕಾರ ಅಥವಾ ಕಾನೂನುಬದ್ಧವಾಗಿ ಸ್ಥಾಪಿತವಾದಂಥ ಸಂಸ್ಥೆ ತನ್ನದೇ ಆದ ಮುಖ ಪತ್ರಿಕೆಯನ್ನು ಹೊಂದಿರಬಹುದು ಉದಾಹರಣೆಗೆ 'ಕರ್ನಾಟಕ ಸರ್ಕಾರದ ರಾಜ್ಯಪತ್ರ', 'ಮೈಸೂರು ವಿಶ್ವವಿದ್ಯಾನಿಲಯದ ಗೆಜೆಟ್ಟು' ಇತ್ಯಾದಿ. ಇಂಥ ಮುಖ ಪತ್ರಿಕೆಗಳ ಪ್ರಸಾರ ಸಂಖ್ಯೆ ಹಾಗೂ ಅದರ ಫಲವಾದ ಪ್ರಚಾರವು ಸೀಮಿತ ಮತ್ತು ಖಚಿತವಾಗಿರುವುದರಿಂದ ಅನೇಕ ಸಂದರ್ಭಗಳಲ್ಲಿ ಸರ್ಕಾರ ಅಥವಾ ಸಂಸ್ಥೆ ಇತರ ಪ್ರಚಾರ ಮಾಧ್ಯಮಗಳನ್ನೂ ಪತ್ರಿಕೆಗಳನ್ನು ಬಳಸಿಕೊಳ್ಳಬಹುದು. ಇಷ್ಟಾಗಿಯೂ, ಎಲ್ಲ ಅಧಿಸೂಚನೆಗಳು ಸರ್ಕಾರದ ಅಥವಾ ಸಂಸ್ಥೆಯ ಮುಖ ಪತ್ರಿಕೆಗಳಲ್ಲಿ ಪ್ರಕಟವಾಗಲೇಬೇಕೆಂಬ ನಿಯಮವೇನೂ ಇಲ್ಲ. ಸರ್ಕಾರದ ಗೆಜೆಟೆಡ್ ಅಧಿಕಾರಿಗಳಿಗೆ ಸಂಬಂಧಿಸಿದ ಆಡಳಿತ ಕ್ರಮಗಳು ಹಾಗೂ ವಿಶೇಷ ಸಾರ್ವಜನಿಕ ಮಹತ್ವದ ಸಂಗತಿಗಳು ಮಾತ್ರವೇ ಅವುಗಳಲ್ಲಿ ದಾಖಲೆಗೊಂಡು, ಉಳಿದುವು ಸಂಬಂಧಪಟ್ಟ ವ್ಯಕ್ತಿಗಳ ಅಥವಾ ವಿಷಯದ ಕಡತಗಳಲ್ಲಿಯೇ ಉಳಿಯಬಹುದು.

ಸರ್ಕಾರಿ ಆದೇಶದ ಮಾದರಿ :

ಕರ್ನಾಟಕ ಸರ್ಕಾರ

ಸಂ.ಇ.ಎಸ್.ಟಿ.ಜಿ.೧೯೯/೨೦೨೦-೨೧

ವಾಣಿಜ್ಯ ತೆರಿಗೆಗಳ
ಡೆಪ್ಯೂಟಿ ಕಮೀಷನರ್ ಅವರ ಕಛೇರಿ
ಬೆಂಗಳೂರು ನಗರ ವಿಭಾಗ,
ಬೆಂಗಳೂರು

ದಿನಾಂಕ: ....

ಕಛೇರಿ ಆದೇಶ

ವಿಷಯ: ಶ್ರೀ ರಾಮಕೃಷ್ಣ ಟಿ. ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ (ಸಿ) ವಲಯ ಅವರಿಗೆ ಗಳಿಕೆ-ರಜೆ ಮಂಜೂರಾತಿ ಕುರಿತು

ಉಲ್ಲೇಖ: ಅಕೌಂಟೆಂಟ್ ಜನರಲ್ ಅವರಿಂದ ಬಂದ ರಜೆ ಹಕ್ಕು ಸಂಬಂಧಿತ ಪತ್ರ

(ಕ್ರಮಾಂಕ : ಬಿಸಿಟಿ/ ೧೯೯/ ದಿನಾಂಕ................)

ಎಂ. ಸಿ. ಎಸ್. ಆರ್. ೧೧೨ನೆಯ ನಿಯಮದ ಪ್ರಕಾರ (ಸಿ) ವಲಯದ ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಯಾಗಿದ್ದ ಶ್ರೀ ರಾಮಕೃಷ್ಣ ಟಿ. ಇವರಿಗೆ ದಿನಾಂಕ........... ರಿಂದ ದಿನಾಂಕ.................ರವರೆಗೆ (ಎರಡೂ ದಿನ ಸೇರಿ) ೧೦ ದಿನಗಳ ಗಳಿಕೆ ರಜೆಯನ್ನು ಮಂಜೂರು ಮಾಡಲಾಗಿದೆ.

ರಜೆಯ ಅವಧಿಯಲ್ಲಿ ಶ್ರೀ ಲೋಕೇಶ್ ಆರ್. ವಾಣಿಜ್ಯ ತೆರಿಗೆ ಅಧಿಕಾರಿ (ಬಿ) ಅಧಿಕ ವಲಯ, ಬೆಂಗಳೂರು, ಅವರಿಗೆ ತಮ್ಮ ಕರ್ತವ್ಯದ ಜೊತೆಗೆ ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ (ಸಿ) ವಲಯದ ಅವರ ಕರ್ತವ್ಯಗಳ ಹೆಚ್ಚಿನ ಹೊಣೆಯನ್ನು ವಹಿಸಲಾಗಿದೆ.

(ಸಹಿ)

ವಾಣಿಜ್ಯ ತೆರಿಗೆಗಳ ಡೆಪ್ಯೂಟಿ ಕಮೀಷನರ್
ಬೆಂಗಳೂರು

ಸುತ್ತೋಲೆ ಮಾದರಿ :

ಕರ್ನಾಟಕ ಸರ್ಕಾರ

ಸಂಖ್ಯೆ :ಸಾ.ಶಿ.ಇ/೮೪/೨೦೧೯–೨೦

ಸಾರ್ವಜನಿಕ ಶಿಕ್ಷಣ ಇಲಾಖೆ
ಮಲ್ಲೇಶ್ವರಂ, ಬೆಂಗಳೂರು–೧೨

ಸುತ್ತೋಲೆ

ವಿಷಯ : ಕನ್ನಡ ಮಾಧ್ಯಮದಲ್ಲಿ ಬೋಧನೆ
ಉಲ್ಲೇಖ : ಸಂಬಂಧಪಟ್ಟ ಸರ್ಕಾರಿ ಆದೇಶ/ಸುತ್ತೋಲೆ–೧೨೪.

ರಾಜ್ಯದ ಅನೇಕ ಪ್ರಾಥಮಿಕ ಶಾಲೆಗಳು ಕನ್ನಡ ಮಾಧ್ಯಮದಲ್ಲಿ ಬೋಧನೆ ಮಾಡುವುದಾಗಿ ಬಿ.ಇ.ಓ. ಕಛೇರಿಯಿಂದ ಮಾನ್ಯತೆ ಪಡೆದು ಪ್ರಸ್ತುತ ಇಂಗ್ಲಿಷ್ ಮಾಧ್ಯಮದಲ್ಲಿ ಬೋಧನೆ ಮಾಡುತ್ತಿರುವುದಾಗಿ ದೂರು ಬಂದಿವೆ. ಕನ್ನಡ ಮಾಧ್ಯಮದಲ್ಲಿ ಬೋಧಿಸುವುದಾಗಿ ಅನುಮತಿ ಪಡೆದ ಶಾಲೆಗಳಲ್ಲಿ ಇನ್ನು ಮುಂದೆ ಇಂಗ್ಲಿಷ್ ಮಾಧ್ಯಮದಲ್ಲಿ ಬೋಧನೆ ಮಾಡುವುದು ಕಂಡು ಬಂದಲ್ಲಿ ಅಂಥ ಶಾಲೆಗಳ ಮಾನ್ಯತೆಯನ್ನು ರದ್ದು ಮಾಡಲಾಗುವುದು.

ಸಹಿ
ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
ಪ್ರಾಥಮಿಕ ಶಿಕ್ಷಣ
(ಸೀಲು)

ಪ್ರತಿಗಳು :–

೧. ಎಲ್ಲ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
೨. ಬಿ.ಆರ್.ಸಿ. ಮತ್ತು ಸಿ.ಆರ್.ಸಿ ಅಧಿಕಾರಿಗಳಿಗೆ
೩. ಕಛೇರಿ ಪ್ರತಿ

ಅಧಿಸೂಚನೆಯ ಮಾದರಿ :

ಕರ್ನಾಟಕ ಸರ್ಕಾರ

ಸಂಖ್ಯೆ: ಕೋರಿಕೆ ಸಂಖ್ಯೆ: ಇ.ಪಿ.೧೬೬ ಎಸ್.ಎಲ್.ಬಿ.೨೦೨೩

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: ೧೪/೦೯/೨೦೨೩

ಅಧಿಸೂಚನೆ

ಶಾಲಾ ಶಿಕ್ಷಣ ಇಲಾಖೆಯ ಶ್ರೀ ರಾಮಪ್ಪ, ದೈಹಿಕ ಶಿಕ್ಷಣ ಪರಿವೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಶಹರ ವಲಯ, ಹುಬ್ಬಳ್ಳಿ ಧಾರವಾಡ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇವರನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಚಿಕ್ಕೋಡಿ ಇಲ್ಲಿ ಖಾಲಿ ಇರುವ ದೈಹಿಕ ಶಿಕ್ಷಣ ಪರಿವೀಕ್ಷಕರ ಹುದ್ದೆಗೆ ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ಆದೇಶಿಸಿದೆ.

(ಮಾನ್ಯ ಮುಖ್ಯ ಮಂತ್ರಿಯವರಿಂದ ಅನುಮೋದಿಸಲ್ಪಟ್ಟಿದೆ)

ಸಹಿ/ (ಹೆಸರು)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರೌಢ).
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
ಬೆಂಗಳೂರು

ಇವರಿಗೆ,

೧. ಮಹಾಲೇಖಪಾಲರು (ಎಟಿಇ) ಕರ್ನಾಟಕ, ಬೆಂಗಳೂರು.
೨. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
೩. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ.
೪. ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ
೫ . ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಚಿಕ್ಕೋಡಿ.

■■

೧೩. ವಾಣಿಜ್ಯ ವ್ಯವಹಾರದ ಪತ್ರಗಳು ಹಾಗೂ ಅಧ್ಯಯನ ವರದಿಗಳು

❖

ವಾಣಿಜ್ಯ ಕ್ಷೇತ್ರದ ಪತ್ರಗಳಲ್ಲಿ ಹಲವು ವಿಧಗಳಿವೆ. ಭರ್ತಿ ಮಾಡಬೇಕಾದ ರಸೀದಿ, ಸಂದಾಯ ಪತ್ರಗಳಿಂದ ಹಿಡಿದು ವ್ಯವಹಾರ ಸಂಬಂಧವಾಗಿ ಬರೆಯಬಹುದಾದ ವಿವಿಧ ಪತ್ರಗಳಲ್ಲಿ ವೈವಿಧ್ಯತೆಯೇ ಕಂಡುಬರುತ್ತದೆ. ಇವುಗಳನ್ನು ಕೆಲವೊಂದು ವಿಂಗಡಣೆಯಾಗಿ ಮಾಡಿಕೊಳ್ಳಬಹುದು. ವಿಚಾರಣಾ ಪತ್ರಗಳು, ಆದೇಶ ಪತ್ರಗಳು, ಪರಾಮರ್ಶನ ಪತ್ರಗಳು, ಆಕ್ಷೇಪಣೆ ಪತ್ರಗಳು ಇತ್ಯಾದಿ. ಅಲ್ಲದೆ ಬ್ಯಾಂಕುಗಳೊಂದಿಗೆ, ಪತ್ರಿಕಾಲಯಗಳೊಂದಿಗೆ, ವಕೀಲರೊಂದಿಗೆ ಕೆಲವು ಪತ್ರ ವ್ಯವಹಾರವನ್ನೂ ನಡೆಸ ಬೇಕಾಗುತ್ತದೆ. ಈ ಎಲ್ಲ ಸಂದರ್ಭಗಳಲ್ಲಿ ಬರೆಯಬಹುದಾದ ಮೇಲ್ಕಂಡ ಪತ್ರಗಳ ಸ್ವರೂಪವನ್ನು ವ್ಯವಹಾರಿಕ ಪತ್ರಗಳೆಂದು ಕರೆಯಲಾಗುತ್ತದೆ.

ವಿಚಾರಣಾ ಪತ್ರ ೧:

ಬಿ.ಕಾಂ. ಪದವೀಧರನಾದ ವಿದ್ಯಾರ್ಥಿಯೊಬ್ಬನು ಎಂ.ಕಾಂ. ವ್ಯಾಸಂಗದ ಬಗ್ಗೆ ದೊರೆಯುಬಹುದಾದ ಸೌಲಭ್ಯಗಳು, ಇರುವ ನಿಯುಮಗಳು ಮೊದಲಾದವುಗಳನ್ನು ತಿಳಿಯಲು ಕರ್ನಾಟಕ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ರವರಿಗೆ ಪ್ರಾರ್ಥಿಸಿಕೊಂಡ ಪತ್ರ.

ವಿಚಾರಣಾ ಪತ್ರದ ಮಾದರಿ :

ಶಿವಕುಮಾರ ಹಂಜಿ ಬಿ.ಕಾಂ.
ನಂ. ೧೯/ ಖಡೇಬಜಾರ
ಬೆಳಗಾವಿ
ದಿನಾಂಕ..........

ಇವರಿಗೆ,
ರಿಜಿಸ್ಟ್ರಾರ್‌ರವರು
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-೦೩

ಮಾನ್ಯರೇ,

ನಾನು ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ೨೦೦೭-೦೮ನೇ ಸಾಲಿನಲ್ಲಿ ಬಿ.ಕಾಂ. ಪದವಿ ಪರೀಕ್ಷೆಗೆ ಕುಳಿತು ಪ್ರಥಮ ದರ್ಜೆಯಲ್ಲಿ ಪಾಸಾಗಿರುವೆನೆಂದು ತಿಳಿಸಲು ಸಂತೋಷ ಪಡುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನಾನು ಎಂ.ಕಾಂ. ಪದವಿಯ ವ್ಯಾಸಂಗವನ್ನು ಮುಂದುವರಿಸಬೇಕು ಎಂದಿದ್ದೇನೆ. ಈ ಪದವಿಯ ವ್ಯಾಸಂಗದ ಬಗ್ಗೆ ತಮ್ಮ ವಿಶ್ವವಿದ್ಯಾಲಯದಲ್ಲಿ ದೊರೆಯಬಹುದಾದ ಸೌಲಭ್ಯಗಳ, ವಿದ್ಯಾರ್ಥಿವೇತನ, ಹಾಸ್ಟೆಲ್, ಪಠ್ಯಕ್ರಮ, ಮೊದಲಾದವುಗಳ ಬಗ್ಗೆ ವಿವರಗಳನ್ನು ತಿಳಿಸಬೇಕೆಂದು ತಮ್ಮ ವಿಶ್ವವಿದ್ಯಾಲಯದ ನಿಬಂಧನಾ ಸೂಚಿ (ಪ್ರಾಸ್ಪೆಕ್ಟಸ್) ಪ್ರತಿಯೊಂದನ್ನೂ ಕಳುಹಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ನನ್ನ ವಿಳಾಸದ ಅಂಚೆಯ ಲಕೋಟೆಯೊಂದನ್ನು ಈ ಪತ್ರದೊಂದಿಗೆ ಕಳುಹಿಸಿರುತ್ತೇನೆ. ತಮ್ಮಿಂದ ಉತ್ತರಕ್ಕಾಗಿ ನಿರೀಕ್ಷಿಸುತ್ತೇನೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ
ಶಿವಕುಮಾರ ಹಂಜಿ

ವಾಣಿಜ್ಯ ವ್ಯವಹಾರ ಪತ್ರದ ಮಾದರಿ :

ದೂರವಾಣಿ ೨೨೨೪೩೧/೩೨

ನಾಲ್ವಾಡ ಬ್ರದರ್ಸ್
ಕಾಕತಿವೇಸ್ ರೋಡ
ಬೆಳಗಾಂವಿ-೦೧
ದಿನಾಂಕ..............

ವ್ಯವಸ್ಥಾಪಕರು
ಸಮಾಜ ಪುಸ್ತಕಾಲಯ
ಶಿವಾಜಿ ಬೀದಿ
ಧಾರವಾಡ

–ಇವರಿಗೆ

ಮಹನೀಯರೇ,

ನೀವು ಇತ್ತೀಚಿಗೆ ಡಾ. ಜಿ.ಎಸ್. ಶಿವರುದ್ರಪ್ಪನವರ **'ಸೌಂದರ್ಯ ಸಮೀಕ್ಷೆ'** ಗ್ರಂಥವನ್ನು ದ್ವಿತೀಯ ಮುದ್ರಣ ಮಾಡಿಸಿ ಪ್ರಕಟಿಸಿರುವುದನ್ನು ತಿಳಿದು ಸಂತೋಷವಾಗಿದೆ. ಈ ಗ್ರಂಥದ ಒಂದು ನೂರು ಪ್ರತಿಗಳು ನಮಗೆ ಈಗ ಅಗತ್ಯವಾಗಿ ಬೇಕಾಗಿವೆ.

ತಾವು ಈ ಬಗ್ಗೆ ಕೊಡಬಹುದಾದ ರಿಯಾಯಿತಿ ಮತ್ತು ಸರಬರಾಜು ಮಾಡುವ ವಿಧಾನವನ್ನು ನಮಗೆ ಜರೂರು ತಿಳಿಸಬೇಕಾಗಿ ವಿನಂತಿ. ಹಿಂದೆಯೂ ನಿಮ್ಮಿಂದ ಭಾರಿ ಮೊತ್ತದ ಗ್ರಂಥಗಳನ್ನು ನಾವು ತರಿಸಿ ವಿಕ್ರಯಿಸಿರುವುದುಂಟು. ನಿಮ್ಮ ಸೂಕ್ತ ಜವಾಬನ್ನು ಪರಿಶೀಲಿಸಿ, ನಾವು ಒಡನೆಯೇ ನಿಮಗೆ ಆದೇಶ (ಬೇಡಿಕೆ) ಪತ್ರ ಕಳುಹಿಸುತ್ತೇವೆ.

ತಮ್ಮ ವಿಶ್ವಾಸಿಗಳು
ನಾಲ್ವಾಡ ಬ್ರದರ್ಸ್ ಪರವಾಗಿ
ಯುವರಾಜ
ವ್ಯವಸ್ಥಾಪಕರು

ಅಧ್ಯಯನದ ವರದಿಗಳು :

ಇಂಗ್ಲೀಷ್ ಭಾಷೆಯಲ್ಲಿ 'Report' ಎಂದು ಕರೆಯಲಾಗುವ ಬರೆಹವನ್ನು ಅಥವಾ ಮಾಹಿತಿಯನ್ನು ಕನ್ನಡದಲ್ಲಿ **'ವರದಿ'** ಎಂದು ಕರೆಯಲಾಗುತ್ತದೆ. ಶಾಲೆಯಲ್ಲಿನ ಮಕ್ಕಳ ವಿದ್ಯಾಭ್ಯಾಸದ ಮುನ್ನಡೆಯನ್ನು ಕುರಿತು ಲಿಖಿತ ಮಾಹಿತಿಯಿಂದ ಹಿಡಿದು ಯಾವುದೇ ಘಟನೆಯ ಬಗೆಗಿನ ಹಿನ್ನಲೆ, ಪರಿಣಾಮ, ಮುನ್ನಚ್ಚರಿಕೆಗಳ ಬಗೆಗಿನ ವಿವರಗಳನ್ನು ಒಳಗೊಂಡಿರುವ, ಉದ್ದೇಶಿಸಲಾಗಿರುವ ಯವುದೇ ಕ್ರಮದ ಬಗೆಗಿನ ಆಳವಾದ ಅಧ್ಯಯನ ಮತ್ತು ವಿಷಯದ ಆಗುಹೋಗುಗಳು, ಅನುಕೂಲ, ಅನನಾಕೂಲ, ಹಿತಕರವಾಗಬಹುದಾದ ಬೆಳವಣಿಗೆಗಳು ಅಥವಾ ಪ್ರತಿಕೂಲ ಪರಿಣಾಮಗಳು, ಸಾಧಕ-ಭಾಧಕಗಳು- ಇವುಗಳ ಬಗೆಗಿನ ಮೌಖಿಕ ಅಥವಾ ಲಿಖಿತರೂಪದ ಮಾಹಿತಿಯನ್ನು ವರದಿ ಎಂದು ಕರೆಯಲಾಗುತ್ತದೆ.

ಆಡಳಿತ ವ್ಯವಸ್ಥೆಯಲ್ಲಿ ಮಾತ್ರವಲ್ಲದೆ, ಯಾವುದೇ ಬಗೆಯ ವಾಣಿಜ್ಯ-ವಹಿವಾಟು, ಉದ್ಯಮ, ಸಂಶೋಧನೆ, ತನಿಖೆ, ಯೋಜನೆ, ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದರೂ ಅದಕ್ಕೆ ಸಂಬಂಧಿಸಿದ ಪೂರ್ವಭಾವಿ ಅಧ್ಯಯನ 'ವರದಿ'ಯ ರೂಪದಲ್ಲೇ ಇರುತ್ತದೆ. ಅದಕ್ಕೆ ಸೀಮಿತ ಉದ್ದೇಶವೂ ಇರಬಹುದು. ಸಾರ್ವಜನಿಕ ಹಿತಾಸಕ್ತಿಯನ್ನುಳ್ಳದ್ದು ಅಥವಾ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವ ವ್ಯಾಪಕ ಉದ್ದೇಶವೂ ಇದಕ್ಕೆ ಇರಬಹುದು. ಸಾರ್ವಜನಿಕ ಹಿತದೃಷ್ಟಿಯಿಂದ ಕೈಗೊಳ್ಳಬೇಕಾಗಿರುವ ಕೆಲವೊಂದು ಕೆಲವೊಂದು ಕ್ರಮಗಳ ವರದಿಯನ್ನು ರಹಸ್ಯವಾಗಿರಿಸಲೂಬಹುದು. ಒಟ್ಟಿನಲ್ಲಿ, ವರದಿಯನ್ನು ತರಿಸಿಕೊಳ್ಳುವುದು ಹಾಗೂ ವರದಿಯನ್ನು ಕಳಿಸಿಕೊಡುವುದು ಸರ್ಕಾರದ ಆಡಳಿತ ವ್ಯವಸ್ಥೆಯ ಒಂದು ಅನಿವಾರ್ಯ ಕಾರ್ಯವೇ ಆಗಿರುತ್ತದೆ. ವರದಿ ಯಾವುದೇ ಬಗೆಯದಾಗಿರಲಿ- ನಿಯತಕಾಲಿಕ ವರದಿಯಾಗಿರಲಿ ಅಥವಾ ವಿಶಿಷ್ಟವೂ ಸೋದ್ದಿಷ್ಟವೂ ಆದುದಾಗಿರಲಿ- ವರದಿಗಾರ ವಿಷಯಕ್ಕೆ ಸಂಬಂಧಿಸಿದ ಅಗತ್ಯವಾದ ಎಲ್ಲ ಮಾಹಿತಿಯನ್ನು ಎಲ್ಲ ಮೂಲಗಳಿಂದಲೂ ಸಂಗ್ರಹಿಸಬೇಕಾಗುತ್ತದೆ; ಅವುಗಳನ್ನು ವ್ಯವಸ್ಥಿತ ರೂಪದಲ್ಲಿ ಮಂಡಿಸಬೇಕಾಗುತ್ತದೆ. ಅಗತ್ಯವಾದಲ್ಲಿ, ವಿಶ್ಲೇಷಣೆ ಮಾಡಬೇಕಾಗುತ್ತದೆ: ಕೆಲವೊಮ್ಮೆ ಸ್ವಂತ ಅಭಿಪ್ರಾಯಗಳನ್ನು ಸೂಚಿಸಬಹುದಾಗಿರುತ್ತದೆ. ಇಂಥ ವರದಿಗಳನ್ನು ಸಿದ್ಧಪಡಿಸುವುದಕ್ಕೆ ಮಾಹಿತಿ ಸಂಗ್ರಹದ, ವಿಷಯ ಮಂಡನೆಯ, ವಿಶ್ಲೇಷಣೆಯ ಕೌಶಲಬೇಕಾಗುತ್ತದೆ. ಎಂಬುದೇನೋ ನಿಜ ಆದರೆ ಕೆಲವು ಸಂದರ್ಭಗಳಲ್ಲಿ ನಿಂತ ಕಾಳಿನಲ್ಲಿಯೇ ವರದಿಯನ್ನು ಸಲ್ಲಿಸಬೇಕಾಗುತ್ತದೆ. ಉದಾ: ಪ್ರಕೃತಿ

ವಿಕೋಪದಂತಹ ಸನ್ನಿವೇಶಗಳು ಎದುರಾದಾಗ ವರದಿ ಕೊಡುವುದು. ಕೆಲವೊಮ್ಮೆ ಮೌಖಿಕ ಅಥವಾ ಬಾಯಿಮಾತಿನ ಸ್ವರೂಪದಲ್ಲಿ ಇರಬಹುದಾದರೂ, ಲಿಖಿತ ಸ್ವರೂಪದಲ್ಲಿರುವಾಗ ಅದಕ್ಕೆ ಖಚಿತತೆಯನ್ನು, ದೀರ್ಘಕಾಲದವರೆಗೆ ಉಳಿದು ಬರುವಂಥ ಸತ್ವವನ್ನು ಹಗೂ ಸದ್ಯೋಪಯುಕ್ತತೆ ಮತ್ತು ಭವಿಷ್ಯೋಪಯುಕ್ತತೆಯ ಗುಣಗಳನ್ನು ತಂದುಕೊಡಬಹುದಾಗಿದೆ. ಹೀಗಾಗಿ, ಲಿಖಿತ ವರದಿ ಹೆಚ್ಚು ವಿಶ್ವಸನೀಯವೂ, ಬೇಕೆಂದಾಗ ಪರಿಶೀಲನಲಭ್ಯವೂ ಆಗಿರುತ್ತದೆ. ಅವಕ್ಕೆ ಐತಿಹಾಸಿಕ ಮಹತ್ವವೂ ಲಭಿಸಿಬಿಡುತ್ತದೆ. ಉದಾಹರಣೆಗೆ, ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಭಾಷೆಗಳಿಗೆ ಇರಬೇಕಾದ ಸ್ಥಾನಮಾನಗಳನ್ನು ಕುರಿತ 'ಗೋಕಾಕ್ ವರದಿ' ಹಗೂ ವಿವಿಧ ಕ್ಷೇತ್ರಗಳಲ್ಲಿ ಕನ್ನಡಿಗರಿಗೆ ಲಭಿಸಬೇಕಾಗಿರುವ ಅವಕಾಶಗಳನ್ನು ಕುರಿತ 'ಸರೋಜಿನಿ ಮಹಿಷಿ ವರದಿ.'

ಉದ್ದೇಶ, ರಚನೆ ಮತ್ತು ಸ್ವರೂಪಗಳ ದೃಷ್ಟಿಯಿಂದಲೂ ವರದಿಗಳನ್ನು ವರ್ಗೀಕರಿಸಬಹುದಾಗಿದೆ.

ಅ. ಉದ್ದೇಶದ ದೃಷ್ಟಿಯಿಂದ : ಇದರಲ್ಲಿ ೧) ವಿವರಣಾತ್ಮಕ ವರದಿ

೨) ವಿಶ್ಲೇಷಣಾತ್ಮಕ ವರದಿ

ಆ. ರಚನೆಯ ದೃಷ್ಟಿಯಿಂದ : ಇದರಲ್ಲಿ ೧) ವಿಧ್ಯುಕ್ತ ವರದಿ

೨) ಅನಿರ್ಬಂಧಿತ ವರದಿ

ಇ. ಸ್ವರೂಪದ ದೃಷ್ಟಿಯಿಂದ : ಇದರಲ್ಲಿ ೧) ವ್ಯಕ್ತಿನಿಷ್ಠ ವರದಿ

೨) ಸಾಮೂಹಿಕ ವರದಿ

೧) ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ವರದಿಗಳು :

ವಿವರಣಾತ್ಮಕ ವರದಿಗಳು ವಸ್ತುಸ್ಥಿತಿಯನ್ನಷ್ಟೇ ವಿವರಿಸುತ್ತವೆ. ಈ ವರದಿ ರಚಿಸುವವರು ತಮ್ಮ ವೈಯಕ್ತಿಕ ಅಭಿಪ್ರಾಯವನ್ನಾಗಲಿ, ವಿಷಯದ ಆಧಾರದ ಮೇಲೆ ಮಾಡಬಹುದಾದ ತೀರ್ಮಾನಗಳನ್ನಾಗಲಿ ಕೊಡುವುದಿಲ್ಲ. ಆದರೆ ವಿಶ್ಲೇಷಣಾತ್ಮಕ ವರದಿಗಳು ಹೀಗಲ್ಲ. ವರದಿಗಾರರು ವಿಷಯಗಳನ್ನು ಮಂಡಿಸುವುದಷ್ಟೇ ಅಲ್ಲದೆ ಅವನ್ನು ವಿಶ್ಲೇಷಿಸಿ, ಅವುಗಳಿಂದ ಹೊಮ್ಮುವ ಸಿದ್ಧಾಂತ ಗಳನ್ನೂ ತಮ್ಮ ಶಿಫಾರಸುಗಳನ್ನೂ ಸಮಸ್ಯೆಗೆ ಪರಿಹಾರಗಳನ್ನೂ ಸೂಚಿಸುತ್ತಾರೆ.

೨) ಅನಿರ್ಬಂಧ ಹಾಗೂ ವಿಧ್ಯುಕ್ತ ವರದಿಗಳು :

ಒಂದು ವಿಚಾರದ ಮೇಲೆ ತತ್‌ಕ್ಷಣ ಸ್ಪಷ್ಟವಾದ ವಿಷಯಗಳನ್ನು ಅವು ಸ್ಪಷ್ಟ ವಾದ ಕ್ರಮದಲ್ಲಿಯೇ ನೇರವಾಗಿ ನಿರೂಪಿಸುವ ವರದಿ ಅನಿಬರ್ಂಧ ವರದಿಯೆಂದು ಹೇಳಬಹುದು. ಇಲ್ಲಿ ವರದಿಗಾರ ತಾನು ನೀಡುತ್ತಿರುವ ವಿವರಗಳನ್ನು ಕ್ರಮಪಡಿಸಿ, ವಿಂಗಡಿಸಿ, ಪರಿವಿಡಿ ಉಪೋದ್ಘಾತ ಮುಂತಾದವುಗಳೊಡನೆ ಕೊಡುವುದಿಲ್ಲ. ಇದರ ಭಾಷೆ ಸಾಮಾನ್ಯವಾಗಿ ಸಂಭಾಷಣೆಯ ಶೈಲಿಯಲ್ಲಿರುತ್ತದೆ. ಇದು ಒಂದೇ ಪುಟದಷ್ಟಿರಬಹುದು; ಅಥವಾ ಹಲವಾರು ಪುಟಗಳಷ್ಟಾಗಬಹುದು.

ಶಿರೋನಾಮೆ, ಪರಿವಿಡಿ, ಉಪೋದ್ಘಾತ, ಪ್ರಕರಣ ಮುಂತಾದ ಹಲವು ಅಂಗಗಳೊಡನೆ ಕ್ರಮಬದ್ಧವಾಗಿ ನೀಡಿದ ವರದಿಯುನ್ನು ವಿಧ್ಯುಕ್ತ ವರದಿಯೆನ್ನಬಹುದು. ವಿಧ್ಯುಕ್ತ ವರದಿ ಸಾಮಾನ್ಯವಾಗಿ ವ್ಯಕ್ತಿ ಸ್ವರೂಪಕವಾಗಿರುವುದಿಲ್ಲ. ಇದರಲ್ಲಿ "ನಾನು" "ನಾವು" ಮುಂತಾದ ಪದಗಳ ಪ್ರಯೋಗವಿರುವುದಿಲ್ಲ.

೩) ವ್ಯಕ್ತಿನಿಷ್ಠ (ಬಿಡಿ) ಹಾಗೂ ಸಾಮೂಹಿಕ (ಸಮಿತಿ) ವರದಿಗಳು :

ಒಬ್ಬ ವ್ಯಕ್ತಿಯೇ ಒಂದು ವಿಷಯವನ್ನು ಕುರಿತು ವರದಿ ಸಲ್ಲಿಸಬಹುದು. ಅಥವಾ ವಿಷಯವನ್ನು ಕುರಿತು ಕೂಲಂಕಷವಾದ ವಿಚಾರಣೆ ನಡೆಸಲು ಹಲವಾರು ತಜ್ಞರ ಅಥವಾ ವಿಚಾರವಂತರ ಒಂದು ಸಮಿತಿಯನ್ನೇ ಏರ್ಪಡಿಸಬಹುದು. ಒಬ್ಬ ವ್ಯಕ್ತಿಯೇ ಸಾಕೆ, ಅಥವಾ ಹಲವರ ಒಂದು ಸಮಿತಿಯೇ ಬೇಕೆ ಎಂಬುದನ್ನು ವರದಿಮಾಡ ಬೇಕಾದ ವಿಷಯದ ಪ್ರಾಮುಖ್ಯ ಹಾಗೂ ಸಂಕೀರ್ಣತೆಗೆ ಅನುಗುಣವಾಗಿ ನಿರ್ಣಯಿಸಬೇಕಾಗುತ್ತದೆ.

ವರದಿಯ ಸ್ವರೂಪ ನಿಷ್ಕರ್ಷೆ :

ವರದಿಯನ್ನು ಯಾವ ರೀತಿ ರಚಿಸಬೇಕೆಂಬುದನ್ನು ತೀರ್ಮಾನಿಸುವ ಮುನ್ನ ವರದಿಗಾರ ಕೆಲವು ಅಂಶಗಳನ್ನು ಪರಿಶೀಲಿಸಬೇಕು. ತನ್ನಿಂದ ನಿರೀಕ್ಷಿಸುವ ವರದಿ ಎಂಥದು? ಎಂಬುದನ್ನು ಅವನು ಮೊದಲು ಅರಿಯಬೇಕು. ಈ ವಿಚಾರವಾಗಿ ಹಿಂದೆ ಯಾರಾದರೂ ವರದಿ ಮಾಡಿದ್ದರೆ ಅದನ್ನು ಅವನು ನೋಡಿ ಈ ಬಗ್ಗೆ ಒಂದು ನಿರ್ಣಯಕ್ಕೆ ಬರಬಹುದು.ವರದಿಯನ್ನು ನೀಡಲು ಗೊತ್ತುಪಡಿಸಿರುವ ಅವಧಿಯಷ್ಟು? ಎಂಬುದನ್ನು ಅವನು ಅರಿತುಕೊಳ್ಳಬೇಕು. ಕೇವಲ ಕೆಲವೇ ದಿನಗಳಲ್ಲಿ ಅವನು ವರದಿ ನೀಡಬೇಕಾಗಿದ್ದರೆ ವರದಿಯ ಅಂಶಗಳನ್ನು ಕ್ರಮವಾಗಿ ವಿಧಿಬದ್ಧವಾಗಿ ನೀಡಲು ಸಾಧ್ಯವಾಗದೆ ಹೋಗಬಹುದು. ಶೀಘ್ರವಾಗಿ ವರದಿ

ಒಪ್ಪಿಸಬೇಕಾಗಿದ್ದರೆ ಅವನು ವಿಷಯವನ್ನು ಆಳವಾಗಿ ವಿವೇಚಿಸುವುದು ಬಹುಶಃ ಸಾಧ್ಯವಾಗದು. ಆಗ ಅವನು ವಿಷಯವನ್ನು ಕುರಿತು ಸ್ಥೂಲವಾಗಿ ಮಾತ್ರ ವರದಿ ನೀಡಬೇಕಾಗುತ್ತದೆ. ವರದಿಯ ಉದ್ದೇಶವೇನು ? ಎಂಬುದನ್ನೂ ಅವನು ತಿಳಿಯಬೇಕು. ಕಿರಿದಾದ ಉದ್ದೇಶಕ್ಕೆ ಹಿರಿದಾದ ವರದಿ ಅಗತ್ಯವಿಲ್ಲ. ಇದಕ್ಕಾಗಿ ವ್ಯಯಮಾಡಿದ ಶ್ರಮ ಕಾಲಗಳು ವ್ಯರ್ಥ. ಆದ್ದರಿಂದಲೇ ಮೊದಲೇ ಅವನು ವರದಿಯ ಉದ್ದೇಶವೇನೆಂಬುದನ್ನು ಅರಿತುಕೊಂಡು ಅನಂತರ ವಿಷಯ ಸಂಗ್ರಹಣೆ, ವಿಶ್ಲೇಷಣೆ ಮುಂತಾದ ಕಾರ್ಯಗಳಿಗೆ ಕೈಹಚ್ಚಬೇಕು.

ವರದಿಯ ರಚನೆ :

ತಾನು ನೀಡಬೇಕಾದ ವರದಿಯ ವ್ಯಾಪ್ತಿಯನ್ನೂ ಸ್ವರೂಪವನ್ನೂ ನಿಷ್ಕರ್ಷಿಸಿಕೊಂಡ ಅನಂತರ ವರದಿಗಾರ ವಿಷಯವನ್ನು ಕುರಿತ ಸಂಶೋಧನೆಯ ಕಾರ್ಯವನ್ನು ಆರಂಭಿಸಬೇಕು. ಅವನು ಮೊದಲು ವಿಷಯದ ಮೂಲಗಳನ್ನು ಅರಿತುಕೊಳ್ಳಬೇಕು; ಅನಂತರ ವಿವರಗಳನ್ನು ಗುರುತುಮಾಡಿಕೊಳ್ಳಬೇಕು; ಹೀಗೆ ಸಂಗ್ರಹಿಸಿದ ವಿವರಗಳನ್ನು ವಿಂಗಡಿಸಬೇಕು; ಬರೆಯಬೇಕಾದ ವರದಿಯ ರೂಪರೇಖೆಯನ್ನು ರಚಿಸಿಕೊಳ್ಳಬೇಕು; ಇದರ ಆಧಾರದ ಮೇಲೆ ವರದಿ ರಚಿಸಬೇಕು. ಒಂದು ಒಳ್ಳೆಯ ವರದಿ ಕೆಲವು ಮುಖ್ಯ ಗುಣಗಳನ್ನು ಹೊಂದಿರಬೇಕು. ಅದು ಸ್ಪಷ್ಟವಾಗಿರಲಿ, ಸಂಕ್ಷಿಪ್ತವಾಗಿರಲಿ; ಭಾಷೆ ಸಂಯಮಪೂರಿತವಾಗಿರಲಿ, ಸುಲಭವಾಗಿ ಓದುವಂತಿರಲಿ.

ಏಕವ್ಯಕ್ತಿಯ ವರದಿ :

ಒಂದು ಹೊಸ ಉದ್ಯಮದ ಸ್ಥಾಪನೆಯನ್ನು ಕುರಿತು, ಇದರ ಆಗುಹೋಗುಗಳನ್ನು ಪರಿಶೀಲಿಸಿ ನೀಡುವ ವರದಿ ವಾಣಿಜ್ಯ ಪ್ರಪಂಚದಲ್ಲಿ ಬಹು ಸಾಮಾನ್ಯವಾದುದು. ಇದಲ್ಲದೆ ವ್ಯಾಪಾರ ಸಂಸ್ಥೆಯ ಆಂತರಿಕ ವ್ಯವಸ್ಥೆ ಸಮಸ್ಯೆಗಳನ್ನು ಕುರಿತು ನೌಕರ ತನ್ನ ಹಿರಿಯಧಿಕಾರಿಗೆ ಸಲ್ಲಿಸುವ ವರದಿಗಳಿಗೂ ಕೊರತೆಯಿಲ್ಲ. ಇಂಥ ವರದಿಗಳನ್ನು ರಚಿಸುವವರು ಮುಖ್ಯವಾಗಿ ಗಮನಿಸಬೇಕಾದ ಕೆಲವು ವಿಚಾರಗಳಿವೆ. ವರದಿ ವಿಷಯ ಗರ್ಭಿತವಾಗಿರಬೇಕು, ತರ್ಕಬದ್ಧವಾಗಿರಬೇಕು, ಪ್ರಮಾಣ ಪೂರಿತವಾಗಿರಬೇಕು, ಮನವೊಪ್ಪುವಂತಿರಬೇಕು, ಆಕರ್ಷಕವಾಗಿರಬೇಕು. ಅಗತ್ಯವಿದ್ದರೆ ವರದಿಗಾರ ತನ್ನ ಅಭಿಪ್ರಾಯಗಳನ್ನೂ ಸಲಹೆಗಳನ್ನೂ ಸೂಚಿಸಬೇಕು.

■■

ಬಿ. ಕಾಂ. ಮೊದಲನೆಯ ಸೆಮಿಸ್ಟರ್ ತರಗತಿಗಳಿಗೆ

ಪತ್ಯ: ಸಾಹಿತ್ಯ ಸೌಖ್ಯ–೧

ಮಾದರಿ ಪ್ರಶ್ನೆ ಪತ್ರಿಕೆ ಮತ್ತು ಅಂಕಗಳ ವಿವರ

ಅವಧಿ: ೩ ಗಂಟೆ **ಅಂಕಗಳು: ೮೦**

ಪ್ರಶ್ನೆ–೧: ಇಡೀ ಪತ್ಯಕ್ಕೆ ಅನ್ವಯಿಸಿ ಪ್ರಬಂಧ ಮಾದರಿಯ ೫ ಪ್ರಶ್ನೆಗಳನ್ನು ಕೊಟ್ಟು ೩ಕ್ಕೆ ಉತ್ತರಿಸಲು ಹೇಳುವುದು ೧೦X೩=೩೦

ಪ್ರಶ್ನೆ–೨: ಟಿಪ್ಪಣಿ ೬ರಲ್ಲಿ ೪ಕ್ಕೆ ಉತ್ತರಿಸಲು ಹೇಳುವುದು (೧,೨,೩,೫ ಘಟಕಗಳಿಗೆ ಸಂಬಂಧಿಸಿ) ೫X೪=೨೦

ಪ್ರಶ್ನೆ–೩: ಸಂದರ್ಭದೊಡನೆ ಸ್ಪಷ್ಟೀಕರಿಸಿ ೫ರಲ್ಲಿ ೩ಕ್ಕೆ ಉತ್ತರಿಸಲು ಹೇಳುವುದು (೧,೨,೩ ಘಟಕಗಳಿಗೆ ಸಂಬಂಧಿಸಿ) ೫X೩=೧೫

ಪ್ರಶ್ನೆ–೪: ಒಂದೇ ವಾಕ್ಯದ ೧೫ ವಸ್ತುನಿಷ್ಠ ಪ್ರಶ್ನೆಗಳನ್ನು ಕೊಟ್ಟು ಎಲ್ಲಕ್ಕೂ ಉತ್ತರಿಸಲು ಹೇಳುವುದು (ಇಡೀ ಪತ್ಯಕ್ಕೆ ಸಂಬಂಧಿಸಿ) ೧೫X೧=೧೫

ವಿಶೇಷ ಸೂಚನೆ : ಆಂತರಿಕ ಅಂಕಗಳು ೨೦.

೧೦ ಅಂಕದ ಒಂದು ಆಂತರಿಕ ಪರೀಕ್ಷೆ ಅಥವಾ ಎರಡು ಪರೀಕ್ಷೆಗಳನ್ನು ನಡೆಸಿದರೆ ೫+೫ ಅಂಕಗಳು ಕೊಡುವುದು. ನಿಯೋಜಿತ ಕಾರ್ಯಯೋಜನೆಗೆ ೫ ಅಂಕ, ಹಾಜರಾತಿಗೆ ೫ ಅಂಕ. ಇದೇ ಮಾದರಿಯಲ್ಲಿ ಅಂಕಗಳನ್ನು ನೀಡತಕ್ಕದ್ದು.

ಕನ್ನಡ ಸ್ನಾತಕ ಅಭ್ಯಾಸ ಮಂಡಳಿ

ಪ್ರೊ. ಗುಂಡಣ್ಣ ಕಲಬುರ್ಗಿ	ಅಧ್ಯಕ್ಷರು
ಡಾ. ಎಚ್. ಬಿ. ಕೋಲ್ಕಾರ	ಸದಸ್ಯರು
ಡಾ. ಎಚ್. ಪಿ. ಹಾಲೊಳ್ಳಿ	ಸದಸ್ಯರು

ಸಂಪಾದಕರ ವಿಳಾಸ

ಡಾ. ಸಾವುಕಾರ ಎಸ್. ಕಾಂಬಳೆ
ಬೋಧನಾ ಸಹಾಯಕರು, ಕನ್ನಡ ವಿಭಾಗ
ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ
ಮಹಾವಿದ್ಯಾಲಯ, ಬೆಳಗಾವಿ

ಡಾ. ವಾಯ್. ಎ. ಜಕ್ಕಣ್ಣವರ
ಬೋಧನಾ ಸಹಾಯಕರು, ಕನ್ನಡ ವಿಭಾಗ
ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ
ಮಹಾವಿದ್ಯಾಲಯ, ಬೆಳಗಾವಿ